ಕಸ್ತೂರಿ



ನವೆಂಬರ್, ೧೯೬೧

ಇಂದಿನ ವಿಶ್ವಕ್ಕೊಂದು ಬೆಳಕಿಂಡಿ

ಪ್ರತಿವಾರವೂ ಹೊಸದರಲ್ಲಿ ಹೊಸದು!

ವಿವಿಧ ವಿಷಯಗಳ ಮೇಲೆ ವಿಚಾರ ಪ್ರಚೋದಕ ಲೇಖನಗಳು ನಿಮಗೆ ಬೇಕಲ್ಲವೆ?
ವಿಷಯ ವೈವಿಧ್ಯದೊಂದಿಗೆ ಲೇಖನಗಳು ನಿಮಗೆ ಮನೋರಂಜನೆಯನ್ನೂ ನೀಡಬೇಕಲ್ಲವೆ?

ಹಾಗಾದರೆ

ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿಗಳ ಶ್ರೇಷ್ಠ ಧಾರಾವಾಹಿ ಕಾದಂಬರಿ

"ಧರ್ಮಸಾಮ್ರಾಜ್ಯ"

ಓದಲೇಬೇಕಲ್ಲವೆ?

ಹಾಗಾದರೆ

ಸಚಿತ್ರ ಸಾಪ್ತಾಹಿಕ

ಕರ್ಮವೀರ

ನೀವು ಅವಶ್ಯ ಓದಬೇಕು

ಕೆಲ ವೈಶಿಷ್ಟ್ಯಗಳು :

ನಾನಾ ವಿಷಯಗಳ ಮೇಲೆ ವಿಚಾರ ಪ್ರಚೋದಕ ಮತ್ತು ಮನೋರಂಜಕ ಲೇಖನಗಳು.

ಮುಂಬಯಿ—ಮದ್ರಾಸಗಳ ನಮ್ಮ ವಿಶೇಷ ಪ್ರತಿನಿಧಿಗಳು ಕಳಿಸುವ ತಾಜಾ ಸಿನೇಮಾ ಸುದ್ದಿಗಳು.

ಮಹಿಳೆಯರಿಗೆ, ಬಾಲಕರಿಗೆ ಪ್ರತ್ಯೇಕ ಪುಟಗಳು. ಬಾಲಕರಿಗಾಗಿ "ಎಳೆಯರ ಬಳಗ"

ಮನೋರಂಜಕವಾಗಿರುವ ಸಚಿತ್ರ ಕಥೆ.

ಫ್ಯಾಂಟಮನ ಸಾಹಸ


ದೇಶದ ರಾಜಕಾರಣದ ಪರಿಚಯ ಮಾಡಿಕೊಡುವ ರಾಜ್ಯಗಳ ರಾಜಕಾರಣ, ದಿಲ್ಲಿಯ ಪತ್ರ, ರಾಜ್ಯದ ರಾಜಧಾನಿಯಿಂದ ಮೊದಲಾಗಿ ಸ್ಥಿರಶೀರ್ಷಿಕೆಗಳು.

ರವಿವಾರದ ಸಂಚಿಕೆ ಹಿಂದಿನ ಬುಧವಾರವೇ ನಿಮ್ಮ ಕೈಸೇರುವುದು.

೨೦ ನಯೆ ಪೈಸೆ

೨೪ ಪುಟಗಳು :

ಲೋಕ ಶಿಕ್ಷಣ ಟ್ರಸ್ಟಿನ ಪ್ರಕಟನೆ


ಬರುತ್ತದೆ
ಶ್ಯಾಮ ಪ್ರಸಾದ್ ರವರ...
ಸ್ವರ್ಣಗೌರಿ
(ಕನ್ನಡ)
ಕಥೆ, ಸಂಭಾಷಣೆ, ಹಾಡುಗಳು... ಎಸ್.ಕೆ.ಕರೀಂಖಾನ್
ಸಂಗೀತ... ಎಂ. ವೆಂಕಟರಾಜು
ಛಾಯಾಗ್ರಹಣ ಆರ್. ಮಧುಸೂದನ್
ನಿರ್ಮಾಪಕ... ಡಿ.ಆರ್. ನಾಯ್ಡು
ನಿರ್ದೇಶನ· ವೈ.ಆರ್.ಸ್ವಾಮಿ.ಎಂ.ಎ.


ಅಭಿನಂದನೆಗಳು
ಪಾಟನವಾಲಾ
ಅಫಘಾನ ಸ್ನೋ
ಸೌಂದರ್ಯ ಸಾಧನೆಗಳ
ತಯಾರಕರು :
ಈ. ಎಸ್. ಪಾಟನವಾಲಾ
ಮುಂಬಯಿ — ೨೭

ಕಸ್ತೂರಿ

ಕನ್ನಡ ಡೈಜೆಸ್ಟ್

ಪ್ರತಿತಿಂಗಳ ೧ ನೆ ದಿನಾಂಕ ಪ್ರಕಟವಾಗುವುದು.

ಮುಖ್ಯ ಸಂಪಾದಕರು :
ರಂಗನಾಥ ದಿವಾಕರ

ಸಹಾಯಕ ಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

ಮುದ್ರಕರು :
ಸಂಯುಕ್ತಕರ್ನಾಟಕಮುದ್ರಣಾಲಯ
ಹುಬ್ಬಳ್ಳಿ

ಮುಖಚಿತ್ರ :
ಕೊಯ್ಲು
ಎ. ಎಸ್. ಆರ್. ಮೂರ್ತಿ

ಚಂದಾ ದರ :

ವಾರ್ಷಿಕ.(ಅಂಚೆಸೇರಿ).	ರೂ.೮.೦೦
ಅರ್ಧ ವರ್ಷ —	ರೂ.೪.೫೦
ಬಿಡಿಸಂಚಿಕೆ —	ರೂ.೦.೭೫

Kasturi, November 1961

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗು ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ **ಲೇಖಗಳ ಸಂಗಡವೇ** ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತ್ತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ" ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾ ತಿಂಗಳ ೧ನೇ ದಿನಾಂಕದೊಳಗೇ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಪುಸ್ತಕವಿಭಾಗ

ಕಸ್ತೂರಿ

ಸಂಚಿಕೆ ೩ ನವೆಂಬರ್, ೧೯೬೧ ವರ್ಷ ೬

ಬಣ್ಣ ಬದಲಾದ ಸತ್ಯಾ—ಮಿಥ್ಯಾ

ಮಾ. ಭ. ಪೆರ್ಲ

ಅದೊಂದು ಕಾಲ. ಸೃಷ್ಟಿಯು ಸಮಸ್ತ ಸೌಂದರ್ಯದಿಂದ ಸುಶೋಭಿಸುತ್ತಿತ್ತು. ಜನರು ಸತ್ಯ ಧರ್ಮ, ನ್ಯಾಯ-ನೀತಿಗಳಿಂದೊಡಗೂಡಿದವರಾಗಿ ಸುಖ - ಸಂತೋಷದಿಂದ ಜೀವಿಸುತ್ತಿದ್ದರು. ಅನೀತಿ ಅಧರ್ಮಗಳ ಹೆಸರು ಸಹ ಜನರಿಗೆ ತಿಳಿದಿರಲಿಲ್ಲ. ಆ ಕಾಲದಲ್ಲಿ—

ದೇವರಿಗೆ ಇಬ್ಬರು ಅವಳಿ ಜವಳಿ ಮಕ್ಕಳಿದ್ದರು. ಸತ್ಯಾ ಮತ್ತು ಮಿಥ್ಯಾ. ಇಬ್ಬರನ್ನೂ ಸಮಾನ ಪ್ರೀತಿಯಿಂದ ಆತ ಮುದ್ದಾಗಿ ಸಾಕಿ ಸಲುಹಿದ. ಬಿದಿಗೆಯ ಚಂದ್ರನಂತೆ ಆ ಅವಳಿ ಮಕ್ಕಳು ದಿನದಿನಕ್ಕೂ ಕಾಂತಿಯುತರಾಗಿ ಬೆಳೆಯುತ್ತ ಬಂದರು. ಆ ಅವಳಿ ಸಹೋದರಿಯರು ರೂಪಲಾವಣ್ಯ, ಶರೀರದ ಸೌಷ್ಠವ, ಉಡುಪು ತೊಡುಪುಗಳಲ್ಲಿ ಎಷ್ಟು ಹೊಂದಿಕೆಯಾಗಿದ್ದರೆಂದರೆ ಅವರಿಬ್ಬರಲ್ಲಿ ಯಾರು ಸತ್ಯಾ, ಯಾರು ಮಿಥ್ಯಾ ಎಂದು ಗುರುತಿಸುವುದೇ ಕಷ್ಟಸಾಧ್ಯವಾಗಿತ್ತು. ಸ್ವತಃ ಪಿತನೇ ಹಲವಾರು ಬಾರಿ ಮೋಸಹೋದ ಬಳಿಕ ಆತನೊಂದು ಉಪಾಯವನ್ನು ಮಾಡಿದ. ಸತ್ಯಾಳಿಗೆ ಶ್ವೇತಾಂಬರದ ನಿಲುವಂಗಿಯನ್ನೂ ಮಿಥ್ಯಾಳಿಗೆ ಕಪ್ಪು ಬಣ್ಣದ ನಿಲುವಂಗಿಯನ್ನೂ ಧರಿಸುವಂತೆ ಆಜ್ಞಾಪಿಸಿದ. ಅಂದಿನಿಂದ ಜನರಿಗೂ ಅವರನ್ನು ಗುರುತಿಸುವುದು ಸುಲಭಸಾಧ್ಯವಾಯಿತು. ಅವರು ಸತ್ಯಾಳ ಆರಾಧನೆ ಪೂಜೆಗಳನ್ನು ಕೈಕೊಂಡು ನಿಶ್ಚಿಂತೆಯಿಂದಿರಲಾರಂಭಿಸಿದರು. ಈ ರೀತಿ ಎಲ್ಲರೂ ಸತ್ಯಾಳಿಗೆ ಮಾನಮರ್ಯಾದೆಯನ್ನು ಕೊಡುತ್ತ ತನ್ನನ್ನು ದುರ್ಲಕ್ಷಿಸಿ ಮೂಲೆಗೊತ್ತಿರುವುದನ್ನು ನೋಡಿದ ಮಿಥ್ಯಾ ಈರ್ಷೆಯಿಂದ ಉರಿಯಲಾರಂಭಿಸಿದಳು! ಇಷ್ಟೆಲ್ಲ ಆಗುವುದೂ ಆಕೆ ಧರಿಸಿದ ಶ್ವೇತಾಂಬರದಿಂದ! ಆದುದರಿಂದ ಅದನ್ನೇ ತಾನು ಧರಿಸಬೇಕೆಂದು ದೃಢ ಪ್ರತಿಜ್ಞೆ ಮಾಡಿದಳು. ಆದರೆ ಬಹಳ ಸಮಯ ನಿರೀಕ್ಷಿಸಿದರೂ

ಆ ಶ್ವೇತಾಂಬರ ಪಡೆಯುವ ಸುಸಂದರ್ಭ ಆಕೆಗೆ ದೊರೆಯದಾಯಿತು.

ಒಂದು ದಿನ ಇಬ್ಬರು ಸಹೋದರಿಯರೂ ಎಂದಿನಂತೆ ನದೀತೀರಕ್ಕೆ ಸ್ನಾನ ಮಾಡಲು ಹೋದರು. ತಂತಮ್ಮ ನಿಲುವಂಗಿಗಳನ್ನು ಕಳಚಿಟ್ಟು ಸ್ನಾನಕ್ಕಿಳಿದರು. ಇದೇ ಸುಸಮಯವೆಂದು ಭಾವಿಸಿ ಮಿಥ್ಯಾ ಅವಸರವಾಗಿ ಸ್ನಾನ ಮುಗಿಸಿ ತನ್ನ ನಿಲುವಂಗಿಯ ಬದಲಾಗಿ ಸತ್ಯಾಳ ಶ್ವೇತಾಂಬರದ ನಿಲುವಂಗಿಯನ್ನು ಧರಿಸಿ ಅಲ್ಲಿಂದ ಪಲಾಯನ ಮಾಡಿದಳು. ನಿರುಪಾಯಳಾದ ಸತ್ಯಾ ಅಲ್ಲಿ ಉಳಿದಿದ್ದ ಕಪ್ಪು ಬಣ್ಣದ ನಿಲುವಂಗಿಯನ್ನೇ ಧರಿಸಬೇಕಾಯಿತು.

ಅಂದಿನಿಂದ ಜನರು ಮೋಸ ಹೋಗಿ ಮಿಥ್ಯಾಳನ್ನು ಸತ್ಯಾಳೆಂದೂ ಸತ್ಯಾಳನ್ನು ಮಿಥ್ಯಾಳೆಂದೂ ತಿಳಿಯಲಾರಂಭಿಸಿದರು. ಆದುದರಿಂದಲೇ ಇಂದು ಪ್ರಪಂಚದಲ್ಲಿ ಸತ್ಯಾಳಿಗೆ (ಸತ್ಯಕ್ಕೆ) ಸ್ಥಾನವಿಲ್ಲ ಹಾಗೂ ಮಿಥ್ಯಾಳಿಗೆ (ಮಿಥ್ಯೆಗೆ) ಸ್ಥಾನವಿದೆ. *

ಮಾತನಾಡುವ ಪ್ರವೀಣರು!

ಮಾತನಾಡುವ ಪ್ರವೀಣರು ಶೀರ್ಷಿಕೆ ನೋಡಿದಾಗ, ಗಂಡಸರೊ ಹೆಂಗಸರೊ ಎಂಬ ಪ್ರಶ್ನೆ ಮೊದಲು ಬರುವುದು. ಈ ಕೆಳಗಿನ ವಿಚಾರದಿಂದ ಯಾರೇನೂ ಕಡಿಮೆ ಇಲ್ಲವೆಂದು ಹೇಳಬಹುದಾಗಿದೆ.

ಲಂಡನ್ ನಗರದಲ್ಲಿ ಕೆವಿನ್ ಷೀನ್ ಎಂಬಾತ ಆರು ದಿನಗಳು ಎಡಬಿಡದೆ ಮಾತನಾಡಿದ ದಾಖಲೆ ಇದೆ! ಹಾಗೆ ಆತ ಮಾತನಾಡಿದ ಶಬ್ದಗಳ ಸಂಖ್ಯೆ ೧,೨೫೦,೦೦೦. ಮಾತನಾಡುತ್ತಾ ಅತ್ತಿಂದ ಇತ್ತ ಓಡಾಡಿದ ದೂರ ೩೧ ಮೈಲುಗಳಾದುವಂತೆ! ಕೆವಿನ್ ಆರು ದಿನಗಳೂ ಹಣ್ಣಿನ ರಸ, ಟೀ, ಮುಂತಾದ ದ್ರವ ಆಹಾರವನ್ನೇ ಸೇವಿಸಿದ. ಈ ಆಹಾರದ ಜೊತೆಗೆ ೧೨೦ ಸಿಗರೇಟು ಸೇದಿದ್ದ!

ಹೀಗೆ ಮಾತನಾಡುವಾಗ ಆರು ದಿನವೂ ದಿನಕ್ಕೆ ಮೂರು ಬಾರಿ ಉಡುಪು ಬದಲಾಯಿಸುತ್ತಿದ್ದನಂತೆ! ಈತನ ಮಾತುಗಾರಿಕೆಗೆ ಮೆಚ್ಚಿ ಅನೇಕ ಮಂದಿ ಕಳಿಸಿದ ಬಹುಮಾನದಲ್ಲಿ ಒಂದು ಕಾರು ಸಹ ಇತ್ತು!

ಇನ್ನು ಹೆಂಗಸರ ಬಗ್ಗೆ ತೆಗೆದುಕೊಂಡರೆ, ಮಾತನಾಡುವುದರಲ್ಲಿ ವಿಶ್ವಕ್ಕೇ ಮೊದಲನೆಯ ಸ್ಥಾನ, ವಿಲಿಯಂಸ್ ಎಂಬಾಕೆಗೆ ಸೇರುವುದು.

ಈ ಮಹರಾಯತಿಯು ಉತ್ತರ ಕಾರೋಲಿನಾದವಳು. ಸ್ಪರ್ಧೆಯೊಂದರಲ್ಲಿ ೩೮ ಘಂಟೆ ೪೧ ನಿಮಿಷ ೫೦ ಸೆಕೆಂಡ್‌ಗಳು ಮಾತನಾಡಿ ವಿಶ್ವದಲ್ಲಿಯೇ ಮಾತನಾಡುವುದರಲ್ಲಿ ಪ್ರಥಮ ಸ್ಥಾನ (ಮಹಿಳೆಯರಲ್ಲಿ) ಪಡೆದಿದ್ದಾಳೆ.

ಈ ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆ ಒಂದು ಘಂಟೆ ಮಾತನಾಡಿದ ಬಳಿಕ ಎರಡೂವರೆ ನಿಮಿಷ ವಿಶ್ರಾಂತಿ ಕೊಡಲಾಯಿತು.

ಈ ಮಾತನಾಡುವ ಪ್ರವೀಣರ ಬಗ್ಗೆ ಬರೆಯುವಾಗ ಹಳೇ ಹಾಸ್ಯ ಚಟಾಕಿ ಜ್ಞಾಪಕಕ್ಕೆ ಬರುತ್ತಿದೆ.

"ಏನಯ್ಯಾ ನನ್ನ ಹೆಂಡತಿ ಭಾಷಣ ಕೇಳಿದೆಯಾ?"

"ಅದೇ ಸಂಜೆ ಆರು ಘಂಟೆಗೆ ಆರಂಭವಾಗಿ ರಾತ್ರಿ ಹತ್ತು ಘಂಟೆಗೆ ಮುಗೀತಲ್ಲಾ ಅದೇ ತಾನೆ?"

"ಇಲ್ಲಯ್ಯಾ, ನನ್ನ ಹೆಂಡತಿ ಭಾಷಣ ರಾತ್ರಿ ಹತ್ತಕ್ಕೆ ಶುರುವಾಗಿ ಇಂದು ಬೆಳಿಗ್ಗೆ ಮುಗಿಯಿತು."

ಸಂಗ್ರಾಹಕರು: "ಇಂದಿರಾಪ್ರಿಯ"

ಇಲ್ಲಿ ಮಕ್ಕಳು ನಡೆಯಲು ಕಲಿಯುವು-ದರೊಡನೆ ಕುಣಿಯಲು ಕಲಿಯುತ್ತವೆ



ಚಿತ್ರಾಂಗದೆಯ ನಾಡು ಮಣಿಪುರಿಯ ಕೊಳ್ಳ


ನಾಗರಿಕತೆಯನ್ನು ಕಂಡೂ ನಿಸರ್ಗದ ಮಡಿಲಲ್ಲಿ ನಿಸರ್ಗದ ಮಕ್ಕಳಾಗಿಯೆ ಬಾಳುವ, ಜೀವನದ ಆನಂದವನ್ನು ನಿಶ್ಚಿಂತ, ಇಂದಿನ-ದಿನ-ನನ್ನದು ಎಂಬ ಭಾವದಿಂದ ಅನುಭವಿಸುವ ಜನಾಂಗವೊಂದನ್ನು ಭಾರತದಲ್ಲಿ ಕಾಣಬೇಕಾದರೆ ಮಣಿಪುರದ ಕೊಳ್ಳಕ್ಕೆ ಹೋಗಬೇಕು. ಆರ್ಥಿಕ ವಿಕಾಸದ ಹಂಬಲದಲ್ಲಿ ಅತ್ತಿತ್ತ ನೋಡದೆ ಧಾವಿಸುತ್ತಿರುವ ಇಂದಿನ ಯುಗದಲ್ಲಿ ಸಸ್ಯ ಪುಷ್ಪಗಳಿಂದ ತುಂಬಿದ ಈ ಕೊಳ್ಳದಲ್ಲೆ ಜೀವನದ ಪ್ರಶಾಂತ, ತ್ವರೆಯಿಲ್ಲದ, ಮಂಥರ ಗಮನವನ್ನು ನಿರ್ಭೀಕ, ಅಕುಟಿಲ ಹಾಸ್ಯ ತರಂಗಗಳನ್ನು ನಾವು ನೋಡಬಹುದಷ್ಟೇ.

ಚಿತ್ರಾಂಗದೆಗೆ ಬಹುಶಃ ಹಸ್ತಿನಾವತಿಯ ಸುಂದರಿಯರನ್ನು ಸೌಂದರ್ಯ ಸ್ಪರ್ಧೆಯಲ್ಲಿ ಗೆಲ್ಲುವ ಯೋಗ್ಯತೆ ಇದ್ದಿರಲಾರದು. ಆದರೆ ಅವಳ ಧೈರ್ಯ, ಆತ್ಮವಿಶ್ವಾಸಗಳು ಅರ್ಜುನನನ್ನು ಸೆಳೆದು ಆ ಮಸುಕು ಮೈಬಣ್ಣದ ತರುಣಿಗೆ ಆತ ಮನತೆತ್ತನೇನೋ. ಮಣಿಪುರಿಗಳ ಸ್ವಾಭಿಮಾನವನ್ನು ಅವಳ ಮಗ ಬಭ್ರುವಾಹನ ಹಸ್ತಿನಾವತಿಯವರೆಗೆ ಮಾರ್ಮೊಳಗುವ ಹಾಗೆ ಪ್ರದರ್ಶಿಸಿದ. ಈ ಎರಡೂ ಗುಣಗಳನ್ನು ಮಣಿಪುರಿಗಳು ಮಹಾಭಾರತ ಕಾಲದಲ್ಲಿ ಹೇಗೋ ಹಾಗೆ ಇಂದಿಗೂ ಉಳಿಸಿಕೊಂಡಿದ್ದಾರೆ.

ಕಲೆಯು ನಿತ್ಯಜೀವನದಲ್ಲಿ ಇಷ್ಟು ಪ್ರಾಣಸ್ವರೂಪವಾಗಿರುವ ಜನರು ಬೇರೆಲ್ಲಿಯಾದರೂ ಇದ್ದಾರೆಯೆ ಎಂಬುದು ಸಂಶಯಾಸ್ಪದ. ಅವರ ಬಟ್ಟೆಯಲ್ಲಿ, ಅವರ ನಿರಾಡಂಬರ ಮನೆಗಳ ರಚನೆಯಲ್ಲಿ, ಅವರ ನಡಿಗೆಯಲ್ಲಿ ಕಲೆ ನಲಿಯುತ್ತದೆ. ಅವರಿಗೆ :ಜೀವನವೊಂದು ಸುದೀರ್ಘ ನೃತ್ಯ; ನೃತ್ಯವೊಂದು ಸುದೀರ್ಘ ಆರಾಧನೆ.

ಮಣಿಪುರದ ಮಕ್ಕಳು ನಡೆಯಲು ಕಲಿಯುವುದರೊಡನೆಯೆ ನೃತ್ಯವನ್ನೂ ಕಲಿಯುವರೋ ಎನಿಸುತ್ತದೆ. ಇಲ್ಲದಿದ್ದರೆ ಮೂರು ನಾಲ್ಕು ವರ್ಷದ ಹಸುಳೆಗಳು ಸಂಕೋಚರಹಿತವಾಗಿ ದೇವಾಲಯಗಳಲ್ಲಿ ಶ್ರೀ ಕೃಷ್ಣನ ಮೂರ್ತಿಯ ಮುಂದೆ ಮನೋಹರವಾಗಿ ನರ್ತಿಸುವುದನ್ನು ನಾವು ಹೇಗೆ ಅರ್ಥಮಾಡಿಕೊಳ್ಳಲಾಪೆವು! ವೈಶಾಖ ಮಾಸ ಬಂತೆಂದರೆ ಮಣಿಪುರದ ಗ್ರಾಮಗ್ರಾಮದಲ್ಲಿಯೂ "ಲಾಯಿಹರಾಉಬಾ" (ದೇವತಾರಾಧನೆ) ನೃತ್ಯ ಪ್ರಾರಂಭವಾಗುತ್ತದೆ.

ವಿಮಲಾ ರೈನಾರು 'ಆಜಕಲ್'ದಲ್ಲಿ ಬರೆದ ಲೇಖದ ಆಧಾರದಿಂದ



ಇದರಲ್ಲಿ ಇಡೀ ಗ್ರಾಮದ ಆಬಾಲವೃದ್ಧರು ಒಂದೇ ಲಯದಲ್ಲಿ ನರ್ತಿಸುತ್ತಾರೆ. ಆಗ ಎಪ್ಪತ್ತು ವರ್ಷದ ಮುದುಕಿಯೂ ಇಪ್ಪತ್ತು ವರ್ಷದ ಯುವತಿಯಾಗಿ ಕುಣಿಯುತ್ತಾಳೆ.

ಸಂಗೀತವೂ ಹಾಗೆಯೇ. ಸಂಗೀತ ಕೇಳಿ ಭಾವನಿರ್ಭರರಾಗದವರನ್ನು ಹುಡುಕಲು ಮಣಿಪುರದಲ್ಲಿ ಅಂಜನವನ್ನೇ ಹಾಕಬೇಕು. ಈ ನೃತ್ಯ ಸಂಗೀತ ಪ್ರೇಮವೇ ಆ ಅನುಪಮ ನೃತ್ಯ ಶೈಲಿಯಾದ "ಮಣಿಪುರಿ" ಪದ್ಧತಿಗೆ ಜನ್ಮವಿತ್ತಿದೆ. ನೃತ್ಯ ಸಂಗೀತಗಳು ಇಲ್ಲಿ ಯಾರಾದರೂ ಕೆಲ ತಜ್ಞರ ಸೊತ್ತಲ್ಲ. ಹಳ್ಳಿ ಹಳ್ಳಿಯಲ್ಲಿ ನೃತ್ಯ ಮೃದಂಗಗಳ ಗುರುಗಳಿರುತ್ತಾರೆ. ಅವರು "ಪುಂಗಚೋಲೋಮ್" (ಮೃದಂಗ ನೃತ್ಯ) "ಲಾಸ್ಯ ಜಗೋಯಿ", "ತಾಂಡವ ಜಗೋಯಿ" ಗಳ ಕಲಿಸುತ್ತಾರೆ. ಈ ಗುರುಗಳಿಗೆ ಗ್ರಾಮದಲ್ಲಿ ತುಂಬ ಗೌರವವಿದೆ.

ಸಾರ್ವಜನಿಕ ಕಲ್ಯಾಣ ಕಾರ್ಯಕರ್ತ್ರಿ ವಿಮಲಾ ರೈನಾ ಮಣಿಪುರಿಗಳ ನೃತ್ಯ–ಸಂಗೀತ ಮೋಹದ ಬಗ್ಗೆ ಒಂದು ಮನೋರಂಜಕ ಕಥೆಯನ್ನು ಹೇಳುತ್ತಾರೆ. ಅವರೊಮ್ಮೆ ಒಂದು ಗ್ರಾಮದಲ್ಲಿ ಶ್ರಮದಾನವನ್ನು ಏರ್ಪಡಿಸಿದ್ದರು. ಆದರೆ ನಾಳೆಗಾಗಿ ಪರಿಶ್ರಮಿಸುವುದರಲ್ಲಿ ಆಸಕ್ತಿ ಕಡಿಮೆಯಿರುವ ಮಣಿಪುರಿಗಳು ಮೊದಲೇ ಕೇಳಿಕೊಳ್ಳಲಾಗಿದ್ದರೂ ಯಾರೂ ಬರಲಿಲ್ಲ. ಬದಲಿಗೆ ಅಲ್ಲಲ್ಲಿ ಮರಗಳ ನೆರಳಲ್ಲಿ ಮೈನೀಡಿ ವಿಶ್ರಮಿಸುತ್ತಿರುವ ಅನೇಕರು ಕಾಣಿಸುತ್ತಿದ್ದರು. ಏನು ಮಾಡಬೇಕೆಂದರಿಯದೆ ವಿಚಾರಮಗ್ನರಾದ ರೈನಾ ಅವರಿಗೆ ಒಮ್ಮೆಲೆ ಉಪಾಯ ಹೊಳೆಯಿತು. ಅವರು ಸ್ಥಳೀಯಳಾಗಿದ್ದ ಗ್ರಾಮಸೇವಿಕೆಗೆ ಮೃದಂಗ ನೃತ್ಯದ ತಾನಗಳನ್ನು ಬಾರಿಸಲು ಕೇಳಿಕೊಂಡರು. ತತ್‍ಕ್ಷಣ ಮಾಯಕದಿಂದೆಂಬಂತೆ ಜನ ಬಂದು ಅಲ್ಲಿ ಸೇರಿದರು. ಮೃದಂಗದ ಗತ್ತುಗಳಿಗೆ ಸರಿಯಾಗಿ ಹಾರೆ ಗುದ್ದಲಿಗಳು ಚಲಿಸಿದವು, ಬುಟ್ಟಿಗಳು ತುಂಬಿದವು, ಹೊರೆಗಳು ಸಾಗಿದವು, ಗ್ರಾಮದ ಶಾಲೆಯ ದುರಸ್ತಿ ಆಡಾಡುತ್ತ ಮುಗಿದುಹೋಯಿತು !

ಪುರಾಣಗಳಲ್ಲಿ ಗಂಧರ್ವರೆಂದು ವರ್ಣಿತರಾದ ಜನರಲ್ಲಿ ಮಣಿಪುರಿಗಳ ಪೂರ್ವಜರೂ ಒಂದು ಜನಾಂಗವೆಂದು ತೋರುತ್ತದೆ. ಅನಾದಿಯಿಂದ ಶಿವಭಕ್ತರಾಗಿದ್ದರು ಇವರು. ಮಣಿಪುರದಲ್ಲಿ ಎತ್ತರದ ಪರ್ವತವಾದ ನುಂಮಾಯಿ ಚಿಂಗ್‍ನಲ್ಲಿ ಶಿವನ ಆವಾಸವಿತ್ತೆಂದು ಭಾವುಕರು ನಂಬುತ್ತಾರೆ. ಮಣಿಪುರ ಸ್ಥಳಪುರಾಣದಲ್ಲಿಯೂ ಶಿವನಿಗೆ ಪ್ರಾಧಾನ್ಯವಿದೆ. ಶಿವರಾತ್ರಿಗೊಮ್ಮೆ ಶಿಖರದ ಮೇಲಿರುವ ಚಿಕ್ಕ ಶಿವಮಂದಿರದಲ್ಲಿ ಜಾತ್ರೆ ಜರುಗುತ್ತದೆ. ಬಂಗಾಲದ ಚೈತನ್ಯ ಮಹಾಪ್ರಭುವಿನ ಪ್ರಭಾವಕ್ಕೆ ಸಿಲುಕಿ (ಚೈತನ್ಯದೇವ ನೃತ್ಯಪ್ರಿಯ ಸಾಧು ತಾನೆ!) ಅನೇಕರು ವೈಷ್ಣವರಾದರು.

ಜಗತ್ತಿನಲ್ಲಿ ಬೇರೆಲ್ಲ ಕಡೆ ಪುರುಷ ಪ್ರಪಂಚ ಇದ್ದೀತು— ಮಣಿಪುರದಲ್ಲಲ್ಲ. ಇಲ್ಲಿ ಹಿಂದೆ, ಸ್ತ್ರೀಯರ ಬಂಧನದ ಮುಖ್ಯ ಸಾಧನವಾದ ವಿವಾಹವೆ ಇದ್ದಿಲ್ಲವಂತೆ. ಇದು ನಿಜವೇ ಇರಬೇಕು. ಇವರ ಭಾಷೆಯಲ್ಲಿ "ಪತಿ," "ಪತ್ನಿ" ಎಂಬುದಕ್ಕೆ ಸಮಾನ ಶಬ್ದಗಳೇ ಇಲ್ಲ, ಈಗ ಮದುವೆ ಇದೆಯಾದರೂ ಪತಿ ಅವಳಿಗೆ "ಎಗೀ ನುಪಾ"— ನನ್ನವ; ಪತ್ನಿ ಅವನಿಗೆ "ಎಗೀ ನುಪೀ"— ನನ್ನವಳು. (ಎಷ್ಟು ಸಮಾನತೆ!) ಗಂಡ ಹೆಂಡಿರಲ್ಲಿ ಜಗಳವಾದರೆ ಬಿಡುಗಡೆ ಹೊಂದಿ ಪುನರ್ವಿವಾಹವಾಗಬಹುದು.

ವಾಸ್ತವಿಕವಾಗಿ "ಎಗೀ ನುಪಾ"ನ ಅಧೀನ

ದಲ್ಲಿ "ಏಗೀ ನುಪೀ" ಇರುವ ಬದಲು "ಏಗೀ ನುಪಾ"ನೇ ಅವಳ ಅಧೀನದಲ್ಲಿರುತ್ತಾನೆ. ಗಂಡಸರಿಗಿಂತ ಹೆಚ್ಚಾಗಿಯೆ ಹೆಂಗಸರು ದುಡಿಯುತ್ತಾರೆ. ಅರುಣೋದಯದ ಮುಂಚೆ ಎದ್ದು ಮನೆಗೆಲಸಗಳನ್ನೆಲ್ಲ ಮುಗಿಸಿ, ನೇಯ್ಗೆ ಕೆಲಸ ಮಾಡಿ, ನೇಯ್ದದ್ದನ್ನು ಪೇಟೆಗೊಯ್ದು ಮಾರಿ, ಮರಳಿ ಬಂದು ಮತ್ತೆ ಮನೆ ಕೆಲಸಗಳನ್ನು ಪ್ರಾರಂಭಿಸುವುದಲ್ಲದೆ ಪುರುಷವಿಶಿಷ್ಟವೆನಿಸಿದ ಮೀನು ಹಿಡಿಯುವುದೇ ಮೊದಲಾದವುಗಳನ್ನೂ ಮಾಡುತ್ತಾರೆ. ಮಕ್ಕಳನ್ನು ಸಾಕುವ ಭಾರ ಬಹುತರ ತಾಯ ಮೇಲೆಯೆ ಇದೆ. ಗಂಡ ರೈತನಾಗಿದ್ದರೆ ಉಳುವುದನ್ನು ಮುಗಿಸಿದ ಮೇಲೆ ಹೊಲದ ಬಳಿ ಬರುವುದು ಕೊಯ್ಯುವಾಗಲೇ. ನಡುವಿನ ಕೆಲಸವೆಲ್ಲ ಏಗೀ ನುಪಿಯದೆ. ಆತ ಕೂಲಿಕಾರನಾಗಿದ್ದರೆ ದುಡಿದದ್ದನ್ನು ಮಜಾ ಮಾಡುವುದರಲ್ಲಿ ವೆಚ್ಚ ಮಾಡುತ್ತಾನೆ. ಕೆಲ ಗಂಡಸರಂತೂ ಏನೂ ಕೆಲಸ ಮಾಡದೆ ಹಾಡು ಕುಣಿತಗಳಲ್ಲೀ ಮುಳುಗಿರುತ್ತಾರೆ. ಅವನ ನುಪಿಯರು ಏನೂ ಗೊಣಗುವುದಿಲ್ಲ, ತನಗೆ ಬೇಕಾದವ ಎಂದ ಮೇಲೆ ಅವನ ಆರೈಕೆ ಮಾಡಿದರೇನು ತಪ್ಪು. ಬೇಡವಾದರೆ ಅವನನ್ನು ಬಿಡಲು ಯಾರ ಅಡ್ಡಿಯೂ ಇಲ್ಲ ತಾನೆ! ನಾಗಲೋಕದಲ್ಲಿ ಅರ್ಜುನನನ್ನು ಮೋಹಿಸಿದ ಇನ್ನೊಬ್ಬಳಾದ "ಉಲೂಪಿ" ಈ "ನುಪಿ"ಯ ರೂಪಾಂತರಿತ ನಾಮವನ್ನೆ ಧರಿಸಿರಬಹುದೇನೋ.

ಪುರುಷರಿಗೆ ಇಲ್ಲಿ ಹೀಗೆ "ರಜಾ" ದೊರೆಯಲು ಪುರುಷ ಸಂಖ್ಯೆ ಮಣಿಪುರದಲ್ಲಿ ಯಾವಾಗಲೂ ಸ್ತ್ರೀಯರಿಗಿಂತ ಕಡಿಮೆಯಾಗಿರುವುದೂ ಕಾರಣವಾಗಿರಬಹುದು. ಪರಿಣಾಮವಾಗಿ ಒಬ್ಬೊಬ್ಬ ಪುರುಷನಿಗೆ ಆರೇಳು ಹೆಂಡಂದಿರೂ ಇರುವುದುಂಟು. ಅವನ ನುಪಿಯರು ತಮ್ಮ ಮಕ್ಕಳ ಮತ್ತು ತಮ್ಮ ಹೊಟ್ಟೆಯ ಪಾಡು ತಾವೇ ನೋಡಿಕೊಳ್ಳುವಾಗ ಅವನೇಕೆ ಚಿಂತಿಸಬೇಕು? ಆದರೆ ಇಷ್ಟೆಲ್ಲ ಸವತಿಯರನ್ನು ಹೊಂದಿದ್ದರೂ ಈ ರಮಣಿಯರು ನಿರ್ಮತ್ಸರ ಆನಂದದಲ್ಲಿರುವುದೀಗ ಮಣಿಪುರದ ನೀರಿನ ಗುಣವೇ ಇರಬೇಕು.

ಮಣಿಪುರದ ಜನರು ಆರ್ಥಿಕ ಪ್ರಗತಿಗಾಗಿ ಚಡಪಡಿಸುವವರಲ್ಲ. ಪ್ರತಿಯೊಬ್ಬರೂ ಮಿತವಾಗಿಯೆ ದುಡಿಯುತ್ತಾರೆ. ಅಷ್ಟಕ್ಕೇ ನಿಸರ್ಗ ಅವರಿಗೆ ಅಗತ್ಯವಿದ್ದುದನ್ನು ಧಾರಾಳವಾಗಿ ನೀಡುತ್ತದೆ. ಮಣಿಪುರ ಕೊಳ್ಳ ಧಾನ್ಯದ ಕಣಜವಾಗಿದೆ. ಮನೆ ಕಟ್ಟಲು ಅವರಿಗೆ ಬೇಕಾದ್ದು ಬಿದಿರು. ಅದಿಲ್ಲಿ ಯಥೇಷ್ಟವಾಗಿ ದೊರೆಯುತ್ತದೆ. ಉರಿಸಲು ಸೌದೆಗೆ ದರಿದ್ರವಿಲ್ಲ. ಅವರ ಅಗತ್ಯಗಳ ಹಾಗೆ ಆಸೆಯೂ ಪರಿಮಿತವಾಗಿದೆ. ಮಣಿಪುರದಲ್ಲಿ ಯಾರೂ ಬಿಕ್ಕೆ ಬೇಡುವುದಿಲ್ಲ. ನಗೆ ತುಂಬಿ ತುಳುಕುವ ಈ ನಾಡಿನಲ್ಲಿ ಯಾರ ಕಣ್ಣೀರನ್ನೂ ನೋಡಬಯಸದ ಜನ ಅಸಹಾಯರಿಗೂ ಮುದುಕರಿಗೂ ಸಹಾಯ ಮಾಡುತ್ತಾರೆ. ರೋಗ ರುಜಿನುಗಳೂ ಕಡಿಮೆ. ಜನರೂ ಸ್ವಚ್ಛವಾಗಿರುತ್ತಾರೆ.

ಮಣಿಪುರದಲ್ಲಿ ನೋಡಲೇಬೇಕಾದ ವಿಷಯ ವಿನ್ನೊಂದಿದೆ. ಅದು ದಿನನಿತ್ಯ ಸಂಜೆ ಹಳ್ಳಿ ಹಳ್ಳಿಯಲ್ಲಿ ನೆರೆಯುವ "ನುಪೀ ಕೆಥೆಲ್"— ಅರ್ಥಾತ್ ಹೆಂಗಸರ ಸಂತೆ. ಇಲ್ಲಿ ಮಣಿಪುರಿ ರಮಣಿಯರ ಹಸ್ತಕೌಶಲದ ಸರಕುಗಳನ್ನು



ಅವರೇ ಮಾರಾಟಕ್ಕೆ ಹಚ್ಚಿ ಕುಳಿತಿರುತ್ತಾರೆ. ಇದು ಸ್ತ್ರೀಸ್ವಾತಂತ್ರ್ಯ ಮತ್ತು ಶ್ರಮಗೌರವದ ಪ್ರದರ್ಶನ ಕೇಂದ್ರ. ಹಿಂದಿನ ಕಾಲದಲ್ಲಿ ಇಂಥ ಸಂತೆಗಳಲ್ಲಿ ರಾಜಕುಮಾರಿಯರು ಕೂಡ ತಾವು ನೆಯ್ದ ಸೊಬಗಿನ ಬಟ್ಟೆಗಳನ್ನೂ ಕಸೂತಿಯ ಕೃತಿಗಳನ್ನೂ ಮಾರಲು ಕುಳಿತಿರುತ್ತಿದ್ದರಂತೆ. ಇಂದಿಗೂ ಶ್ರೀಮಂತ ರಮಣಿಯರು ಇಲ್ಲಿ ಮಾರಾಟಗಿತ್ತಿಯರಾಗಿರುವುದನ್ನು ಕಾಣಬಹುದು. ಇಲ್ಲಿ ಮಾರುವವರೆಲ್ಲ ಸ್ತ್ರೀಯರಾದರೂ ಕೊಳ್ಳಲು ಗಂಡಸರೂ ಬರಬಹುದು. ಮಬ್ಬು "ಕವಿಯತೊಡಗಿದಾಗ ನುಪೀ ಕೆಥೆಲ್"ಗಳಲ್ಲೊಂದು ದೀಪಾವಳಿಯೆ ಏರ್ಪಟ್ಟಂತೆ ತೋರುವುದು. ಏಕೆಂದರೆ ಪ್ರತಿಯೊಬ್ಬ ಮಾರಾಟಗಿತ್ತಿಯೂ ತನ್ನ ಸರಕುಗಳನ್ನ ಬೆಳಗಿಸಲು ಒಂದೊಂದು ದೀಪ ಹೊತ್ತಿಸಿ ಇಡುತ್ತಾಳೆ.

ಮಣಿಪುರ ಕೊಳ್ಳದಲ್ಲಿರುವ ಜನರನ್ನು "ಮೈತೈ" ಎನ್ನುತ್ತಾರೆ. ಗುಡ್ಡಗಾಡುಗಳಲ್ಲಿ ನಾಗಾ ಜನ ವಾಸಿಸುತ್ತಾರೆ. ಈಚೆಗಿನ ಭಾರತದ ಇತಿಹಾಸದಲ್ಲಿ ಸಾಕಷ್ಟು ಕೋಲಾಹಲವೆಬ್ಬಿಸಿರುವ ನಾಗಾ ಜನ ಒಂದು ಕಾಲದಲ್ಲಿ ಈ ಭಾಗದ ಆಧಿಪತ್ಯವನ್ನು ನಡೆಸಿದವರಾಗಿದ್ದಂತೆ ತೋರುತ್ತದೆ. ಕೊಳ್ಳದ ಮೈತೈ ಜನರೂ ನಾಗಾ ಕುಲದವರೇ ಇದ್ದಿರಬೇಕು. ಆರ್ಯರ ಆಗಮನದ ನಂತರ ಅವರ ಆಧಿಪತ್ಯವನ್ನು ಸ್ವೀಕರಿಸಿದವರು ಕೊಳ್ಳದಲ್ಲಿ ಉಳಿದರೆಂದೂ ಅದನ್ನೊಲ್ಲದವರು ಗುಡ್ಡಗಾಡುಗಳನ್ನ ಸೇರಿ ಇನ್ನಷ್ಟು ಉಗ್ರ ಪ್ರತ್ಯೇಕತಾವಾದಿಗಳಾದರೆಂದೂ ಊಹಿಸಲೆಡೆಯಿದೆ. ಮೈತೈ ಎಂದರೆ ನಾಗಾ ಭಾಷೆಯಲ್ಲಿ ಪರಕೀಯರು ಎಂದರ್ಥವಾಗುತ್ತದೆ. ಒಮ್ಮೆ ಇಲ್ಲಿ ನಾಗಾ ಆಧಿಪತ್ಯವಿದ್ದಿತ್ತೆನ್ನುವುದಕ್ಕೆ ಇನ್ನೊಂದು ಆಧಾರವಿದೆ. ಇಂದಿಗೂ ಮಣಿಪುರ ರಾಜಕುಮಾರರ ರಾಜ್ಯಾಭಿಷೇಕ ಸಮಾರಂಭದಲ್ಲಿ ಮೊದಲು ನಾಗಾ ಪದ್ಧತಿಯಲ್ಲಿ ವಿಧಿ ವಿಧಾನಗಳಾದ ಮೇಲೆಯೇ ವೈದಿಕ ವಿಧಿಗಳು ನೆರವೇರುತ್ತವೆ.

ಮಣಿಪುರಕೊಳ್ಳದ ಜನರ ಮೃದಂಗ ನೃತ್ಯಕ್ಕೂ ನಾಗಾಜನರ "ಲಾಯಿ ಹಹಾ ಉಬಾ" ನೃತ್ಯಕ್ಕೂ ಸಾಮ್ಯ ಬಹಳವಾಗಿದೆ. ವೇಷ-ಭೂಷಣಗಳಲ್ಲೂ ಇದು ಗೋಚರಕ್ಕೆ ಬರುತ್ತದೆ. ಸ್ತ್ರೀಯರಿಗೆ ನಾಗಾ ಜನರಲ್ಲಿಯೂ ತುಂಬ ಗೌರವವುಂಟು. ನಾಗಾ ಸಾಮಾಜಿಕ ಸಂಪ್ರದಾಯಗಳಲ್ಲಿ ವಿಶಿಷ್ಟವಾದುದೆಂದರೆ, ಗ್ರಾಮದ ಅವಿವಾಹಿತ ತರುಣ ತರುಣಿಯರು ಊರ ಹೊರಗೆ ಪರಸ್ಪರ ಸಮೀಪವಾದ ಆಶ್ರಮಗಳಲ್ಲಿ ವಾಸಿಸಿ ಸಂಜೆಯ ಹೊತ್ತಿಗೆ ಹಾಡು ಕುಣಿತಗಳಲ್ಲಿ ಬೆರೆಯುವುದು. ಇದನ್ನು ಅನಾಗರಿಕ ಕಾಮಾಚಾರವೆನ್ನಲಾಗದು. ಏಕೆಂದರೆ ಆಶ್ರಮಗಳು ತರುಣರಿಗೆ ಬೇರೆ ತರುಣಿಯರಿಗೆ ಬೇರೆಯಾಗಿದ್ದು ಅವುಗಳ ಮೇಲೆ ಹಿರಿಯರು ಯಾವಾಗಲೂ ದೃಷ್ಟಿಯಿಟಿರುತ್ತಾರೆ. ಸಾಮೂಹಿಕವಾಗಿಯಲ್ಲದೆ ಏಕಾಂತದಲ್ಲಿ ತರುಣ ತರುಣಿಯರು ಬೆರೆಯುವಂತಿಲ್ಲ. ಸಾಮೂಹಿಕವಾಗಿ ಬೆರೆತಲ್ಲಿ ಪ್ರೇಮ ಕೂಡಿದರೆ ವಿವಾಹವಾಗಬಹುದು. ವೈವಾಹಿಕ ಸಂಬಂಧ ಪವಿತ್ರವೆನಿಸಿದ್ದು ವಿಚ್ಛೇದಗಳು ತೀರ ಕಡಿಮೆ. ನಾಗಾ ಜನರಲ್ಲಿ ಬಹುಪತ್ನೀ ಪದ್ಧತಿ ಇಲ್ಲ.

ತಮ್ಮ ಸ್ವಾಯತ್ತತೆಗಾಗಿ ನಾಗಾ ಜನಾಂಗ ತುಂಬ ಬೆಲೆ ತೆರಬೇಕಾಗಿದೆ. ಗುಡ್ಡಗಾಡುಗಳಲ್ಲಿ ನೀರು ದುರ್ಲಭ. ಕುಡಿಯುವ ನೀರಿಗಾಗಿಯೆ ಮೈಲುಗಟ್ಟಳೆ ಕೆಳಗಿಳಿದು ಬರಬೇಕಾಗುತ್ತದೆ. ಬೆಳೆ ಬೆಳೆಸುವುದೂ ಸುಲಭವಾಗಿಲ್ಲ. ಇದರಿಂದ ಮಣಿಪುರಿ ನಾಗಾ ಜನರಲ್ಲೊಂದು ದಿಟ್ಟ ಸ್ವಾವಲಂಬನೆ ಬೆಳೆದುಬಂದಿದೆ. ಅಲ್ಲಿ ಹೊಸದಾಗಿ ಮದುವೆಯಾದ ಸತಿಪತಿಯರು ಸ್ವಹಸ್ತದಿಂದ ತಮ್ಮ ಮನೆ ಕಟ್ಟಿಕೊಳ್ಳುತ್ತಾರೆ.

ಮಣಿಪುರದ ಸುತ ಮುತ್ತಲ ಪರ್ವತಕಂದರಗಳಲ್ಲೆಲ್ಲ ಆರ್ಯ ಸಂಸ್ಕೃತಿ ವಿಸ್ತರಣೆಯ ಚಿಹ್ನೆಗಳು ಮೂಡಿವೆ. ಮಣಿಪುರದ ಚಿತ್ರಾಂಗದೆಯನ್ನು ಹೇಗೋ ಹಾಗೆಯೆ ನಾಗನಾಡಿನ ಉಲೂಪಿಯನ್ನೂ ಅರ್ಜುನ ವರಿಸಿದ್ದ. ಕೃಷ್ಣನ ಮಡದಿ ರುಕ್ಮಿಣಿಯೂ ಲೋಹಿತ ನಾಗಾ ಪ್ರದೇ-

ಶದ ರಾಜ 'ಬಿಶಮಾಕ'ನ ಮಗಳೆಂದು ಇಲ್ಲಿಯವರ ಹೇಳಿಕೆಯಿದೆ. ಲೋಹಿತ ಪ್ರದೇಶದ ತಾಮೇಶ್ವರಿ ಮಂದಿರ ಹಿಂದುಗಳಿಗೆಲ್ಲ ತೀರ್ಥವಾಗಿದೆ. ಇಲ್ಲೇ ಬ್ರಹ್ಮಕುಂಡವೆಂಬಲ್ಲಿ ಪರಶುರಾಮನ ಕುಠಾರಾಘಾತದಿಂದ ಒಂದು ಸುರಂಗ ನಿರ್ಮಿತವಾಯಿತಂತೆ. ಉಷೆಯ ತಂದೆ ಬಾಣಾಸುರನೂ ಈ ಭಾಗದ ತೇಜಪುರದವನೇ ಅಂತೆ.

ಹಿಂದೂ ಧರ್ಮದೊಡನೆ ನಾಗಾ ಜನರ ಸಂಪರ್ಕ ಇಷ್ಟು ಪ್ರಾಚೀನವಾಗಿದ್ದರೂ ಈಗ ಅವರು ಯಾವ ಕಾರಣದಿಂದಲೊ ಬೇರೆಯಾಗುತ್ತಿದ್ದಾರೆ. ಕ್ರೈಸ್ತ ಮಿಶನರಿಗಳು ಅನೇಕರನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಂಡಿದ್ದಾರೆ.



ಮಣಿಪುರದ ಗಿರಿ ಕಂದರಗಳಲ್ಲಿ ಈ ವರೆಗೆ ಆನಂದ-ಝರಿ ಹರಿಯುತ್ತ ಬಂದಿದೆ. ಸರಳ ಹೃದಯದ, ದುರಾಶೆಯಿಂದ ನಿರ್ಲಿಪ್ತರಾದ, ನಾಗರಿಕತೆಯ ಘೋರ ತ್ವರೆಯಿಂದ ಅವಿಚಲಿತರಾದ ಜನ ಅಲ್ಲಿ ಇನ್ನೂ ಅಕಲುಷಿತರಾಗಿ ಬಾಳುತ್ತಿದ್ದಾರೆ. ಆದರೆ ಎಷ್ಟು ದಿನ? ಸರಕಾರ ಪ್ರಗತಿಯನ್ನು ಅವರ ಬಾಗಿಲಿಗೊಯ್ಯುತ್ತಿದೆ. ವಿದ್ಯುತ್ತಿನ ಕಂಬಗಳು ಕಾನನ ಪ್ರಾಂತರಗಳಲ್ಲಿ ಸಾಲು ಹಿಡಿಯುತ್ತಿವೆ. ಕಾಂಕ್ರೀಟು ಪ್ರವೇಶ ಪಡೆಯುತ್ತಿದೆ. ಬೇಗನೆ ಹೆಂಗಳೆಯರ ಸಂತೆಯ ಸ್ಥಾನದಲ್ಲಿ ಇಟ್ಟಿಗೆ ಕಾಂಕ್ರೀಟಿನ ಪೇಟೆಗಳು ತಲೆಯೆತ್ತಲಿವೆ. ಗಾಳಿಗೆ ನರ್ತಿಸುವ ಅವರ ಕೈದೀವಿಗೆಗಳ ಬದಲು ಬಲ್ಬುಗಳ ಸ್ತಂಭಿತ ಪ್ರಕಾಶಗಳು ಮಮತಾಹೀನವಾಗಿ ಉರಿಯಲಿವೆ. ಇದೆಲ್ಲ ಈ ಜನಕ್ಕೆ ಹೆಚ್ಚು ಸೌಕರ್ಯಗಳನ್ನು ತಂದೀತು. ಆದರೆ ಅದರೊಡನೆ ಅವರ ಸರಳತೆಯನ್ನು, ಅವರ ಉನ್ಮುಕ್ತತೆಯನ್ನು, ಅವರ ಜೀವನದ ಅಪೂರ್ವ ವರ್ಣವಿನ್ಯಾಸವನ್ನು ಸ್ವಲ್ಪವಾದರೂ ಕಸಿದುಕೊಳ್ಳದೆ ಬಿಟ್ಟೀತೆ?

*

ನಿತ್ಯಜೀವನದ ವಿನೋದ

ಕಾಲೇಜು ಸೇರಲೆಂದು ನಾನು ಮುಂಬಯಿಗೆ ಹೊರಟಿದ್ದೆ. ರೈಲು ಮಿರಜ ಸ್ಟೇಶನ್ ತಲುಪಿತು. ನಮ್ಮ ಕಂಪಾರ್ಟಮೆಂಟಿನಲ್ಲೊಬ್ಬ ಭೀಮಕಾಯ ವ್ಯಕ್ತಿ ಹೊಕ್ಕ. ಆತ ತೆಳ್ಳಗಿನ ಒಬ್ಬ ನರಪೇತನನ್ನು ಕಂಡು ಸ್ಥಳಕ್ಕಾಗಿ ಜಗಳ ತೆಗೆದ. ಆದರೆ ಅರ್ಭಾಟಕ್ಕೆ ಹೆದರುವವನಿರಲಿಲ್ಲ ಈತ. ಮಾತಿಗೆ ಮಾತು ಬೆಳೆಯಿತು. ಕಡೆಗೆ ಮಾತುಬಾರದ ಭೀಮಸೇನ ಸ್ವಭಾವಕ್ಕೆ ತಕ್ಕಂತೆ ಹೊಡೆಯಲೆದ್ದ. 'ಒಂದೇ ಏಟು ಕೊಟ್ಟರೆ ಪುಣೆಗೆ ಹೋಗಿ ಬೀಳುತ್ತೀ' ಎಂದ. ಅದಕ್ಕೆ ನಿದಾನವಾಗಿ ತೆಳ್ಳಗಿನವನೆಂದ: 'ನಾನು ಕೋರೆಗಾವಿಗೇ ಇಳಿಯಬೇಕು. ಅಷ್ಟಕ್ಕೆಷ್ಟು ಸಾಲುವುದೊ ಅಷ್ಟೇ ಏಟು ಕೊಡು.'

— ಗೋಪಾಲ ಜೈತಮಂಗಲ



ಹೊಸ ಕಾಲ ಹೊಸ ಯೋಜನೆ ಬಂದರೂ ತದಿಗೆಯ ಕಾಣಿಕೆ ಓಲ್ಡ್‌ಸ್ಕೇಲಿನಲ್ಲೆ....

ಎರಡೇ ರೂಪಾಯಿ

ದ. ಬಾ. ಕುಲಕರ್ಣಿ

ಹೆಣ್ಣೀನ ಜನುಮಕ ಅಣ್ಣ-ತಮ್ಮರು ಬೇಕ।
ಬೆನ್ನು ಕಟ್ಟುವರು ಸಭೆಯೊಳಗ। ಸಾವೀರ।
ಹೊನ್ನು ಕಟ್ಟುವರು ಉಡಿಯೊಳಗ॥

ನನ್ನ ಮದುವೆಯಾಗಿ ಹದಿನೈದು ವರುಷವಾಯಿತೆಂದು ಮೊನ್ನೆ ನನ್ನಾಕೆಯ ಟ್ರಂಕಿನಲ್ಲಿಯ ಒಂದು ಅತ್ಯಮೌಲ್ಯ ಕಾಲಮಾಪಕದಿಂದ ಗೊತ್ತಾಯಿತು.

ಅವಳ ಅಣ್ಣ ಪ್ರತಿ ದೀಪಾವಳಿಗೆ ತಪ್ಪದೆ ಎರಡು ರೂಪಾಯಿ ಮನಿಯಾರ್ಡರ್ ಮಾಡುತ್ತಾನೆ. ಅವಳಲ್ಲಿ ಮೂವತ್ತು ರೂಪಾಯಿ ಸಂಗ್ರಹವಾಗಿದೆ—ಎಂದು ನೀವು ಗ್ರಹಿಸಬಹುದು. ಆದರೆ ಹಣ ಯಾರ ಕೈಯಲ್ಲಿಯೂ ನಿಲ್ಲುವುದಕ್ಕೆ ಬಂದಿಲ್ಲ. ಅದು ಸದಾ ಚೈತನ್ಯಪೂರ್ಣ ವಸ್ತು ವಿಶೇಷ. ಅದನ್ನು ಹತ್ತಿರ ನಿಲ್ಲಗೊಡದ ಕಾರಣಗಳು ನಿಮಿಷಕ್ಕೊಮ್ಮೆ ಬರುತ್ತವೆ ಅವಳ ಟ್ರಂಕಿನಲ್ಲಿ ಮೂವತ್ತಲ್ಲ,—ಮುನ್ನೂರು ರೂಪಾಯಿ ಇದ್ದದ್ದೂ ಇದೆ; ಮೂರು ಕಾಸು ಇಲ್ಲದೆಯೂ ಇದೆ. ಚಂಚಲ ಲಕ್ಷ್ಮಿಯನ್ನು ಯಾರು ಸೆರೆಯಲ್ಲಿಡಬಲ್ಲರು?

ಮತ್ತೆ ಯಾವ ಕಾಲಮಾಪಕ ಎನ್ನುವಿರೇನೋ, ನೀವು. ಮೇಲೆಯೇ ಹೇಳಿದ್ದೇನೆ. ತಾನು ದೂರದ ಊರಲ್ಲೇ ಇರಲಿ; ಇದ್ದೂರಲ್ಲೇ ಇರಲಿ. ಭಾವಬಿದಿಗೆ, ಅಕ್ಕನತದಿಗೆ ಬಂದಾಗ ಅಂಚೆಯ ಮೂಲಕವೇ ಅವಳ ರುಜು ಪಡೆದು ಎರಡು ರೂಪಾಯಿ ಅವಳ ಕೈಸೇರುವಂತೆ ಆಕೆಯ ಅಣ್ಣನ ವ್ಯವಸ್ಥೆಯಿದೆ. ಅವಳ ಟ್ರಂಕಿನಲ್ಲಿ ಹದಿನೈದು ಕೂಪನ್ನುಗಳ ಒಂದು ಮಾಲೆಯಿದ್ದಂತೆ, ನನ್ನ ಭಾವ ವಸಂತನಲ್ಲೂ ಇವಳ ರುಜುಗಳದೊಂದು ಸರ ಇದ್ದರೆ ಆಶ್ಚರ್ಯಪಡಬೇಕಾಗಿಲ್ಲ.

ಅದೇ—ನಮ್ಮ ಮದುವೆಯಾದ ವರುಷ ಈಕೆಯ ಅಣ್ಣನಿಗೆ ಕೆಲಸವಾಯಿತು. ಸಣ್ಣ

'ಸಾವಧಾನ' ಪ್ರಬಂಧ ಸಂಗ್ರಹದಿಂದ

ಸಂಬಳ. ದೀಪಾವಳಿಯೂ ಬಂತು. ತಂಗಿಯ ಪಾಲೆಂದು, ಪ್ರೀತಿಯ ನೆನಪಿಗೆಂದು ವಸಂತ ಇವಳ ಹೆಸರಿಗೆ ಎರಡು ರೂಪಾಯಿ ಕಳಿಸಿದ. ಇವಳು ತನ್ನ ಜನ್ಮದಲ್ಲೇ ಕಂಡ ಮೊದಲನೆಯ ಮನಿಯಾರ್ಡರು ಅದು. ಹಾಗೆಯೇ ಅವಳ ಸಹಿಯೂ ಪ್ರಥಮತಃ ಖರ್ಚಾದದ್ದು ಆಗಲೇ ಇದ್ದೀತು. ಹಾಗೆ ವರುಷ ವರುಷವೂ ಅಣ್ಣನ ಉಡುಗೊರೆ ಇವಳಿಗೆ ಬರುತ್ತಲೇ ಇತ್ತು. ಒಂದು ಸಲ ತದಿಗೆ ಕಳೆದರೂ ವಸಂತನ ಮನಿ ಯಾರ್ಡರು ಇವಳಿಗೆ ಬರಲಿಲ್ಲ. ಆಗ ಹಬ್ಬದಲ್ಲಿ ಇವಳ ಜೋಲುಮುಖ ಕಂಡು ನಮಗೆಲ್ಲ ಒಮ್ಮೆ ನಗು, ಒಮ್ಮೆ ಕನಿಕರ ಉಂಟಾಗಿತ್ತು. ಅಣ್ಣನಿಗೆ ಏನಾಗಿದೆಯೋ— ಎಂದು ಒಂದು ದಿನ ಅಳುತ್ತ ಕುಳಿತುಬಿಟ್ಟಳು. ರವಿವಾರ ನಡುವೆ ಬಂದು ಅಂಚೆಯ ಕೆಲಸ ನಿಧಾನವಾಗಿರಬೇಕು. ಹಬ್ಬ ತೀರಿದ ದಿನ, ಕಡೆಗೆ ಪಂಚಮಿಗೆ ಮನಿಯಾರ್ಡರು ಬಂತು. ಅಂದು ಇವಳ ಮುಖ ನೋಡಿದ್ದರೆ— ಎಂದೂ ಅವಳು ಅಂಥ ಗೆಲುವಿನ ಉಲ್ಲಾಸ ದಲ್ಲಿದ್ದುದನ್ನು ನಾನು ನನ್ನ ಹದಿನೈದು ವರುಷದ ಸಹಯಾತ್ರೆಯಲ್ಲಿ ಕಂಡಿಲ್ಲ!

ಮರುವರುಷ ವಸಂತನಿಗೆ ನಮ್ಮ ಊರಿಗೇ ವರ್ಗವಾಗಿತ್ತು. ಅವನಿಗೆ ವರ್ಗದ, ಮತ್ತು ಮುಂಬಡತಿಯ ಕಾರಣದಿಂದ ನಾಲ್ಕಾರು ತಿಂಗಳು ಸಂಬಳವೇ ಸಿಕ್ಕಿದ್ದಿಲ್ಲ. ಸಾಲದುದಕ್ಕೆ ಕಾಯಿಲೆ ಬೇರೆ. ನಮ್ಮಲ್ಲೇ ಬಂದಿಳಿದ. ಅವನ ಔಷಧ, ಉಪಚಾರ ನಾನೇ ನೋಡಿಕೊಳ್ಳುತ್ತಿದ್ದೆ. ಆಗಲೂ ಬಿದಿಗೆಯ ದಿನ ಅವನ ಮ. ಆ. ಅಂಚೆಯ ಮೂಲಕವೇ ಇವಳ ಕೈಸೇರಿತು. ಇವಳ ಸಹಿಯಿಂದ ತೃಪ್ತನಾಗದ ಪೋಸ್ಟ್‌ಮನ್ನ ಆಗ ಅಲ್ಲೇ ಇದ್ದ ವಸಂತನದೊಂದು ಸಾಕ್ಷಿ ಯನ್ನೂ ಹಾಕಿಸಿಕೊಂಡನಂತೆ. ನಾನು ಹೊರಗಿ ನಿಂದ ಮನೆಗೆ ಬಂದಾಗ ಇಬ್ಬರೂ ನಗುತ್ತ ಹೇಳಿ ದರು. "ಶತಮೂರ್ಖರು!" ಎಂದೆ ನಾನು. ಆದರೆ ಹಾಗೆ ನಾನಂದವನೇನೂ ಜಾಣನಾಗ ಲಿಲ್ಲ. ಅವರ ಆ 'ಮೂರ್ಖತನ' ಇನ್ನೂ ಅನೂ ಚಾನವಾಗಿ ನಡೆದಿದೆ.

ಆ ಮಹಾಶಯನಿಗೆ ಈಗ ದೊಡ್ಡ ಕೆಲಸವಾ ಗಿದೆ. ಕಾರು ಇಟ್ಟಿದ್ದಾನೆ. ಹೆಂಡತಿಗೆ ಒಂದಲ್ಲ ಆಗಾಗ ಒಂದೊಂದರಂತೆ ಮಾಡಿಸಿದ ಚಿನ್ನದ ಒಡವೆ ಒಂದು ಪೆಟ್ಟಿಗೆ ಭಾರ. ಇವಳಿಗೂ ಆಗೊಂದು ಕಾಣಿಕೆ ಇದ್ದೇ ಇದೆ. ಸೀರೆ, ಕುಪ್ಪುಸ, ಸ್ಟೀಲಿನ ಪಾತ್ರೆಗಳು, ಟೀಸೆಟ್ಟು, ಮಕ್ಕ ಳಿಗೆ ಆಟಿಕೆಗಳು—ಆಗಾಗ ಈ ಧರ್ಮದೇವತೆ ಯಿಂದ ನನ್ನ ಮನೆ ತುಂಬಿಕೊಳ್ಳುತ್ತಲೇ ಇದೆ. ಆದರೆ ದೀಪಾವಳಿಯ ಉಡುಗೊರೆ ಮಾತ್ರ ಇವನದು ಇಂದಿಗೂ ಎರಡೇ ರೂಪಾಯಿ!

ಕಳೆದ ವರುಷ ನಾನು ತುಂಬ ಕಷ್ಟದಲ್ಲಿದ್ದೆ. ವಸಂತನಿಗದು ತಿಳಿದಿರಲಾರದು. ನಮ್ಮಲ್ಲಿ ದೀಪಾವಳಿ ಹಬ್ಬವಾಗುವಂತೆಯೇ ಇದ್ದಿಲ್ಲ. ಮಗುವಿಗೆ ಕಾಯಿಲೆ ಬೇರೆ. ಈಗಲಾದರೂ ಇವನ ದೀಪಾವಳಿಯ ಕೊಡುಗೆ ಚಿಗುರಿಕೊಂಡೀ ತೆಂದಿದ್ದೆ. ಆದರೆ ಬಂದದ್ದು ಎರಡೇ ರೂಪಾಯಿ!

ಅಂದು ಆ ಹಣ ಕಂಡು, ನನಗಂತೂ ಉ- ರಿದೇ ಹೋಯಿತು. ಇವಳ ಹಿಗ್ಗನ್ನು ಕಂಡು ಕೆನ್ನೆಗೆರಡೇರಿಸಬೇಕೆಂದು ಎನಿಸಿತು. ಆ ಹಣ ದಿಂದಲೇ ಅವಳು ದೀಪಾವಳಿ ಪಾರ್ಟಿ ಮಾಡಿಸಿ ದಳು. ನಾನು ಅದರಲ್ಲಿ ಭಾಗಿಯಾಗದೆ ಉಳಿಯ ಲಿಲ್ಲ—ಆ ಮಾತು ಬೇರೆ. ಆದರೆ ಆ ಅಲ್ಪ ಹಣ ದಲ್ಲಿಯೇ ತಂದ ತಿಂಡಿ, ಮಕ್ಕಳಿಗೆ ತಮಾಸಿ ಮದ್ದು—ಇವನ್ನೆಲ್ಲ ಕಂಡು ನನಗೆ ಜುಗುಪ್ಸೆಯೇ ಉಂಟಾಗಿತ್ತು. ಅದೇ ಹಣದಲ್ಲಿ ಒಂದು ಅಂತ- ರ್ದೇಶೀಯ ಪತ್ರ ತರಿಸಿ ವಸಂತನಿಗೆ ಚುಡಾ ಯಿಸಿ ಬರೆದೆ:

"—ಅಯ್ಯಾ, ಭೂಪ! ನಿನ್ನ ತದಿಗೆಯ ಕಾಣಿಕೆಯಿಂದ ಇವಳು ಕುಣಿಯುತ್ತಿದ್ದಾಳೆ. ಹೊಸ ಕಾಲ, ಹೊಸ ಯೋಜನೆಯಿಂದು ತುಟ್ಟಿ ಭತೆ ಬಂದು, ಆದಾಯ, ಸಂಬಳ—ಖರ್ಚು ಕಂದಾಯಗಳಂತೆ ಬೆಳೆಯುವಾಗ ನೀನು ನಿನ್ನ ಓಲ್ಡ್ ಸ್ಕೇಲಿನಲ್ಲಿಯೇ ಇನ್ನೂ ರುಸುಮು ಕಳಿಸು ತ್ತಿದ್ದೀ. ಅವಳಿಗೆ ನಾಚಿಕೆಯಿಲ್ಲವೆಂದಾದರೆ,-

ಇಷ್ಟು ದೊಡ್ಡ ಮನುಷ್ಯನಾದ ನಿನಗೂ ತಿಳಿಯ ಬಾರದೇನು ?" ಎಂದು.

ನನ್ನ ಪತ್ರದ ಪರಿಣಾಮವಾಗದಿರಲಿಲ್ಲ. ಆದರೆ ಅವನು ತನ್ನ ಹಟವನ್ನೇ ಸಮರ್ಥಿಸಿ ಕೊಂಡಿದ್ದ. ನೂರು ರೂಪಾಯಿಗೆ ಒಂದು ಚೆಕ್ ನನ್ನ ಹೆಸರಿನಲ್ಲಿತ್ತು. ಆದ್ದರಿಂದ ನಾನು ಅವನ ಎರಡು ರೂಪಾಯಿಯ ತಂಗಿಯ ಪ್ರೀತಿ ಯನ್ನು ಒಪ್ಪಬೇಕಾಯಿತು.

ಇವಳು ಇಂದು ಉಪದೇಶ ಮಾಡಿದಳು: "ನಿಮಗೆ ತಂಗಿ ಇಲ್ಲವೇನು ? ನೀವು ಅವಳಿಗೆ ವರುಷಕ್ಕೆ ಒಂದು ರೂಪಾಯಿಯಂತಾದರೂ ಕಳಿಸಿದ್ದೀರೇನು ?" ಎಂದು ಕೇಳುತ್ತಾಳೆ. "ಮುಚ್ಚು ಬಾಯಿ ! ,ನನ್ನ ಹೊಲ ಎಲ್ಲ ಮಾರಿ ಅವಳ ಮದುವೆ ಮಾಡಿಕೊಟ್ಟಿದ್ದೇನೆ. ನಿನ್ನಂತೆ ಒಂದು ರೂಪಾಯಿಯ ಭಿಕ್ಷೆಗೆ ಬಾಯಿ ತೆರೆ ದಿಲ್ಲ ನನ್ನ ತಂಗಿ ಎಂದು ಗದರಿಸಿದೆ. ಅವಳೇ ನನ್ನ ತಂಗಿಯ ಹೆಸರಿಗೆ ಕಳಿಸಿದ ಒಂದು ರೂಪಾಯಿಯ ರುಜುವಾತು ತೋರಿಸಿ ನುಡಿ ದಳು:

"ಇದು ನೋಡಿ; ನನಗೆ ನನ್ನಣ್ಣ ಕಳಿಸುವ ಎರಡು ರೂಪಾಯಿಯಲ್ಲಿ ಒಂದು ರೂಪಾಯಿ ತಪ್ಪದೆ ನಿಮ್ಮ ತಂಗಿಗೆ ಕಳಿಸುತ್ತೇನೆ. ನೀವು ಅಡ್ಡಿ ಮಾಡಲಾಗದು. ಪ್ರತಿ ದಿನ ನಿಮ್ಮ ಮಾತು ನೂರು ಕೇಳುತ್ತೇನೆ. ವರುಷಕ್ಕೆ ಒಂದು ಇದೊಂದೇ ನನ್ನ ಮಾತನ್ನು ನಡಿಸಿದರೆ ಸಾಕು. ಒಂದೆರಡು ವರುಷದಲ್ಲಿ ನಮ್ಮ ಸ್ಥಿತಿ ಸುಧಾರಿ ಸದೆ ಹೋದರೆ ನಾನು ವಸಂತನ ತಂಗಿಯೇ ಅಲ್ಲ" ಎಂದು ಕೂಗಿಕೊಂಡಿಳು.

ಕಣ್ಣಲ್ಲಿ ನೀರು ಧಾರೆಗಟ್ಟಿದೆ. ಬಣ್ಣಗೆಟ್ಟ ಸೀರೆಯನ್ನುಟ್ಟ ನನ್ನ ಮಡದಿಯನ್ನು ದಿಟ್ಟಿಸಿ ನೋಡಿದೆ. ಗಲ್ಲ ಸುಕ್ಕುಬಿದ್ದಿದೆ. ಅಕಾಲಿಕ ಮುಪ್ಪು ಬಂದಡರಿದಂತೆ ಕಾಣುತ್ತಾಳೆ. ಆದರೆ ಅವಳ ಧೃತಿಯನ್ನು ಕಂಡು ನಾನು ಕಂಗಾಲಾದೆ. ನನ್ನ ಶೌರ್ಯ ತಂತಾನೆ ಉಡುಗಿಹೋಯಿತು. ಆ ದುರ್ಗೆಯನ್ನು ಹೇಗೆ ಶಾಂತಗೊಳಿಸಲಿ–ಎಂದು ದಿಕ್ಕುಗಾಣದಾದೆ.

ನನಗರಿಯದೆ ನನ್ನ ಬಾಯಿಯಿಂದ ಒಂದು ಮಾತು ಬಂತು:

"ನಿಜ; ಹೌದು; ಒಪ್ಪಿದೆ. ನಿನ್ನ ಸದಿಚ್ಛೆಯೇ ವಸಂತನ ಸಂಪತ್ತಾಗಿರಬೇಕು."

*

ದುರ್ಗೆಯ ಆವೇಶವಿಳಿದಿತ್ತು. ಮುಖದ ಸುಕ್ಕು ಮಾಯವಾಗಿತ್ತು. ಸಜಲ ನೇತ್ರಗಳಲ್ಲಿ ಹಿಗ್ಗು ಕುಣಿದಿತ್ತು.

ಆಗ ನನ್ನ ಮಡದಿ ನನ್ನ ಮನೆಯ ಮಾಲಕು-ಮಿಯಂತೆ ಕಂಡಳು! *

ಸರ್ಜನ್— ಸಿಂಹದಂಥ ಹೃದಯ, ಗರುಡನಂಥ ಕಣ್ಣು, ಹೆಣ್ಣಿನಂಥ ಕೈ ಇರುವ ಒಬ್ಬ ಮನುಷ್ಯ.

ಅನುಭವ— ಈಗ ಮಾಡುವ ತಪ್ಪುಗಳಿಗೆ ನಾಳೆ ಕೊಡುವ ಹೆಸರು.


ಕಪ್ಪು ಹುಡುಗಿ— ವೇಷಮರೆಸಿಕೊಂಡ ಸುಂದರಿ.

ಶಿಕ್ಷಕ— ಮೇಣದ ಬತ್ತಿಯಂತೆ ತನ್ನನ್ನೆ ಸುಟ್ಟುಕೊಂಡು ಇನ್ನೊಬ್ಬರಿಂದ ಹಣ ತೆಗೆದುಕೊಂಡು ಬೆಳಕು ನೀಡುವ ಪ್ರಾಣಿ.

ನಾಲಗೆ— ತೊಡಕುಗಳನ್ನು ತಂದು ಹಾಕುವ ಮಾಂಸದ ತುಂಡು.

—'ಗ ಸು ಉ' (ಅ(ನ)ರ್ಥಕೋಶ)

ಒಮ್ಮೆ ದಿನಕ್ಕೆರಡಾಣೆಗೆ ದುಡಿದವರು
ಇಂದು ಇನ್ನೂರೈವತ್ತು ಎಕರೆ
ಉಳುತ್ತಾರೆ



ಆದರ್ಶ ರೈತ

ಚೆನ್ನಮಲ್ಲಪ್ಪ ಅಸುಂಡಿಯವರು

ಪಾವೆಂ

ಹುಬ್ಬಳ್ಳಿ ನಗರದ ಹದ್ದಿನೊಳಗೇ ಇರುವ, ಮತ್ತು ಇನ್ನೂ ಬೆಳೆಯುತ್ತಿರುವ ಒಂದು "ಯಶಸ್ಸಿನ ಕಥೆ" ಇದು. ಅದರ ನಾಯಕರು ೬೯ ವಯಸ್ಸಿನ ಚೆನ್ನಮಲ್ಲಪ್ಪ ಫಕೀರಪ್ಪ ಅಸುಂಡಿಯವರು. ಅವರು ಧಾರವಾಡ ಜಿಲ್ಲೆಯ ಅತಿ ದೊಡ್ಡ ರೈತ. ಇಂದು ಅವರು ಉತ್ತು ಬಿತ್ತಿ ಕೃಷಿ ಮಾಡುತ್ತಿರುವ ಭೂಮಿಯ ವಿಸ್ತಾರ ೨೫೦ ಎಕರೆಗೂ ಮೀರಿದೆ.

ಚೆನ್ನಮಲ್ಲಪ್ಪನವರು ತಮ್ಮ ಜಮೀನಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಬೆಳೆಯಬಲ್ಲ ಹೆಚ್ಚು ಕಡಿಮೆ ಎಲ್ಲ ಬೆಳೆಗಳನ್ನೂ ಬೆಳೆಯುತ್ತಾರೆ. ಹುಬ್ಬಳ್ಳಿಯ ಹಿತ್ತಲಲ್ಲೇ ಇದೆಯೆನ್ನಬಹುದಾದ ಬೇಡನಾಳದಲ್ಲಿ, ಹುಬ್ಬಳ್ಳಿ-ಬೆಂಗಳೂರು ರಸ್ತೆಯ ಎರಡೂ ಪಕ್ಕಗಳಲ್ಲಿ ಕಣ್ಣು ನಿಲುಕದಷ್ಟು ಅಗಲಕ್ಕೆಲ್ಲ ಹಾಸಿದ ಅವರ ಜಮೀನಿನಲ್ಲಿ ನಾವು ಆಳೆತ್ತರಕ್ಕೆ ಬೆಳೆದ ಜೋಳವನ್ನೂ ಅದರ ಮರೆಯಲ್ಲಿ ನಳನಳಿಸುವ ಹೆಸರು, ತೊಗರಿಗಳನ್ನೂ ಕಂಡೆವು; ಎಕರೆಗಟ್ಟಲೆ ನೆಲವನ್ನು ಹಸುರಾಗಿಸಿದ ನೀರುಳ್ಳಿ ಮೆಣಸಿನ ಕಾಯಿಗಳ ಮಿಶ್ರ ಬೆಳೆಯನ್ನು ಕಂಡೆವು; ಗೋದಿ, ಕಡಲೆ, ಶೇಂಗಾಗಳನ್ನೂ ಅವರು ಬೆಳೆಯುತ್ತಾರೆ; ಅನೇಕ ಎಕರೆ ಹತ್ತಿಗಾಗಿಯೂ ಮೀಸಲಾಗಿದೆ. ತರಕಾರಿ ಕೃಷಿಯಲ್ಲೀಗ ಅವರು ಕೈಪಳಗಿಸುತ್ತಿದ್ದಾರೆ; ಮುಂದಿನ ವರ್ಷ ಕಬ್ಬಿನ ಕೃಷಿಯನ್ನು ಪ್ರಾರಂಭಿಸುವ ಹುಮ್ಮಸದಲ್ಲಿದ್ದಾರೆ.

ಈ ವರ್ಣನೆ ಓದುಗರಿಗೆ ಅಂಥ ವಿಶೇಷವಾಗಿ ಕಾಣಲಿಕ್ಕಿಲ್ಲ. ಚೆನ್ನಮಲ್ಲಪ್ಪನವರ ಯಶಸ್ಸಿನ ಕಥೆ ಅವರು ಮಾಡುತ್ತಿರುವ ಜಮೀನಿನ ವಿಸ್ತಾರದಲ್ಲಾಗಲಿ ಬೆಳೆಗಳ ವೈವಿಧ್ಯದಲ್ಲಾಗಲಿ ಇರದೆ ಅವರು ಎಲ್ಲಿಂದ ಪ್ರಾರಂಭಿಸಿದರು ಎಂಬುದರಲ್ಲಿದೆ. ತಮ್ಮ ತೋಳುಗಳಿಂದಲೇ ತಮ್ಮ ಬಾಳಿನ ಅರಮನೆಯನ್ನು ಕಟ್ಟಿದವರು ಈ ಜಿಲ್ಲೆಯಲ್ಲಿ ಯಾರಾದರೂ ಇದ್ದರೆ ಅಸುಂಡಿಯವರು ಅವರಲ್ಲೊಬ್ಬರು. ಅವರು ಜೀವನವನ್ನು ಆರಂಭಿಸಿದಾಗ ಅವರ ಹತ್ತಿರ ಒಂದಂಗುಲ ಭೂಮಿಯೂ ಇರಲಿಲ್ಲ. ದೀರ್ಘಕಾಲದ ರೋಗದಿಂದ ಬಳ

ಲಿದ ಅವರ ದುರ್ದೈವಿ ತಂದೆ ಪಕೀರಪ್ಪನವರು ಇದೇ ಗ್ರಾಮದಲ್ಲಿ ಇದ್ದ ಎರಡು ಚಿಕ್ಕ ಮನೆಗಳನ್ನೂ ಮಾರಿದ್ದರು. ನಾಲ್ವರು ಗಂಡುಮಕ್ಕಳಲ್ಲಿ ಮೂರನೆಯವರಾದ ಚೆನ್ನಮಲ್ಲಪ್ಪನವರನ್ನು ಬಾಲ್ಯದಲ್ಲಿ, ಅವರೇ ಹೇಳುವಂತೆ, ಹೊಟ್ಟೆಗೆ ಹಾಕಲಾರದ ಹೆತ್ತವರು, ಎರಡು ಚಟ್ಟಿ ಜೋಳಕ್ಕಾಗಿ ಮಾರಿದರು.

ಅಂದಿನಿಂದ ಚೆನ್ನಮಲ್ಲಪ್ಪನವರು ತಮ್ಮ ದಾರಿಯನ್ನು ತಾವೇ ಕಂಡುಕೊಳ್ಳಲು ಕಲಿತರು. ದಿನಕ್ಕೆ ಎರಡಾಣೆಯ ಭವ್ಯ ಕೂಲಿಗಾಗಿ ಬೇರೆ ಬೇರೆ ಮನೆಗಳಲ್ಲಿ ಕೆಲ ಕಾಲ ದುಡಿದ ನಂತರ, ಅವರು ಹಳ್ಳಿಗಳಿಂದ ಹುಲ್ಲನ್ನೊಯ್ದು ಹುಬ್ಬಳ್ಳಿಯಲ್ಲಿ ಮಾರುತ್ತಿದ್ದರು. ಸ್ವಲ್ಪ ಬೆಳೆದ ಮೇಲೆ ಅವರು ದಿನಕ್ಕೆ ಆರಾಣೆಯ ಮೇಲೆ ಗಿರಣಿಗಳಲ್ಲಿ ಕೆಲಸ ಮಾಡತೊಡಗಿದ್ದರು. ಹುಬ್ಬಳ್ಳಿಯ ಗಿರಣಿ, ಜಿನ್‌ಗಳಲ್ಲಿ ಬಹುಶಃ ಪ್ರತಿಯೊಂದೂ ಚೆನ್ನಮಲ್ಲಪ್ಪನವರ ಬೆವರಿನ ಪರಿಚಯವುಳ್ಳವುಗಳೇ ಆಗಿವೆ.

ಈ ದಿನಗೂಲಿಯ ಪ್ರಪಂಚವನ್ನು ತೊರೆದಾಗ ಅವರಿಗೆ ವಯಸ್ಸು ೨೩ ಆಗಿರಬೇಕು. ಅವರ ಮುಂದಿನ ಹೆಜ್ಜೆ ಅವರನ್ನು ಭೂಮಿತಾಯಿಯ ಬಳಿಗೆ ಒಯ್ದಿತು. ಅವರು ಒಬ್ಬ ಹಿರಿಯ ರೈತರಲ್ಲಿ ವಾರ್ಷಿಕ ರೂ. ೨೧೦ ಸಂಬಳದ ಮೇಲೆ ಜೀತಕ್ಕಾಗಿ ಸೇರಿದರು. (ಇಂದು ಅವರಲ್ಲಿ ಆರು ಜೀತದಾಳುಗಳು ಇದರ ಮೂರು ನಾಲ್ಕು ಮಡಿ ಸಂಬಳಕ್ಕೆ ಕೆಲಸ ಮಾಡುತ್ತಿದ್ದಾರೆ.)

ಐದು ವರ್ಷ ಕಾಲ ನಡೆದ ಈ ಜೀತದ ದುಡಿಮೆಯ ಕಾಲದಲ್ಲೇ ಚೆನ್ನಮಲ್ಲಪ್ಪನವರು ತಾವು ಎಂಥ ಅಪ್ರತಿಮ ಶ್ರಮಯೋಗಿಗಳೆಂದು ತೋರಿಸಿಕೊಟ್ಟದ್ದು. ನಿರಲಸ ದುಡಿತ, ಪ್ರಾಮಾಣಿಕತೆ, ವಿಧೇಯತೆಗಳಿಂದ ಅವರು ಎಷ್ಟು ಜನಪ್ರಿಯತೆ ಗಳಿಸಿಬಿಟ್ಟಿದ್ದರೆಂದರೆ, ವೃದ್ಧ ಜಮೀನುದಾರ ಮಹಿಳೆಯೊಬ್ಬರು ಇವರನ್ನು ತಾವಾಗಿ ಕರೆದು, ತಮ್ಮ ಜಮೀನಿನಲ್ಲಿ ಸುಮಾರು ೩೨ ಎಕರೆಯಷ್ಟನ್ನು ಲಾವಣಿ (ಗೇಣಿ)ಗೆ ಕೊಟ್ಟರು.

ಹೀಗೆ ೩೦ ಕ್ಕೆ ಹತ್ತಿರವಾಗುತ್ತಿದ್ದಾಗ ಚೆನ್ನಮಲ್ಲಪ್ಪನವರು ರೈತ ಜೀವನವನ್ನು ಪ್ರಾರಂಭಿಸಿದರು. ಅವರ ಒಬ್ಬ ಅಣ್ಣ ಮತ್ತು ಒಬ್ಬ ತಮ್ಮ (ಇನ್ನೊಬ್ಬ ಅಣ್ಣ ದತ್ತಕಕ್ಕೆ ಹೋಗಿದ್ದರು) ಅವರೊಡನೆ ಸೇರಿಕೊಂಡರು.

ಚೆನ್ನಮಲ್ಲಪ್ಪನವರ ಶ್ರಮನಿಷ್ಠೆ ಮತ್ತು ದೂರದೃಷ್ಟಿ ಬಹಳ ಮಟ್ಟಿಗೆ ಅವರ ತಾಯಿಯಿಂದ ಬಂದದ್ದೆನ್ನಬಹುದು. ತಮ್ಮ ಮೂವರು ಮಕ್ಕಳು ಹೊಲಗೆಲಸಗಳಲ್ಲಿ ಮಗ್ನರಾಗಿದ್ದಾಗ ಈ ಮಹಿಳೆ ಅವರಿಗೆ ಸರಿದೊರೆಯಾಗಿ ದುಡಿದು ಮಾರ್ಗದರ್ಶನ ಮಾಡುತ್ತಿದ್ದರು. ಆದರೂ ಚೆನ್ನಮಲ್ಲಪ್ಪನವರಿಗೆ ಸ್ವಂತದ ಜಮೀನು ಕೊಳ್ಳುವ ಶಕ್ತಿ ಬರಬೇಕಾದರೆ ಏಳು ವರ್ಷ ಕಾಲ ಹಿಡಿಯಿತು. ರೂ. ೩,೨೦೦ ಗೆ ಅವರು ಏಳೆಕರೆ ಜಮೀನು ಕೊಂಡರು.

ಅನಂತರದ ಉತ್ಕರ್ಷದ ಕಥೆಯನ್ನು ವಿವರಿಸಲು ಹೇಳಿದರೆ ಚೆನ್ನಮಲ್ಲಪ್ಪನವರು ಹಗುರವಾಗಿ "ದೇವರು ಕೈಹಿಡಿದ, ಎಲ್ಲ ಅವನ ದಯೆ" ಎಂದುಬಿಡುತ್ತಾರೆ. ಆದರೆ ಏಳೆಕರೆಯಿಂದಾರಂಭವಾದ ಸ್ವಂತ ಜಮೀನು ಮೂರು ದಶಕಗಳ ಅವಧಿಯಲ್ಲಿ ೧೨೦ ಎಕರೆಗೆ ಹೆಚ್ಚಿಕೊಳ್ಳಬೇಕಾದರೆ ಮತ್ತು ಮೇಲೆ ೧೩೦ ಎಕರೆ ಭೂಮಿಯನ್ನು ಇವರಿಗೆ ಲಾವಣಿಗೆ ಕೊಡಲು ಇತರರು ಮುಂದೆ ಬರಬೇಕಾದರೆ ಇವರಲ್ಲಿ ಮುಟ್ಟಿದ ಮಣ್ಣನ್ನು ಚಿನ್ನಮಾಡುವ ಯಾವುದೊ ಅಮೃತ ಹಸ್ತಗುಣ ಇರಬೇಕೆಂದು ನಾವು ಸೂಚಿಸಿದೆವು. ಆಗವರು ಹೇಳಿದರು: "ನನಗೆ ಯಾವ ಚಟವೂ ಇಲ್ಲ. ಬರಿ ಭೂಮಿಯ ಮೇಲೊಂದೇ ನನ್ನ ಲಕ್ಷ್ಯ. ಧಾರವಾಡ ಜಿಲ್ಲೆಯ ಭೂಮಿ ಬಂಗಾರದ ಬಟ್ಟಲು. ಇಲ್ಲಿ ಮನಸಿಟ್ಟು ದುಡಿದವನಿಗೆ ಎಂದೂ ಬರಗಾಲವಿಲ್ಲ."

ಚೆನ್ನಮಲ್ಲಪ್ಪನವರ 'ಮನಸಿಟ್ಟು ದುಡಿಯುವುದು' ಎಂದರೆ ಹಗಲೂ ಇರುಳೂ ದುಡಿಯುವುದು ಎಂದೇ ಅರ್ಥವೆಂದು ನಮಗೆ ಬೇಗನೆ ತಿಳಿಯಿತು. ಎಪ್ಪತ್ತಕ್ಕೆ ಹತ್ತಿರವಾಗಿದ್ದರೂ

ಅವರು ಇಂದಿಗೂ ಕ್ಷಣ ಕಾಲ ವಿಶ್ರಾಂತಿ ತೆಗೆದುಕೊಳ್ಳುವುದಿಲ್ಲ. ಅವರು ತಮ್ಮ ಹೊಲಗೆಲಸಗಳಿಗಾಗಿ ೫೦ ಆಳುಗಳನ್ನೂ ಆರು ಜೀತದವರನ್ನೂ ಇಟ್ಟುಕೊಂಡಿದ್ದರೂ ಅವರೊಡನೆ ಹಗಲಿಗೆ ಹೆಗಲು ಹಚ್ಚಿ ದುಡಿಯುತ್ತಾರೆ. ದುಡಿಯುವ ಶಕ್ತಿಯ ಮಾತು ಬಂದರೆ ಅವರ ಅಭಿಮಾನ ಉಕ್ಕೇರಿ, "ಬೇಕಾದ ತರುಣರನ್ನು ಕರೆತನ್ನಿ, ನಾನು ಅವರನ್ನು ಮೀರಿಸಿ ದುಡಿಯದಿದ್ದರೆ ಹೇಳಿ ಆಮೇಲೆ" ಎನ್ನುತ್ತಾರೆ. ಇನ್ನೊಂದು ಸಂದರ್ಭದಲ್ಲಿ ಅವರು "ಬೇಕಾದ ಭೂಮಿಯನ್ನು ನನ್ನ ಹತ್ತಿರ ಕೊಡಿ. ಉಳಿದ ಯಾರಿಗಿಂತಲೂ ಹೆಚ್ಚು ಬೆಳೆ ತೆಗೆದು ತೋರಿಸುತ್ತೇನೆ" ಎಂದರು.

ಇದು ವೃಥಾಭಿಮಾನವೇನೂ ಅಲ್ಲ. ಅವರ ಜೋಳದ ಪೈರನ್ನು ನೋಡಿ ನಾವು ಎಕರೆಗೆ ಎಷ್ಟು ಬೆಳೆಯುತ್ತದೆ ಎಂದು ವಿಚಾರಿಸಿದಾಗ ೧೫ ಚೀಲ ಎಂದರು. ಸಾಮಾನ್ಯ ರೈತರು ಎಕರೆಗೆ ಏಳೆಂಟು ಚೀಲ ಬೆಳೆಸುತ್ತಾರಷ್ಟೇ. ಅವರ ಮೆಣಸಿನ ಕಾಯಿ ನೀರುಳ್ಳಿ ಹೊಲದಿಂದ ಎಕರೆಗೆ ಸಾವಿರ ರೂಪಾಯಿಯ ಉತ್ಪನ್ನವನ್ನವರು ತೆಗೆಯುತ್ತಾರೆ. ಅವರಿಗೆ ಜಮೀನು ಗೇಣಿಗೆ ಕೊಟ್ಟ ಮಿತ್ರರೊಬ್ಬರು ತಮ್ಮ ಹೊಲ ಚೆನ್ನಮಲ್ಲಪ್ಪನವರ ಕೈಗೆ ಹೋದ ನಂತರ ಉತ್ಪನ್ನ ಮೂರು ಪಟ್ಟು ಹೆಚ್ಚಾಗಿದೆಯೆಂದರು.

ಅಸುಂಡಿಯವರು ಹದಿನಾರೆತ್ತುಗಳನ್ನಲ್ಲದೆ ಟ್ರ್ಯಾಕ್ಟರು, ಪಂಪು ಮೊದಲಾದವುಗಳನ್ನು ಇಟ್ಟುಕೊಂಡ 'ಪ್ರಗತಿಪರ' ಎನ್ನಬಹುದಾದ ರೈತರಾಗಿದ್ದರೂ ಅವರು ಆಧುನಿಕ ಕೃಷಿವಿಧಾನಗಳ ಬಗ್ಗೆ ತುಸು ಜಾಗರೂಕರಾಗಿಯೇ ಇದ್ದಾರೆ. ವರ್ಷಕ್ಕೆ ೧೨,೦೦೦ ರೂಪಾಯಿಯ ಗೊಬ್ಬರವನ್ನವರು ಕೊಳ್ಳುತ್ತಿರುವರಾದರೂ ಅದರಲ್ಲಿ ಒಂದೇ ಒಂದು ಔನ್ಸ್ ರಾಸಾಯನಿಕ ಗೊಬ್ಬರ ಇಲ್ಲ. ಎಲ್ಲವೂ ಪ್ರಾಣಿಜನ್ಯ (ಹಟ್ಟಿ ಮತ್ತು ಕಾಂಪೊಸ್ಟ್) ಗೊಬ್ಬರ. ರಾಸಾಯನಿಕ ಗೊಬ್ಬರವು ತಾತ್ಕಾಲಿಕವಾಗಿ ಹೆಚ್ಚಿನ ಬೆಳೆ ಕೊಟ್ಟರೂ ಅದು ನೆಲವನ್ನು ಬರಬರುತ್ತ ಕೆಡಿಸುತ್ತದೆಂಬ ಅವರ ಹೇಳಿಕೆ. ಅವರು ರಾಸಾಯನಿಕ ಕೃಮಿನಾಶಕವನ್ನು ಪ್ರಯೋಗಿಸುವುದೂ ಅಪರೂಪವಾಗಿಯೆ. ಅವರ ಸುದೈವವೋ ಏನೋ ಅವರ ಬೆಳೆಗೆ ಹುಳಹುಪ್ಪಡಿ ಹಿಡಿಯುವುದು ಕಡಿಮೆ. ರೈತ ತನ್ನ ಕೆಲಸ ಮಾಡಿದರೆ ನಿಸರ್ಗ ತನ್ನ ಕೆಲಸ ಮಾಡುತ್ತದೆಂದವರ ದೃಢಾಭಿಪ್ರಾಯ. ಅವರಿಗೆ ಭಯವುಂಟುಮಾಡುವ ಪಿಡುಗು ದೈವಿಕವೂ ಅಲ್ಲ; ನೈಸರ್ಗಿಕವೂ ಅಲ್ಲ; ಮಾನುಷಿಕ. ಸರಕಾರದವರು ಬಿಡುಗಡೆ ಮಾಡಿರುವ ಹುಬ್ಬಳ್ಳಿಯ ಭೂತಪೂರ್ವ ಅಪರಾಧಿ ಜನಾಂಗದ ಜನರೂ ಅವರ ದನಕರುಗಳೂ ಕದಿಯುವ ಮತ್ತು ಹಾಳು ಮಾಡುವ ಬೆಳೆ ರೈತರ ಮಗ್ಗಲು ಮುರಿಯುತ್ತಿದೆಯೆಂದೂ ಇದರ ವಿರುದ್ಧ ಯಾವ ರಕ್ಷಣೆಯನ್ನೂ ಕೊಡಲು ಸರಕಾರವು ಸಮರ್ಥವಾಗಿಲೆಂದೂ ಅವರು ಹೇಳುತ್ತಾರೆ.

"ನೀವು ರಾಜಕಾರಣದಲ್ಲಿ ಭಾಗ ವಹಿಸುತ್ತೀರಾ?" ಎಂದು ಕೇಳಿದರೆ ಚೆನ್ನಮಲ್ಲಪ್ಪನವರು ಹೊಲಗೆಲಸಕ್ಕೂ ರಾಜಕಾರಣಕ್ಕೂ ತಾಳೆಬೀಳುವುದಿಲ್ಲವೆನ್ನುತ್ತಾರೆ. ಅವರು ರಾಜಕಾರಣ, ಪ್ರಸಿದ್ಧಿ ಇವಾವುದರ ಮೋಹಕ್ಕೂ ಬೀಳುವವರಲ್ಲ. ಸರಕಾರಿ ಎಂಬುದರ ಬಗ್ಗೆಯೆ ಅವರು ಸಂಶಯಭಾವವನ್ನು ಪ್ರಕಟಿಸಿದರು. ತಗಾಯಿ ಸಾಲವನ್ನೊಳಗೊಂಡು ಅವರು ಯಾವ ಸರಕಾರಿ ಸಹಾಯಕ್ಕೂ ಕೈಚಾಚಿದವರಲ್ಲ. ಕೇಂದ್ರ ಕೃಷಿ ಮಂತ್ರಿ ಪಂಜಾಬರಾವ ದೇಶಮುಖರನ್ನೊಳಗೊಂಡು ಅನೇಕ ಮಂತ್ರಿಗಳು ಅವರ ಹೆಸರು ಕೇಳಿದ್ದಾರೆ, ಅವರ ಮನೆಗೆ ಭೆಟ್ಟಿ ಕೊಟ್ಟು ಪ್ರಶಂಸೆ ವ್ಯಕ್ತಗೊಳಿಸಿದ್ದಾರೆ. ಆದರೆ ಯಾವ ಕೃಷಿ ಬಹುಮಾನನ್ನಾಗಲಿ ಬಿರುದನ್ನಾಗಲಿ ಅವರು ಬಯಸಿಲ್ಲ; ಅವರಿಗೆ ಅದು ದೊರೆತಿಲ್ಲ.


ಮೂವರು ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳು ಮತ್ತು ಎಂಟು ಮೊಮ್ಮಕ್ಕಳ ತುಂಬು ಸಂಸಾರದೊಡನೆವಾಸಿಸುವ ಚೆನ್ನಮಲ್ಲಪ್ಪನವರು ತುಂಬ ಧಾರ್ಮಿಕ— ಎರಡೂ ಅರ್ಥಗಳಲ್ಲಿ—

ಮನೋವೃತ್ತಿಯವರು. ಅವರು ತಮಗೆ ದೇವರು ಕೊಟ್ಟ ಉತ್ಕರ್ಷವನ್ನು ತಮಗಾಗಿಯೆ ಇಟ್ಟು ಕೊಳ್ಳುವವರಲ್ಲ. ಹುಬ್ಬಳ್ಳಿಯ ಶಾಲೆ ಕಾಲೇಜು ಗಳಿಗೆ ಸಾವಿರಗಟ್ಟಳೆ ದಾನ ಮಾಡಿದ್ದಾರೆ; ತಮ್ಮ ಗ್ರಾಮದೇವಸ್ಥಾನದ ಜೀರ್ಣೋದ್ಧಾರಕ್ಕೆ ರೂ. ೭,೦೦೦ ಕೊಟ್ಟಿದ್ದಾರೆ. ವಿವಿಧ ಮಠಗಳಿಗೆ ಅವರು ಕೊಟ್ಟ ಕಾಣಿಕೆಗಳು ಕಡಮೆಯಲ್ಲ. ಆಚೆ ವರ್ಷ ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠಕ್ಕೆ ಅವರು ೫,೦೦೦ ಬೆಲೆಯ ಎರಡು ಆನೆಗ-ಳನ್ನು ಕಾಣಿಕೆ ಕೊಟ್ಟರು. ಕಳೆದ ವರುಷ ಅವರು ಹೊಸದಾಗಿ ಕಟ್ಟಿಸಿದ ವಿಸ್ತಾರವಾದ ಮನೆಯ ಪ್ರವೇಶ ಕಾಲದಲ್ಲಿ ಅದೇ ಮಠದ ಸ್ವಾಮಿಗಳವರನ್ನು ಆಮಂತ್ರಿಸಿ ೧೦,೦೦೦ ಕಾಣಿಕೆಯಿತ್ತರು.

ತಮ್ಮ ಅಪೂರ್ವ ಯಶಸ್ಸು ಚೆನ್ನಮಲ್ಲಪ್ಪನವರ ಮನೋಭಾವದಮೇಲೆ ಯಾವ ಪರಿಣಾಮವನ್ನೂ ಮಾಡಿಲ್ಲ. ಅಹಂಕಾರ ಅವರ ಹತ್ತಿರ ಬಂದಿಲ್ಲ. ಆಡಂಬರಕ್ಕೆ ಅವರು ಮನಸೋತಿಲ್ಲ. ತಮ್ಮ ಸಾಫಲ್ಯದಲ್ಲಿ ದೈವದ ಪಾತ್ರವನ್ನು ಹೆಚ್ಚಿಸಿ ತಮ್ಮ ಸ್ವಂತದಪಾತ್ರವನ್ನು ಕಡಿಮೆ ಮಾಡಿಯೇ ಹೇಳುತ್ತಾರೆ. ಅವರು ತಮ್ಮ ಎತ್ತುಗಳಿಗೆಕೂಡ ಕೃತಜ್ಞತೆಯನ್ನರ್ಪಿಸುತ್ತಾರೆ. (ಅವುಪ್ರತಿಯೊಂದು ಜೋಡಿಗೆ ೨,೦೦೦ ರೂಪಾಯಿ ಮೇಲ್ಪಟ್ಟು ಬೆಲೆ ಬಾಳುವಂಥವು.) ಅವುಗಳ ಮೇಲೆ ಅವರಿಗಿರುವ ಪ್ರೀತಿ ಅವುಗಳನ್ನು ಕಂಡರೇನೇ ತಿಳಿಯುತ್ತದೆ. ಅವುಗಳಿಗಾಗಿ ಅವರು ನಿರ್ಮಿಸಿದ ಕೊಟ್ಟಿಗೆಗಳು ಈ ಶಹರದಲ್ಲಿ ಅನೇಕ ಮಧ್ಯಮ ವರ್ಗದವರ ನಿವಾಸದ ಬಾಡಿಗೆ ಮನೆಗಳಿಗಿಂತಲೂ ಚೆನ್ನಾಗಿವೆ.

ಚೆನ್ನಮಲ್ಲಪ್ಪನವರ ಕೃಷಿ ಪಾಂಡಿತ್ಯದ ಪ್ರಸಿದ್ಧಿ ಕೇಳಿ ಆಕಾಶವಾಣಿಯವರು ಅವರ ಅಭಿಪ್ರಾಯಗಳನ್ನು ಧ್ವನಿಮುದ್ರಿಸಿಕೊಂಡು ಹೋಗಿದ್ದರೂ ಕೃಷಿ ಶಾಖೆಯವರು ಪ್ರಕಟಿಸಿದ ಪುಸ್ತಿಕೆಯಲ್ಲಿ ಅವರ ಉಲ್ಲೇಖ ಬಂದಿದ್ದರೂ ಸ್ವತಃ ಚೆನ್ನಮಲ್ಲಪ್ಪನವರು ನಿರಕ್ಷರಿಗಳು. ಮಕ್ಕಳನ್ನೂ ಉಚ್ಚ ಶಿಕ್ಷಣಕ್ಕೆ ಕಳಿಸಿಲ್ಲ. ಅವರ ವೇಷಭೂಷಣಗಳೂ ಅತಿ ಸರಳ. ಆದರೆ ಅವರ ಮಾತಿನಲ್ಲಿ ಅನುಭವ ಮತ್ತು ಹೃದಯವಂತಿಕೆಯಿಂದ ಹುಟ್ಟಿದ ಒಂದು ಕಾಂತಿ, ಒಂದು ಸುಸಂಸ್ಕೃತಿಯಿದೆ. ಜಾಣ್ನುಡಿಗಳು ಅವರ ಮಾತಿನ ನಡುನಡುವೆ ಕಿಡಿಗಳಂತೆ ಹೊರಹೊ-ಮ್ಮುತ್ತವೆ. "ದುಡಿತವೇ ದುಡ್ಡಿನ ತಾಯಿ" ಎಂದು ಅವರು ಹೇಳಿದರು. ದುಡಿತದ ಪರಿಯನ್ನೂ ಅವರು ಅಷ್ಟೇ ಸರ್ವಜ್ಞಸದೃಶವಾದ ನುಡಿಗಳಲ್ಲಿ ಹೇಳಿದರು: "ತನ್ನ ಬಣ್ಣ ಭೂಮಿಗೆ ಕೊಟ್ಟು ಭೂಮಿಯ ಬಣ್ಣವನ್ನು ತಾನು ತೆಗೆದುಕೊಳ್ಳಬೇಕು."

ಅದನ್ನು ಚೆನ್ನಮಲ್ಲಪ್ಪನವರು ಅಕ್ಷರಶಃ ಪಾಲಿಸುತ್ತಾರೆಂಬುದಕ್ಕೆ ಸಾಕ್ಷಿಯಾಗಿ ಅವರ ಬಗಲಗಸೆಯ ಅಂಗಿಯ ಮೇಲೆ ನಾವು ಭೂಮಿತಾಯಿ ನೀಡಿದ ಬಣ್ಣದ ಲಕ್ಷಣಗಳನ್ನು ಕಂಡೆವು. ★



ಬ್ರಿಟನ್‌ನಲ್ಲಿ ಶೇ. ೪೧ ಮಹಿಳಾ ಅಗ್ನಿಹೋತ್ರಿಗಳು !

ಬ್ರಿಟನ್‌ನಲ್ಲಿ ಶೇ. ೪೧ ಮಹಿಳೆಯರು ಸಿಗರೇಟು ವಗೈರೆ ಸೇದುವರೆಂದರೆ ಅಚ್ಚರಿಪಡಬೇಕಾಗಿಲ್ಲ. ಸರಾಸರಿ ಒಬ್ಬ ಮಹಿಳೆ ವಾರಕ್ಕೆ ೭೧ ಸಿಗರೇಟು ಸೇದುತ್ತಾಳೆ. ಅದೇ ಅವಧಿಯಲ್ಲಿ ಗಂಡಸು ೧೩೪ ಸಿಗರೇಟು ಸೇದುತ್ತಾನೆ! ೩೭,೮೦೦,೦೦೦ ವಯಸ್ಕರು ೨೨,೦೦೦,೦೦೦ ಹೊಗೆ ಸುತ್ತುಗಳನ್ನು ಸೇದುತ್ತಾರೆ. ಈ ಹೊಗೆಸುತ್ತುಗಳಲ್ಲಿ ಸಿಗರೇಟಿನ ಸಂಖ್ಯೆ ಜಾಸ್ತಿ.

'ಇಂದಿರಾಪ್ರಿಯ'

ಈ ಕ್ರಾಂತಿಕಾರಿ ವಿಧಾನದಿಂದ ನೀವು ಅಟ್ಟದ ಮೇಲೆ ವಾಸಿಸುತ್ತಿದ್ದರೂ ತರಕಾರಿ ಬೆಳೆದುಕೊಳ್ಳಬಹುದು

ಭೂಮಿ ಇಲ್ಲದೆ ಬೆಳೆ

ಚ. ಶೀ.

ಭೂಮಿಯ ಮೇಲೆ ಬೆಳೆಯುವ ಅನೇಕ ಗಿಡಗಳನ್ನು ನಾವು ಭೂಮಿಯ ಸಹಾಯವಿಲ್ಲದೆ ಬೆಳೆಯಬಹುದು. ಗಿಡಗಳ ಬೇರುಗಳಿಗೆ ಮಣ್ಣೇ ಆಹಾರವೆಂದು, ಹಿಂದೆ ಅನೇಕರು ತಿಳಿದಿದ್ದರು. ಆದರೆ ಬೇರುಗಳು ಮಣ್ಣಿನಿಂದ ತೆಗೆದು ಕೊಳ್ಳುವುದು ತಮ್ಮ ಬೆಳವಣಿಗೆಗೆ ಅತ್ಯಾವಶ್ಯಕ ವಾದ ಲವಣದ್ರಾವಣವನ್ನು ಮಾತ್ರ. ಸಸ್ಯಗಳ ಜೀವನಕ್ಕೆ ಅತಿ ಮುಖ್ಯವಾಗಿ ಬೇಕಾದ ಲವಣಗಳೆಂದರೆ ಪೊಟ್ಯಾಸಿಯಂ ಫಾಸ್ಫೇಟ್, ಸೋಡಿಯಂ ನೈಟ್ರೇಟ್ ಮತ್ತು ಮೆಗ್ನೀಸಿಯಂ ಸಲ್ಫೇಟ್‌ಗಳು ಮಾತ್ರವೆಂದು ಸಂಶೋಧನೆಗಳು ತೋರಿಸಿ ಕೊಟ್ಟಿವೆ. ಗಿಡಗಳು ಎಲ್ಲೇ ಬೆಳೆಯಲಿ ಅವುಗಳು ಈ ಲವಣಗಳನ್ನು ದ್ರಾವಣ [Solution] ರೂಪದಲ್ಲಿ ಮಾತ್ರ ಸ್ವೀಕರಿಸಬಲ್ಲವು. ಗಿಡಗಳ ಬೆಳವಣಿಗೆಯಲ್ಲಿ ಭೂಮಿಯ ಪಾತ್ರ ಲವಣಗಳನ್ನು ಪೂರೈಸುವುದು ಮತ್ತು ಬೇರುಗಳನ್ನು ಬಿಗಿಯಾಗಿ ಹಿಡಿದುಕೊಂಡು ಗಿಡಕ್ಕೆ ಆಶ್ರಯ ಕೊಡುವುದು ಮಾತ್ರ.

ಭೂಮಿಯ ನೆರವೇ ಇಲ್ಲದೆ, ಬರೀ ಲವಣ ದ್ರಾವಣ ಮತ್ತು ನೀರಿನ ಸಹಾಯದಿಂದ ಬೆಳೆಯನ್ನು ತೆಗೆಯಬಹುದೆಂದು ಸಂಶೋಧಕರ ಪ್ರಯೋಗಗಳು ತೋರಿಸಿಕೊಟ್ಟಿವೆ. ಈ ಜಲ ಕೃಷಿ [Water-culture] ಪದ್ಧತಿಯನ್ನು ಇಂಗ್ಲೀಷಿನಲ್ಲಿ "ಹೈಡ್ರೋಪಾನಿಕ್ಸ್" [Hydro ponics] ಎಂದೆನ್ನುತ್ತಾರೆ.

೧೮೬೦ ರಲ್ಲಿ ಜೆ. ವಾನ್ ಸಾಕ್ಸ್ ಎಂಬ ಜರ್ಮನ್ ಸಸ್ಯ ಶಾಸ್ತ್ರಜ್ಞ ಮತ್ತು ೧೯೬೫ ರಲ್ಲಿ ಡಬ್ಲ್ಯು. ಖಾಪ್ ಎಂಬ ವಿಜ್ಞಾನಿ ಸಸ್ಯಗಳ ಮತ್ತು ಲವಣಗಳ ಸಂಬಂಧವನ್ನು ಪರೀಕ್ಷಿಸಲೆಂದು, ಈ ರೀತಿಯ ಜಲಕೃಷಿಯನ್ನು ಯಶಸ್ವಿಯಾಗಿ ಕೈಗೊಂಡರು. ೧೯೨೯ ರಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಪ್ರೊಫೆಸರರಾದ ಗರಿಕ್‌ರು ಭೂಮಿಯನ್ನು ಬಿಟ್ಟು ೨೫ ಅಡಿ ಎತ್ತರದಲ್ಲಿ ಟೊಮೆಟೋಗಳನ್ನು ಬೆಳೆದು ಜನಗಳಿಗೆ ಆಶ್ಚರ್ಯವನ್ನುಂಟುಮಾಡಿದರು. ಅವರಿಂದಲೇ ಈ ಪದ್ಧತಿಗೆ ಹೈಡ್ರೋಪಾನಿಕ್ಸ್ ಎಂಬ ಹೆಸರು ಬಂದದ್ದು.

ಭಾರತದಲ್ಲಿ ಮೊದಲ ಬಾರಿ ೧೯೪೬ ರಲ್ಲಿ ಈ ಪದ್ಧತಿಯನ್ನನುಸರಿಸಿ ಟೊಮೆಟೊ ಬೆಳೆಯನ್ನು ಯಶಸ್ವಿಯಾಗಿ ತೆಗೆಯಲಾಯ್ತು. ಈ ಪ್ರಯೋಗ ನಡೆದದ್ದು ಬಂಗಾಲ ಸರ್ಕಾರದ ಸಹಾಯದಿಂದ ಡಾರ್ಜಿಲಿಂಗಿನ ಹತ್ತಿರವಿರುವ ಕಲಿಂಪಾಂಗಿನಲ್ಲಿ.

೫ ಅಡಿ ಅಗಲ ಮತ್ತು ೨೦ ಅಡಿ ಉದ್ದದ ಅನೇಕ ಪಾತಿಗಳನ್ನು ಕಟ್ಟಿ, ಪ್ರತಿ ಪಾತಿಗೂ ಕೊಂಚ ಇಳಿಜಾರಾದ ಕಾಂಕ್ರೀಟಿನ ತಳವನ್ನು ಸಿದ್ಧಗೊಳಿಸಲಾಯಿತು. ಪ್ರತಿ ಪಾತಿಗೂ ನಾಲ್ಕೂ ಕಡೆ 'ಗೋಡೆ'ಗಳನ್ನು ಕಟ್ಟಿ, ಕಲ್ಲಿನ ಪುಡಿ ಮತ್ತು ಚಿಕ್ಕ ಚಿಕ್ಕ ಕಲ್ಲುಗಳ ಮಿಶ್ರಣವನ್ನು, ಅವುಗಳೊಳಕ್ಕೆ ಸುಮಾರು ಆರು ಇಂಚುಗಳಷ್ಟೆತ್ತರ ಹಾಕಲಾಯಿತು. [ಬೇರುಗಳಿಗೆ ಆಧಾರವಾಗಿರಲೆಂದು ಇದನ್ನು ಸಿದ್ಧಗೊಳಿಸಲಾಗಿತ್ತು.] ನೀರಿನ ಹೋಗು ಬರುವಿಕೆಗಾಗಿ

ಯೆಂದು, ಗೋಡೆಗಳಲ್ಲಿ ಸಣ್ಣ ಸಣ್ಣ ರಂಧ್ರಗಳನ್ನು ಮಾಡಲಾಗಿತ್ತು. ಮಿಶ್ರಣವು ಎಲ್ಲಾ ಕಡೆಯೂ ಸಮನಾಗಿ ನೆನೆಯುವಂತೆ ಒಂದು ಕಡೆಯಿಂದ ನೀರನ್ನು ಬಿಟ್ಟು, ಆ ಹಸೀ 'ಹಾಸಿಗೆ'ಯ ಮೇಲೆ ೫ ಇಂಚು ಎತ್ತರದ ಟೊಮೆಟೋ ಸಸಿಗಳನ್ನು ನೆಡಲಾಯಿತು. ನಂತರ ಅವುಗಳಿಗೆ ಗೊತ್ತಾದ ಪ್ರಮಾಣಗಳಲ್ಲಿ ಲವಣಗಳು ಮತ್ತು ರಾಸಾಯನಿಕ ವಸ್ತುಗಳ ಆಹಾರವನ್ನು ಒದಗಿಸಲಾಯಿತು. ಗಿಡಗಳ ಮಧ್ಯೆ ಇದ್ದ ಜಾಗಗಳಲ್ಲಿ ಈ ಮಿಶ್ರಣವನ್ನು ಸಮನಾಗಿ ಹರಡಿ, ಲವಣಗಳು ಕರಗಲೆಂದು ಮೇಲೆ ನೀರು ಹಾಯಿಸಲಾಗಿತ್ತು. ಏಕೆಂದರೆ ಸಸ್ಯಗಳು, ಹಿಂದೆ ಹೇಳಿದಂತೆ ಲವಣಗಳನ್ನು ದ್ರಾವಣ ರೂಪದಲ್ಲಿ ಮಾತ್ರ ಗ್ರಹಿಸಬಲ್ಲವು. ಪಾತಿಗಳನ್ನು ನಿಯಮಿತವಾಗಿ ಹಸಿ ಮಾಡುವಿಕೆ ಮತ್ತು ನಿಯಮಿತವಾಗಿ ಆಹಾರವನ್ನು ಒದಗಿಸುವುದು, ಸುಮಾರು ೩ ತಿಂಗಳುಗಳ ಕಾಲ ತಪ್ಪದೆ ನಡೆಯಿತು.

ಫಲಿತಾಂಶಗಳು ಅತ್ಯಾಶ್ಚರ್ಯವನ್ನುಂಟುಮಾಡಿದವು. ಈ ರೀತಿ ಸಿದ್ಧಮಾಡಿದ ಪಾತಿಗಳಲ್ಲಿ ತೆಗೆದ ಬೆಳೆ ಅತ್ಯುತ್ತಮ ದರ್ಜೆಯದಾಗಿತ್ತಲ್ಲದೆ, ಸಾಧಾರಣವಾದ ಭೂಮಿಯ ಬೆಳೆಗಿಂತ ಅತಿ ಜಾಸ್ತಿಯಾಗಿಯೂ ಇತ್ತು. ೧ ಸಹಸ್ರ ಚದರಡಿ ಜಾಗದಲ್ಲಿ ಸುಮಾರು ೧೩೦೦ ರೂ. ಬೆಲೆಯ ಬೆಳೆಯನ್ನು ತೆಗೆಯಲಾಯ್ತು. ಇದಕ್ಕೆ ತಗುಲಿದ ವೆಚ್ಚ ಕೇವಲ ಹದಿನೈದು ರೂಪಾಯಿಗಳು ಮಾತ್ರ! ಪ್ರತಿ ಗಿಡವೂ ಸುಮಾರು ೧೧ ಪೌಂಡಿನಷ್ಟು ಟೊಮೆಟೊ ಕೊಟ್ಟವು. ಕೆಲವು ಹಣ್ಣುಗಳು ಸುಮಾರು ೧೨ ಔನ್ಸ್‌ಗಳಷ್ಟು ತೂಗುತ್ತಿದ್ದವು. ಈ ಲೆಕ್ಕದ ಮೇಲೆ, ಒಂದು ಎಕರೆಗೆ ೧೪೦ ಟನ್‌ಗಳಷ್ಟು ಅತ್ಯುತ್ತಮ ಟೊಮೆಟೋ ಬೆಳೆದಂತಾಯಿತು. ಬರೀ ಭೂಮಿಯ ಮೇಲೆ ಬೆಳೆದಿದ್ದರೆ ಅದು ಒಂದು ಎಕರೆಗೆ ೫–೧೦ ಟನ್‌ಗಳಿಗಿಂತ ಜಾಸ್ತಿ ಕೊಡುತ್ತಿರಲಿಲ್ಲ. ಈ ಪದ್ಧತಿಗೆ "ಬಂಗಾಳ ಪದ್ಧತಿ" ಎಂದು ಹೆಸರಾಗಿದೆ.

ಅನೇಕ ದೇಶಗಳಲ್ಲಿ 'ಜಲಕೃಷಿ' ಪದ್ಧತಿಯನ್ನು ಯಶಸ್ವಿಯಾಗಿ ಕೈಕೊಂಡಿದ್ದರೂ ವ್ಯಾಪಾರಿ ಯಶಸ್ಸನ್ನು ಈ ಪದ್ಧತಿ ಇನೂ ಗಳಿಸಬೇಕಾಗಿದೆ. ಲವಣ ದ್ರಾವಣ ಇತ್ಯಾದಿಗಳು ಸುಲಭ ದರದಲ್ಲಿ ದೊರಕುತ್ತಿದ್ದರೂ ದೊಡ್ಡ ದೊಡ್ಡ ಪಾತಿಗಳನ್ನು ಕಟ್ಟುವುದು ತುಂಬಾ ಖರ್ಚಿನ ಕೆಲಸವಾದ್ದರಿಂದ, ಈ ಪದತಿಗೆ ಇನ್ನೂ ವ್ಯಾಪಾರಿ ಯಶಸ್ಸು ಸಿಕ್ಕಿಲ್ಲ


ಭೂಮಿ ಸಾಕಷ್ಟು ಇಲ್ಲದಿದ್ದಲ್ಲಿ ಈ ಪದ್ಧತಿಯಿಂದ ಉಪಯೋಗ ಪಡೆದುಕೊಳ್ಳಬಹುದು. ಎರಡನೇ ಮಹಾಯುದ್ಧದಲ್ಲಿ ಅಮೇರಿಕನ್ ಸೇನಾಪಡೆಗಳು ಜಪಾನಿನಲ್ಲಿ ಪ್ರವೇಶಿಸಿದಾಗ, ಭೀಕರವಾದ ಆಹಾರದ ಕೊರತೆಯನ್ನೆದುರಿಸಬೇಕಾಗಿ ಬಂದಿತು. ಜನರಲ್ ಮೆಕಾರ್ಥರ್-ರವರು, ಸೈನಿಕರ ಶಿಬಿರದಲ್ಲಿ "ಜಲಕೃಷಿ" ಕೇಂದ್ರ [Water culture farm] ವೊಂದನ್ನು ಆಗ ಸ್ಥಾಪಿಸಿದ್ದರು. ಸೈನಿಕರಿಗೆ ಅವಶ್ಯಕವಾದ ತರಕಾರಿ ಪಲ್ಲೆಗಳನ್ನು ಸುಲಭವಾಗಿ ಒದಗಿಸಲು ಇದಕ್ಕಿಂತ ಉತ್ತಮ ಮತ್ತು ಯೋಗ್ಯವಾದ ಬೇರೆ ಮಾರ್ಗವಾದರೂ ಯಾವುದಿತ್ತು? *

ಅತಿ ಬುದ್ಧಿವಂತನಾದವನಿಗೆ ತನ್ನದಾದ ಯಾವ ಅಭಿಪ್ರಾಯವೂ ಇರದು. ಅವನೇ ಅಭಿಪ್ರಾಯಗಳ ಆಳಾಗಿರುತ್ತಾನೆ. —ಪೋಪ್

ನಿನ್ನ ಬಗ್ಗೆ ಇತರರೇನನ್ನುತ್ತಾರೆ, ಪ್ರಪಂಚ ಏನೆನ್ನುತ್ತದೆ, ಎನ್ನುವುದಕ್ಕಿಂತ ನಿನ್ನ ಅಂತರ್ವಾಣಿ ಏನನ್ನುತ್ತದೆ? ಎಂಬುದಕ್ಕೆ ಹೆಚ್ಚು ಬೆಲೆಕೊಡು.

—ಆರ್ಸಿನ್ಸ್ ನಾರ್ಡನ್

C 6—3



ಓಡಿಸಾದಷ್ಟು ದೊಡ್ಡ ಪ್ರದೇಶದಲ್ಲಿ ಅವು ನಿರ್ಭಯವಾಗಿ ಸಂಚರಿಸಬಹುದು

ಕಾಡು ಪ್ರಾಣಿಗಳ ಅಪೂರ್ವ ವಸತಿ

ಕರ್ನಲ್ ಜೋರಾವರ ಸಿಂಗ್

ಧೂಳಿನ ಮೋಡಗಳನ್ನೆಬ್ಬಿಸುತ್ತ ಮೋಟಾರು ಶರವೇಗದಿಂದ ಸಾಗುತ್ತಿತ್ತು. ಒಮ್ಮೆಲೆ ಡ್ರೈವರ್ ತನ್ನ ಎಡಗಾಲನ್ನು ಜೋರಾಗಿ ಫೂಟ್‌ಬ್ರೇಕಿನ ಮೇಲೆ ಒತ್ತಿದ. ಎಷ್ಟೋ ದೂರದ ವರೆಗೆ ರಬ್ಬರಿನ ಟಾಯರು ರಸ್ತೆಯನ್ನು ತಿಕ್ಕುತ್ತ ಹೋಗಿ ಗಾಡಿ ಕ್ರಿಚ್-ಚ್-ಚ್ ಎಂಬ ಶಬ್ದದೊಂದಿಗೆ ನಿಂತಿತು. ಮೋಟಾರಿನಿಂದ ನಾಲ್ಕೈದೇ ಗಜ ದೂರದಲ್ಲಿ ಆ ಸಣ್ಣ ದಾರಿ ತಿರುಗಿತ್ತು. ದಾರಿ ತಿರುಗುವ ಮೂಲೆಯಲ್ಲೇ ಒಂದು ದೊಡ್ಡ ಸಿಂಹವು ಕೂತಿತ್ತು. ಅದರ ಕಣ್ಣುಗಳು ಕೆಂಡದಂತೆ ಹೊಳೆಯುತ್ತಿದ್ದವು. ಸಿಂಹ ತನ್ನ ಬಾಲದಿಂದ ನೊಣ ಜಾಡಿಸಿಕೊಳ್ಳುತ್ತಿತ್ತು, ಈ ನೊಣಗಳು ಆಫ್ರಿಕೆಯ ಸಿಂಹಗಳಿಗೆ ಬೆನ್ನು ಬಿಡದೆ ಬರುವ ಅಭಿಶಾಪವಿದ್ದಂತಿ

ರುತ್ತವೆ. ಐದು-ಹತ್ತು-ಹದಿನೈದು ನಿಮಿಷಗಳು ಕಳೆದವು. ಆದರೂ ಆ ವನರಾಜನೇನೂ ಕದಲಲಿಲ್ಲ. ಬಂಡೆಯಂತೆ ಕೂತೇಬಿಟ್ಟಿತು. ಮೋಟಾರೂ ನಡುರಸ್ತೆಯಲ್ಲಿ ನಿಲ್ಲಬೇಕಾಯಿತು. ಏಕೆಂದರೆ ಮುಂದೆ ಹೋಗುವುದೆಂದರೆ ಮೃತ್ಯು ದೇವತೆಯನ್ನೇ ಆಹ್ವಾನಿಸುವಂತಿತ್ತು.

ಒಂದೆರಡು ನಿಮಿಷಗಳ ತರುವಾಯ ಸುತ್ತಿನ ಪೊದೆಯಲ್ಲಿ ಏನೋ ಸದ್ದಾಯಿತು. ಒಂದು ಹೆಣ್ಣು ಸಿಂಹ ಎರಡು ಮರಿಸಿಂಹಗಳೊಂದಿಗೆ ದಟ್ಟವಾಗಿ ಬೆಳೆದ ಮರಗಳನ್ನು ದಾಟಿ ಹೊರಬಂದಿತು. ಬಂದು ಆನಂದದಿಂದ ಕಾರಿನ ಹತ್ತಿರ ನಿಂತಿತು. ಕಾರನ್ನು ಕಂಡು ಅದರ ಪಶು ಸುಲಭ ಉತ್ಸುಕತೆ ಜಾಗ್ರತವಾಯಿತು. ಇಂಥಾ 'ವಿಚಿತ್ರಪ್ರಾಣಿ'ಯನ್ನು ಅದು ಈ ಮೊದಲೆಂದೂ ನೋಡಿರಲಿಲ್ಲ. ಆಕ್ರಮಣಕ್ಕೆಂದು ಸ್ನಾಯುಗಳನ್ನೆಲ್ಲ ಸಿದ್ಧಗೊಳಿಸಿಕೊಂಡಿತು. ಮೊದಲು ಟಾಯರುಗಳನ್ನು ಮೂಸಿ ನೋಡಿ ಮುಂದಿನ ಎರಡೂ ಕಾಲುಗಳನ್ನೆತ್ತಿ ಎದ್ದು ನಿಂತು ಗಾಡಿಯ ಇಂಜನನ್ನು ದಿಟ್ಟಿಸಿ ನೋಡತೊಡಗಿತು. ಆದರೆ ಪೆಟ್ರೋಲಿನ ದುರ್ವಾಸನೆಯಿಂದ ಹಿಂದೆ ಸರಿಯಿತು. ಅಂತೂ ಈ 'ವಿಚಿತ್ರ ಪ್ರಾಣಿ' ತಿನ್ನುವ ಪದಾರ್ಥವಲ್ಲೆಂದು ಅದಕ್ಕೆ ಖಾತ್ರಿಯಾಯಿತು. ಆಗ ಅದು ಮತ್ತೆ ಬಂದ ದಾರಿಯಲ್ಲೇ ಹೊರಳಿ ತನ್ನೆರಡೂ ಮರಿಗಳನ್ನು ಕರೆದುಕೊಂಡು ಹೋಯಿತು. ಕೆಲ ಹೊತ್ತಿನ ಮೇಲೆ ಗಾಡಿಯ ಎದುರೇ ಬಿಸಿಲಿಗೆ ಮೈಚೆಲ್ಲಿ ಬಿದ್ದಿದ್ದ ಸಿಂಹರಾಜನೂ ಆನಂದದಿಂದ ಗುರ್ರೆನ್ನುತ್ತ ಮೈಮುರಿದು ಎದ್ದು ಆಹಾರ ಹುಡುಕಲು ಹೊರಟಿತು.

ಈ ನಡುವೆ ಮೋಟಾರಿನಲ್ಲಿ ಕೂತ ಒಬ್ಬ ಪ್ರ-ವಾಸಿ ತನ್ನ 'ಮೂವಿ' ಕ್ಯಾಮೆರಾದಿಂದ ಈ ಎಲ್ಲ ಅಮೂಲ್ಯ ದೃಶ್ಯಗಳ ಚಲಚ್ಚಿತ್ರಗಳನ್ನು ತೆಗೆದುಕೊಂಡಿದ್ದ. ಆದರೆ ಅವನ ಉಳಿದ ಮೂವರು ಸಹ ಪ್ರವಾಸಿಗಳು ಹೆದರಿಬಿಟ್ಟಿದ್ದರು. ಹಣೆಯ ಮೇಲೆ ಬೆವರಿನ ಬಿಂದುಗಳು ಮೂಡಿದ್ದವು. ಅವರು ಕ್ಯಾಮೆರಾದ ಕಡೆಗೆ ಗಮನ ಕೊಡುವುದು ಸಾಧ್ಯವೇ ಇರಲಿಲ್ಲ.

ಆಫ್ರಿಕೆಯ 'ಕ್ರೂಗರ್ ನ್ಯಾಶನಲ್ ಪಾರ್ಕಿ'ನಲ್ಲಿ ಇದೇ ರೀತಿ ದೂರದಿಂದ ಬರುವ ಪ್ರವಾಸಿಕರೂ ಮತ್ತು ಅರಣ್ಯದಲ್ಲಿ ಸ್ವಚ್ಛಂದವಾಗಿ ಚರಿಸುವ ಹಿಂಸ್ರಪ್ರಾಣಿಗಳೂ ಇದಿರು ಬದಿರಾಗಿ ಸಂದರ್ಶಿಸುವ ಸಂದರ್ಭಗಳೊದಗುತ್ತವೆ. ಆದರೆ ಇದರಲ್ಲಿ ಒಂದು ಆಶ್ಚರ್ಯದ ಸಂಗತಿ ಎಂದರೆ ಪರಸ್ಪರರಲ್ಲಿ ಯಾರೂ ಯಾರಿಗೂ ಅಪಾಯ ಮಾಡುವುದಿಲ್ಲ. ಕಾಡು ಪ್ರಾಣಿಗಳು ತಮ್ಮ-ಷ್ಟಕ್ಕೆ ಯಾರ ಗೊಡವೆಯೂ ಇಲ್ಲದೆ ತಮ್ಮ ದಾರಿಯಲ್ಲಿ ತಾವು ಬಂದು ತಿರುಗಾಡಿ ಹೋಗುತ್ತವೆ. ಕೆಲ ಗಂಟೆ ಕಾಲ ಅಲ್ಲಿದ್ದು ಈ ಅಪೂರ್ವ ನೋಟವನ್ನು ಕಣ್ಣಾರೆ ಕಂಡು ಅನುಭವಿಸಿ ಪ್ರವಾಸಿಕರೂ ಸಂಜೆಗೆ ಪಾರ್ಕಿನಲ್ಲೇ ಇರುವ ಯಾವುದಾದರೂ ಡೇರೆಯಲ್ಲಿ ರಾತ್ರಿ ಕಳೆಯಲು ಹೋಗುತ್ತಾರೆ. ಅಥವಾ ಇನ್ನೂ ಸ್ವಲ್ಪ ಹೊತ್ತು ಇರುವಾಗಲೇ ಹೋಟೆಲಿಗೆ ಮರಳುತ್ತಾರೆ.

ಪ್ರಪಂಚದ ಎಲ್ಲ ಪಾರ್ಕುಗಳಿಗಿಂತ ಭಿನ್ನವಾದ ಈ ಪಾರ್ಕು—ಕ್ರೂಗರ್ ಪಾರ್ಕು—ಓಡಿಸಾ ಪ್ರಾಂತದಷ್ಟು ವಿಸ್ತಾರವಾಗಿದೆ. ದಕ್ಷಿಣ ಆಫ್ರಿಕೆಯ ಟ್ರಾನ್ಸವಾಲ್ ಪ್ರದೇಶದಲ್ಲಿರುವ ಇನ್ನೂರು ಮೈಲು ಉದ್ದ ಹಾಗೂ ನಲವತ್ತು ಮೈಲು ಅಗಲವಾಗಿ ವ್ಯಾಪಿಸಿರುವ ಈ ಪ್ರದೇಶದಲ್ಲಿ ವನ್ಯ ಪಶುಗಳ ಏಕಚ್ಛತ್ರಾಧಿಪತ್ಯವಿದೆ. ದಕ್ಷಿಣ ಆಫ್ರಿಕೆಯ ಸರಕಾರವು ಕೆಲವರ್ಷಗಳ ಹಿಂದೆ ಈ ಪಾರ್ಕನ್ನು 'ಸಂರಕ್ಷಿತ ಕ್ಷೇತ್ರ'ವೆಂದು ಸಾರಿತು. ಅಂದಿನಿಂದ ಇಲ್ಲಿ ಪಶುಗಳ ಬೇಟೆ ನಡೆಯುವುದಿಲ್ಲ. ಇಲ್ಲಿ ಹೋಗುವವರು ಕೇವಲ ದರ್ಶಕರೆಂದು ಮಾತ್ರ ಹೋಗುತ್ತಾರೆ. ಬೇಟೆಯವರ ಕಾಟ ತಪ್ಪಿದ್ದರಿಂದ ಸಾವಿರಾರು ಬಗೆಯ ಪಶು-ಪಕ್ಷಿಗಳು ಇಲ್ಲಿ ಸ್ವಚ್ಛಂದ ವೃತ್ತಿಯಿಂದ ವಾಸಿಸುತ್ತವೆ.

ಇಲ್ಲಿಗೆ ಹತ್ತಿರದ ಊರೆಂದರೆ ಜೊಹಾನ್ಸ್-ಬರ್ಗ್. ಅಲ್ಲಿಂದ ಹೊರಡುವ ಪ್ರವಾಸಿಗಳು ಸೂರ್ಯಾಸ್ತದ ಮೊದಲೆ ಪಾರ್ಕಿನ ಹದಿಮೂರು

ಡೇರೆಗಳಲ್ಲಿ ಯಾವುದಾದರೊಂದರಲ್ಲಿ ರಾತ್ರಿ ನಿಲ್ಲುವ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ರಾತ್ರಿಯಾಗುತ್ತಲೆ ಕಾಡು ಪ್ರಾಣಿಗಳು ಬೇಟೆಗೆಂದು ಹೊರಬೀಳುತ್ತವೆ. ಒಂದು ಕಡೆಯಿಂದ ಸಿಂಹದ ಎದೆ ನಡುಗಿಸುವ ಗರ್ಜನೆ ಕೇಳಿಸುತ್ತದೆ. ಮತ್ತೊಂದು ಕಡೆಯಿಂದ ಹೆಬ್ಬುಲಿಯು ಗಗನ ಭೇದಿಯಾಗಿ ಚೀರಿದ್ದು ಕೇಳಿಸುತ್ತದೆ. ಇವೆಲ್ಲ ಆಯಾ ಪ್ರಾಣಿಗಳಿಗೆ ಭಕ್ಷ್ಯ ಸಿಕ್ಕಿದೆ ಎಂಬುದರ ಸೂಚನೆಗಳು. ನರಿ, ಕಾಡುನಾಯಿ, ಮೊಲ ಮತ್ತು ಜಿಂಕೆಗಳೂ ಸುರಕ್ಷಿತವಾದೆಡೆಗಳಲ್ಲಿ ತಮ್ಮ ತಮ್ಮ ಭಕ್ಷ್ಯಗಳನ್ನು ಹುಡುಕಿಕೊಂಡು ತಿನ್ನುತ್ತಿರುವುದು ಕಾಣಸಿಗುವುದು.

ಆದ್ದರಿಂದ ಬೆಳಗು ಮುಂಜಾವಿನಲ್ಲಿ ದರ್ಶಕನು ಮೋಟಾರು ಗಾಡಿಯಲ್ಲಿ ಈ ಅದ್ಭುತ ಪಾರ್ಕಿನಲ್ಲಿ ತಿರುಗಾಡಲು ಹೊರಟನೆಂದರೆ ಎಲ್ಲ ಪ್ರಾಣಿಗಳು ಕಷ್ಟಪಟ್ಟು ಸಂಪಾದಿಸಿದ ಖಾದ್ಯವನ್ನು ಸೇವಿಸುತ್ತಿರುವುದನ್ನು ಕಾಣುತ್ತಾನೆ. ಒಂದು ಕಡೆಗೆ ಒಂದು ಬಂಡೆಯ ಮೇಲೆ ಸಿಂಹವೊಂದು ಕಾಡೆಮ್ಮೆಯ ಉಳಿದರ್ಧ ಶವವನ್ನು ತಿಂದು ಮುಗಿಸುವುದರಲ್ಲಿರುತ್ತದೆ. ಇನ್ನೊಂದು ಕಡೆ ಹುಲ್ಲುಗಾವಲಿನಲ್ಲಿ ಹಚ್ಚಹಸಿರು ಹುಲ್ಲನ್ನು ಮೇಯುವ ಸಾರಂಗಗಳು ಇರುತ್ತವೆ. ಮತ್ತೊಂದು ಕಡೆ ಸ್ವಲ್ಪ ದೂರದಲ್ಲಿ ಹದಿನೆಂಟು ಅಡಿ ಉದ್ದದ ಜಿರಾಫೆಗಳು ತಮ್ಮ ಆರು ಅಡಿ ಉದ್ದವಾದ ಗೋಣು ಎತ್ತಿ ಚಿಗುರನ್ನು ತಿನ್ನುತ್ತಿರುತ್ತವೆ. ಆಗಾಗ ಸಂದೇಹಗೊಂಡು ಅತ್ತಿತ್ತ ನೋಡಿ ಯಾರಾದರೂ ಬಂದರೇ ಎಂದು ಖಾತ್ರಿ ಮಾಡಿಕೊಳ್ಳುತ್ತವೆ. ದೊಡ್ಡ ಸರೋವರದಲ್ಲಿ ನೀರ್ಗುದುರೆಗಳು ಮೀಯುತ್ತಿರುತ್ತವೆ. ಚೂಪಾದ ಚೂರಿಯಂಥ ಹಲ್ಲುಗಳುಳ್ಳ ಮೊಸಳೆಗಳು ದಂಡೆಯಲ್ಲಿ ಬಿಸಿಲಿಗೆ ಮೈಚೆಲ್ಲಿ ಐಶ್ವರ್ಯೋಪಭೋಗ ಮಾಡುವಂತೆ ಆನಂದದಿಂದ ಒರಗಿರುತ್ತವೆ.

ಸಾಮಾನ್ಯ ದರ್ಶಕ ಒಂದು ದಿನದಲ್ಲೇ ಇಲ್ಲಿ ಸುಮಾರು ಇಪ್ಪತ್ತು ಇಪ್ಪತ್ತೈದು ವನ್ಯ ಪ್ರಾಣಿಗಳನ್ನು ನೋಡುವನು. ಇಷ್ಟೇ ಅಲ್ಲ; ಪಶುಪ್ರೇಮಿಯಾಗಿದ್ದರೆ ತೀರ ಹತ್ತಿರಕ್ಕೆ ಹೋಗಿ ಅವುಗಳ ಫೋಟೊ ತೆಗೆದುಕೊಳ್ಳಬಹುದು. ಏಕೆಂದರೆ ಆನೆಯೊಂದನ್ನು ಬಿಟ್ಟರೆ ಜಿಂಕೆಯಿಂದ ಸಿಂಹದ ವರೆಗೆ ಯಾವ ಪ್ರಾಣಿಯೂ ಮೋಟಾರನ್ನು ಕಂಡು ಹೆದರುವುದಿಲ್ಲ. ವರ್ಷಾನುವರ್ಷದ ಅನುಭವ ಹಾಗೂ ಪ್ರಕೃತಿದತ್ತವಾದ ಸಹಜ ಜ್ಞಾನದಿಂದಾಗಿ ಮೋಟಾರು ವಿಚಿತ್ರ ಪ್ರಾಣಿಯಾದರೂ ಭಕ್ಷ್ಯವೂ ಅಲ್ಲ; ಹಾಗೆಯೆ ಅಪಾಯಕರವೂ ಅಲ್ಲ—ಎಂದು ಅವು ತಿಳಿದುಕೊಂಡಿವೆ. ಪ್ರಾಣಿಗಳಲ್ಲಿ ಈ ವೃತ್ತಿ ಇರುವುದರಿಂದ ಅಲ್ಲಿ ಪ್ರವಾಸಿಗಳು ಸಂರಕ್ಷಿತರಾಗಿರುತ್ತಾರೆ. ಕೆಲವು ಪ್ರಾಣಿಗಳು ಮನುಷ್ಯನ ಬರವನ್ನು ಬಹು ಬೇಗ ತಿಳಿದುಕೊಂಡು ಗವಿಗಳಿಂದ ಹೊರಬೀಳುವುದೇ ಇಲ್ಲ. ಅಥವಾ ಬಿದ್ದರೆ ಮನುಷ್ಯನನ್ನು ಹುಡುಕಿ ಆಕ್ರಮಣ ಮಾಡುತ್ತವೆ. ಆದರೆ ಆಕ್ರಮಣ ಮಾಡುವ ಸಂದರ್ಭ ಸಹಸಾ ಅಸಾಧ್ಯ. ಏಕೆಂದರೆ ಪೆಟ್ರೋಲಿನ ದುರ್ಗಂಧವು ಹರಡಿರುವುದರಿಂದ ಬಹುಶಃ ಈ ಪ್ರಾಣಿಗಳಿಗೆ ಮನುಷ್ಯನ ಸುಳಿವು ಹತ್ತುವುದೇ ಕಡಿಮೆ.

ಆದರೆ ಯಾರಾದರೂ ದರ್ಶಕರು ಮೋಟಾರಿನಿಂದ ಕೆಳಗಿಳಿಯುವ ಧೈರ್ಯ ಮಾಡಿದರೆ ಮಾತ್ರ, ಮಾತು ಬೇರೆ. ಹಿಂದೊಮ್ಮೆ ಹೀಗೆಯೆ ಆಯಿತು. ಒಬ್ಬ ದರ್ಶಕನ ಮೋಟಾರು ಹಾದಿಯಲ್ಲೇ ಕೆಟ್ಟದ್ದರಿಂದ ತನ್ನ ಹೋಲ್ಡಾಲನ್ನು ಬಿಚ್ಚಿ ಮುಂದಿನ ಗಾಲಿಯ ಹತ್ತಿರ ಮಲಗಿ ಗಾಡಿಯ ದುರಸ್ತಿ ಮಾಡುವವನಿದ್ದ. ಅಷ್ಟರಲ್ಲಿ ಪಾರ್ಕಿನ ಒಬ್ಬ ಕಾವಲುಗಾರ "ಹೆಣ್ಣು ಹುಲಿಯೊಂದು ನಿಮ್ಮ ತಲೆಯ ಹಿಂದೆ ನಿಂತಿದೆ, ಓಡಿ ಹೋಗಿರಿ" ಎಂದು ಕೂಗಿದ. ಯೋಗಾಯೋಗದಿಂದ ಹುಲಿಯೂ ಆ ದರ್ಶಕನೂ ಒಮ್ಮೆಗೇ ಹಾರಿಕೊಂಡದ್ದರಿಂದ ದರ್ಶಕನು ಗಾಡಿಯಲ್ಲಿ ಮುಂದಿನ ಸೀಟಿನಲ್ಲಿ ಹೋಗಿ ಕೂತ. ಇತ್ತ ಹುಲಿಯ ಉಗುರುಗಳು ಹೋಲ್ಡಾಲಿನಲ್ಲಿ ನೆಟ್ಟವು. ಅರೆನಿಮಿಷ ತಡವಾಗಿದ್ದರೂ ಆ

ವ್ಯಕ್ತಿಯ ಕಂಠವನ್ನು ಸೀಳಿ ಬಿಡುತ್ತಿತ್ತು ಹುಲಿ!

ಕ್ರೂಗರ್ ಪಾರ್ಕಿನಲ್ಲಿ ಸುಮಾರು ೫೦೦ ಸಿಂಹಗಳಿವೆ. ಉಳಿದ ಪ್ರಾಣಿಗಳ ಸಂರಕ್ಷಣದ ದೃಷ್ಟಿಯಿಂದ ಇವುಗಳ ಸಂಖ್ಯೆ ಮಿತಿಮೀರಿ ಬೆಳೆಯದಂತೆ ಪಾರ್ಕಿನ ಅಧಿಕಾರಿಗಳು ನೋಡಿ ಕೊಳ್ಳುತ್ತಾರೆ. ಇಲ್ಲವಾದರೆ ಹತ್ತು ಹದಿನೈದು ವರ್ಷಗಳಲೆ ಉಳಿದ ಪ್ರಾಣಿಗಳು ಹೇಳಹೆಸರಿಲ್ಲದಂತೆ ನಾಶಹೊಂದಿ ಬೇರೆ ಬೇಟೆ ಸಿಗದೆ ಸಿಂಹಗಳು ಬೇಟೆಗಾಗಿ ಅಡವಿ ಬಿಟ್ಟು ಹೊರಗಿನ ಮನುಷ್ಯವಸತಿಗಳಲ್ಲೂ ಪ್ರವೇಶಿಸಬಹುದು.

ಮನುಷ್ಯ ಮತ್ತು ಅವನ ಬಂದೂಕು ಬಿಟ್ಟರೆ ಸಿಂಹ ಇಡೀ ಅಡವಿಯಲ್ಲೀ ಮತ್ತಾರಿಗಾದರೂ ಹೆದರುತ್ತಿದ್ದರೆ ಅದು 'ಸೇಹಿ' ಎಂಬ ಪ್ರಾಣಿಗಷ್ಟೇ! ಇದನ್ನು ಕಂಡರೆ ಸಿಂಹ ಹೌಹಾರುತ್ತದೆ. ಏಕೆಂದರೆ ಸೇಹಿಯ ಮೈಮೇಲಿರುವ ಹರಿತವಾದ ಮುಳ್ಳಿನಂಥ ಗರಿಗಳು ಸಿಂಹದ ಕಾಲಲ್ಲಿ ನೆಟ್ಟರೆ ಅದು ಬೇಟೆಯಾಡಲು ಅಸಮರ್ಥವಾಗುವುದಿಷ್ಟೇ ಅಲ್ಲ; ವಿಷದಂಶದಿಂದ ಪೀಡಿತವಾದ ಸಿಂಹ ವಿಕಲಾಂಗವಾಗಿ ಮೂಲೆಗುಂಪಾಗಿ ಕೊನೆಗೊಂದು ದಿನ ದಿಕ್ಕಿಲ್ಲದೆ ಸತ್ತು ಹೋಗಬೇಕಾಗುವುದು. ಸೇಹಿಯನ್ನು ಕಂಡು ಸಿಂಹದಂತೆ ಇತರ ಪ್ರಾಣಿಗಳಾದರೂ ಹೆದರುತ್ತವೆ. ಅದರ ಹತ್ತಿರ ಹೋಗುವ ಸಾಹಸ ಮಾಡಲು ಯಾರೂ ಸಿದ್ಧರಿರುವುದಿಲ್ಲ.

ಕ್ರೂಗರ್ ಪಾರ್ಕಿನಲ್ಲಿ ಎಷ್ಟು ಸಿಂಹಗಳಿವೆ ಎಂದರೆ ಪ್ರತಿಯೊಬ್ಬ ದರ್ಶಕ ಅಲ್ಲಿ ಹೋಗಿ ಬಂದಾಗ ಹೊಸ ಹೊಸ 'ಸಿಂಹ ಕಥೆ'ಗಳನ್ನು ತನ್ನೊಂದಿಗೆ ತಂದಿರುತ್ತಾನೆ. "ಒಂದು ಹೆಣ್ಣು ಸಿಂಹ ತನ್ನ ಮರಿಗಳಿಗೆ ಬೇಟೆ ಹೇಗೆ ಆಡಬೇಕೆಂಬುದನ್ನು ಕಲಿಸುತ್ತಿದ್ದುದನ್ನು ನಾನು ನೋಡಿದ್ದೇನೆ. ಮೇಲಕ್ಕೆ ಹಾರಿ ಮುಂಗಾಲುಗಳನ್ನು ಚಾಚಿ ಕಾಲ್ಪನಿಕ ಶತ್ರುವನ್ನು ಹಿಡಿಯಲು ತಾಯಿ ಸಿಂಹ ಕಲಿಸುತ್ತಿತ್ತು. ಇದು ಇನ್ನೂ ಬೇಟೆಯ ಮೊದಲನೆಯ ಪಾಠವೇ ಇತ್ತು. ಅಷ್ಟರಲ್ಲಿ ಹರಿಣಗಳ ತಂಡವೊಂದು ಅತ್ತ ಸಾಗಿ ಬಂದಿತು. ಕೂಡಲೆ ಮರಿ ಸಿಂಹಗಳು ಅತ್ತ ನೆಗೆದವು. ಆದರೆ ಇನ್ನೂ ಅಭ್ಯಾಸವಿದ್ದಿಲ್ಲವಾದ್ದರಿಂದ ಕುಸಿದು ನೆಲಕ್ಕೆ ಬಿದ್ದವು. ಆಗ ತಾಯಿ ಸಿಂಹ ಜಿಗಿದು ಒಂದು ಹರಿಣವನ್ನು ಬಾಯಲ್ಲಿ ಹಿಡಿದು ಮಕ್ಕಳೆದುರು ಬಂದಿತು. ಚಿಕ್ಕಮರಿಗಳು ತಾಯಿಯ ಪರಾಕ್ರಮವನ್ನು ಕಂಡು ಚಕಿತವಾದವು."

ಇಲ್ಲಿಯ ಕಾವಲುಗಾರರು ತಮ್ಮ ತಮ್ಮ ಕ್ಷೇತ್ರದಲ್ಲಿ ಮೋಟಾರಿನಲ್ಲಿ ತಿರುಗಾಡಿ ನಿರೀಕ್ಷಣೆ ಮಾಡುತ್ತಿರುತ್ತಾರೆ. ಮೋಟಾರುಗಳಿಲ್ಲದ ಕಾಲದಲ್ಲಿ ಇವರು ಕುದುರೆಗಳನ್ನೇರಿ ಕಾವಲು ನಡೆಸಲು ಸುತ್ತುತ್ತಿದ್ದರು.

ಒಮ್ಮೆ ವೊಲಹಟರ್ ಎಂಬ ಒಬ್ಬ ಕಾವಲುಗಾರ ಕುದುರೆಯನ್ನೇರಿ ಕಾವಲು ನಡೆಸುತ್ತಿದ್ದ. ಎಲ್ಲಿಂದಲೋ ಒಂದು ಹೆಣ್ಣು ಸಿಂಹ ಥಟ್ಟನೆ ಬಂದು ಇವನ ನಡವನ್ನೇ ಹಿಡಿಯಿತು. ಹಿಡಿದು ಕಾಡಿನತ್ತ ಎಳೆದೊಯ್ಯಲಾರಂಭಿಸಿತು. ಅಸಹ್ಯ ಪೀಡೆಯಿಂದ ಆತ ವ್ಯಾಕುಲನಾಗಿದ್ದ. ಒಮ್ಮೆಲೆ ಅವನಿಗೆ ತನ್ನ ಪ್ಯಾಂಟಿನ ಜೇಬಿನಲ್ಲಿಟ್ಟಿದ್ದ ಚೂರಿಯ ನೆನಪಾಯಿತು. ಚೂರಿ ತೆಗೆದು ಆತ ಬಲಗೈಯಲ್ಲಿ ಹಿಡಿದ. ಹತ್ತಾರು ನಿಮಿಷಗಳವರೆಗೆ ಕಲ್ಲುಗಳ ಮೇಲೆ ಮೈಕೆತ್ತುತ್ತ ಹೋದದ್ದರಿಂದ ಅವನ ಶರೀರದಿಂದ ರಕ್ತ ಹರಿಯುತ್ತಿತ್ತು. ಆದರೂ ಸರ್ವಶಕ್ತಿಯನ್ನು ಒಟ್ಟು ಕೂಡಿಸಿ ಸಿಂಹದ ಎದೆಯನ್ನು ಚೂರಿಯಿಂದ ಇರಿದನು. ಸಿಂಹ ಹಾರಿತು. ಎರಡನೆ ಇರಿತ ಹೊಟ್ಟೆಗೆ. ರಕ್ತದ ಕಾರಂಜಿ ಚಿಮ್ಮಿತು. ಸಿಂಹ ಅವನನ್ನು ಬಿಟ್ಟು ಓಡಿಹೋಯಿತು.

ಮೋಟಾರು ಪ್ರಯಾಣಿಕರಿಗೆ ಹುಲಿ ಸಿಂಹಗಳ ಭಯವಿರುವುದಿಲ್ಲವಾದರೂ ಕಾಡೆಮ್ಮೆ ಕಾಡುಕೋಣ ಹಾಗೂ ನೀರ್ಗುದುರೆಗಳ ಅಂಜಿಕೆ ಇರುತ್ತದೆ. ಅವು ಸಹಸಾ ಮೋಟಾರಿನ ಹತ್ತಿರ ಬರುವುದಿಲ್ಲ. ಬಂದರೆ ಮಾತ್ರ ಮೋಟಾರಿನೊಂದಿಗೆ ಕಾದಾಡಲಿಕ್ಕೆ ಬರುವವು. ತಮ್ಮ ಕೋಡುಗಳಿಂದ ಈ ಕೋಣಗಳು ಮೋಟಾರನ್ನು

ಮುರಿದು ಪುಡಿಪುಡಿ ಮಾಡಿಬಿಡುತ್ತವೆ. ಐವತ್ತು ಮಣ ವಜ್ಜೆಯ ದೈತ್ಯಾಕಾರದ ನೀರ್ಗುದುರೆಗಳು ಎಂಥಾ ದೊಡ್ಡ ಮೋಟಾರಿದ್ದರೂ ಚೆಂಡಾಡಿ ಬಿಡುತ್ತವೆ.

ಆನೆಯಿಂದ ಐವತ್ತು ಗಜ ದೂರವಿರುವುದು ಆತ್ಮರಕ್ಷಣೆಯ ದೃಷ್ಟಿಯಿಂದ ಅಗತ್ಯವಾದದ್ದೆಂದು ಪಾರ್ಕಿನ ಕಾವಲುಗಾರರು ಆಗಾಗ ಸೂಚನೆ ಕೊಡುತ್ತಿರುತ್ತಾರೆ. ಹಲವೊಮ್ಮೆ ದರ್ಶಕರು ಇದನ್ನು ಪಾಲಿಸುವಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತದೆ. ಒಮ್ಮೆ ಒಬ್ಬ ದರ್ಶಕ ಮೋಜಿಗೆಂದು ಮೋಟಾರನ್ನು ಒಂದು ಆನೆಯ ಹಿಂದಿನಿಂದ ಸಾಗಿಸಿ ಆನೆಯನ್ನು ಕೆರಳಿಸಿದ. ಆನೆ ನಿಂತಿತೊ ಅದರ ಹಿಂದೆ ಎರಡೇ ಅಡಿ ದೂರದಲ್ಲಿ ಗಾಡಿ ಒಯ್ದು ನಿಲ್ಲಿಸುತ್ತಿದ್ದ. ಕಡೆಗೆ ಆನೆಗೆ ಸಿಟ್ಟು ತಡೆಯಲಿಲ್ಲ. ಹಿಂದುರುಗಿ ಮೋಟಾರಿನ ಮೇಲೆ ಹತ್ತಿ ಗಣಪತಿಯಂತೆ ಕೂತುಬಿಟ್ಟಿತು. ಅದರ ಭಾರಕ್ಕೆ ಮೋಟಾರಿನ 'ಬಾಡಿ' ಬಗ್ಗಿ ಸೀಟಿನ ಸಮನಾಯಿತು. ಮುಂಭಾಗ ಮುದ್ದೆಯಾಯಿತು. ಸಂಕಟದ ಸುಳಿವು ಹತ್ತುತ್ತಲೇ ಮೋಟಾರಿನವ ಹೊರಬಿದ್ದು ಓಡಿಹೋದದ್ದರಿಂದ ಅವನ ಪ್ರಾಣವೇನೊ ಉಳಿಯಿತು. ಇಲ್ಲವಾದರೆ ಅವನೂ ಒಂದು ಮುದ್ದೆ ಹೆಣವಾಗುತ್ತಿದ್ದ.

ಇಡೀ ಪ್ರಪಂಚದ ಅತಿ ಭಯಂಕರ ಹೆಬ್ಬಾವುಗಳೆಂದರೆ ದಕ್ಷಿಣ ಆಫ್ರಿಕೆಯವೇ ಆಗಿವೆ. ಅವು ತಮ್ಮ ಪ್ರಿಯ ಖಾದ್ಯವನ್ನು ದೊರಕಿಸಿ ಸುಖೋಪಭೋಗಕ್ಕೆಂದು ಕ್ರೂಗರ್ ಪಾರ್ಕಿನಲ್ಲಿ ಆಗಾಗ ಬಂದು ಡೇರೆ ಹೊಡೆಯುತ್ತವೆ. ಹದಿನೈದರಿಂದ ನಲವತ್ತು ಅಡಿ ಉದ್ದವಿರುವ ಈ ಹೆಬ್ಬಾವುಗಳು ಮೊಲ ಮೊದಲು ಮಾಡಿಕೊಂಡು ಸಾರಂಗದಂಥ ದೊಡ್ಡ ಪ್ರಾಣಿಗಳನ್ನೂ ನುಂಗಿಬಿಡುತ್ತವೆ. ಒಮ್ಮೆ ಕರ್ನಲ್ ಚ್ಯಾಪ್‌ಮನ್ ಎಂಬೊಬ್ಬ ಕಾವಲುಗಾರ ಹಲವು ನಾಯಿಗಳನ್ನು ಪಾರ್ಕಿನೊಳಗಿಂದ ಒಯ್ಯುತ್ತಿದ್ದ. ಒಮ್ಮೆಲೆ ನಾಯಿಗಳು ಒಂದು ಪೊದೆಯನ್ನು ಹೊಕ್ಕು ಜೋರಾಗಿ ಬೊಗಳಲಾರಂಭಿಸಿದವು. ಚ್ಯಾಪ್‌ಮನ್ ಹತ್ತಿರಕ್ಕೆ ಹೋಗಿ ನೋಡಿದನು. ಒಂದು ಹೆಬ್ಬಾವು ಹೊಟ್ಟೆ ಉಬ್ಬಿಸಿಕೊಂಡು ಬಿದ್ದಿತ್ತು. ಎಲ್ಲ ನಾಯಿಗಳು ಈ ಹಾವನ್ನು ನಿರ್ದೇಶಿಸಿ ಒದರುತ್ತಿದ್ದವು. ಚ್ಯಾಪ್‌ಮನ್ ನಾಯಿಗಳನ್ನು ಎಣಿಸಿದನು. ಒಂದು ನಾಯಿ ಕಡಿಮೆಯಾಗಿತ್ತು. ಹಾವಿನ ಹೊಟ್ಟೆಯಲ್ಲೇ ಆ ನಾಯಿ ಇದೆಯೆಂದು ನಿಶ್ಚಯವಾಯಿತು.

ಹೊತ್ತುಗಳೆಯದೆ ಚ್ಯಾಪ್‌ಮನ್ ವಿದ್ಯುದ್ವೇಗದಿಂದ ತನ್ನ ಬೇಟೆಯ ಚೂರಿಯನ್ನು ಹೊರ ತೆಗೆದು, ತಿಂದು ಸುಸ್ತಾಗಿ ಬಿದ್ದ ಹೆಬ್ಬಾವಿನ ಹೊಟ್ಟೆಯನ್ನು ಹರಿದ. (ಏನಾದರೂ ನುಂಗಿದ್ದರೆ ಹೆಬ್ಬಾವು ಸುಸ್ತಾಗಿ ನಿಶ್ಚಲವಾಗಿ ಬಿದ್ದಿರುತ್ತದೆ.) ನಾಯಿ ಹಾವಿನ ಹೊಟ್ಟೆಯಲ್ಲಿ ಸ್ಮೃತಿ ತಪ್ಪಿದ ಸ್ಥಿತಿಯಲ್ಲಿ ಬಿದ್ದದ್ದು ಕಂಡುಬಂತು. ತಂಪುಗಾಳಿ ಮೈಗೆ ತಗಲುತ್ತಲೆ ನಾಯಿಗೆ ಎಚ್ಚರವಾಯಿತು. ಮತ್ತು ಉಳಿದ ನಾಯಿಗಳೊಂದಿಗೆ ತಾನೂ ಸತ್ತ ಹಾವಿನತ್ತ ಬಾಯಿಮಾಡಿ ಒದರಲಾರಂಭಿಸಿತು.

ಕ್ರೂಗರ್ ಪಾರ್ಕು ಇಂಥ ಚಮತ್ಕಾರಗಳ ಆಗರವಾಗಿದೆ. ಇಲ್ಲಿ ಬರುವ ಪ್ರತಿ ಒಬ್ಬ ಪಯಣಿಗನೂ ಕಾವಲುಗಾರನನ್ನು ಕುರಿತು ಕೇಳುವ ಒಂದು ಪ್ರಶ್ನೆ ಎಂದರೆ ಕ್ರೂಗರ್‌ಪಾರ್ಕಿನ ಸುತ್ತ ಯಾವುದೇ ಬಗೆಯ ಬೇಲಿ ಇಲ್ಲದಿರಲು ಈ ಎಲ್ಲ ಪ್ರಾಣಿಗಳು ಹೊರಬೀಳಬಯಸುವುದಿಲ್ಲವೇಕೆ ಎಂಬುದೇ. ಅದಕ್ಕೆ ಕಾವಲುಗಾರರು ಏನು ಹೇಳುತ್ತಾರೆಂದರೆ, ಎಷ್ಟೋ ವರ್ಷಗಳ ಅನುಭವವು ಪ್ರಾಣಿಗಳಿಗೆ ಆತ್ಮರಕ್ಷಣೆಯ ಸರ್ವೋತ್ತಮ ಉಪಾಯಗಳನ್ನು ಕಲಿಸಿದೆ. ಅಡವಿಯ ಒಳಗಿರುವ ವರೆಗೂ ತಮಗೆ ಯಾರ ಭೀತಿಯೂ ಇಲ್ಲೆಂಬುದನ್ನು ಅವು ಚೆನ್ನಾಗಿ ಅರಿತಿರುತ್ತವೆ. ಮತ್ತು ಹೊರಗೆ ಹೋದರೆ ಬೇಟೆಯವರ ಬಂದೂಕಿಗೆ ಗುರಿಯಾಗುವುದು ತಪ್ಪದೆಂಬುದನ್ನೂ ಅವು ತಿಳಿದುಕೊಂಡಿವೆ ಎಂದು. *

ಇದುವೆ ಜೀವ, ಇದು ಜೀವನ

ಈಚೆಗೆ ನಮ್ಮೂರಿಗೆ ರಜೆಯ ಮೇಲೆ ಹೋಗಿದ್ದಾಗ ಅಲ್ಲಿ ಹಿರಿಯ ವಯಸ್ಸಿನ ಮಾಸ್ತರರೊಬ್ಬರು ಹೊಸದಾಗಿ ಬಂದಿದ್ದರು. ದಿನಾ ನಾನು ಪೇಟೆಗೆ ಹೋಗುವಾಗ ಅವರಿಗೂ ನನಗೂ ಎದುರಾಗುತ್ತಿತ್ತು. ನಾನು ಹಿರಿಯ ಅಧ್ಯಾಪಕರಿಗೆ ಗೌರವ ತೋರಿಸಬೇಕೆಂದು ಕೈಯೆತ್ತಿ ನಮಸ್ಕರಿಸುತ್ತಿದ್ದೆ. ಆದರೆ ಅವರು ನನ್ನನ್ನು ಲೆಕ್ಕಿಸದ ಹಾಗೇ ತಮ್ಮ ಸೈಕಲ್ಲಿನಲ್ಲಿ ಮುಂದೆ ಸಾಗುತ್ತಿದ್ದರು.

ನಾಲ್ಕೈದು ದಿನ ಹೀಗೆ ಮುಖಭಂಗವಾದ ಮೇಲೆ ನಾನು ಅವರನ್ನೊಂದು ದಿನ ತಡೆದು ಸೈಕಲ್ಲಿನಿಂದಿಳಿಯುವ ಹಾಗೆ ಮಾಡಿ ಹಿರಿಯರಾಗಿದ್ದೂ ನಮಸ್ಕಾರಕ್ಕೆ ಪ್ರತಿ ನಮಸ್ಕಾರ ಮಾಡದಿರುವ ಅವರ ಸೌಜನ್ಯಹೀನತೆಯನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸಿದೆ.

ಮಾಸ್ತರರು ಸೈಕಲ್ಲಿನಿಂದಿಳಿದು ನಸುನಗುತ್ತ ಹೇಳಿದರು: "ಮಿಸ್ಟರ್, ತಪ್ಪು ತಿಳಿದುಕೊಳ್ಳಬೇಡಿ. ನಾನು ಹೀಗೆ ಮಾಡಲು ಕಾರಣವಿದೆ. ಈ ಊರಿಗೆ ಬಂದಂದಿನಿಂದಲೇ ನಾನು ಈ ದಾರಿಯಲ್ಲೇ ಶಾಲೆಗೋ ಪೇಟೆಗೋ ಹೋಗುತ್ತೇನೆ. ನಮ್ಮ ಶಾಲೆಯ ಮಕ್ಕಳು ಇಲ್ಲಿ ಬಹಳ ಇದ್ದಾರೆ. ತಮ್ಮ ಬಾಲ್ಯ ಚಾಪಲ್ಯಕ್ಕನುಸಾರವಾಗಿ ನಾನಿಲ್ಲಿ ಸಾಗುವಾಗಲೂ ಅವರು ಅಲ್ಲಲ್ಲಿ ಆಡುತ್ತಿರುವುದನ್ನು ದಿನಾ ನೋಡುತ್ತೇನೆ. ಅವರ ಮನೆಗಳ ಮುಂದೆ ನಾನು ಹೋಗುತ್ತಿರುವಾಗ ಮೊದಲು ಅವರ ಹಿರಿಯರು ಮಕ್ಕಳನ್ನು ಕರೆದು 'ಮಾಸ್ಟ್ರು ಹೋಗುವಾಗಲೂ ನಾಚಿಕೆ ಬಿಟ್ಟು ಆಡುತ್ತಿರುತ್ತೀರಲ್ಲೋ. ನಾವು ಕಲಿಯುತ್ತಿರುವಾಗ ಮಾಸ್ಟ್ರು ಅಂದರೆ ಎಷ್ಟು ಭಯಭಕ್ತಿ ಇತ್ತು. ತಲೆ ಕಂಡರೆ ಓಡಿಹೋಗಿ ಹುದುಗಿಕೊಳ್ಳುತ್ತಿದ್ದೆವು' ಎನ್ನುತ್ತಿದ್ದುದನ್ನು ಕೇಳುತ್ತಿದ್ದೆ. ಆಮೇಲೆ ಹುಡುಗರು ನನ್ನನ್ನು ಕಂಡೊಂಡನೆ ಓಡಿಹೋಗತೊಡಗಿದರು. ಆಗ ಕೆಲ ಹಿರಿಯರು, 'ಮಾಸ್ಟ್ರು ಹುಲಿ ಕಟ್ಟಿಕೊಂಡಿದ್ದಾರೋ ಹೀಗೆ ಓಡೋದಕ್ಕೆ? ಕಂಡ ಕೂಡಲೆ ಅವಿತುಕೊಳ್ತೀರಲ್ಲ, ನಮಸ್ಕಾರ ಮಾಡೋ ಬದಲು. ಇದೇ ಏನೋ ಶಾಲೇಲಿ ಕಲಿಯೋದು ನೀವು?' ಎಂದು ಬೈಯುವುದನ್ನೂ ಕೇಳಿದೆ. ಈ ಉಭಯ ಸಂಕಟದಿಂದ ನನ್ನನ್ನೂ ಮಕ್ಕಳನ್ನೂ ಉಳಿಸಬೇಕಾದರೆ ಅತ್ತಿತ್ತ ನೋಡದೆ ಯಾರ ಹತ್ತಿರವೂ ಮಾತಾಡದೆ ನೇರವಾಗಿ ಧಾವಿಸುವುದೇ ಲೇಸೆಂದು ಭಾವಿಸಿದ್ದೇನೆ. ತಪ್ಪು ತಿಳಿದುಕೊಳ್ಳಬೇಡಿ."

— ಎ. ರವಿಶಂಕರ

ಅಂದು ನಾನು ಕಾಲೇಜ್ ಲೈಬ್ರರಿಗೆ ಹೋಗಬೇಕಿತ್ತು. ಸಿಟಿಬಸ್ಸಿಗಾಗಿ ಕಾದು ಕಾದು ಬೇಸತ್ತು, ಕೊನೆಗೆ ಹತ್ತಿರದ ಸೈಕಲ್ ಷಾಪಿನಿಂದ ಸೈಕಲ್ಲೊಂದನ್ನು ಬಾಡಿಗೆಗೆ ತೆಗೆದುಕೊಂಡು ಲೈಬ್ರರಿಯನ್ನು ತಲುಪಿದೆ. ಸೈಕಲ್ಲನ್ನು ಸ್ಟಾಂಡಿನಲ್ಲಿಟ್ಟು ಬೀಗ ಹಾಕಿ ಲೈಬ್ರರಿಗೆ ಹೋದೆ. ಸ್ವಲ್ಪ ಹೊತ್ತಿನ ಮೇಲೆ ಲೈಬ್ರರಿಯಿಂದ ಹೊರಬಂದು ಜೇಬಿನಿಂದ ಬೀಗದ ಕೈಯನ್ನು

ತೆಗೆದು ಸೈಕಲ್ ಬೀಗವನ್ನು ತೆಗೆಯಲು ಪ್ರಯತ್ನಪಟ್ಟೆ. ಏಕೋ ಏನೋ ಬೀಗ ತೆರೆಯಲೇ ಇಲ್ಲ. ನಾನು ಪ್ರಯತ್ನಿಸಿದಷ್ಟೂ ಅದು ಗಟ್ಟಿಯಾಗೇ ಕೂತಿತು. ಸೈಕಲ್ ಷಾಪಿನವನನ್ನು ಶಪಿಸುತ್ತಾ ಹದಿನೈದು ನಿಮಿಷ ಪ್ರಯತ್ನಪಟ್ಟರೂ ನನ್ನ ಕೈ ನೋಯಹತ್ತಿತೇ ಹೊರತು, ಬೀಗಕ್ಕೆ ನನ್ನ ಮೇಲೆ ಕರುಣೆ ಬರಲೇ ಇಲ್ಲ. ಸಾಲದ್ದಕ್ಕೆ, ಪಕ್ಕದಲ್ಲೊಬ್ಬ ನಿಂತು ತಮಾಷೆ ಬೇರೆ ನೋಡಲು ಶುರುಮಾಡಿದ್ದ. ಕೊನೆಗೆ ಅತನೇ "ಯಾಕೆ ಸ್ವಾಮಿ ಅಷ್ಟು ಕಷ್ಟ ಪಡುತ್ತೀರಿ ? ಈ ನನ್ನ ಬೀಗದ ಕೈಯನ್ನು ಸ್ವಲ್ಪ ಪ್ರಯತ್ನಿಸಿ ನೋಡಬಹುದು" ಎಂದ. ಬೇರೆ ಉಪಾಯವಿಲ್ಲದೆ ಅತ ಹೇಳಿದಂತೆಯೇ ಮಾಡಿದೆ. ಅದೇನು ಆಶ್ಚರ್ಯ ! ಅಷ್ಟು ಹೊತ್ತು ಸ್ಟ್ರೈಕ್ ಮಾಡಿದ್ದ ಬೀಗ, ಆತನ ಬೀಗದ ಕೈಯನ್ನು ಹಾಕಿ ತಿರುಗಿಸಿದೊಡನೆ ತೆಗೆದುಕೊಂಡಿತು. ನಾನು ಬೆರಗಾಗಿ "ಅರೆರೆ ! ಇದೇನು ! ನಿಮ ಬೀಗದ ಕೈ ಇದಕ್ಕೆ ಸರಿಹೋಯಿತಲ್ಲಾ" ಎಂದು ಬಾಯ್ತೆರೆದೆ. ಆತ ನಗುತ್ತಾ "ಇದರಲ್ಲಿ ಆಶ್ಚರ್ಯವೇನಿದೆ ಸಾರ್? ಆ ಸೈಕಲ್ ಕೂಡಾ ನನ್ನದೇ. ನಿಮ್ಮ ಸೈಕಲ್ ಪಕ್ಕದಲ್ಲಿರಬಹುದು. ನೋಡಿ, ಹೇಗಾದರೂ ಸರಿಯೇ, ಬೀಗ ತೆಗೆದುಕೊಟ್ಟದ್ದಕ್ಕೆ ನಿಮಗೆ ಬಹಳ ಥ್ಯಾಂಕ್ಸ್" ಎಂದು ಹೇಳಿ ಆ ಸೈಕಲ್ಲನ್ನು ತನ್ನ ಕೈಗೆ ತೆಗೆದುಕೊಂಡ. ನಾನು ಬೆಪ್ಪಾಗಿ ಪಕ್ಕಕ್ಕೆ ದೃಷ್ಟಿ ಹೊರಳಿಸಿದೆ. ನಾನು ತಂದ ಸೈಕಲ್ ಅಲ್ಲೇ ನನ್ನನ್ನು ನೋಡಿ ನಗುತ್ತಿತ್ತು.

—ಕೆ. ಎನ್. ಅನಂತಸ್ವಾಮಿ

ಕಾಲೇಜಿನಿಂದ ವಿರಾಮದ ವೇಳೆಯಲ್ಲಿ ಆಗ ಹಿಂದಿರುಗಿ ಕೊಠಡಿಯಲ್ಲಿ ಕುಳಿತಿದ್ದೆ. ಅಷ್ಟರಲ್ಲಿಯೇ ಅಂಚೆಯಾಳು ಬಂದು ನನ್ನ ಹೆಸರನ್ನು ಕರೆದೊಡನೆ ಬಹುಶಃ ಯಾರಿಂದಲಾದರೂ ಹಣ ಬಂದಿರಬಹುದೆಂದು ಆತುರದಿಂದ ಹೊರಕ್ಕೆ ಬಂದೆ. ಆದರೆ ಆಸೆಯಿಂದ ಹೊರಬಂದ ನನಗೆ ಅಂಚೆಯಾಳಿನ ಮಾತಿನಿಂದ ತುಂಬಾ ನಿರಾಶೆಯಾಯಿತು. ಕಾರಣ ನನ್ನ ವಿಳಾಸಕ್ಕೆ ಬಂದಿದ್ದುದು ಹಣವಲ್ಲ, ಬದಲು ಅಂಚೆ ಚೀಟಿಯನ್ನು ಹಚ್ಚದ ಒಂದು ಲಕೋಟೆ. ಅದನ್ನು ತಿಳಿದು ಹಣಕೊಟ್ಟು ಅದನ್ನು ತೆಗೆದುಕೊಳ್ಳಲೋ ಅಥವಾ ಯಾರಿಂದ ಬಂದಿದೆಯೋ ಅವರಿಗೇ ಹಿಂದಿರುಗಿಸಿ ಎಂದು ತಿಳಿಸಿಬಿಡಲೋ ಎಂಬ ಸಮಸ್ಯೆ ಮನಸ್ಸಿನಲ್ಲುಂಟಾಯಿತು. ಆ ರೀತಿ ತಿರಸ್ಕರಿಸೋಣವೆಂದರೆ ಯಾರಿಂದ ಬಂದಿದೆಯೋ? ಏನು ವಿಷಯವಿದೆಯೋ ನೋಡೋಣವೆಂಬ ಕುತೂಹಲ. ಕೊನೆಗೆ ಹಣ ತೆತ್ತು ಪತ್ರವನ್ನು ತೆಗೆದುಕೊಂಡೆ. ಆತುರದಿಂದ ಲಕ್ಕೋಟೆಯನ್ನು ಒಡೆದು ಪತ್ರವನ್ನು ನೋಡಲು ಅದರಲ್ಲಿ ಕೆಳಕಂಡ ಒಕ್ಕಣೆಯಿತ್ತು :

"ಆತ್ಮೀಯ ಗೆಳೆಯನಿಗೆ ಅನಂತಾನಂತ ವಂದನೆಗಳು. ಮೊಟ್ಟ ಮೊದಲನೆಯದಾಗಿ ನಿನ್ನ ಕ್ಷಮೆ ಬೇಡುತ್ತೇನೆ. ಏಕೆಂದರೆ ಯಾವುದೊ ಕೆಲಸದಲ್ಲಿ ತೊಡಗಿದ್ದುದರಿಂದ ಆತುರದಲ್ಲಿ ಅಂಚೆ ಚೀಟಿಯನ್ನು ಹಚ್ಚುವುದೇ ಮರೆತು ಹೋಯಿತು ...."

— ಪಿ. ಶಿವಣ್ಣ, ತಾವರೆಕೆರೆ



ಈ ಸಮಸ್ಯೆಗೊಂದು ಕೀಲಿಕೈ
ದೊರೆತರೆ ಸಾವಿರಾರು ಜೀವಗಳು
ಉಳಿಯಬಹುದು

ಶರೀರಕ್ಕೆ ತಾನು ತಾನೆಂದು ಹೇಗೆ ತಿಳಿಯುತ್ತದೆ?

ಜೋಸೆಫ್ ವಾಸೆಲ್‌ರಿಗ್, ಎಂ. ಡಿ

ನಿನ್ನೆಯ ನಾವೇ ಇಂದಿನ ಮತ್ತು ನಾಳೆಯ ನಾವು ಎಂದು ನಾವು ಬಗೆಯುತ್ತೇವೆ. ಇದೊಂದು ಆತ್ಮವಂಚನೆ. ನಿನ್ನೆಯ ಹೆಸರಿಂದಲೇ ಇತರರು ನಮ್ಮನ್ನು ಇಂದು ಕರೆಯುತ್ತಾರೆ. ನಿನ್ನೆಯ ಕುಟುಂಬದಲ್ಲೇ ನಾವು ಇಂದೂ ಬಾಳುತ್ತಿದ್ದೇವೆ. ನಿಜ. ಆದರೆ "ನಾವು" ಎಂದರೇನೆಂಬ ಬಗ್ಗೆ ತತ್ವಜ್ಞಾನಿಗಳು ಸಾವಿರಾರು ವರ್ಷಗಳಿಂದ ಚಿಂತಿಸುತ್ತಿದ್ದಾರೆ. ಉತ್ತರ ಸಿಕ್ಕಿಲ್ಲ.

ಈಗ್ಗೆ ಕೆಲ ವರ್ಷಗಳಿಂದ ಜೀವರಸಾಯನ ಶಾಸ್ತ್ರಜ್ಞರು ಈ ಸಮಸ್ಯೆಯತ್ತ ಗಮನ ಕೊಡತೊಡಗಿದ್ದಾರೆ. ನಮ್ಮ ಶರೀರವು ತನ್ನನ್ನು ಹೇಗೆ ಗುರುತು ಹಿಡಿಯುತ್ತದೆ? "ಶತ್ರು ಮಿತ್ರ" ರನ್ನು ಹೇಗೆ ಕಂಡುಹಿಡಿಯುತ್ತದೆ? ತನ್ನತನವನ್ನು ಯಾವ ರಾಸಾಯನಿಕ ಮಾಯಕದಿಂದ ಅದು ಕಾಪಾಡಿಕೊಳ್ಳುತ್ತದೆ?

ಉದಾಹರಣೆಗೆ ಮೂತ್ರಪಿಂಡಗಳಿಗಾದ ರೋಗದಿಂದ ಅವು ಹಾಳಾಗಿ ಒಬ್ಬನು ಮರಣಾಸನ್ನನಾಗಿದ್ದಾನೆಂದುಕೊಳ್ಳಿ. ಸರ್ಜನ್ನರು ಇನ್ನೊಬ್ಬರ ಒಂದು ಮೂತ್ರಪಿಂಡವನ್ನು ತೆಗೆದು ಇವನ ಕೆಟ್ಟ ಮೂತ್ರಪಿಂಡದ ಸ್ಥಾನದಲ್ಲಿ ಜೋಡಿಸಬಲ್ಲರು. ಆದರೆ ಈ ಇಬ್ಬರು ಏಕರೂಪ ಅವಳಿಮಕ್ಕಳಾಗಿದ್ದ ಹೊರತು ಹೀಗೆ ಕಸಿ ಮಾಡಿದ ಮೂತ್ರಪಿಂಡ ಇನ್ನೊಂದು ಶರೀರದಲ್ಲಿ ಹೊಂದಿಕೊಳ್ಳುವುದಿಲ್ಲ.

ಯಾವುದೋ ಉಪಾಯದಿಂದ ಶರೀರವು ಈ ಹೊಸ ಮೂತ್ರಪಿಂಡ "ಪರಕೀಯ" ಎಂದು ಗೊತ್ತುಹಚ್ಚಿ ತನ್ನ ಸಕಲ ಸಾಮರ್ಥ್ಯದಿಂದ ಅದರ ಮೇಲೆ ದಾಳಿ ಮಾಡುವುದರಿಂದ ಕಸಿ ಮಾಡಿದ ಈ ಭಾಗ ಸಾಯುತ್ತದೆ.

ಹೊರಗಿನಿಂದ ಕಸಿ ಮಾಡಿದ ಭಾಗಗಳಿಗಷ್ಟೇ

ಇದು ಮಿತವಾಗಿಲ್ಲ. ರಕ್ತದ ಗುಂಪುಗಳ ಪ್ರಭೇದದಲ್ಲಿಯೂ ಹೀಗೇ ನಡೆಯುತ್ತದೆ. Rh-ಋಣ ಜಾತಿಯ ರಕ್ತವುಳ್ಳ ತಾಯಿಯಲ್ಲಿ Rh-ಧನ ಜಾತಿಯ ರಕ್ತವುಳ್ಳ ತಂದೆಯಿಂದ ಗರ್ಭಾಧಾನವಾದರೆ ತಾಯಿಯ ಶರೀರವು ಗರ್ಭದಲ್ಲಿರುವ ತನ್ನದೇ ಪಿಂಡವನ್ನು "ಪರಕೀಯ"ವೆಂದು ಬಗೆದು ಘಾತಕ ರಾಸಾಯನಿಕ ದ್ರವ್ಯಗಳನ್ನು ಬಿಡುಗಡೆ ಮಾಡುತ್ತದೆ. ಅದರಿಂದ ಗರ್ಭಸ್ಥ ಶಿಶು (ಬಹುತರ) ನಾಶವಾಗುತ್ತದೆ. ಇಲ್ಲಿ ತಾಯಿಯ ಶರೀರವು ತನ್ನದನ್ನು ತನ್ನದೆಂದು ಗುರುತಿಸಲಾರದೆ ಹೋಗುವುದೇ ಅನಾಹುತಕ್ಕೆ ಕಾರಣವಾಗುತ್ತದೆ.

ಶರೀರದ ಈ ನಿಗೂಢ ಆತ್ಮ ಪರಕೀಯ ಜ್ಞಾನವೇ ಪ್ರಾಣಿ ಪ್ರಾಣಿಗಳ ಜಾತಿಗಳನ್ನು ಬೇರೆ ಬೇರೆಯಾಗಿಟ್ಟಿದೆ. ನಾಯಿಗೂ ಬೆಕ್ಕಿಗೂ ಸಂಕರವಾಗದಿರುವುದು ಇದರಿಂದಲೇ. ಆದರೆ ಎರಡು ಬೇರೆ ಬೇರೆ ಜಾತಿಯ ನಾಯಿಗಳ ಸಂಯೋಗದಿಂದ ಹೊಸ "ತಳಿ"ಯ ನಾಯಿಗಳನ್ನು ಉಂಟು ಮಾಡಬಹುದು. ಸಸ್ಯಗಳಲ್ಲಿಯೂ ಹಾಗೆಯೆ.

ನಮ್ಮ ಮೈಯಲ್ಲಿ, ಬಾಯಲ್ಲಿ, ಕರುಳಲ್ಲಿ ಅಸಂಖ್ಯ ಜೀವಜೀವಾಣುಗಳು ಸದಾಕಾಲವೂ ಇದ್ದು ಶರೀರದಿಂದ ಯಾವ ಆತಂಕವನ್ನೂ ಹೊಂದದೆ ನಿರಾಪದವಾಗಿ ಬಾಳುತ್ತವೆ. ಆದರೆ ಬೇರೆ ಕೆಲ ಜೀವಾಣುಗಳು ಶರೀರವನ್ನು ಸೇರಿದೊಡನೆ ಶತ್ರುಗಳೆಂದು ಬಗೆಯಲ್ಪಟ್ಟು ಶರೀರವು ಅವುಗಳನ್ನು ನಾಶಮಾಡಲು ಸರ್ವ ಪ್ರಯತ್ನ ಮಾಡುತ್ತದೆ. ಅಷ್ಟೇಕೆ, ನಾವು ತಿನ್ನುವ ಕೆಲ ಪದಾರ್ಥಗಳನ್ನು ಶರೀರವು ಪಚನಯೋಗ್ಯವೆಂದು "ಗುರುತಿಸಿ" ಸ್ವೀಕರಿಸುತ್ತದೆ; ಆದರೆ ಇತರ ಕೆಲ ಪದಾರ್ಥಗಳನ್ನು ತಿಂದರೆ ಭಯಂಕರ ಪ್ರತೀಕಾರ ಪೂರ್ವಕವಾಗಿ ತಿರಸ್ಕರಿಸುತ್ತದೆ.

ಇದೀಗ ಪ್ರಶ್ನೆ: ಶರೀರ "ಸ್ವ"ವನ್ನು ಹೇಗೆ ಗುರುತಿಸುತ್ತದೆ? "ಪರಕೀಯ"ವನ್ನು ತನ್ನ ಕ್ಷೇತ್ರದಲ್ಲಿ ಗುರುತಿಸಿದಾಕ್ಷಣ ಅದನ್ನು ನಾಶಗೊಳಿಸುವ ಪ್ರಯತ್ನದಲ್ಲಿ ಅನೇಕ ವೇಳೆ ತಾನೇ ನಾಶವಾಗುವಷ್ಟು ಉದ್ರೇಕದಿಂದ ಏಕೆ ಹೋರಾಡುತ್ತದೆ? ಯಾವುದಾದರೊಂದು ಉಪಾಯದಿಂದ ಅದನ್ನು ಮೋಸಗೊಳಿಸಿ ಪರಕೀಯವನ್ನು ತನ್ನದೆಂದೆಣಿಸುವಂತೆ ಮಾಡಲು ಸಾಧ್ಯವೆ? ಇದು ಸಾಧ್ಯವಾದರೆ ಒಬ್ಬನಿಂದ (ಅಥವಾ ಒಂದು ಪ್ರಾಣಿಯಿಂದ) ಇನ್ನೊಬ್ಬನಿಗೆ ಮೂತ್ರಪಿಂಡವನ್ನು ಕಸಿ ಮಾಡಬಹುದು. ಒಬ್ಬನ ಚರ್ಮವನ್ನು ಕೊಯ್ದು ಇನ್ನೊಬ್ಬನಿಗೆ ಹಚ್ಚಬಹುದು. ಅನೇಕ ಜೀವಗಳನ್ನು ಉಳಿಸಬಹುದು.

ಈ ಸಮಸ್ಯೆಯನ್ನು ವ್ಯವಸ್ಥಿತವಾಗಿ ತಡಕಲು ಮುಂದಾದವರಲ್ಲಿ ಹತ್ತು ಹನ್ನೊಂದು ವರ್ಷ ಹಿಂದೆ ಆಸ್ಟ್ರೇಲಿಯದಲ್ಲಿ ಸಂಶೋಧನೆ ಪ್ರಾರಂಭಿಸಿದ ಡಾ. ಎಫ್. ಫೆನರ್ ಮತ್ತು ಡಾ. ಎಫ್. ಎಂ. ಬರ್ನೆಟ್ ಇವರು ಮೊದಲಿಗರು. ಅನಂತರ ಡಾ. ಪೀಟರ್ ಮೆಡವರ್ ಅದೇ ದಿಶೆಯಲ್ಲಿ ಕೆಲಸ ಮಾಡಿದರು. ಇವರ ಅನ್ವೇಷಣೆಗಳ ಫಲವಾಗಿ ಜೀವಿಗಳು ಭ್ರೂಣಾವಸ್ಥೆಯಲ್ಲಿರುವಾಗ ಅವುಗಳಲ್ಲಿ ಈ "ತನ್ನತನ"ದ ಪರವೆ ಅಷ್ಟಾಗಿ ಇರುವುದಿಲ್ಲವೆಂದೂ ಅವು "ಪರಕೀಯ" ಜೀವಕೋಶಗಳನ್ನು "ಸಹಿಸಿ" ಕೊಳ್ಳುತ್ತವೆಯೆಂದೂ ತಿಳಿಯಿತು.

ಉದಾಹರಣೆಗೆ, "ಅ" ಎಂಬ ಇಲಿಯ ಗರ್ಭಸ್ಥ ಭ್ರೂಣಕ್ಕೆ "ಬ" ಎಂಬ "ಪರಕೀಯ" ಜೀವಕೋಶಗಳನ್ನು ಇಂಜಕ್ಷನ್ ಮೂಲಕ ಕೊಟ್ಟರೆ "ಅ" ಭ್ರೂಣವು ನಿರಾಪದವಾಗಿ ಬೆಳೆದು ಹುಟ್ಟಬಲ್ಲದು. ಅನಂತರ "ಬ" ಇಲಿಯ ಚರ್ಮ ಕೊಯ್ದು "ಅ" ಇಲಿಮರಿಯ ಶರೀರಕ್ಕೆ ಕಸಿ ಮಾಡಿದರೆ ಅದು "ಅ" ಕ್ಕೆ ಹೊಂದಿಕೊಳ್ಳಬಲ್ಲುದು. ಒಂದು ವೇಳೆ ಭ್ರೂಣಾವಸ್ಥೆಯಲ್ಲಿರುವಾಗಲೆ "ಅ" ಕ್ಕೆ "ಬ" ದ ಜೀವಕೋಶಗಳನ್ನು ಇಂಜಕ್ಷನ್ ಮಾಡದಿದ್ದ ಪಕ್ಷದಲ್ಲಿ "ಬ" ಇಲಿಯ ಚರ್ಮವನ್ನು "ಅ" ಇಲಿಮರಿ ಸುತರಾಂ ತನ್ನ ಶರೀರದ ಅಂಶವಾಗಿ ಸ್ವೀಕರಿಸುತ್ತಿರಲಿಲ್ಲ. ಇದೊಂದು ಅತಿ ಮೂಲಭೂತವಾದ ಶೋಧವಾಗಿದೆ. ಏಕೆಂದರೆ ಪ್ರಾಣಿಯು ಪ್ರಬುದ್ಧಾ

ವಸ್ಥೆಗೆ ಬಂದ ಮೇಲೆ ಅದರ ಪ್ರತಿರೋಧಕ ಶಕ್ತಿ ಬಲಿತು ಸ್ಥಿರಗೊಂಡರೂ ಭ್ರೂಣಾವಸ್ಥೆಯಲ್ಲಿರುವಾಗ ಈ ಪ್ರತಿರೋಧಕ ಶಕ್ತಿಯ ಸ್ವಭಾವವನ್ನು ಬದಲಿಸಲು ಸಾಧ್ಯವಿದೆಯೆಂದು ಅದರಿಂದ ಸಿದ್ಧವಾಯಿತು. ಈ ಶೋಧಕ್ಕಾಗಿ ಡಾ. ಬರ್ನೆಟ್ ಮತ್ತು ಡಾ. ಮೆಡವರರಿಗೆ ಈಚೆಗೆ ನೋಬೆಲ್ ಪಾರಿತೋಷಕ ದೊರೆಯಿತು.

ಈ ಸಮಸ್ಯೆಯನ್ನು ಡಾ. ಬರ್ನೆಟ್ ಹೀಗೆ ಮಂಡಿಸುತ್ತಾರೆ: "ಆರೋಗ್ಯಶಾಲಿ ಮಾನವ ಅಥವಾ ಮತ್ತಾವುದೇ ಬೆನ್ನೆಲುಬುಳ್ಳ ಪ್ರಾಣಿಯು ತನ್ನ ಸ್ವಂತ ಅಂಗಗಳೊಡನೆ ಸುಖವಾಗಿ ಬಾಳುತ್ತದಾದರೂ ಬೇರೊಂದು ವ್ಯಕ್ತಿಯಿಂದ ಕೋಶ ಇಲ್ಲವೇ ಕಣಾಂಶಗಳನ್ನು ತೆಗೆದು ತನ್ನ ಕೋಶಜಾಲ (tissue) ದಲ್ಲಿ ಸೇರಿಸಿದರೆ "ಆಂಟಿಬಡಿ" (ಪ್ರತಿರೋಧಕ ರಾಸಾಯನಿಕ) ಉತ್ಪಾದನೆ ಮತ್ತು ಇತರ ಪ್ರತಿಕ್ರಿಯೆಗಳನ್ನು ತೋರಿಸುತ್ತದೆ. ಇದೊಂದು ಮೂಲಭೂತ ಜೀವವೈಜ್ಞಾನಿಕ ಪ್ರಶ್ನೆ. ತನ್ನ ಸ್ವಂತ ರಚನೆಯಲ್ಲಡಕವಾದ ರಾಸಾಯನಿಕ ಯೋಜನೆಗಳಿಂದ ಪರಕೀಯ ರಾಸಾಯನಿಕ ಯೋಜನೆಗಳನ್ನು ಬೇರೆಯಾಗಿ ಶರೀರವು ಹೇಗೆ ಗುರುತಿಸುತ್ತದೆ ಎಂಬಲ್ಲಿಂದಲೇ ಪ್ರತಿರೋಧಕ ಶಕ್ತಿಯ ಸ್ವಭಾವದ ಅಧ್ಯಯನ ಪ್ರಾರಂಭವಾಗಬೇಕು."

ಸಮಸ್ಯೆಯನ್ನು ಮೂರು ಅವಾಂತರಗಳಾಗಿ ವಿಂಗಡಿಸಬಹುದು:

೧. ಪರಕೀಯ ಶರೀರದಿಂದ ತೆಗೆದು ಕಸಿ ಕಟ್ಟಿದ ಅಂಗಗಳನ್ನು ಶರೀರವು ಏಕೆ ಸ್ವೀಕರಿಸುವುದಿಲ್ಲ.

೨. ರೋಗಾಣುಗಳನ್ನೂ ನಂಜು ಮತ್ತು ವಿಷಗಳನ್ನೂ ಶರೀರವು ಹೇಗೆ ಪ್ರತಿಭಟಿಸುತ್ತದೆ.

೩. ಅದಕ್ಕೂ ಸೂಕ್ಷ್ಮಪ್ರಶ್ನೆಯೆಂದರೆ, ಕೆಲ ವೇಳೆ ಶರಿರಕ್ಕೆ ನಿಜವಾಗಿ ತನ್ನದೇ ಆದ ಅಂಗಗಳ ಗುರುತು ಸಿಕ್ಕದೆ ಹೋಗಿ ತನ್ನೊಡನೆ ತಾನೇ ಕಾಳಗವಾಡಿ ರೋಗವನ್ನುಂಟುಮಾಡಿಕೊಳ್ಳುತ್ತದೆ. ಈ ಅಂಶವನ್ನು ಮೊದಲು ಚರ್ಚಿಸುವಾ:

"ಆತ್ಮಪ್ರತಿರೋಧಕ" ರೋಗಗಳೆಂದು ಕರೆಯಲಾದ ಈ ರೋಗಗಳು ಈಚೆಗೆ ಡಾಕ್ಟರರಿಗೆ ಪರಿಚಿತವಾಗಿವೆ. L. E. (lupus erythemetism) ಎಂಬ ಚರ್ಮರೋಗ ಇವುಗಳಲ್ಲೊಂದು. ಇದು ಕೆಲವೊಮ್ಮೆ ಪ್ರಾಣಾಂತಿಕವಾಗುತ್ತದೆ. ಇದಾದವರ ರಕ್ತದಲ್ಲಿ ವಿಜಾತೀಯ ಕಣಗಳು ಕಾಣಿಸಿಕೊಳ್ಳುತ್ತವೆ.

ಇನ್ನೊಂದು ಉದಾಹರಣೆ ಔಷಧ ಒಗ್ಗದಿರುವುದು. ಕೆಲವರಿಗೆ ಕೆಲ ಔಷಧಗಳು ಚೆನ್ನಾಗಿ ಒಗ್ಗುತ್ತವೆ. ಬೇರೆ ಕೆಲವರಿಗೆ ಅವೇ ಔಷಧಗಳು ಭೀಕರ ಪ್ರತಿಕ್ರಿಯೆಗಳನ್ನುಂಟುಮಾಡುತ್ತವೆ. ಒಬ್ಬನ ಅಮೃತ ಇನ್ನೊಬ್ಬನಿಗೆ ವಿಷವಾಗಬಹುದೆಂಬುದು ಸರ್ವವಿದಿತವಾಗಿದ್ದರೂ ಏಕೆ ಹೀಗಾಗುತ್ತದೆಂದು ವಿಜ್ಞಾನಿಗಳಿಗೆ ಬೇಕಾಗಿದೆ.

ಹಶಿಮೋಟೋ ರೋಗ ಎಂಬ ಇನ್ನೊಂದು ವಿಚಿತ್ರ ರೋಗದಲ್ಲಿ ದೇಹಕ್ಕೆ ತನ್ನ ಥೈರಾಯ್ಡ್ ಗ್ರಂಥಿಯ ಗುರುತೇ ಸಿಕ್ಕದೆ ಅದನ್ನು ನಾಶ ಮಾಡುತ್ತದೆ. ಥೈರಾಯ್ಡ್ ಗ್ರಂಥಿಯು ಜೀವನಕ್ಕೆ ಅತ್ಯವಶ್ಯವಾದದ್ದು. ಆದರೆ ಕೆಲ ವೇಳೆ ಈ ಗ್ರಂಥಿಯಿಂದ ಪ್ರೋಟೀನ್ ದ್ರವ್ಯ ಒಸರಿ ರಕ್ತದಲ್ಲಿ ಸೇರಿಸಿಕೊಳ್ಳುತ್ತದೆ. ಇದರಿಂದ ಯಾಕೋ ಏನೋ ಶರೀರದಲ್ಲಿ ನಿಗೂಢವಾದ ಪ್ರಕೋಪವುಂಟಾಗಿ ಇದು ತನ್ನದೇ ಗ್ರಂಥಿಯ ಪ್ರೋಟೀನ್ ಎಂಬುದನ್ನು ಮರೆತು ಶರೀರವು ಪ್ರತಿರೋಧಕ ಕ್ರಿಯೆಯನ್ನು ಪ್ರಾರಂಭಿಸುತ್ತದೆ. ಬಿಳಿಯ ರಕ್ತಕಣಗಳು ಆ ಗ್ರಂಥಿಯ ಮೇಲೆ ಆಕ್ರಮಣ ಹೂಡುತ್ತವೆ. ಗ್ರಂಥಿ ಊದಿಕೊಳ್ಳುತ್ತದೆ. ಸಕಾಲದಲ್ಲಿ ಚಿಕಿತ್ಸೆಯಾಗದಿದ್ದರೆ ಥೈರಾಯ್ಡ್ ಗ್ರಂಥಿ ಪೂರ್ಣವಾಗಿ ಇಲ್ಲವೆ ಅಂಶತಃ ನಾಶವಾಗಬಹುದು.

ಈ "ಯಾದವೀ ಕಲಹ" ಏಕಾಗುತ್ತದೆಂಬ ರಹಸ್ಯವನ್ನೂ ವಿಜ್ಞಾನಿಗಳು ಬಿಡಿಸಬಯಸುತ್ತಾರೆ. ಈ ಕಲಹವನ್ನು ತಡೆಯಲು ಅದೇ ದಾರಿ.

ರೋಗಾಣುಗಳ ವಿರುದ್ಧ ಶರೀರದ ಹೋರಾಟದ ಪ್ರಶ್ನೆ ಹೆಚ್ಚು ಸರಳವಾಗಿದೆ. ಶರೀರವನ್ನು

ಪ್ರವೇಶಿಸಿದ ರೋಗಾಣುಗಳು ಅಭಿವೃದ್ಧಿಹೊಂದುವಾಗ "ಆಂಟಿಜೆನ್" ಎಂಬ ವಿಷವನ್ನುತ್ಪಾದಿಸುತ್ತವೆಂದೂ ಈ ಅಪಾಯಕರ ವಿಷದಿಂದ ರಕ್ತದಲ್ಲಿ "ಆಂಟಿಬಡಿ"ಯೆಂಬ ಪ್ರತಿರೋಧಕ ರಾಸಾಯನಿಕ ದ್ರವ್ಯಗಳನ್ನುಂಟುಮಾಡಲು ಪ್ರಚೋದನೆಯಾಗಿ ವಿಷವನ್ನು ಅವು ನಿರುಪದ್ರವಿಯಾಗಿ ಮಾಡುತ್ತವೆಂದೂ ಈ ವರೆಗೆ ವಿಜ್ಞಾನಿಗಳು ಭಾವಿಸಿದ್ದರು.

ಇಂದು ಅನೇಕ ವಿಜ್ಞಾನಿಗಳು ಈ ಬಗೆಯಾದ ಆಂಟಿಬಡಿಗಳ ಉತ್ಪಾದನೆ ರೋಗನಿರೋಧದಲ್ಲಿ ಅಷ್ಟು ಮಹತ್ವದ ಪಾತ್ರ ವಹಿಸುವುದಿಲ್ಲೆಂದು ಭಾವಿಸತೊಡಗಿದ್ದಾರೆ. ರಕ್ತದಲ್ಲಿ (ಮತ್ತು ಇತರ ಕೋಶಜಾಲಗಳಲ್ಲಿ) ರುವ ಕಣಗಳು ಅಷ್ಟೇ ಮುಖ್ಯ ಪಾತ್ರವಹಿಸುತ್ತವೆಂದವರು ನಂಬಿದ್ದಾರೆ. ನಮ್ಮ ರಕ್ತದ ಬಿಳಿ ಗೋಲಕಗಳಲ್ಲಿರುವ ಯಾವುದೋ ರಾಸಾಯನಿಕ ದ್ರವ್ಯಗಳಲ್ಲಿ ಶತ್ರುಮಿತ್ರರನ್ನು ಕಂಡುಹಿಡಿಯುವ ಗುಣವುಂಟೆಂದು ಅವರಿಗೆ ತೋರುತ್ತಿದೆ. ಆದರೆ ಕೆಲವೊಮ್ಮೆ ಏನೋ ಘೋಟಾಳೆಯಾಗಿ ತಮಗೆ ಬರುವ ರಾಸಾಯನಿಕ ಸೂಚನೆಗಳು ಬಿಳಿಯರಕ್ತಗೋಲಕಗಳಿಗೆ ಸರಿಯಾಗಿ ಅರ್ಥವಾಗದಿರುವುದರಿಂದ ಅವು ಗೊಂದಲದಲ್ಲಿ ಬಿದ್ದು ಶರೀರದ ನಾಶಕ್ಕೇ ಕಾರಣವಾಗುತ್ತವೆ ತಮ್ಮ ಪಕ್ಷದ ಸೈನಿಕರನ್ನೇ ಶತ್ರುಗಳೆಂದು ಭ್ರಮಿಸಿ ಕೆಲವೇಳೆ ವಿಮಾನಗಳು ತಮ್ಮವರನ್ನೇ ಕೊಲ್ಲುವುದುಂಟಲ್ಲವೇ, ಹಾಗೆ.

ಶರೀರದ ತನ್ನರಿವಿನ ಸಂಶೋಧನೆಯಲ್ಲಿ ಇಂದು ಎಲ್ಲಕ್ಕೂ ಹೆಚ್ಚು ಪ್ರಗತಿಯಾಗಿರುವುದು "ಕಸಿ"ಯ ಕ್ಷೇತ್ರದಲ್ಲಿ. ಉದಾಹರಣೆಗೆ, ಒಂದು ಇಲಿಯ ಯಕೃತ್ ಅಥವಾ ಮೂತ್ರಪಿಂಡದ ಒಂದು ತುಣುಕನ್ನುತೆಗೆದು ಇನ್ನೊಂದು ಇಲಿಯ ಚರ್ಮದ ಕೆಳಗೆ "ನಟ್ಟರೆ" ಕೆಲ ಸಮಯದ ವರೆಗೆ ಅದು ಆ ಇಲಿಯ ಮೈಯಲ್ಲಿ ಹೊಂದಿಕೊಂಡು ಬಾಳಿ ಬೆಳೆಯುವಂತೆ ಕಾಣಬಹುದು. ಆದರೆ ಸ್ವಲ್ಪ ಕಾಲದಲ್ಲೇ ಶರೀರದಲ್ಲಿ ಕದನ ಸನ್ನಾಹವಾಗುತ್ತದೆ. ಹೊಸ "ಪರಕೀಯ" ಭಾಗದ ವಿರುದ್ಧ ಆಂಟಿಬಡಿಗಳು ಉತ್ಪನ್ನವಾಗುತ್ತವಲ್ಲದೆ ಬಿಳಿಯ ರಕ್ತ ಗೋಲಕಗಳು ಅಣಿಗೊಂಡು ಪರಕೀಯ ಭಾಗದ ಮೇಲೆ ದಾಳಿ ಮಾಡಿ ಕೊನೆಗೆ ಅದನ್ನು ನಾಶಗೊಳಿಸುತ್ತವೆ.

ಈ ಸಮಸ್ಯೆಯನ್ನು ಬಿಡಿಸಲು ವಿಜ್ಞಾನಿಗಳಿಗೆ ಏಕರೂಪ ಅವಳಿಗಳ ಅಭ್ಯಾಸದಿಂದ ಸಹಾಯವಾಯಿತು. ಒಂದೇ ಅಂಡದಿಂದ ಉತ್ಪನ್ನವಾಗಿರುವುದರಿಂದ ಏಕರೂಪ ಅವಳಿಗಳಿಗೆ ಒಂದೇ ಬಗೆಯ ಸಂತಾನ ದ್ರವ್ಯ ದೊರೆತಿರುತ್ತದೆ. ಇಂಥ ಅವಳಿಗಳಲ್ಲಿ ಒಂದರ ಚರ್ಮವನ್ನು ಇನ್ನೊಂದಕ್ಕೆ ಕಸಿ ಮಾಡಿದರೆ ಅದು ಹೊಂದಿಕೊಳ್ಳಬಹುದು. ಮೂತ್ರಪಿಂಡದಂಥ ಅಂಗಗಳನ್ನು ಒಂದರಿಂದ ಇನ್ನೊಂದಕ್ಕೆ ಕಸಿ ಕಟ್ಟಿದರೂ ಅದು ಹೊಂದಿಕೊಳ್ಳುವ ಸಂಭವ ಸಾಕಷ್ಟು ಇದೆ. ಹೀಗಿದ್ದರೂ ಇದೇ ಅವಳಿಗಳ ತಂದೆ, ತಾಯಿ ಅಥವಾ ಇತರ ಬಂಧು ಭಗಿನಿಯರ ದೇಹಗಳಿಂದ ತೆಗೆದ ಚರ್ಮ ಅವುಗಳ ದೇಹದಲ್ಲಿ ಸರ್ವಥಾ ಹೊಂದಿಕೊಳ್ಳಲಾರದು. ನಮ್ಮ ಶರೀರದಲ್ಲಿ ತನ್ನ ಏಕರೂಪ ಅವಳಿ ಬಂಧುವಿನ ಶರೀರದಿಂದ ಬಂದ ಭಾಗ ಹೊರತು ಬೇರಾವುದೇ ಶರೀರದಿಂದ ಬಂದು ಸೇರಿಕೊಂಡ ಅಂಶವನ್ನು ಗುರುತಿಸಿ ನಿರಾಕರಿಸುವ ಶಕ್ತಿ ಇವೆ

ವಿಜ್ಞಾನಿಗಳೀಗ ಶರೀರವನ್ನು "ಮಂಕುಗೊಳಿಸಿ" ಅದು ಬೇರೆ ದೇಹಗಳಿಂದ ತೆಗೆದು ತನಗೆ ಕಸಿ ಮಾಡಿದ ಭಾಗಗಳನ್ನು ತನ್ನದೆಂದೇ ಭ್ರಮಿಸಿ ಸ್ವೀಕರಿಸುವಂತೆ ಮಾಡುವ ಉಪಾಯಗಳನ್ನು ಶೋಧಿಸುತ್ತಿದ್ದಾರೆ. ಇಲಿ ಮೊದಲಾದ ಪ್ರಾಣಿಗಳ ಮೇಲೆ ಮಾಡಿದ ಒಂದು ಪ್ರಯೋಗ ಸ್ವಾರಸ್ಯವಾಗಿದೆ. ಇಲಿಯ ಶರೀರವನ್ನೆಲ್ಲ ಕ್ಷ-ಕಿರಣಗಳ ಪ್ರಾಣಾಂತಿಕ ವಿಕಿರಣದಿಂದ ಮೊದಲು ದುರ್ಬಲಗೊಳಿಸಲಾಗುತ್ತದೆ. ಆ ಮೇಲೆ ಸಾಮಾನ್ಯವಾಗಿ ಬೇರೊಂದು ಇಲಿಯ ಎಲುಬಿನ ಟೊಳ್ಳಿನ ನೆಣವನ್ನು ಇಂಜೆಕ್ಶನ್ ಮೂಲಕ ಕೊಟ್ಟು ವಿಕಿರಣಗೊಂಡ ಇಲಿಯನ್ನು

ಬದುಕಿಸಿಕೊಳ್ಳಲು ಬರುತ್ತದೆ.

ಹೀಗೆ ಬದುಕಿದರೆ ಆ ಇಲಿಯ ಶರೀರದ ಪ್ರತಿರೋಧ ಶಕ್ತಿಯ ಸ್ವಭಾವ ಬದಲಾಗಬಹುದು. ಆಗ ಅದಕ್ಕೆ ತನ್ನ ಅವಳಿ ಬಂಧುವಲ್ಲದ ಇಲಿಯ ಮೈಯಿಂದ ತೆಗೆದ ಚರ್ಮವನ್ನು ಕಸಿ ಕಟ್ಟಿದರೂ ಆ ಚರ್ಮ ಅದರ ಮೈಗೆ ಹೊಂದಿಕೊಂಡು ಬೆಳೆಯುತ್ತದೆ. ಅರ್ಥಾತ್ ಅದರ ಪ್ರತಿರೋಧಕ ಶಕ್ತಿ ವಿಕಿರಣ ಪ್ರಭಾವದಿಂದ ದುರ್ಬಲವಾಗಿರುವುದರಿಂದ ಅದು "ಪರಕೀಯ" ಅಂಶಗಳ ವಿರುದ್ಧ ಹೋರುವ ಶಕ್ತಿಯನ್ನು ಕಳೆದುಕೊಳ್ಳುತ್ತದೆ.

ಆದರೆ ಮನುಷ್ಯನನ್ನು ಪ್ರಾಣಾಂತಿಕ ಕ್ಷಕಿರಣ ವಿಕಿರಣಕ್ಕೊಳಪಡಿಸಲಾದೀತೆ? ಆದ್ದರಿಂದ ವಿಜ್ಞಾನಿಗಳು ಬೇರೆ ತರದ ವಿಧಾನಗಳನ್ನು ಅರಸುತ್ತಿದ್ದಾರೆ.

ಅಮೇರಿಕದ ಮಿನಿಸೋಟಾ ವಿಶ್ವವಿದ್ಯಾಲಯದ ಕೆಲ ಡಾಕ್ಟರರು ಕ್ಷ ಕಿರಣಗಳ ಬದಲು ಪ್ಲೀಹ ಇಂಜಕ್ಶನ್‌ಗಳನ್ನುಪಯೋಗಿಸುತ್ತಿದ್ದಾರೆ. ಕೆಲ ಪ್ರಬುದ್ಧ ಇಲಿಗಳ ಪ್ಲೀಹದಿಂದ ತೆಗೆದ ಕಣಗಳನ್ನು ಇತರ ಕೆಲ ಪ್ರಬುದ್ಧ ಇಲಿಗಳ ಅಶುದ್ಧ ರಕ್ತನಾಳ ಮತ್ತು ಹೊಟ್ಟೆಯೊಳಗೆ ಇಂಜಕ್ಶನ್ ಮೂಲಕ ಕೊಡಲಾಗುತ್ತದೆ. ಹೀಗೆ ಏಳು ವಾರಗಳ ವರೆಗೆ ಇಂಜಕ್ಶನ್ ನಡೆದ ನಂತರ ಯಾವ ಜಾತಿಯ ಇಲಿಗಳಿಂದ ಪ್ಲೀಹ ಕಣಗಳನ್ನು ತೆಗೆದು ಇಂಜಕ್ಶನ್ ಮಾಡಲಾಯಿತೋ ಆ ಜಾತಿಯದೇ ಇಲಿಗಳ ಚರ್ಮ ಅಥವಾ ಇತರ ಕೋಶಜಾಲಗಳನ್ನು ಇಂಜಕ್ಶನ್ ಪಡೆದ ಇಲಿಗಳಿಗೆ ಕಸಿ ಮಾಡಿದರೆ ಕಸಿ ಯಶಸ್ವಿಯಾಗಿ ಬದುಕಿ ಬೆಳೆಯುತ್ತದೆಂದು ಕಂಡುಬಂತು.

ಪ್ಲೀಹದ ಕಣಗಳನ್ನೇ ಏಕೆ ಉಪಯೋಗಿಸಲಾಯಿತೆಂದರೆ ಅದರಲ್ಲಿ ಬಿಳಿ ರಕ್ತಗೋಲಕಗಳು ಸಮೃದ್ಧಿಯಾಗಿವೆ. ಬಿಳಿ ಗೋಲಕಗಳಲ್ಲಿರುವ ರಾಸಾಯನಿಕಗಳಲ್ಲೇ ಶರೀರದ "ಆತ್ಮಜ್ಞಾನ"ದ ರಹಸ್ಯ ಅಡಕವಾಗಿದೆಯೆಂದು ವಿಜ್ಞಾನಿಗಳಿಗೆ ಸಂಶಯವಿದೆ.

ಈ ಬಗ್ಗೆ ಈಚೆಗೆ ಒಂದು ಸಂದರ್ಶನದಲ್ಲಿ ಈ ಗುಂಪಿನ ವಿಜ್ಞಾನಿಯೊಬ್ಬ ಹೀಗೆ ಹೇಳಿದ: "ಈ ವರೆಗೆ ಪ್ರತಿರೋಧಕಶಕ್ತಿಯ ಸ್ವಭಾವವನ್ನು ಬದಲಿಸುವುದು ಬೆಳೆದು ಪ್ರಬುದ್ಧವಾದ ಪ್ರಾಣಿಗಳಲ್ಲಿ ಸಾಧ್ಯವಿಲ್ಲೆಂಬುದು ಬಲ್ಲವರ ಸಿದ್ಧಾಂತವಾಗಿತ್ತು. ಆದರೆ ನಾವು ಉಪಯೋಗಿಸಿ (ಯಶಸ್ವಿಯಾಗಿ) ರುವುದು ಬೆಳೆದ ಪ್ರಾಣಿಗಳನ್ನೇ. ಆದ್ದರಿಂದ ಇದೊಂದು ದೊಡ್ಡ ಮುಂದಡಿಯೆಂದು ನಮ್ಮೆಣಿಕೆ. ಇನ್ನು ಪ್ರಾಣಿಗಳಲ್ಲಷ್ಟೇ ಅಲ್ಲದೆ ಮನುಷ್ಯರಲ್ಲೂ ಈ ಪ್ರಯೋಗ ಮಾಡಬಹುದೆಂದು ನಮಗೆ ಭರವಸೆಯಿದೆ."

ಅಮೇರಿಕದ ಬಾಸ್ಟನ್ನಿನಲ್ಲಿರುವ ನ್ಯೂ ಇಂಗ್ಲಂಡ್ ಮೆಡಿಕಲ್ ಸೆಂಟರಿನ ಡಾ. ರಾಬರ್ಟ್ ಶ್ವ್ಯಾರ್ಟ್ಸ್ ಅವರು ಬೇರೊಂದು ಪ್ರಯೋಗ ಮಾಡಿದ್ದಾರೆ. ಅವರು ರಕ್ತಕ್ಷಯ ಚಿಕಿತ್ಸೆಯಲ್ಲಿ ಉಪಯೋಗಿಸುವ ಮಾದರಿಯ ಕೆಲ ರಾಸಾಯನಿಕಗಳನ್ನು ಮೊಲಗಳಿಗೆ ಇಂಜಕ್ಶನ್ ಮೂಲಕ ಕೊಟ್ಟರು. ಆ ಮೇಲೆ ಅವುಗಳಿಗೆ ಇತರ ಮೊಲಗಳ ಚರ್ಮವನ್ನು ಕಸಿ ಮಾಡಿದಾಗ ಅದು ಹೊಂದಿಕೊಂಡು ಬೆಳೆಯಿತು.

ರಾಸಾಯನಿಕಗಳನ್ನು ದೊರಕಿಸುವುದು ಪ್ಲೀಹಗಳ ಕಣಗಳನ್ನು ದೊರಕಿಸುವುದಕ್ಕಿಂತ ಸುಲಭವಾಗಿರುವುದರಿಂದ ಇದೊಂದು ದೊಡ್ಡ ಅನುಕೂಲವೇ ಸೈ. ಆದರೆ ಡಾ. ಬರ್ನೆಟ್‌ರು ಈಚೆಗೆ ಹೇಳಿದ ಹಾಗೆ, "ಮೊಲಗಳಲ್ಲಿ ಇದು ಅತ್ಯಂತ ಯಶಸ್ವಿಯಾದರೂ ಇತರ ಪ್ರಾಣಿಗಳಲ್ಲಿ ಆಗದೆ ಹೋಗಬಹುದು."

ಏನೇ ಆಗಲಿ, ಕೆಲ ವಿಜ್ಞಾನಿಗಳು ಇದರಲ್ಲಿ ಅಪನಂಬಿಕೆ ತಾಳಿದ್ದರೂ, ಇತರರು ಈ ಶೋಧಗಳನ್ನು ದೊಡ್ಡ ಮುನ್ನಡೆಯೆಂದು ಸ್ವಾಗತಿಸಿದ್ದಾರೆ.

ಆದರೆ ಶರೀರ ತನ್ನನ್ನು ತಾನು ಹೇಗೆ ತಿಳಿಯುತ್ತದೆಂಬುದು ಮಾತ್ರ ಇನ್ನೂ ರಹಸ್ಯವಾಗಿಯೇ ಉಳಿದಿದೆ. ಬಹುಶಃ ಅದು ಬಿಳಿ ರಕ್ತಗೋಲಕದೊಳಗೆ ಹುದುಗಿರಬಹುದು. ಅದನ್ನು ಬಿಡಿಸಲು ವರ್ಷಗಳೆ ಬೇಕಾಗಬಹುದು. ಅಥವಾ ಅಕಸ್ಮಾತ್ತಾಗಿ ನಾಳೆಯೆ ಒಬ್ಬ ಕುಶಾಗ್ರಮತಿ ತರುಣವಿಜ್ಞಾನಿ ಅದಕ್ಕೆ ಉತ್ತರ ಕಂಡುಹಿಡಿಯಬಹುದು. ★

ಋತು ಗೀತ

ಮೂಲ: ಖಲೀಲ್ ಗಿಬ್ರಾನ್ ರೂಪಾಂತರ: ದೇವದತ್ತ

ಗ್ರೀಷ್ಮದಲ್ಲಿ

ಏಳೆನ್ನ ನಲ್ಲೆ, ಹೊಲಕೆ ಹೋಗೋಣ. ನೋಡಲ್ಲಿ ಸುಗ್ಗಿ ಬಂದಿದೆ ಬೆಳೆಗಾಲ ಬಳಿ ಸುಳಿದಿದೆ. ನೇಸರು-ನಿಸರ್ಗಗಳ ನಲ್ಗಾವಿನಿಂದ ಕಾಳೆಲ್ಲ ಹಾಲ್ತುಂಬಿದೆ.

ಬಾ, ನಮ್ಮ ಶ್ರಮದ ಫಲವಾದ ಹಣ್ಣುಗಳನ್ನು ಹಕ್ಕಿ ಕುಕ್ಕುವ ಮೊದಲು, ನಮ್ಮ ಭೂಫಲವನ್ನು ಇರಿವೆಯಿೀಂಟುವ ಮೊದಲು ನಾವೇ ಸವಿದುಬಿಡೋಣ.

ನಮ್ಮ ಹೃದಯದ ಹೊಲದಿ, ಆತ್ಮಚೇತನ ತನ್ನ ಸಿದ್ಧಿಬೀಜಗಳನ್ನು ಬಿತ್ತಿ ಬೆಳೆಕೊಳ್ವ ತೆರ, ಈ ಸಮೃದ್ಧ ನಿಸರ್ಗದಿಂದ ನಾವೂನೂ ನಮ್ಮ ಕಣಜಗಳನ್ನು ತುಂಬಿಕೊಳ್ಳೋಣ.

ಬಾ, ನನ್ನ ಒಡನಾಡಿ, ಆತ್ಮ ಸಂಗಾತಿ, ನಾವು ಈ ಹಸಿರು ಹುಲ್ಲನ್ನೇ ಹಾಸಿಗೆಯ ಮಾಡಿ ನೀಲನಭವನ್ನೇ ಹೊದ್ದಿಕೆಯನಾಗಿಸಿ, ನಿದ್ದೆ ಮಾಡೋಣ.

ಈ ಹುಲ್ಲ ಹಸಿ ಹಸಿರ ತಲೆದಿಂಬ ಮೇಲೊರಗಿ ಬಳಿಯ ಕೊಳ್ಳದಲುಲಿವ ಹಳ್ಳದಾ ನಿನದವನ್ನಾಲಿಸುತ್ತಾಲಿಸುತ, ನಾವೂ ದಿನದ ದಣಿವನ್ನಾರಿಸಿಕೊಳ್ಳೋಣ.

ಶರದದಲ್ಲಿ

ಬಾ, ನನ್ನ ನಲ್ಲೆ, ದ್ರಾಕ್ಷೆಯಾ ತೋಟಕ್ಕೆ ಹೋಗೋಣ. ಯುಗಯುಗಾಂತರಗಳಾ ತಿಳಿವನ್ನು ತುಂಬಿಕೊಂಡಾತ್ಮದಂತೆಯೆ ನಾವು ಆ ಹಣ್ಣುಗಳ ಹಿಳಿದು, ನಮ್ಮ ಪಾತ್ರೆಗಳನ್ನು ಮಧುರ ಮಧುವಿನಿಂ ತುಂಬಿಕೊಳ್ಳೋಣ.

ಬಾ, ಬಾರೆ, ನಾವೂನು ಜೋಡಾಗಿ ಹಣ್ಣುಗಳ ಕೂಡಿಸೋಣ. ಎಲ್ಲೆಲ್ಲು ಸುರಿದಿದ್ದ ಸುಮದ ಸೌಗಂಧವನು ಸೋಸಿಕೊಳ್ಳೋಣ.

ನೋಡಲ್ಲಿ, ಗಿಡದೆಲೆಗಳೆಲ್ಲವೂ ಹೊಂಬಣ್ಣದಳೆದಿವೆ. ಆ ಎಲೆಗಳನ್ನೆಲ್ಲ, ಗಾಳಿ ಉದುರಿಸುತಲಿದೆ; ಹೋಯಿತು ವಸಂತವೆಂದೆಂದು ದುಃಖಿಸಿ ತೀರಿಕೊಂಡ ಹೂವಿಗೆ ಅಕೋ, ಮೃತ ಹೊದಿಕೆ ಹೊಚ್ಚುತ್ತಲಿದೆ. ಬಂದುಬಿಡು ಓ ನಲ್ಲೆ, ನಡೆಯಿನ್ನು ಮನೆಗೆ ಮರಳೋಣ.

ನೋಡಲ್ಲಿ, ಅಲ್ಲಿ ಮಲ್ಲಿಗೆ, ಸೇವಂತಿಗಳಿಗೆಲ್ಲ ಬರಲನ್ನು ಬಿಟ್ಟುಕೊಟ್ಟು, ಹುಲ್ನೆಲದ ಮೇಲೆಲ್ಲ ಕೊನೆಯ ಕಂಬನಿ ಹನಿಸಿ, ತಮ್ಮ ರೆಕ್ಕೆಯ ಮೇಲೆ ಉದ್ಯಾನದುಲ್ಲಾಸವನು ತೀವಿಕೊಂಡು ಹಕ್ಕಿಪಕ್ಕಿಗಳೆಲ್ಲ ಸಾಗರದ ತೀರದೆಡೆ ಸಾಗಿ ಸಾಗರಬಿದ್ದು ಹಾರಿಹೋಗುತ್ತಲಿವೆ.

ಬಂದು ಬಿಡು, ನಾವಿನ್ನು ಮನೆಗೆ ಹೋಗೋಣ. ಏನಿದೇನಿದೆ ಇಲ್ಲಿ? ಹಳ್ಳಗಳೊ ಹರಿಗಡಿದಿವೆ; ಚೆಲುವಸಂತನ ಆಟ ಮುಗಿದುಹೋಗಿಹುದು, ನಗೆಯ ಹನಿ ಆರಿಹೋಗಿದೆ. ಗುಡ್ಡದಿನ್ನೆಗಳೆಲ್ಲ ತಮ್ಮ ತಮ್ಮ ಹಸಿರು ಕುತನಿಯನ್ನೆಲ್ಲ ಕಳೆದೊಗೆದುಬಿಟ್ಟವೆ.

ಬಾರೆನ್ನ ಪ್ರಿಯತಮೆ, ನೋಡಲ್ಲಿ ನಿಖಿಲ ನಿಸರ್ಗಕ್ಕೆಲ್ಲ ನಿದ್ದೆಯಾ ಭರವು ಬಂದಂತಿದೆ. ವಿಷಣ್ಣತೆಯಿಂದಾದರೂ ಸಾಪೇಕ್ಷ ದನಿಯಿಂದ ಕೊಟ್ಟುಬಿಟ್ಟದೆ ನಿರೋಪವನು ಎಚ್ಚರಕೆ.

ಹೇಮಂತದಲ್ಲಿ

ಬಳಿಸಾರಿ ಬಾರೆನ್ನ ಆತ್ಮಸಂಗಾತಿ: ಕುಳಿರ್ಗಾಳಿ ನಮ್ಮ ಮೈ ಬೇರ್ಪಡಿಸದಂತೆ, ನೀ ಹತ್ತೊತ್ತಿ ಬಾ ಮೈಗೆ ಮೈ ಹತ್ತಿ ನಾವೀ ಒಲೆಯ ಬಳಿಯಲ್ಲಿ ಕುಳಿತುಕೊಳ್ಳೋಣ. ನೋಡು, ನೋಡೀಗ ಈ ಅನಲನೇ ಹೇಮಂತನಾ ಹಣ್ಣು!

ಯುಗಯುಗಾಂತರದ ಸುದ್ದಿಯನಾಡು ನನ್ನೊಡನೆ. ನೋಡಿಲ್ಲಿ, ಈ ಒಣಕು ಚಳಿಗಾಳಿಯಾ ಘೋರಾಟದಿಂದಲೂ ಈ ಪಂಚಭೂತಗಳ ಗೋಳಾಟದಿಂದಲೂ ಕೀಸರಿಡಿಗಿವೆ ನನ್ನ ಕಿವಿಗಳೆರಡೂ.

ಮುಚ್ಚಿಬಿಡು ಕಿಡಿಕಿ-ಬಾಗಿಲುಗಳನ್ನೆಲ್ಲ. ಈ ನಿಸರ್ಗದ ರುದ್ರಮುಖವೆನ್ನ ಆತ್ಮವನು ತುಂಬಿದೆ ವಿಷಾದದಲಿ. ಹಿಮದ ಹೊದಿಕೆಯ ಬುಡದ ಈ ಇಡೀ ಪಟ್ಟಣವೇ, ದುಃಖಾರ್ತದಯಿತೆಯೊಲು ನನ್ನ ಹೃದಯವನೇ, ನೆತ್ತರೊಸರುವ ತೆರದಿ ಹಿಚುಕಿ-ಹಿಂಡುತ್ತಲಿದೆ.

ಅದಕೇ, ಅದಕೇ, ಎಣ್ಣೆದುಂಬಿಸಿ ದೀಪ ಹೊತ್ತಿಸೀಗ. ನೋಡದೋ ಆ ದೀಪ ಮಂಕಾಗತೊಡಗಿದೆ. ಆ ದೀಪವನ್ನು ನೀ ಥಾಳಾಗಿ ಉರಿಸಿ ನಿನ್ನ ಬದಿಗಿರಿಸು, ಆಗ ಕಂಡೀತೆನಗೆ ಈ ಇರುಳು ನಿನ ಮುಖದಲ್ಲೇನ ಬರೆದಿರುವುದೆಂಬದು. ಹೋಗು ಆ ಮಧುಪಾತ್ರೆಯನ್ನಿಲ್ಲಿ ತಾ; ನಾವಿಬ್ಬರೂ ಕೂಡಿ ಆ ಮಧುವನೀಂಟಿ, ಮಧುದಿನಗಳಾ ಮಧುರಸ್ಮೃತಿಯಲ್ಲಿ ಮುಳುಗೋಣ!

ಸರಿದು ಬಾ, ಹತ್ತಿರಕೆ; ನನ್ನಾತ್ಮಪ್ರಿಯಳೆ, ನೋಡಲ್ಲಿ, ಜ್ವಾಲೆ ಮಂಕಾಗುತಿದೆ; ಕೆಂಡಗಳನೆಲ್ಲ ಅಕೊ ಬೂದಿ ಮುಚ್ಚುತ್ತಲಿದೆ.

ಆಲಿಂಗಿಸೆನ್ನ. ದೀಪ ಮಂಕಾಗುತಿದೆ. ನೋಡಲ್ಲಿ; ಅದನಕೋ ಕತ್ತಲೆಯು ಮುತ್ತಿ ಗೆಲ್ಲುತ್ತಲಿದೆ.

ಕಾಲ ಮಧುವನೀಂಟಿದಾ ನಮ್ಮ ಕಂಗಳೂ ಕಲ್ಲಾಗುತಿವೆ ಈಗ.

ನಿನ್ನ ನಿದ್ರಾಜಡಿತ ಸುಂದರಾಕ್ಷಿಗಳಿಂದಲೆನ್ನ ನೀನೀಕ್ಷಿಸು. ತಂದ್ರಿಯಪ್ಪದ ಮುನ್ನ ನೀನೆನ್ನನಪ್ಪು. ನಿನ್ನ ಮುತ್ತನ್ನುಳಿದು ಸಕಲವನು ವಶಪಡಿಸಿಕೊಂಡಿಹುದು ಹಿಮವು. ಅದಕೇ ನಲ್ಲೇ ನೀ ಮುತ್ತಿಡೆನಗೆ.

ಆಹಾ!....ಓ ನನ್ನ ಪ್ರಿಯತಮೆ,.. ಅಪರಂಪಾರವೀ ನಿದ್ರಾ ಸಮುದ್ರದಾಳ... ಬೆಳಗೆಷ್ಟು ದೂರ!....ಎಂಥದೀ ಇರುಳು!!

ವಸಂತದಲ್ಲಿ

ಬಾ, ಎನ್ನ ನಲ್ಲೆ, ನಾವಿಬ್ಬರೊಡಗೂಡಿ ಈ ದಿನ್ನೆಗಳ ಮೇಲೆ ಅಡಿಯಾಡುವಾ. ಹಿಮವೀಗ ಕರಗಿಹುದು ನಿದ್ದೆಯನ್ನುಳಿದು ಜೀವನವೀಗ ಎಚ್ಚತ್ತು ಗಿರಿದರಿಗಳಲ್ಲೆಲ್ಲ ಅಡಿಯಾಡತೊಡಗಿದೆ.

ಬಾ, ಬಾರೆ ಬಂದು ಬಿಡು; ದೂರದಾ ನೆಲಹೊಲಗಳಲ್ಲೆಲ್ಲ ನಾವೂನು ಆ ವಸಂತದ ಹೆಜ್ಜೆಯನ್ನೆ ಅನುಸರಿಸೋಣ.

ಹುಂ, ಹೊರಡು, ನಾವಿಬ್ಬರೂನು ಆ ಎತ್ತರದ ಶಿಖರವನ್ನೇರಿ ಕೆಳಗೆ ಬಯಲೊಳಗೆ ಅಲಿ ಅಲೆಯಾಗಿ ತಲೆಯನಲ್ಲಾಡಿಸುವ ಎಳೆ ಹಸಿರ ಸಾಗರವನೀಕ್ಷಿಸೋಣ.

ಚಳಿಗಾಲದಿರುಳು ಕದ್ದೊಯ್ದು ಅಡಗಿಸಿ ಇಟ್ಟ ಆ ಉಡುಪುತೊಡಪನ್ನೀಗ ಈ ವಸಂತದ ಮುಗುಳುನಗೆಯ ಮುಂಬೆಳಗೀಗ ಹುಡುಕಿ ಹೊರದೆಗೆದಿಹುದು. ಗಿಡ-ಬಳ್ಳಿ-ಗುಡ್ಡ-ದಿನ್ನೆಗಳೆಲ್ಲ ಧರಿಸತೊಡಗಿಹವು ಆ ಉಡುಪನೀಗ.

ನೋಡಕೋ ಸಕಲವೂ ಬೆಳದಿಂಗಳಿರುಳ ಮದುಮಗಳಂತೆ ಸಿಂಗಾರವಾಗುತಿಹವು.

ಎಚ್ಚತ್ತು ಎದ್ದಿಹವು ದ್ರಾಕ್ಷೆ ಮಲ್ಲಿಗೆ ಬಳ್ಳಿ! ಅವುಗಳಾ ಮಿಡಿ ಕುಡಿಗಳೆಲ್ಲವೂ ಆಲಿಂಗನಾತುರ ಪ್ರೇಮಿಗಳ ತೆರದಲ್ಲಿ ಸುಸಿಲಾಡುತಿಹವು.

ಹೊಳೆ ಹಳ್ಳಗಳು ಎಲ್ಲ ಕಲ್ಲು ಬಂಡೆಗಳನ್ನು ಹಾಯುತ್ತ ಹರಿಯುತ್ತ ಉಕ್ಕುಕ್ಕಿ ಚಿಮ್ಮುತ್ತ ಆನಂದದಾ ಮಧುರ ಗೀತವನ್ನುಲಿಯುತಿವೆ.

ಸಾಗರದಲೆಗಳ ತಲೆಯ ಮೇಲಿನಾ ಬೆಳ್ಳಿ ಬುರುಗಿನೊಲು ನೆಲದ ಮೇಲೆಲ್ಲಾ ನಿಸರ್ಗದ ಹೃದಯದಿಂದೆದ್ದು ಬಂದಂತಕೋ ಹೂ-ಹೂವುಗಳು ಅರಳಿ ಮಗಮಗಿಸುತಿಹವು.

ಬಾ, ನನ್ನ ನಲ್ಲೆ, ಮಳೆಯ ಕೊನೆ ಕಂಬನಿಗಳನ್ನೆಲ್ಲ ಮದಗುಣಿಕೆಯಾ ಹೂವ ಬಟ್ಟಲಲಿ ಕುಡಿಕುಡಿದು, ಬೆಳಗುವಕ್ಕಿಗಳ ಆನಂದ ಗೀತಗಳಿಂದ ನಮ್ಮಾತ್ಮಗಳನಃ ನಾವ್ ತುಂಬಿಕೊಳ್ಳೋಣ.

ಬಾ, ಈ ಸುಳಿಗಾಳಿಯ ಮಂದ ಮಧುರ ಸೌಗಂಧವನು ಮೂಸೋಣ. ನೀಲದಂಚಿನಲಿದ್ದ ಆ ಬಂಡೆಗಲ್ಲಾಚೆ ನಾ-ನೀನು ಜತೆ ಜತೆಗೆ ಕುಳಿತುಕೊಂಡು, "ನಲ್‌ಮುದ್ದು" ಗಳನೆಲ್ಲ ಕೊಟ್ಟುಕೊಳ್ಳೋಣ!

*



ದೀರ್ಘಾಯುವೊ? ಧಿಕ್ಕಾರವೊ?

೧೯೬೦ ಫೆಬ್ರುವರಿ ತಿಂಗಳಲ್ಲಿ ಭಾರತದ ಪ್ರಧಾನಿ ಪಂಡಿತ ನೆಹರೂರವರು ಯುರೋಪಿನ ಪ್ರವಾಸಾನಂತರ ಭಾರತಕ್ಕೆ ಹಿಂದಿರುಗುವಾಗ ಟರ್ಕಿಗೆ ಭೇಟಿ ಕೊಟ್ಟಿದ್ದರು. ಎಲ್ಲಾ ರಾಷ್ಟ್ರಗಳಂತೆಯೇ ಟರ್ಕಿಯ ಜನರೂ ಉತ್ಸಾಹದಿಂದ ಭಾರತದ ಪ್ರಧಾನಿಯನ್ನು ಸ್ವಾಗತಿಸಲು ಅಸಂಖ್ಯಾತರಾಗಿ ನೆರೆದಿದ್ದರು. ಟರ್ಕಿಯ ರಾಜಧಾನಿ ಅಂಕಾರ ವಿಮಾನ ನಿಲ್ದಾಣದಲ್ಲಿ ನೆಹರೂರವರು ಬಂದಿಳಿದೊಡನೆಯೇ ಟರ್ಕಿ ಪ್ರಧಾನಿ ಮೆಂಡರಿಸ್ ಮೊದಲಾಗಿ ಉನ್ನತ ನಾಯಕರೆಲ್ಲ ಸ್ವಾಗತಿಸಿದ ಅನಂತರ ನೆಹರೂರವರು ಮೆಂಡರಿಸ್ (ಈಗ ಮೆಂಡರಿಸ್‌ರವರು ಪದಚ್ಯುತಿಗೊಳಿಸಲ್ಪಟ್ಟು ಮಿಲಿಟರಿ ನ್ಯಾಯಾಲಯದಿಂದ ಮರಣದಂಡನೆಗೊಳಗಾಗಿದ್ದಾರೆ) ಅವರೊಡನೆ ತೆರೆದ ಕಾರಿನಲ್ಲಿ ಮೆರವಣಿಗೆ ಹೊರಟಾಗ ರಸ್ತೆಗಳ ಇಕ್ಕೆಲಗಳಲ್ಲೂ ನೆರೆದಿದ್ದ ಜನಸ್ತೋಮದಿಂದ ಆಗಾಗ "ಯೂಹ ಮೆಂಡರಿಸ್! ಯೂಹ ಮೆಂಡರಿಸ್" ಎಂಬ ಘೋಷಣೆ ಕೇಳಿಬರುತ್ತಿತ್ತಂತೆ. ನೆಹರುರವರು ಹಾಗೆಂದರೇನೆಂದು ಪಕ್ಕದಲ್ಲಿದ್ದ ಮತ್ತೊಬ್ಬರನ್ನು ಕೇಳಿದಾಗ ಅವರು ಹಾಗೆಂದರೆ ಮೆಂಡರಿಸ್ ದೀರ್ಘಾಯುವಾಗಲೆಂದು ಅರ್ಥ ಎಂಬುದಾಗಿ ತಿಳಿಸಿದರು. ಪುನಃ ಟರ್ಕಿಯಿಂದ ಹಿಂದಿರುಗುವಾಗ ತಮ್ಮನ್ನು ಬೀಳ್ಕೊಡಲು ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದ ಪ್ರಧಾನಿ ಮೆಂಡರಿಸ್‌ರವರ ಕೈಯನ್ನು ಕುಲುಕುತ್ತಾ ನೆಹರೂರವರು, ''ಯೂಹ ಮೆಂಡ-ಮೆಂಡರಿಸ್!'' ಎಂದೊಡನೆ ಮೆಂಡರಿಸ್‌ರವರ ಮುಖ ಬಿಳಚಿಕೊಂಡಿತಂತೆ. ಕಾರಣ ಆ ಘೋಷಣಾ ವಾಕ್ಯದ ನಿಜವಾದ ಅರ್ಥ ಮೆಂಡರಿಸ್‌ಗೆ ಧಿಕ್ಕಾರ ಎಂದು.

—ಸಂಗ್ರಹ: ಪಿ. ಶಿವಣ್ಣ ತಾವರೆಕೆರೆ

ಕಣ್ಣಿಡಲು ಬಂದವ ಶಿಷ್ಯನಾದ

ಗಾಂಧೀಜಿ ಮತ್ತು ಪೋಲೀಸ್



ಒಬ್ಬ ಪೋಲೀಸ್ ಅಧಿಕಾರಿಯಿಂದ

ಚಲೇಜಾವ್ ಚಳವಳಿಯ ಹಿಂದಿನ ಸ್ಮರಣಾರ್ಹ ದಿನಗಳಲ್ಲಿ ವರ್ಧಾ ಪೋಲೀಸ್ ಸ್ಟೇಶನ್ನಿನಲ್ಲಿ ಸಬ್ ಇನ್‌ಸ್ಪೆಕ್ಟರನಾಗಿದ್ದ ನಾನು ನನ್ನ ಕರ್ತವ್ಯನಿರ್ವಹಣೆಗಾಗಿ ಅನೇಕ ಸಲ ಗಾಂಧೀಜಿಯವರನ್ನು ಭೆಟ್ಟಿಯಾಗಬೇಕಾಗುತ್ತಿತ್ತು. ಈ ಕಾರ್ಯಗಳೆಲ್ಲ ಅಪ್ರಿಯವಾಗಿಯೇ ಇರುತ್ತಿದ್ದವು. ಈ ಕೆಲಸವೆಂದರೆ, ಯಾರನ್ನಾದರೂ ಬಂಧಿಸುವುದು, ಅಥವಾ ಸೇವಾಗ್ರಾಮ ಆಶ್ರಮವಾಸಿಗಳಲ್ಲೊಬ್ಬರ ಗುಡಿಸಲಿನ ಝಡತಿ ಮಾಡುವುದು ಇಲ್ಲವೆ ಯಾವನೊಬ್ಬ ಹಿರಿಯ ರಾಜಕಾರಣಿಯ ಕಾಗದ ಪತ್ರಗಳನ್ನು ಜಪ್ತಿಮಾಡುವುದು ಇಂಥದೇ ಆಗಿರುತ್ತಿತು. ನನ್ನ ಕಾರ್ಯದಲ್ಲೇನಾದರೂ ತೊಂದರೆಯಾದಾಗ ನಾನು ಗಾಂಧೀಜಿಯ ಬಳಿಗೆ ಹೋಗುತ್ತಿದ್ದೆ. ಅವರು ಯಾವಾಗಲೂ ಪೋಲೀಸರಿಗೆ ತಮ್ಮಿಂದಾದಷ್ಟು ಸಹಕಾರವನ್ನು ನೀಡುತ್ತಿದ್ದರು. ಅವರು ನನ್ನಲ್ಲಿ ಸಹಾನುಭೂತಿಯನ್ನು ತೋರುತ್ತಿದ್ದರು. ನನ್ನ ಬಗೆಯನ್ನು ಅರ್ಥ ಮಾಡಿಕೊಳ್ಳುತ್ತಿದ್ದರು. ಕರ್ತವ್ಯ ಕಠಿನವಾದರೂ ಅದನ್ನು ನೆರವೇರಿಸುವಲ್ಲಿ ಎಂದೂ ಹಿಂಜರಿಯಲಾಗದು ಎಂದು ನನಗೆ ಹೇಳುತ್ತಿದ್ದರು.

ಇಂದು ಜಗತ್ತಿನ ಎಲ್ಲೆಡೆಯ ಜನಗಳಿಗೆ ಒಂದು ಯಾತ್ರಾಸ್ಥಳವಾಗಿರುವ ಸೇವಾಗ್ರಾಮ ಆಶ್ರಮವು ಆ ಸಮಯದಲ್ಲಿ ಚಟುವಟಿಕೆಗಳ ಕೇಂದ್ರವಾಗಿತ್ತು. ಗಾಂಧೀಜಿಯನ್ನು ಭೆಟ್ಟಿಯಾಗಿ ವಿಚಾರವಿನಿಮಯ ಮಾಡಿ ಸಲಹೆ ಪಡೆಯಲು ಜನರ ಸಾಲು ಅವ್ಯಾಹತವಾಗಿ ಬರುತ್ತಿತ್ತು. ಅಲ್ಲಿ ತುಂಬ ರಾಜಕೀಯ ಚರ್ಚೆ ನಡೆಯುತ್ತಿತ್ತು. ಜಗತ್ತಿನ ಎಲ್ಲೆಡೆಗಳ ಸುದ್ದಿಗಾರರು ಗಾಂಧೀಜಿಯ ಬಾಯಿಂದ ಹೊರಡುವ ಪ್ರತಿಯೊಂದು ಶಬ್ದವನ್ನು ಕೇಳಿಕೊಳ್ಳಲು ಮುಕುರಿರುತ್ತಿದ್ದರು. ಆಗ ನಾವು ಅಲ್ಲಿ ಪ್ರತಿನಿತ್ಯವೆಂಬಂತೆ ನೋಡುತ್ತಿದ್ದ ಸ್ತ್ರೀಪುರುಷರಲ್ಲ-

"ಭವನ್ಸ್ ಜರ್ನಲ್" ನಿಂದ

ನೇಕರು ಇಂದು ರಾಷ್ಟ್ರದ ಧುರೀಣರಾಗಿದ್ದಾರೆ. ಕೆಲವರು ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದಿದ್ದಾರೆ. ಹಾಗಿದ್ದರೂ ಅವರೆಲ್ಲರಿಗೂ – ತೀರ ಕೆಳಗಿನವನನ್ನು ಹಿಡಿದು ಮೇಲಿನವನ ವರೆಗೆ– ಎಲ್ಲರಿಗೂ ಗಾಂಧೀಜಿಯ ಸಹವಾಸವೆಂದರೆ ಮನಶ್ಶಾಂತಿ, ಶಿಕ್ಷಣ ಮತ್ತು ಜ್ಞಾನಸಂಪಾದನೆಯ ಒಂದು ಅಪೂರ್ವ ಸಾಧನವಾಗಿತ್ತು ಎಂದೇ ನಾನು ನಂಬಿದ್ದೇನೆ.

ಗಾಂಧೀಜಿ ಆತ್ಮಸಂಯಮದ ಕಠಿನ ವ್ರತದಲ್ಲಿ ನಂಬಿಗೆಯುಳ್ಳವರಾಗಿದ್ದರು. ಸತ್ಯ ಮತ್ತು ಅಹಿಂಸೆಗಳ ವಿಚಾರದ ಸಂಬಂಧದಲ್ಲಿಯಂತೂ ಕೇಳುವುದೇ ಬೇಡ. ವಿಚಾರ ಮತ್ತು ಕೃತಿಗಳಲ್ಲಿ ಸತ್ಯದ ಮಹತ್ವವನ್ನು ಕುರಿತು ಅವರು ಆಶ್ರಮವಾಸಿಗಳಿಗೆ ಸದಾ ಬಿಂಬಿಸಿ ಹೇಳುತ್ತಿದ್ದರು. ಗಾಂಧೀಜಿಯವರ ಕೋಣೆಯಲ್ಲಿ ಒಂದು ಹಲಗೆ ಇನ್ನೂ ತೂಗಾಡುತ್ತಲಿದೆ. ಅದರ ಮೇಲೆ ಹೀಗೆಂದು ಬರೆದಿದೆ: "ಸುಳ್ಳಿನ ಸಾರ ಇರುವುದು ಶಬ್ದಗಳಲ್ಲಲ್ಲ— ಆದರೆ ಮೋಸದಲ್ಲಿ. ಮೌನದಿಂದ, ಸಂಜ್ಞೆಯಿಂದ, ವಾಕ್ಯಕ್ಕೆ ಒಂದು ವಿಶಿಷ್ಟ ಅರ್ಥವನ್ನು ಕಣ್ಸನ್ನೆಯಿಂದ ಸೂಚಿಸುವುದರಿಂದ ಸುಳ್ಳನ್ನು ಹೇಳಬಹುದು. ಸ್ಪಷ್ಟ ಶಬ್ದಗಳಲ್ಲಿ ನುಡಿಯುವ ಅಸತ್ಯಕ್ಕಿಂತ ಈ ಬಗೆಯ ಸುಳ್ಳುಗಳು ನೂರು ಪಾಲು ಹೀನವಾದವುಗಳು– ರಸ್ಕಿನ್."

ಒಂದು ಸಣ್ಣ ಘಟನೆ ನನಗೆ ನೆನಪಿದೆ. ಬಾಲಿಕೆಯೊಬ್ಬಳು ಊಟಕ್ಕೆ ಬಂದಿರಲಿಲ್ಲ. ತಮ್ಮ ಹಲವಾರು ಕಾರ್ಯಗಳಲ್ಲೂ ಗಾಂಧೀಜಿ ಆಶ್ರಮವಾಸಿಗಳಲ್ಲಿ ಪ್ರತಿಯೊಬ್ಬರ ಹಿತದತ್ತ ತುಂಬ ಗಮನವಿಟ್ಟಿರುತ್ತಿದ್ದರು. ಆ ಹುಡುಗಿ ಬಂದಿಲ್ಲವೆಂಬುದು ಅವರಿಗೆ ತತ್‌ಕ್ಷಣ ಗೊತ್ತಾಯಿತು. ಹಿಂದಿನಿಂದ ಅವರು ಆ ಬಗ್ಗೆ ಕೇಳಿದರು. ಅವಳು ಇನ್ನೊಬ್ಬ ಆಶ್ರಮವಾಸಿಯಲ್ಲಿ ಊಟಕ್ಕೆ ಹೋಗಿದ್ದಳು. ಆದರೆ ಅವಳು ತಾನು ಮೊದಲೇ ಸಾಮೂಹಿಕ ಭೋಜನ ಶಾಲೆಯಲ್ಲಿ ಊಟ ಮಾಡಿದ್ದೆ ಎಂದು ಸುಳ್ಳು ಹೇಳಿದಳು. ತನ್ನ ಅಂಜಿಕೆಯಿಂದ ತನ್ನ ನಿಕಟವರ್ತಿಯಾಗಿದ್ದೂ ಇವಳು ಸುಳ್ಳು ಹೇಳಿದಳಲ್ಲ ಎಂಬ ಮಾತು ಗಾಂಧೀಜಿಗೆ ತುಂಬ ವ್ಯಥೆಯನ್ನುಂಟುಮಾಡಿತು. ಆ ಹುಡುಗಿಯನ್ನು ಗದರಿಸುವ ಬದಲು, ಅವಳಿಗೆ ಉಪದೇಶ ಮಾಡುವ ಬದಲು ಆತ್ಮಶುದ್ಧಿಗಾಗಿ ಅವರು ಸ್ವತಃ ಮೂರು ದಿನಗಳ ಉಪವಾಸವನ್ನು ಕೈಕೊಂಡರು.

ತಮ್ಮ ಗುಡಿಸಲಿನ ಕಿಟಕಿಯ ಬಳಿ ಕುಳಿತು ಗಾಂಧೀಜಿ ಹಗಲು ರಾತ್ರಿ ಬೇಸರವಿಲ್ಲದೆ ದುಡಿಯುತ್ತಿದ್ದರು. ಯಾವುದೂ ಅವರ ಸ್ಥೈರ್ಯವನ್ನು ಕುಂದಿಸುತ್ತಿರಲಿಲ್ಲ. ಅವರ ಮನಸ್ಸು ಸದಾ ಪ್ರಸನ್ನವಾಗಿರುತಿತ್ತು. ದೇಶದ ಮೂಲೆ ಮೂಲೆಗಳ ಮತ್ತು ದೂರ ದೇಶದ ಜನರು ಅವರನ್ನು ಸುತ್ತುಗಟ್ಟಿರುತ್ತಿದ್ದರು. ಅನವಶ್ಯಕ ಭೆಟ್ಟಿಗಳಿಂದ ಅವರನ್ನು ದೂರವಿರಿಸಲು ಅವರ ಸುತ್ತಲಿನವರು ತುಂಬ ಪ್ರಯತ್ನಿಸುತ್ತಿದ್ದರು. ಬಹುಶಃ ರಾಜಕುಮಾರಿ ಅಮೃತಕೌರರೇ ಇರಬೇಕು, ಗೋಡೆಯ ಮೇಲೊಂದು ಚೀಟಿ ಅಂಟಿಸಿದ್ದರು: "ಬೇಗ ಮುಗಿಸಿ, ಸಂಕ್ಷಿಪ್ತದಲ್ಲಿ ಮುಗಿಸಿ, ಹೋಗಿಬಿಡಿ."

ವೈಸ್‌ರಾಯರ ಸ್ಪೆಶಲ್ ಟ್ರೇನನ್ನು ಉರುಳಿಸುವ ಒಳಸಂಚನ್ನು ನಡೆಸುತ್ತಿದ್ದನೆಂಬ ಸಂಶಯವಿದ್ದ ಒಬ್ಬ ಕ್ರಾಂತಿಕಾರನು ಆಶ್ರಮಕ್ಕೆ ಬಂದಿದ್ದಾನೆಯೆ ಎಂದು ತಿಳಿದುಕೊಳ್ಳಬೇಕು ಎಂದು ನನಗೆ ಒಂದು ದಿನ ಅವಸರದ ಆಜ್ಞೆ ಬಂತು. ನಾನು ಆಶ್ರಮಕ್ಕೆ ಹೋಗಿ ಕೂಲಂಕಷವಾಗಿ ವಿಚಾರಣೆ ನಡೆಸಿದರೂ ಏನೂ ಗೊತ್ತಾಗಲಿಲ್ಲ. ವಿಷಯ ತುಂಬ ಮಹತ್ವದ್ದಿತ್ತು. ಅದರ ಪರಿಣಾಮವಾಗಿ ದುರಂತ ಸಂಭವಿಸಬಹುದಿತ್ತು. ಇಂಥ ವಿನಂತಿಯನ್ನು ಮಾಡಿಕೊಂಡು ನಾನು ಗಾಂಧೀಜಿಯವರ ದೃಷ್ಟಿಯಲ್ಲಿ ಹೀನನಾಗುವೆನಲ್ಲ ಎಂಬ ಅಂಜಿಕೆಯಿದ್ದರೂ ನಾನು ಅವರ ಬಳಿಗೆ ಹೋಗಿ ನಾನು ಬಂದ ಉದ್ದೇಶವನು ತಿಳಿಸಿದೆ. ಆ ಕ್ರಾಂತಿಕಾರ ತಮ್ಮನ್ನು ಕೆಲವೇ ಕ್ಷಣಗಳ ಹಿಂದೆ ಭೆಟ್ಟಿಯಾಗಿದ್ದನೆಂದೂ ಆತ

ತನ್ನ ಹೆಂಡತಿ ಮತ್ತು ಮಗುವಿನೊಡನೆ ಗ್ರ್ಯಾಂಡ್ ಟ್ರಂಕ್ ಎಕ್ಸ್‌ಪ್ರೆಸ್ ಗಾಡಿಯನ್ನು ಹಿಡಿಯಲೆಂದು ಆಶ್ರಮದಿಂದ ಹೋದನೆಂದೂ ಅವರು ಹೇಳಿದಾಗ ನನಗೆ ಆಶ್ಚರ್ಯವಾಗಿಹೋಯಿತು. ರೇಲ್ವೆ ಅಧಿಕಾರಿಗಳಿಗೆ ಈ ಸಮಾಚಾರವನ್ನು ತಿಳಿಸಲು ಆಶ್ರಮದ ಟೆಲಿಫೋನನ್ನು ಉಪಯೋಗಿಸಲು ಕೂಡ ಅವರು ನನಗೆ ಅನುಮತಿಯಿತ್ತರು.

ಗಾಂಧೀಜಿಯವರು ವೈಯಕ್ತಿಕ ಸತ್ಯಾಗ್ರಹ ಚಳವಳಿಯನ್ನು ಆರಂಭಿಸಿದಾಗ ಮೊಟ್ಟಮೊದಲನೆಯ ಸತ್ಯಾಗ್ರಹಿಯೆಂದು ಅವರು ವಿನೋಬಾ ಭಾವೆಯವರನ್ನು ಆರಿಸಿದರು. ಸಂರಕ್ಷಣ ಕಾಯದೆಯನ್ವಯ ವಿನೋಬಾರನ್ನು ನಾನೇ ಬಂಧಿಸಿದೆ. ಖಟ್ಲೆಯಲ್ಲಿ ನಾನೊಬ್ಬನೇ ಸರಕಾರೀ ಸಾಕ್ಷಿದಾರನಾಗಿದ್ದೆ. ಆಮೇಲೆ ಇನ್ನೂ ಅನೇಕರು ಸತ್ಯಾಗ್ರಹಮಾಡಿದರು. ಅವರಲ್ಲೊಬ್ಬ—ಒಬ್ಬ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರ ಮಗ— ತನ್ನನ್ನು ಸೇವಾಗ್ರಾಮದಲ್ಲಿ ಗಾಂಧೀಜಿಯವರ ಸಮ್ಮುಖದಲ್ಲಿ ಬಂಧಿಸಬೇಕೆಂದು ನನ್ನನ್ನು ಕೇಳಿಕೊಂಡ. ನಾನು ಅವನ ವಿನಂತಿಯನ್ನು ಮನ್ನಿಸಿದೆ. ಮರುದಿನ ನಸುಕಿನಲ್ಲಿಯೇ ನಾನು ಆಶ್ರಮಕ್ಕೆ ಹೋಗಿ ಆತನಿಗೆ "ನಿನ್ನನ್ನು ಬಂಧಿಸಿದ್ದೇನೆ" ಎಂದೆ. ಆಶ್ರಮದ ಹುಡುಗಿಯರು ಅವನಿಗೆ ಹೂವಿನ ಹಾರಗಳನ್ನು ಹಾಕಿ ಹಣೆಗೆ ಕುಂಕುಮ ತಿಲಕವನ್ನಿಟ್ಟರು. ಆ ಹುಡುಗನ ತಲೆಯ ಮೇಲೆ ಆಶೀರ್ವಾದ ಹಸ್ತವನ್ನಿಟ್ಟು ಗಾಂಧೀಜಿ ನನ್ನೊಡನೆ ಚೇಷ್ಟೆಯ ಸ್ವರದಲ್ಲಿ "ನೀವು ನನ್ನನ್ನು—ಈ ಎಲ್ಲ ಕಾರ್ಯಗಳಿಗೆ ಪ್ರೇರಕನಾದ ನನ್ನನ್ನು—ಯಾಕೆ ಬಂಧಿಸುವುದಿಲ್ಲ?" ಎಂದು ಕೇಳಿದರು. ಮೈಸ್‌ರಾಯರನ್ನು ದಿಗ್ಭ್ರಮೆಗೊಳಿಸುತ್ತಿದ್ದ ಈ ಪ್ರಶ್ನೆಗೆ ನನ್ನಂಥ ಯಃಕಶ್ಚಿತ್ ಪೋಲೀಸ್ ಅಧಿಕಾರಿ ಏನೆಂದು ಉತ್ತರ ಹೇಳಬಹುದು? ಸತ್ಯಾಗ್ರಹಿ ಮಾಡುತ್ತಿದ್ದುದು ಯೋಗ್ಯ, ನಾನು ಮಾಡುತ್ತಿದ್ದುದು ತಪ್ಪು ಎಂದು ನನಗೆ ಖಂಡಿತವಾಗಿ ಅನಿಸುತ್ತಿದ್ದಾಗ ನಾನೇನು ಉತ್ತರವನ್ನು ಹೇಳಬಹುದಾಗಿತ್ತು?

ಸೇವಾಗ್ರಾಮದ ಜೀವನದಲ್ಲಿ ತಪ್ಪದೇ ಸಮಯಕ್ಕೆ ಸರಿಯಾಗಿ ನಡೆಯುತ್ತಿದ್ದ ಕಾರ್ಯವೆಂದರೆ ಸಂಜೆಯ ಪ್ರಾರ್ಥನೆ ಸಾಧ್ಯವಾದಷ್ಟು ಸಲ ನಾನದಕ್ಕೆ ಹಾಜರಿರುತ್ತಿದ್ದೆ. ನೊಬೊರು ತೆಂಝಾಕಿ ಎಂಬ ಜಪಾನಿ ಸಾಧುವು "ಓಂ ನಮೋ ಭಯಂ ಹೊ ರಂಗೆ ಕ್ಯೋ" ಎಂಬ ಮಂತ್ರದಿಂದ ಪ್ರಾರ್ಥನೆಯನ್ನಾರಂಭಿಸುತ್ತಿದ್ದರು. (ದೇವರೆ, ನಿನಗೆ ಪ್ರಣಾಮಗಳು ಎಂದು ಈ ಮಂತ್ರದ ಅರ್ಥವಾಗುತ್ತದೆ.) ಗಾಂಧೀಜಿ ನೆಲದಿಂದ ತುಸುವೇ ಎತ್ತರವಾಗಿದ್ದ ಒಂದು ಕಟ್ಟಿಗೆಯ ವೇದಿಕೆಯ ಮೇಲೆ ಕುಳಿತಿರುತ್ತಿದ್ದರು. ಕುಳಿತೊಡನೆಯೆ ಅವರು ಗಟ್ಟಿಯಾಗಿ "ರಾಂಪತ್" ಎಂದು ಕೂಗುತ್ತಿದ್ದರು. ರಾಂಪತ್ ತಟ್ಟನೆದ್ದು ಪ್ರಾರ್ಥನೆಯ ಪ್ರಾರಂಭವನ್ನು ಸೂಚಿಸುವ ಗಂಟೆಯನ್ನು ಬಾರಿಸುತ್ತಿದ್ದ.

ಆಶ್ರಮವಾಸಿಗಳಲ್ಲಿ ರಾಂಪತ್ ತುಂಬ ಕುತೂಹಲಕಾರಿ ಮನುಷ್ಯನಾಗಿದ್ದ. ಗುಪ್ತಚಾರ ಕಾರ್ಯಕ್ಕಾಗಿ ನೇಮಿಸಲ್ಪಟ್ಟ ಒಬ್ಬ ಪೋಲೀಸನಾತ. ಆದರೆ ಆತ ಗಾಂಧೀಜಿಯ ಪ್ರಭಾವದಲ್ಲಿ ಸಂಪೂರ್ಣವಾಗಿ ಸಿಕ್ಕಿಬಿದ್ದಿದ್ದ. ಗಾಂಧೀಜಿಯವರ ಕೊಲೆಯ ಒಳಸಂಚಿನ ಸುದ್ದಿ ಬಂದಾಗ ಅವರನ್ನು ರಕ್ಷಿಸುವ ಹೊಣೆ ರಾಂಪತನ ಮೇಲೆ ಹೊರಿಸಲ್ಪಟ್ಟಿತು. ತಮಗೆ ಪೋಲೀಸ್ ಸಹಾಯ ಅಗತ್ಯವಿಲ್ಲ ಎಂದು ಗಾಂಧೀಜಿ ಪ್ರತಿಭಟಿಸಿದರೂ ಸರಕಾರದ ಕರ್ತವ್ಯನಿರ್ವಹಣೆಯಲ್ಲಿ ತಾವು ಅಡ್ಡ ಬರುವುದಿಲ್ಲವೆಂದು ಹೇಳಿದರು. ಬಹು ಬೇಗನೆ ರಾಂಪತ್ ಆಶ್ರಮದ ಜೀವನದಲ್ಲಿ ಲೀನನಾಗಿ ಹೋದ. ಗಾಂಧೀಜಿಯವರ ಗುಡಿಸಲಿನ ಹೊರಗೆ ಆತ ತಾಸುಗಟ್ಟಲೆ ನೂಲುತ್ತ ಕುಳಿತಿರುತ್ತಿದ್ದ. ಅವರ ಬಟ್ಟೆಗಳನ್ನು ಒಗೆದು ಹಾಕುತ್ತಿದ್ದ. ಅವರ ಆಡಿನ ಹಾಲನ್ನೂ ಹಿಂಡಿ ಕೊಡುತ್ತಿದ್ದ.

ಗಾಂಧೀಜಿ ಈ ಸಮಸ್ಯೆಯನ್ನು ಬಿಡಿಸಿದ್ದ ಬಗೆಯನ್ನು ಕಂಡು ಆನಂದಿತರಾದ ಅಮೇರಿಕನ್

ಅತಿಥಿಗಳು ರಾಂಪತನ ಫೋಟೋಗಳನ್ನು ತೆಗೆದು ಅದಕ್ಕೆ "ಗಾಂಧೀಜಿಯ ಸೇವೆ ಮಾಡುವ ಗುಪ್ತ ಪೋಲೀಸ್" ಎಂದು ಹೆಸರು ಕೊಟ್ಟರು.

"ಇಲ್ಲಿ ನಮ್ಮ ನಡುವೆ ಒಬ್ಬ ಪೋಲೀಸನಿಗೆ ಇರಲು ಅವಕಾಶ ಕೊಡುವುದು ಸರಿಯಲ್ಲ. ನಮ್ಮ ಎಲ್ಲ ಗೌಪ್ಯವನ್ನೂ ಆತ ಸರಕಾರಕ್ಕೆ ತಿಳಿಸುತ್ತಾನೆ" ಎಂದು ಆಶ್ರಮವಾಸಿಗಳು ಆಗಾಗ ಗಾಂಧೀಜಿಯವರ ಎದುರು ತಕರಾರು ಮಾಡುತ್ತಿದ್ದರು. "ನನ್ನ ಬಳಿ ಅಡಗಿಸಿಕೊಳ್ಳ ಬೇಕಾದ್ದೇನೂ ಇಲ್ಲ. ಈ ಮನುಷ್ಯ ಬಹಳ ಒಳ್ಳೆಯವ" ಎಂದು ಗಾಂಧೀಜಿ ಅವರಿಗೆ ಉತ್ತರ ಹೇಳುತ್ತಿದ್ದರು. ರಾಂಪತನ ಬಗ್ಗೆ ಗಾಂಧೀಜಿಯವರ ಬಳಿ ಇದ್ದ ಒಂದೇ ಒಂದು ಆಕ್ಷೇಪವೆಂದರೆ ಆತನಿಗೆ ರಾಜಕೀಯ ಬೇಗನೆ ಅರ್ಥವಾಗುತ್ತಿರಲಿಲ್ಲವೆಂಬುದೇ ಆಗಿತ್ತು. ಅವನಿಗೆ ವಿವರಿಸಿ ಹೇಳುವುದೂ ಬಲು ಕಷ್ಟದ್ದಾಗಿತ್ತು. ಗಾಂಧೀಜಿ ಹೋದಲ್ಲೆಲ್ಲ ರಾಂಪತ್ ಬೆನ್ನ ಹಿಂದೆ ಇದ್ದೇ ಇರುತ್ತಿದ್ದ. ೧೯೪೨, ಅಗಸ್ಟ ೮ ರಂದು ಗಾಂಧೀಜಿಯವರ ಬಂಧನವಾದಾಗ ಸರಕಾರ ಗಾಂಧೀಜಿಗೆ ಮಾಡಿದ ಅನ್ಯಾಯದಿಂದ ಖತಿಗೊಂಡ ರಾಂಪತ್ ತನ್ನ ನೌಕರಿಗೆ ರಾಜೀನಾಮೆ ಕೊಟ್ಟುಬಿಟ್ಟ. ಮುಂದೆ ಅವನನ್ನು ಸರಕಾರ ಬಂಧಿಸಿ ಒಂಬತ್ತು ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿತು. ಭಾರತಕ್ಕೆ ಸ್ವಾತಂತ್ರ್ಯ ಬಂದನಂತರ ರಾಂಪತನಿಗೆ ಮತ್ತೆ ಮೊದಲಿನ ನೌಕರಿ ಸಿಕ್ಕಿತು. *

ಜಾರ್ಜಿಯ (ಅಮೇರಿಕ)ದ ಡಿಕೇಟರ್ ಎಂಬ ಊರಲ್ಲಿ ಒಬ್ಬ ತರುಣನು ನ್ಯಾಯಾಲಯದ ಮುಂದೆ ಒಂದು ಮೊಕದ್ದಮೆ ತಂದ. ಆತ ಭಾರಿ ಸಿಗಾರ್ ಭಕ್ತನಾಗಿದ್ದ. ಆದ್ದರಿಂದ ಆತ ಬೆಲೆಬಾಳುವ ಸಿಗಾರುಗಳನ್ನು ಸಂಗ್ರಹಿಸುವ ಪರಿಪಾಠ ಇಟ್ಟುಕೊಂಡಿದ್ದ. ಇಂಥ ೨೦೦೦ ಸಿಗಾರುಗಳ ಮೇಲೆ ಆತ ಅಗ್ನಿ ವಿಮಾ ಇಳಿಸಿದ್ದ.

"ವಿಮಾ ಪಾಲಿಸಿಯಲ್ಲಿ ನನ್ನ ಈ ಸೊತ್ತು ಸುಟ್ಟುಹೋದಲ್ಲಿ ವಿಮಾ ಹಣ ಕೊಡಲಾಗುವುದು ಎಂದು ಕಂಪೆನಿ ಒಪ್ಪಿದೆ. ಈಗ ಅದನ್ನೆಲ್ಲ ನಾನು ಸೇದಿ ಮುಗಿಸಿದ್ದೇನೆ. ಅಂದರೆ ಅದು ಸಂಪೂರ್ಣ ಬೆಂಕಿಯಿಂದ ಸುಟ್ಟುಹೋಗಿದೆ. ಆದ್ದರಿಂದ ಕರಾರು ಪ್ರಕಾರ ಕಂಪೆನಿಯಿಂದ ನನಗೆ ವಿಮಾ ಹಣ ಕೊಡಿಸಬೇಕು," ಎಂದಾತ ವಾದಿಸಿದ.

ಪಾಲಿಸಿಯ ಕರಾರುಗಳನ್ನು ನೋಡಿದ ಮೇಲೆ ನ್ಯಾಯಾಧೀಶರು ವಿಧಿಯಿಲ್ಲದೆ ಕಂಪೆನಿ ಹಣ ಕೊಡಬೇಕೆಂದು ಆಜ್ಞೆ ಹೊರಡಿಸಿದರು.

ತರುಣ ತನ್ನ ಬುದ್ಧಿವಂತಿಕೆಗಾಗಿ ಹಿಗ್ಗುತ್ತಿದ್ದಾಗ್ಗೆ ಅವನಿಗೆ ನ್ಯಾಯಸ್ಥಾನದಿಂದ ನೋಟೀಸು ಬಂತು. ಕಂಪೆನಿಯು ಅವನ ಮೇಲೆ ಕ್ರಿಮಿನಲ್ ಮೊಕದ್ದಮೆ ತಂದಿತ್ತು. "ಈತ ತನ್ನ ಸೊತ್ತನ್ನು ಬೇಕೆಂದೇ ಸುಟ್ಟುಹಾಕಿದ್ದಾನೆ. ಸ್ವಂತ ಸೊತ್ತನ್ನಾದರೂ ಬೆಂಕಿಹಚ್ಚಿ ಧ್ವಂಸ ಮಾಡುವುದು ಕಾಯದೆಗೆ ವಿರುದ್ಧ," ಎಂದು ಕಂಪನಿ ವಾದಿಸಿತ್ತು!

ನ್ಯಾಯಾಧೀಶರು ಈ ವಾದವನ್ನೂ ಒಪ್ಪಿ ಅವನಿಗೆ ದಂಡ ಮತ್ತು ಮೂರು ತಿಂಗಳು ಶಿಕ್ಷೆ ವಿಧಿಸಿದರು.

— ಕೊರೊನೆಟ್

ಕಟ್ಟಿಗೆಯನ್ನು ವಿಜ್ಞಾನಿಗಳು ನೆನಸಲಾರದಷ್ಟು ತರಗಳಲ್ಲಿ ಉಪಯೋಗಕ್ಕೆ ತರುತ್ತಿದ್ದಾರೆ

ಕಟ್ಟಿಗೆಯಿಂದ ಆಹಾರ!

ಜಯಪ್ರಕಾಶ ಪಂಡಿತ

ಒಲೆಯುರಿಸುವುದಕ್ಕೂ ಮನೆ ಕಟ್ಟುವುದಕ್ಕೂ ಮಾತ್ರ ಕಟ್ಟಿಗೆಯನ್ನುಪಯೋಗಿಸುವ ಹಂತದಲ್ಲಿರುವ ನಮಗೆ ಕಟ್ಟಿಗೆಯಿಂದ ಅನ್ನ ಬಟ್ಟೆಗಳಿಂದಾರಂಭಿಸಿ ಔಷಧಿ ದ್ರವ್ಯಗಳವರೆಗೆ ಅಸಂಖ್ಯ ನೂತನ ಪದಾರ್ಥಗಳನ್ನು ವಿಜ್ಞಾನಿಗಳು ನಿರ್ಮಿಸುತ್ತಿದ್ದಾರೆಂದು ಕೇಳಿ ಆಶ್ಚರ್ಯವಾದೀತು. ಕಟ್ಟಿಗೆಯ ಈ "ಕಾಮರೂಪ" ಹೆಚ್ಚು ಪ್ರಕಾಶಕ್ಕೆ ಬಂದದ್ದು ಎರಡನೇ ಮಹಾಯುದ್ಧ ಕಾಲದಲ್ಲಿ. ಆಗಲೇ ಆಹಾರ ಕೊರತೆಯನ್ನು ನೀಗಿಸಲು ಸ್ವೀಡನ್ನಿನ ವಿಜ್ಞಾನಿಗಳು ಕಟ್ಟಿಗೆಯಿಂದ ಖಾದ್ಯಗಳನ್ನು ತಯಾರಿಸಿ ಪಶುಗಳಿಗೆ ತಿನ್ನಿಸುವ ದೊಡ್ಡ ಪ್ರಮಾಣದ ಪ್ರಯೋಗಗಳನ್ನು ಯಶಸ್ವಿಯಾಗಿ ಮಾಡಿದರು.

ಶಸ್ತ್ರಕ್ರಿಯೆ ಮಾಡುವಾಗ ಸ್ಮೃತಿ ತಪ್ಪಿಸಲು ಉಪಯೋಗಿಸುವ ಕ್ಲೋರೋಫಾರ್ಮನ್ನೂ ಇಂದು ಮನೆಮನೆಯಲ್ಲೂ ನಂಜಿನ ಬಾಧೆಯನ್ನು ತಡೆಗಟ್ಟಲು ಉಪಯೋಗಿಸುವ ಸಲ್ಫಾನಮೆಡನ್ನೂ ಕಟ್ಟಿಗೆಯಿಂದಲೇ ತೆಗೆಯುತ್ತಾರೆ. ಎರಡನೇ ಯುದ್ಧಕಾಲದಲ್ಲಿ ನಾರ್ವೆ ಸ್ವೀಡನ್‌ಗಳು ಕಟ್ಟಿಗೆಯಿಂದ ಉತ್ತಮ ಮದ್ಯಾರ್ಕ (ಆಲ್ಕೊಹಾಲ್) ತಯಾರಿಸಿ ಅದಕ್ಕೆ ಸ್ವಲ್ಪ ಪೆಟ್ರೋಲ್ ಬೆರಸಿ ಮೋಟಾರ್, ವಿಮಾನಗಳಿಗೆ ಉಪಯುಕ್ತವಾದ ಎಣ್ಣೆಯನ್ನು ನಿರ್ಮಿಸಿಕೊಂಡವು. ಸೈನಿಕರಿಗೆ ಬೇಕಾದ ಬಟ್ಟೆಗಳನ್ನೂ ಕಟ್ಟಿಗೆಯಿಂದ ತಯಾರಿಸಲಾಯಿತಲ್ಲದೆ ಕಟ್ಟಿಗೆಯಿಂದ ತೆಗೆದ ಒಂದು ಉತ್ತೇಜಕ ಪೇಯವನ್ನು ಅವರಿಗೆ ಕುಡಿಯಲು ಒದಗಿಸುತ್ತಿದ್ದರು.

ಮೊದಲನೇ ಮಹಾಯುದ್ಧದ ನಂತರ ವಿಮಾನಗಳ ನಿರ್ಮಾಣದಲ್ಲಿ ಅಲ್ಯುಮಿನಿಯಂಗೆ ಮುಖ್ಯಸ್ಥಾನ ದೊರಕಿದರೂ ಅದಕ್ಕೂ ಮೊದಲಿನ ವಿಮಾನಗಳು ಕಟ್ಟಿಗೆಯಿಂದಲೇ ಸಿದ್ಧವಾಗುತ್ತಿದ್ದವು. ಇಂದಿಗೂ ಕೆಲ ಉತ್ತಮ ವಿಮಾನಗಳಿಗೆ ಕಟ್ಟಿಗೆಯನ್ನೆ ಬಳಸಲಾಗುತ್ತಿದೆ ಇಜಿಪ್ತ ನಿವಾಸಿಗಳು ಶತಕಾನುಶತಕಗಳಿಂದ ದೇವದಾರು ಕಟ್ಟಿಗೆಗೆ ಮಹತ್ವ ನೀಡಿದ್ದರು. ಆದರೆ ಯುದ್ಧಕಾಲದಲ್ಲೇ ಅದರ ಬಹುಮುಖ ಉಪಯೋಗ ಜನರಿಗೆ ಅರಿವಾದದ್ದು. "ಪ್ಲಾಸ್ಟಿಕ್ ರೇಜಿನ್"ನ್ನು ನಿರೋಧಕವಾಗಿ (ಇನ್‌ಸುಲೇಶನ್) ಉಪಯೋಗಿಸಿದ ಪಕ್ಷದಲ್ಲಿ ಕಟ್ಟಿಗೆಯ ಮೇಲೆ ಶೀತೋಷ್ಣಗಳ ಪರಿಣಾಮವಾಗುವುದಿಲ್ಲ. ಕಟ್ಟಿಗೆಯ ಅತೀವ ತೆಳ್ಳಗಿರುವ ಪದರುಗಳು ಅಲ್ಯುಮಿನಿಯಂಗಿಂತ ಬಲಶಾಲಿಯಾಗಿರುತ್ತವೆ. ಇಂಥ ಪದರುಗಳನ್ನು ಒಂದರ ಮೇಲೊಂದು ಜೋಡಿಸಿವಾಗ ಅದೆಷ್ಟು ದೃಢವಾಗುವುದೆಂದರೆ ಆ ಹಲಗೆಗೆ ಗುಂಡು ನಾಟುವುದಿಲ್ಲ. ಧಾತು ನಿರ್ಮಿತ ಹಡಗು-ವಿಮಾನಗಳಿಗಿಂತ ಹೀಗೆ ಕಾಷ್ಠ ನಿರ್ಮಿತವಾದವುಗಳೇ ಹೆಚ್ಚು ತಾಳುತ್ತವೆ.

ಕಟ್ಟಿಗೆಯಿಂದ ರೇಶ್ಮೆ ತೆಗೆಯುವುದು ಈಗ ಅನೇಕ ದಶಕಗಳಿಂದ ನಡೆಯುತ್ತಿದ್ದರೂ ಕಳೆದ ಮಹಾಯುದ್ಧಾನಂತರ ಈ ಕೃತಕ ರೇಶ್ಮೆಯ

ಬೇಡಿಕೆ ೩೦ ಪಟ್ಟು ಏರಿ ಇದು ಸೃಜ ರೇಶ್ಮೆಯನ್ನು ಮೂಲೆಪಾಲು ಮಾಡುವಷ್ಟು ಜನಪ್ರಿಯತೆ ಪಡದಿದೆ.

ಕಟ್ಟಿಗೆಯಿಂದ ತಯಾರಿಸಲಾಗದ ವಸ್ತುಗಳೇ ಇಲ್ಲವೆಂದು ವಿಜ್ಞಾನಿಗಳೀಗ ಹೇಳುತ್ತಾರೆ. ಕಟ್ಟಿಗೆಯ ಪ್ರತಿಯೊಂದು ಕಣವೂ ಉಪಯೋಗಾರ್ಹವಾಗಿದೆ. ಚಿಕ್ಕ ಚಿಕ್ಕ ತುಣುಕುಗಳನ್ನು ಜೋಡಿಸಿ ಬಲಯುತವಾದ ಮೆಸೊನೈಡ್ ಮತ್ತು ಪ್ಲೈವುಡ್‌ಗಳನ್ನು ತಯಾರಿಸುತ್ತಾರೆ. ಇದರಿಂದ ಟೆಲಿಫೋನ್ ರಿಸೀವರು, ರೇಡಿಯೋ ಕ್ಯಾಬಿನೆಟ್ ಇತ್ಯಾದಿಗಳನ್ನು ಮಾಡುತ್ತಾರೆ. ಇವುಗಳನ್ನು ಬೇಕಾದ ಆಕೃತಿಯಲ್ಲಿ ತಯಾರಿಸಬಹುದು. ಕೆನಡಾದಲ್ಲಿ ಈ ಕೃತಕಕಾಷ್ಠದಿಂದ ನಲ್ಲಿಗಳನ್ನು ಕೂಡ ನಿರ್ಮಿಸುತ್ತಾರೆ ಕಟ್ಟಿಗೆಯಿಂದ ಎಸೆಟೋನ್, ಮೆಥಿಲ್ ಆಲ್ಕೊಹಾಲ್, ಪೈನ್ ಎಣ್ಣೆ, ಕ್ರಿಯೊಸೋಟ್ ಇತ್ಯಾದಿ ರಾಸಾಯನಿಕಗಳನ್ನು ತೆಗೆಯುತ್ತಾರೆ.

ಕೆಲವು ರಸಾಯನಶಾಸ್ತ್ರಜ್ಞರ ಅಭಿಮತದಂತೆ ಕಟ್ಟಿಗೆಯು ಔದ್ಯಮಿಕ (ಕೈಗಾರಿಕೆ) ಕ್ಷೇತ್ರದಲ್ಲಿಯೂ ಕ್ರಾಂತಿಯನ್ನೆಸಗಬಹುದು. ಕಟ್ಟಿಗೆಯಲ್ಲಿರುವ 'ಲಿಗ್ನಿನ್' ಎಂಬ ಪದಾರ್ಥವು ಸಿಮೆಂಟಿನಂತೆ ಕೆಲಸ ಮಾಡುತ್ತದೆ ಕಾಗದದ ಕಾರಖಾನೆಗಳಲ್ಲಿ ಇದು ಬಹಳ ಪ್ರಮಾಣದಲ್ಲಿ ಸಂಗ್ರಹವಾಗುತ್ತಿದೆ ಇದರಿಂದ ಪ್ರಥಮ ದರ್ಜೆಯ ಗೊಬ್ಬರವು ತಯಾರಾಗುತ್ತದೆ. ಖೇದದ ಸಂಗತಿಯೆಂದರೆ ಈ ಉಪಯುಕ್ತತೆಯ ಅರಿವಿಲ್ಲದೇ ಅದನ್ನು ವ್ಯರ್ಥವಾಗಿ ನದಿಯಲ್ಲಿ ತೇಲಿಬಿಡುತ್ತಾರೆ. ಕಟ್ಟಿಗೆಯಿಂದ ತಯಾರಿಸುವ ರಾಸಾಯನಿಕ ಸಾಮಗ್ರಿಗಳಿಗಂತೂ ಎಣೆಯಿಲ್ಲ. ಕೆಲವು ಪ್ರಯೋಗಶಾಲೆಗಳು ಕಟ್ಟಿಗೆಯಿಂದ ಸೋಪನ್ನು ತಯಾರಿಸಿ ಹೊಸ ಯುಗವನ್ನೇ ಪ್ರಾರಂಭಿಸಿವೆ ಕೆಲವು ಕಡೆಗಳಲ್ಲಿ 'ಲಿಗ್ನಿನ್'ನ್ನು ಪೆಟ್ರೋಲಿನಂತೆಯೂ ಉಪಯೋಗಿಸುವರು. ಎಣ್ಣೆ, ಬಣ್ಣ, ಪ್ಲಾಸ್ಟಿಕ್, ರಬ್ಬರು ಇತ್ಯಾದಿಗಳೂ ಲಿಗ್ನಿನ್‌ದಿಂದ ಆದ ಉತ್ಪಾದನೆಗಳೇ. ಕೃತಕ ಚರ್ಮ, ಶಾಂಪೂಗಳ ತಯಾರಿಕೆಯಲ್ಲಿಯೂ ಕಟ್ಟಿಗೆಗೇ ಶರಣು ಹೋಗಬೇಕು ಇದರಿಂದ ತಯಾರಿಸಿದ ಕೃತಕ ಸಕ್ಕರೆಯಿಂದ ಲಿಮನ್ ಜ್ಯೂಸ್, ಟಾಫಿಗಳನ್ನು ತಯಾರಿಸುತ್ತಾರೆ. ಕಟ್ಟಿಗೆಯ ಜನಪ್ರಿಯತೆಯು ಅಧಿಕವಾದಂತೆಲ್ಲ ಈಗ "ಎಣ್ಣೆ"ಗಾಗಿ ದೇಶಗಳು ಕಾದಾಡುವಂತೆಯೇ ಅರಣ್ಯಕ್ಕಾಗಿಯೂ ಕಾದಾಡುವ ದಿನಗಳು ಬಂದಾವು.

ಇವೆಲ್ಲವುಗಳಿಗಿಂತ ಹೆಚ್ಚಿನದೆಂದರೆ ಕಟ್ಟಿಗೆಯು ನಮಗೆ ಆಹಾರವನ್ನು ನೀಡಲೂ ಶಕ್ತವಾಗಿದೆ. ಭಾರತದಂತೆ ವಿಶ್ವದ ಬಹುದೇಶಗಳು ಆಹಾರ ಸಮಸ್ಯೆಯನ್ನು ಎದುರಿಸುತ್ತಿವೆ. ಕಟ್ಟಿಗೆಯು ಈ ಆಹಾರ ಸಮಸ್ಯೆಯನ್ನು ಬಗೆಹರಿಸಲು ಶಕ್ತವಾದರೆ ಇದಕ್ಕಿಂತ ಹೆಚ್ಚಿನ ಆನಂದದ ಸಂಗತಿಯಾದರೂ ಯಾವುದಿದೆ?

೧೯೨೬ ರಲ್ಲಿ ಜರ್ಮನಿಯ ಹೆನ್ರಿ ಸ್ಕಾಲರನೆಂಬ ವಿಜ್ಞಾನಿಯು ಪ್ರಪ್ರಥಮವಾಗಿ ಕಟ್ಟಿಗೆಯಿಂದ ಸಕ್ಕರೆಯನ್ನು ನಿರ್ಮಿಸುವುದನ್ನು ಕಂಡು ಹಿಡಿದನು. ಕಟ್ಟಿಗೆಯಲ್ಲಿ "ಸೆಲ್ಯುಲೋಸ್" ಎಂಬ ಪದಾರ್ಥವಿದ್ದು ಕೆಲವು ಹುಳಗಳು ಇದನ್ನು ಬಹು ಪ್ರೀತಿಯಿಂದ ತಿನ್ನುತ್ತವೆ. ಇದನ್ನು ಗೆದ್ದಲುಹತ್ತಿದ ಕಟ್ಟಿಗೆಯಿಂದ ಕಂಡುಕೊಳ್ಳಬಹುದು. ಆದರೆ ಮನುಷ್ಯನು ಮಾತ್ರ ಇದನ್ನು ತಿಂದು ಪಚನಮಾಡಿಕೊಳ್ಳಲಾರನು. ಕಾರಣ ಇದನ್ನು ನಿರುಪಯೋಗಿಯಾಗಿ ತಿಳಿದು ಫ್ಯಾಕ್ಟರಿಗಳಿಗೆ ಕಳುಹಲಾಗಿ ಅಲ್ಲಿ ಇದರಿಂದ ಕಾಗದಗಳನ್ನು ತಯಾರಿಸುವರು. ಸೆಲ್ಯುಲೋಸ್ ಮತ್ತು ಸಕ್ಕರೆಗಳಲ್ಲಿ ಬಹು ಸಾಮ್ಯವಿದೆ. ಸ್ಕಾಲರನು ಸೆಲ್ಯುಲೋಸ್‌ಗೆ ಹೈಡ್ರೋಲಿಸಿಸ್ (ನೀರಿನ ವಿದ್ಯುತ್ ವಿಭಜನ) ಕ್ರಿಯೆಯ ಮೂಲಕ ಸಕ್ಕರೆಯ ರೂಪುಕೊಟ್ಟನು. ಸಕ್ಕರೆಯು ನಮ್ಮ ದೈನಿಕ ಜೀವನದ ಖಾದ್ಯಗಳಲ್ಲಿ ಪ್ರಮುಖವಾದ ಶಕ್ತಿಪ್ರದ ಕಾರ್ಬೊಹೈಡ್ರೇಟ್ ಪದಾರ್ಥವೆಂದು ಬೇರೆ ಹೇಳಬೇಕಾಗಿಲ್ಲ.

ಆದರೆ ಅಂದು ಜರ್ಮನಿಯಲ್ಲಿ ಆಹಾರ ಪದಾರ್ಥಗಳ ಕೊರತೆಯಿರಲಿಲ್ಲ. ಕಾರಣ ಈ

ವಿಧದಿಂದ ಆಹಾರವನ್ನು ನಿರ್ಮಿಸದೆ ಕೇವಲ ಆಲ್ಕೋಹಾಲನ್ನಷ್ಟೇ ತಯಾರಿಸತೊಡಗಿಸಿದರು. ಇದು ಉಳಿದವುಗಳಿಂದ ತಯಾರಿಸಿದುದಕ್ಕಿಂತ ಬಹುಕಡಿಮೆ ಬೆಲೆಯುಳ್ಳದ್ದೂ ಲಾಭಪ್ರದವೂ ಆಗಿದೆ. ಹೆನ್ರಿ ಸ್ಕಾಲರನಿಗೆ ಈ ಕಾರ್ಯದಲ್ಲಿ ಇರ್ವಿನ್ ಶೇಫರನೆಂಬ ಉದ್ಯೋಗಪತಿಯು ಆರ್ಥಿಕ ಸಹಯೋಗವಿತ್ತುದುದರಿಂದ ಒಂದು ದೊಡ್ಡ ಕಾರಖಾನೆಯೇ ನಿರ್ಮಿತವಾಯಿತು. ಆದರೆ ೧೯೩೩ ರಲ್ಲಿ ಜರ್ಮನಿಯು ನಾಜಿಗಳ ವಶವಾಯಿತು. ಶೇಫರನು ಯಹೂದಿಯಾದುದರಿಂದ ಅವನನ್ನು ಸೆರೆಹಿಡಿದರು ಕಾರಖಾನೆಯನ್ನೂ ವಶಪಡಿಸಿಕೊಂಡರು. ಆದರೆ ಮಹತ್ವಾಕಾಂಕ್ಷಿಯಾದ ಶೇಫರನು ಜರ್ಮನಿಯಿಂದ ಓಡಿಹೋಗಿ ಅಮೇರಿಕಾ ಸೇರಿದನು. ಅಲ್ಲಿ ಇತರ ವಿಜ್ಞಾನಿಗಳೊಡನೆ ಸೇರಿ ಕಾರ್ಯಾರಂಭಮಾಡಿದನು. ಜರ್ಮನಿಯಲ್ಲಿ ಅವನು ಒಂದು ಟನ್ ಕಟ್ಟಿಗಯಿಂದ ೬೦ ಗ್ಯಾಲನ್ ಸೆರೆಯನ್ನು ತಯಾರಿಸಿದ್ದನು. ಈಗ ಅದೇ ಒಂದು ಟನ್ ಕಟ್ಟಿಗೆಯಿಂದ ೧೦೦೦ ಪೌಂಡು ಸಕ್ಕರೆಯು ಸಿದ್ಧವಾಗತೊಡಗಿತು. ಈ ಸಕ್ಕರೆಯು ಬಹಳ ಜನಪ್ರಿಯವಾಯಿತು. ಆದರೆ ಬರಿಯ ಸಕ್ಕರೆ ಮತ್ತು ಸೆರೆಗಳಿಂದಲೇ ಮನುಷ್ಯನಿಗೆ ಪ್ರಯೋಜನವಾಗುವಂತಿಲ್ಲ. ಇದನ್ನರಿತ ಶೇಫರನು ಇತರ ಆಹಾರ ಪದಾರ್ಥಗಳನ್ನು ತಯಾರಿಸುವುದರಲ್ಲಿಯೂ ಯಶಸ್ಸನ್ನು ಪಡೆದನು.

ಚಿಕ್ಕದರಲ್ಲಿ ಕಟಿಗೆಯಿಂದ ಆಹಾರ ಪದಾರ್ಥಗಳನ್ನು ನಿರ್ಮಿಸುವ ಬಗೆ ಇಂತಿದೆ: ಮೊದಲಿಗೆ ಕಟಿಗೆಯನ್ನು ಅತಿ ಚಿಕ್ಕ ತುಣುಕುಗಳಾಗಿ ಮಾಡಲಾಗುತ್ತದೆ. ಈ ತುಣುಕುಗಳನ್ನು ಯಂತ್ರಗಳಲ್ಲಿ ಕೊಟ್ಟು ಉಗಿಯಿಂದ ಕಾಯಿಸಲಾಗುತ್ತದೆ. ಬಹಳ ಕಾದ ಮೇಲೆ ಇದರಲ್ಲಿ ನೀರು ಮತ್ತು ಗಂಧಕಾಮ್ಲವನ್ನು ಕೂಡಿಸಿ ಚೆನ್ನಾಗಿ ಕುದಿಸಲಾಗುತ್ತದೆ. ಆಮ್ಲದ ರಾಸಾಯನಿಕ ಕ್ರಿಯೆಯಿಂದ ಕಟ್ಟಿಗೆಯ ವಿಶಿಷ್ಟವಾದ ಪಾಕವು ಸಿದ್ಧವಾಗುತ್ತದೆ. ಇದರಿಂದ ಇಚ್ಛಾನುಸಾರವಾಗಿ ಖಾದ್ಯವಸ್ತುಗಳನ್ನು ತಯಾರಿಸಬಹುದು.

ಆಹಾರವಸ್ತುಗಳಲ್ಲಿ ಪೋಷಕಾಂಶವಾದ 'ಪ್ರೋಟೀನು' ಬಹಳ ಪ್ರಮಾಣದಲ್ಲಿ ಇರುವುದು ಅವಶ್ಯಕ. ಆದರೆ ಈ ಕೃತಕ ಆಹಾರದಲ್ಲಿ ಪ್ರೋಟೀನು ಇರದಿದ್ದುದರಿಂದ ಬೇರೊಂದು ಕೃತಕ ವಿಧದಿಂದ ಇದರಲ್ಲಿ ಪ್ರೋಟೀನನ್ನು ಬೆರೆಸಬೇಕಾಗುತ್ತದೆ. ಹುಳಿಯಾದ ಕಿಣ್ವ ಪದಾರ್ಥಗಳಲ್ಲಿ ಅಧಿಕ ಪ್ರೋಟೀನ್ ಇರುತ್ತದೆ. ಮತ್ತು ಇದು ಪಚನಕ್ಕೆ ತೀರ ಸುಲಭವಾದುದು. ಇವು ಎರಡು ವಿಧದವುಗಳಾಗಿದ್ದು ಸಕ್ಕರೆಯಾದರೂ ಎರಡು ಬಗೆಯದಾಗಿರುತ್ತದೆ— ಹೆಕ್ಸೋಜ್ ಮತ್ತು ಪೆಂಟೋಜ್. ಕಟ್ಟಿಗೆಯ ಸಿದ್ಧವಾದ ಪಾಕದಲ್ಲಿ ಸಾಧಾರಣ ತರಗತಿಯ ಮದ್ಯವನ್ನು ತಯಾರು ಮಾಡುವಂತಹ ಹುಳಿಪದಾರ್ಥವನ್ನು ಬೆರೆಸಿದರೆ 'ಹೆಕ್ಸೋಜ್' ಸಕ್ಕರೆ ಮಾತ್ರವೇ ಸಿದ್ಧವಾಗುತ್ತದೆ. ಇನ್ನೊಂದು ಬಗೆಯ ಹುಳಿ ವಸ್ತುವಿನಿಂದ ಎರಡೂ ತರದ ಸಕ್ಕರೆಗಳು ತಯಾರಾಗುತ್ತವೆ. 'ಹೆಕ್ಸೋಜ್' ಸಕ್ಕರೆಯಿಂದ ಆಲ್ಕೊಹಾಲ್ ಮತ್ತು 'ಪೆಂಟೋಜ್' ಸಕ್ಕರೆಯಿಂದ ಖಾದ್ಯ ಪದಾರ್ಥಗಳನ್ನು ಸಿದ್ಧಮಾಡಬಹುದು. ಇವು ಜೀವನಾವಶ್ಯಕವಾದ ಪೋಷಕದ್ರವ್ಯಗಳಿಂದ ತುಂಬಿರುವವು

ಇಂದಿನ ಆಹಾರ ಸಮಸ್ಯೆಯನ್ನು ಲಕ್ಷಿಸಿದರೆ ಕಾಷ್ಠದ ಕೃತಕ ಆಹಾರವು ಮುಂದೆ ಬೇಗನೇ ದಿನನಿತ್ಯದ ಜೀವನದಲ್ಲಿ ಬಹು ಮುಖ್ಯದ ಪಾತ್ರವನ್ನು ವಹಿಸುವುದೆಂದು ಹೇಳಬಹುದು. ಈ ವರೆಗಿನ ಅಂಕಿ-ಸಂಖ್ಯೆಗಳಿಂದ ಈಗ ಜಗತ್ತಿನಲ್ಲಿ ಪ್ರತಿವರ್ಷವೂ ಸುಮಾರು ಒಂದೂಕಾಲು ಅಬ್ಜ ಟನ್‌ಗಿಂತಲೂ ಅಧಿಕ ಕಟ್ಟಿಗೆಯು ಕಡಿಯಲ್ಪಡುತ್ತದೆಯೆಂದು ತಿಳಿದುಬಂದಿದೆ. ಈ ಪರಿಮಾಣದ ಕಾಲು ಭಾಗ ಮಾತ್ರವೇ ನಮ್ಮೀ ನೂತನ ಕೃತಕ ಕಾರ್ಯದಲ್ಲಿ ಉಪಯುಕ್ತ. ಉಳಿದುದು ಅರಣ್ಯದಲ್ಲಿ ಅಥವಾ ಕಾರಖಾನೆಗಳಲ್ಲಿ ಹಾಳಾಗಿ ಹೋಗುತ್ತದೆ. ವೈಜ್ಞಾನಿಕರ ಹೇಳಿಕೆಯಂತೆ

ಈ ಉಪಯೋಗಿಸದೇ ಬಿದ್ದಿರುವ ಪದಾರ್ಥದಿಂದ ಕೃತಕ ಆಹಾರವನ್ನು ತಯಾರಿಸಿದರೆ ನಮ್ಮಲ್ಲಿ ಅವಶ್ಯಕತೆಗಿಂತ ಅಧಿಕ ಆಹಾರ ಪದಾರ್ಥವು ಸಂಗ್ರಹಿಸಲ್ಪಟ್ಟು ಬಡತನದ ಬೇಗೆಯು ದೂರವಾಗಬಹುದು. ಇಂದಿನ ದಿನಗಳಲ್ಲಿ ಬಹು ಧಾನ್ಯವು ಮದ್ಯವನ್ನು ತಯಾರಿಸಲೆಂದೆ ಹಾಳಾಗಿ ಹೋಗುತ್ತದೆ. ಇದನ್ನು ನಿಲ್ಲಿಸಿ ಮದ್ಯವನ್ನು ಕಟ್ಟಿಗೆಯಿಂದ ತಯಾರಿಸಲಾರಂಭಿಸಿದರೆ ಅಷ್ಟು ಧಾನ್ಯದ ಉಳಿತಾಯವೂ ಆಗುತ್ತದೆ. ಅಲ್ಲದೆ ಈ ವಿಧದಿಂದ ಸೆರೆಗುಡುಕ ರಾಷ್ಟ್ರಗಳಲ್ಲಿ ಕೂಡ ಸೆರೆಯು ತೀರ ಕಡಿಮೆಯಾದ ಬೆಲೆಗೆ ದೊರೆಯಬಹುದು. *

" ಲಂಡನ್ ಕಾಲಿಂಗ್ " ಆಧಾರದಿಂದ



ಕೈ ಕೊಟ್ಟ ಶಕುನ

ಮೆಕ್ಸಿಕೋ ದೇಶದ ವೈಭವ ಮತ್ತು ಸಂಪತ್ತಿನ ಸುದ್ದಿ ಕೇಳಿ ಫರ್ನಾಂಡೋ-ಕಾರ್ಟಿಸ್ ಅದನ್ನು ಗೆಲ್ಲುವ ಸಲುವಾಗಿ ಅಲ್ಲಿಗೆ ಹೋಗಿ ಮೆಕ್ಸಿಕೋ ದೇಶದ ರಾಜಧಾನಿಯಾದ ಟೆನಾಕ್ಟಿಲ್ಯಾನ್ ದ್ವೀಪ ನಗರವನ್ನು ತನ್ನಿಂದ ಸಾಧಿಸಲು ಅಸಾಧ್ಯಕೆಂದು ಬಗೆದು ಕೈಚೆಲ್ಲಿ ಕುಳಿತ.

ಆದರೆ ಆ ಮೆಕ್ಸಿಕೋ ದೊರೆಗೆ ಶಕುನಗಳಲ್ಲಿ ಬಹಳ ನಂಬಿಕೆ. ಸೂರ್ಯ-ದೇವನ ಮಕ್ಕಳು ಇವನ ರಾಜ್ಯವನ್ನು ಆಕ್ರಮಿಸುವರೆಂದು ಯಾರೋ ಹೇಳಿದ್ದ ಭವಿಷ್ಯವನ್ನು ನಂಬಿದ್ದ ಇವನಿಗೆ ಕಾರ್ಟಿಸ್ ಮತ್ತು ಅವನ ಅನುಚರರು ಸೂರ್ಯದೇವನ ಮಕ್ಕಳಂತೆ ಕಂಡರು. ಕೂಡಲೇ ಕಾರ್ಟಿಸನ ನಗರ ಪ್ರವೇಶಕ್ಕೆ ಆ ದೊರೆ ಅನುಮತಿ ಕೊಟ್ಟ. ನಗರ ಪ್ರವೇಶಿಸಿದ ಕಾರ್ಟಿಸ್ ತನ್ನ ರಕ್ಷಣೆಗೆ ಎಲ್ಲ ಅನುಕೂಲ ಮಾಡಿಕೊಂಡು ಆ ದೊರೆಯನ್ನು ಸ್ಪೈಯಿನ್ ದೊರೆಗೆ ಶರಣಾಗತನನ್ನಾಗಿ ಮಾಡಿ ಸೆರೆಹಿಡಿದ.

— ರವೀಂದ್ರನಾಥ. ಎಸ್. ಬಿ.

* * *

ಹೊಸ ರೀತಿಯ ನಾಟಕದ ಒಂದು ರಿಹರ್ಸಲ್ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಆ ನಾಟಕದಲ್ಲಿ ನಾಟಕದ ನಾಯಕ ಪಾತ್ರಧಾರಿ ತನಗೆ ಆ ನಾಟಕದ ಕೆಲವು ಪಂಕ್ತಿಗಳು ಅರ್ಥವಾಗುವುದಿಲ್ಲವೆಂದು ದಿಗ್ದರ್ಶಕರಿಗೆ ದೂರಿತ್ತ.

ಇದನ್ನು ಕೇಳಿ ದಿಗ್ದರ್ಶಕರು ಆತನನ್ನು ಸಮಾಧಾನಗೊಳಿಸುತ್ತಾ ಹೀಗೆಂದರು. "ನಿಮಗೆ ಇವುಗಳ ಅರ್ಥವಾಗಿಲ್ಲ. ನನಗೂ ಗೊತ್ತಿಲ್ಲ. ಲೇಖಕನಿಗೇ ಸ್ವಯಂ ಅವುಗಳ ಅರ್ಥ ತಿಳಿದಿಲ್ಲ. ಅಂದ ಮೇಲೆ ಇದು ಉಚ್ಚ ಶ್ರೇಣಿಯ ನಾಟಕ ಎಂದು ಎಣಿಸಲ್ಪಡುತ್ತದೆ."

— ಎನ್. ನಾರಾಯಣ ಬಲ್ಲಾಳ

* * *

ಜೀವಂತನಾದವನಿಗೆ ಆನಂದವು ನೂರು ವರ್ಷ ಕಳೆದ್ದಾದರೂ ಸಿಕ್ಕಿಯೇ ಸಿಗುತ್ತದೆ.

— ಶ್ರೀವಾಲ್ಮೀಕಿ



ದಿನೇ ದಿನೇ

ಅಧಿಕ ಸುಂದರ ಚರ್ಮ—

ಹೊಸ ರೆಕ್ಸೋನ

ಅದರ ಮರ್ಮ



ನೀವು ರೆಕ್ಸೋನವನ್ನು ಬಳಸುವಾಗ ಅದರ ಅದ್ಭುತ ಗುಣ ನಿಮಗೆ ಕಂಡುಬರುವುದು. ಅದರ ಮೃದುವಾದ ನೊರೆಯಲ್ಲಿ ಕ್ಯಾಡಿಲ್—ಚರ್ಮವನ್ನು ಸುಂದರಗೊಳಿಸುವ ಎಣ್ಣೆಗಳ ಒಂದು ವಿಶಿಷ್ಟ ಮಿಶ್ರಣ—ಇದೆ. ಅದರ ಪ್ರಭಾವ ಚರ್ಮದ ಅಂತರ್ಭಾಗಕ್ಕೂ ಬೀಳುತ್ತದೆ ಮತ್ತು ಅದರಿಂದ ಚರ್ಮವು ಹೆಚ್ಚು ನುಣುಪಾಗಿ, ಹೆಚ್ಚು ಕೋಮಲವಾಗಿ ಸುಂದರವಾಗುವುದು।

ಬಹಳ ಹೊತ್ತಿನವರೆಗೆ ನಿಮಗೆ ಉಲ್ಲಾಸ ಕನ್ನೀಯುವ ವಿಶಿಷ್ಟ ಪರಿಮಳವಿರುವ ರೆಕ್ಸೋನ ನಿಮ್ಮ ಸ್ನಾನಕ್ಕೆ ಆದರ್ಶಪ್ರಾಯವಾದುದು.





ಹೊಸ ರ್‍ಯಾಪರ್ ಇರುವ, ಹೊಸ ಆಕಾರವಿರುವ, ಹೊಸ ಹಸುರು ಬಣ್ಣವಿರುವ ಹೊಸ ರೆಕ್ಸೋನ ನಿಮ್ಮ ಪ್ರೀತಿಗೆ ಪಾತ್ರವಾಗುವುದು.

ಹೊಸ ರೆಕ್ಸೋನ—ನಿಮ್ಮ ಚರ್ಮಕ್ಕೆ ಹಿತಕರ

RP. 169-50 KN

ಹಿಂದೂಸ್ಥಾನ್ ಲೀವರ್ ಲಿಮಿಟೆಡ್ ಅವರಿಂದ ರೆಕ್ಸೋನ ಪ್ರೊಪ್ರೈಟರಿ ಲಿಮಿಟೆಡ್, ಆಸ್ಟ್ರೇಲಿಯಾ ಅವರಿಗಾಗಿ ಭಾರತದಲ್ಲಿ ತಯಾರಿಸಲ್ಪಟ್ಟಿದೆ

ಮಹಾಮಹೋಪಾಧ್ಯಾಯ ಕಾಣೇ

ವಿವಿಧ ಮೂಲಗಳಿಂದ

ಯಾವ ದೇಶದಲ್ಲಾದರೂ—ವಿದ್ಯೆಯಲ್ಲಿ ಅತಿ ಮುಂದುವರಿದ ದೇಶದಲ್ಲಿ ಕೂಡ—ಮಹಾಮಹೋಪಾಧ್ಯಾಯ, ಡಾಕ್ಟರ್ ಪಾಂಡುರಂಗ ವಾಮನ ಕಾಣೆಯವರಂಥ ವಿದ್ವಾಂಸರು ದುರ್ಲಭವಾಗಿ ಸಿಗಬಲ್ಲರು. ಸಂಸ್ಕೃತದ ಜ್ಞಾನ ಸಾಗರದಲ್ಲಿ ಅವರಷ್ಟು ಆಳವಾಗಿ ಮುಳುಗಿದವರು ಮತ್ತು ಅಗಲವಾಗಿ ಈಸಿದವರು ಇಂದು ಇಲ್ಲವೇ ಇಲ್ಲ ಎನ್ನಬಹುದು.



ಇಂದು ತಮ್ಮ ಎಂಭತ್ತೊಂದನೇ ವಯಸ್ಸಿನಲ್ಲಿ ಇನ್ನೂ ಅವರು ತಮ್ಮ ಸಾಧನೆಯಲ್ಲಿ ನಿರತರಾಗಿದ್ದಾರೆ.

ಅವರ ಸಾಧನೆಗಳನ್ನೇ ನೋಡಿರಿ. ಸಂಸ್ಕೃತ ಸಾಹಿತ್ಯ ಶಾಸ್ತ್ರದಲ್ಲಿ ಅವರು ಅಪ್ರತಿದ್ವಂದ್ವ ಪ್ರಭುತ್ವ ಪಡೆದಿದ್ದಾರೆ; ಛಂದಸ್ಸು, ಅಲಂಕಾರ ಶಾಸ್ತ್ರಗಳಲ್ಲಿ ಅವರು ಆದ್ಯಂತ ಸಂಶೋಧನೆ ಮಾಡಿ ಗ್ರಂಥಗಳನ್ನು ಬರೆದಿದ್ದಾರೆ ಭಾರತೀಯ ಇತಿಹಾಸದಲ್ಲಿ ಅವರದು ಅಧಿಕಾರವಾಣಿ. ಕೆಲ ವರ್ಷಗಳ ಹಿಂದೆ ಇತಿಹಾಸ ಪರಿಷತ್ತಿನ ಅಧ್ಯಕ್ಷ ಪದವನ್ನವರು ಅಲಂಕರಿಸಿದರು. ಪ್ರಾಚೀನ ಶಿಲಾಲೇಖ, ತಾಮ್ರಲೇಖ, ಪ್ರಾಚೀನ ಇತಿಹಾಸಗಳನ್ನವರು ಕರತಲಾಮಲಕ ಮಾಡಿಕೊಂಡಿದ್ದಾರೆ. ಧರ್ಮಶಾಸ್ತ್ರದಲ್ಲಿ ಅವರಷ್ಟು ಆಮೂಲಾಗ್ರ ಅಭ್ಯಾಸ ಮಾಡಿದವರು ಸಿಗಲಾರರು; ವೇದ, ಕರ್ಮಕಾಂಡ, ಮೀಮಾಂಸೆ, ಇವೆಲ್ಲ ಅವರ ತುದಿಬೆರಳಲ್ಲಿವೆ ಬರಿ ಪುಸ್ತಕಕೀಟ ಎನ್ನುತ್ತೀರಾ ? ಅವರು ಹೈಸ್ಕೂಲಿನಿಂದ ಕಾಲೇಜಿನವರೆಗೆ ನಾನಾ ಹಂತಗಳಲ್ಲಿ ಯಶಸ್ವಿಯಾಗಿ ಪಾಠ ಹೇಳಿದ್ದಾರೆ, ಕಾಯದೆಯನ್ನಭ್ಯಸಿಸಿ ವಕಾಲತ್ತು ಮಾಡಿದ್ದಾರೆ, ರಾಜ್ಯಶಾಸ್ತ್ರದಲ್ಲಿ ಮತ್ತು ಶಾಸನಶಾಸ್ತ್ರದಲ್ಲಿ ಅವರಿಗಿರುವ ಪಾಂಡಿತ್ಯವನ್ನು ಕಂಡು ಅವರನ್ನು ರಾಜ್ಯಸಭೆಯ ಸದಸ್ಯರಾಗಿ ನಾಮಕರಣ ಮಾಡಲಾಯಿತು. ಶುಷ್ಕ ಪಂಡಿತ ಎನ್ನುತ್ತೀರಾ? ಕಾಣೆಯವರು ಸಂಗೀತ ಶಾಸ್ತ್ರವನ್ನೂ ಬಲ್ಲರು, ಒಳ್ಳೇ ಸಂಗೀತಗಾರರೂ ಹೌದು.

ಡಾ. ಕಾಣೆಯವರು ಬರೆದ ಗ್ರಂಥಗಳನ್ನು ಓದಲಿಕ್ಕೇ ಸಾಮಾನ್ಯರಿಗೆ ಒಂದೊಂದು ಜೀವಮಾನ ಬೇಕಾದೀತು. ಅವರ ಅಸಂಖ್ಯ ಗ್ರಂಥಗಳಲ್ಲಿ "ಧರ್ಮಶಾಸ್ತ್ರದ ಇತಿಹಾಸ" ಸರ್ವಶ್ರೇಷ್ಠವಾದುದು. ಈಗಾಗಲೇ ಇದರ ಐದು ಖಂಡಗಳು ಪ್ರಕಟವಾಗಿವೆ. ಒಂದೊಂದೂ ಹತ್ತಿರ ಹತ್ತಿರ ಮುದ್ರಿತವಾದ ಪಂಕ್ತಿಗಳುಳ್ಳ ಸಾವಿರ ಸಾವಿರ ಪುಟಗಳ ಉದ್ಗ್ರಂಥವಾಗಿದೆ. ಅದು ಒಂದು ತರಹದ ವಿಶ್ವಧರ್ಮಶಾಸ್ತ್ರ ಕೋಶವಾಗಿದೆ. "ವ್ಯಾಸೋಚ್ಛಿಷ್ಟಂ ಜಗತ್ಸರ್ವಂ" ಎಂದಂತೆ ಧರ್ಮಶಾಸ್ತ್ರದ ವಿಚಾರದಲ್ಲಿ "ಕಾಣೇ

ಮಹಾಮಹೋಪಾಧ್ಯಾಯ ಡಾ. ಪಿ. ವಿ. ಕಾಣೆಯವರು 'ಧರ್ಮಶಾಸ್ತ್ರದ ಇತಿಹಾಸ' ಎಂಬ ಬೃಹತ್ ಗ್ರಂಥವನ್ನು ಆರು ಖಂಡಗಳಲ್ಲಿ ಸಿದ್ಧಗೊಳಿಸುತ್ತಿದ್ದಾರೆ; ಇವುಗಳಲ್ಲಿ ಐದು ಬೆಳಕು ಕಂಡಿವೆ. ಆರನೆಯದನ್ನು ಪೂರ್ಣಗೊಳಿಸುವ ಕಾರ್ಯದಲ್ಲಿ ಅವರು ತಲ್ಲೀನರಾಗಿದ್ದಾರೆ. ಈ ಗ್ರಂಥವನ್ನು ಸಿದ್ಧಪಡಿಸಲು ಅವರು ಅನುಸರಿಸಿರುವ ಹಲವು ವಿಧಾನಗಳು, ಸನಾತನ ರೀತಿ ನೀತಿಗಳು ಆರ್ಯಕೀರ್ತಿಗೆ ಮೆರಗು ಕೊಡುವಂಥವು. ಇದರ ನಿರ್ಮಾಣ ಕಾರ್ಯಕ್ಕೆ ಅವರು ಯಾವ ಶೀಘ್ರಲಿಪಿಕಾರನ ಸಹಾಯವನ್ನೂ ಪಡೆಯಲಿಲ್ಲ. ಅಚ್ಚಿನಲ್ಲಿ ಹೊರಬಂದ ಪ್ರತಿಯೊಂದು ಪುಟವು ಅವರೇ ಸ್ವಂತ ಬರೆದದ್ದು. ಪ್ರೂಫ್ ಓದಲು ತಮಗೆ ತಾವೇ ಸಹಾಯಕರಾಗಿದ್ದಾರೆ! ಬರೆದ ರೀತಿಯಾದರೂ ಎಂತು? ಇಪ್ಪತ್ತು ನಯೇಪೈಸೆಗೊಂದು ಫೌಂಟನ್ ಪೆನ್ನು ಸಿಗುವಷ್ಟು ಅಗ್ಗವಾಗಿದ್ದರೂ ಕೂಡ ಅವರು ಸನಾತನ ಪೆನ್‌ಹೋಲ್ಡರ್ ಮತ್ತು ಶಾಯಿಯಿಂದಲೇ ತಮ್ಮ ಲೇಖನಕಾರ್ಯ ಮುಗಿಸುತ್ತಿದ್ದಾರೆ!

ಸರಳ ಜೀವನ ಮತ್ತು ಉಚ್ಚ ಚಿಂತನವನ್ನೇ ಧ್ಯೇಯವಾಗಿಯುಳ್ಳ ಮಹಾಮಹೋಪಾಧ್ಯಾಯ ಪಿ. ವಿ. ಕಾಣೆಯವರ ಈ ಭಗೀರಥ ಪ್ರಯತ್ನವು ಕಲ್ಪನಾತೀತ. ಜನ ಇದನ್ನು ನಂಬದೆಯೇ ಇರಬಹುದು; ಆದರೆ ಇದು ಅಕ್ಷರಶಃ ದಿಟ. — ಕೆ. ನಾ. ರತನ್

ಉಚ್ಛಿಷ್ಟಂ . . . . . ." ಎನ್ನುವ ಹಾಗಿದೆ ಈ ಗ್ರಂಥ. ಇದಕ್ಕಾಗಿ ಅವರೋದಿದ್ದೆಷ್ಟು, ಸಂಶೋಧಿಸಿದ್ದೆಷ್ಟು, ಹಿಂಜಿದ್ದೆಷ್ಟು, ಯೋಜಿಸಿದ್ದೆಷ್ಟು! ಇಷ್ಟೆಲ್ಲವನ್ನು ಅವರು ಕಳೆದ ಐವತ್ತು ವರ್ಷಗಳಿಂದ ನಿರಂತರವಾಗಿ ಬಾಧಿಸುತ್ತಿರುವ ಡ್ಯೂಡನಲ್ ಅಲ್ಸರ್ ಎಂಬ ಭೀಕರ ಜಠರ ವ್ರಣ ರೋಗವನ್ನು ಸಹಿಸಿಕೊಂಡು ಮಾಡುತ್ತ ಬಂದಿದ್ದಾರೆ.

ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯ ನೆಲ ನೀರು ಗಾಳಿಗಳಲ್ಲಿ ಪ್ರತಿಭಾಶಾಲಿಗಳನ್ನು ಹಡೆಯುವ ವಿಶೇಷ ಗುಣವಿದೆಯೇನೋ. ರಾನಡೆ, ತಿಲಕ, ಗೋಖಲೆಯವರಂಥ ಉಜ್ವಲ ಜೀವಗಳನ್ನು ಹಡೆದ ಈ ಭೂಮಿಯೆ ಪಾಂಡುರಂಗ ಕಾಣೆಯವರಿಗೂ ಜನ್ಮವಿತ್ತಿತು. ಮೇ ೭, ೧೮೮೦ ರಲ್ಲಿ ಹುಟ್ಟಿದ ಅವರು ಶಾಲೆಯಲ್ಲಿ ಕಾಲಿಟ್ಟಂದಿನಿಂದ ಅವರು ಗೆಲ್ಲದ ಬಹುಮಾನಗಳು ಗೆಲ್ಲಲು ಯೋಗ್ಯವಲ್ಲ ಎಂಬಂತಿತ್ತು. ಎಸ್. ಪಿ. ಜಿ. ಮಿಶನ್ ಹೈಸ್ಕೂಲ್‌ನಲ್ಲಿ ಪ್ರಾರಂಭಿಸಿ ಮುಂಬಯಿಯ ವಿಲ್ಸನ್ ಕಾಲೇಜಿನಲ್ಲಿ ೧೯೦೧ ರಲ್ಲಿ ಬಿ. ಎ. ಆಗುವ ಮೊದಲು ಇಂಟರ್‌ಮಿಡಿಯೇಟ್‌ನಲ್ಲಿ ಸಂಸ್ಕೃತದಲ್ಲಿ ಅತ್ಯಧಿಕ ಗುಣಗಳನ್ನು ಪಡೆದು ಅನೇಕ ಶಿಷ್ಯವೃತ್ತಿಗಳನ್ನು ಪಡೆದರು. ಬಿ. ಎ. ಯಲ್ಲಿ ಸಂಸ್ಕೃತ ಪ್ರಾವೀಣ್ಯ ತೋರಿಸಿ ಭಾವೂ ದಾಜಿ ಬಹುಮಾನ ಗಳಿಸಿದರು. ಎಂ. ಎ. ಯಲ್ಲಿ ಸಂಸ್ಕೃತದಲ್ಲಿ ಅಸಾಧಾರಣ ಗುಣಗಳನ್ನು ಪಡೆದು ಜಲವೇದಾಂತ ಪುರಸ್ಕಾರಕ್ಕೆ ಪಾತ್ರರಾದರು.

ಬಿ. ಎ. ಆದಂದಿನಿಂದ ಅವರು ಏಕಕಾಲದಲ್ಲಿ ಅನೇಕ ವಿಷಯಗಳಲ್ಲಿ ತತ್ಪರರಾದರು. ೧೯೦೨ ರಲ್ಲಿ ಎಲ್‌ಎಲ್‌ಬಿ. ಮೊದಲನೇ ಭಾಗವನ್ನೂ ೧೯೦೩ ರಲ್ಲಿ ಎಂ. ಎ. ಯನ್ನೂ ಮುಗಿಸಿ ಮರುವರ್ಷ ರತ್ನಾಗಿರಿ ಸರಕಾರಿ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ೧೯೦೪ ರಲ್ಲಿ ಟ್ರೇನಿಂಗ್ ಪರೀಕ್ಷೆಯಲ್ಲಿ ಮುಂಬಯಿ ರಾಜ್ಯಕ್ಕೆ ಮೊದಲನೆಯವರಾಗಿ ತೇರ್ಗಡೆಹೊಂದಿದರು. ಮರುವರ್ಷ ಮತ್ತೊಂದು ಟ್ರೇನಿಂಗ್ ಪರೀಕ್ಷೆಯಲ್ಲಿ ಉಚ್ಚ

ಶ್ರೇಣಿಯಲ್ಲಿ ಪಾಸಾಗುತ್ತ ಸಂಗಡಲೇ ;"ಅಲಂ-ಕಾರ ಶಾಸ್ತ್ರದ ಇತಿಹಾಸ" ಎಂಬ ಪಾಂಡಿತ್ಯ ಪೂರ್ಣ ಪ್ರಬಂಧ ಬರೆದು ಬಿ. ಎನ್. ಮಾಂಡರಿ ಪದಕವನ್ನವರು ಸಂಪಾಸಿದರು. ಆ ಮರುವರ್ಷವೇ "ಮಹಾಕಾವ್ಯಗಳಲ್ಲಿ ವರ್ಣಿತವಾದ ಆರ್ಯರ ರೀತಿ ನೀತಿ" ಪ್ರಬಂಧವು ಅವರಿಗೆ ಇನ್ನೊಂದು ಮಾಂಡರಿ ಬಹುಮಾನವನ್ನು ದೊರಕಿಸಿ ಕೊಟ್ಟಿತು. ಈ ಎಲ್ಲದರ ನಡುವೆ ಅವರು ಎಲ್ಫಿನ್‌ಸ್ಟನ್ ಹೈಸ್ಕೂಲಿನಲ್ಲಿ ಪ್ರಧಾನ ಸಂಸ್ಕೃತ ಶಿಕ್ಷಕರೂ ಆಗಿ ದುಡಿಯುತ್ತಿದ್ದರು. ೧೯೦೮ ರಲ್ಲಿ ಅವರು ಎರಡನೇ ಎಲೆಲ್‌ಬಿ ಪಾಸಾದರು.

೧೯೦೯ ರಲ್ಲಿ ಪ್ರೊ. ಭಾಂಡಾರಕರರ ಸ್ಥಾನದಲ್ಲಿ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾದ ಅವರು ಅಲ್ಲಿನ ಪಕ್ಷಪಾತ ನೀತಿಗೆ ರೋಸಿ ೧೯೧೧ ರಲ್ಲಿ ಸರಕಾರಿ ನೌಕರಿಗೆ ಶರಣು ಹೊಡೆದು ಹೈಕೋರ್ಟಿನಲ್ಲಿ ವಕಾಲತ್ತು ಪ್ರಾರಂಭಿಸಿದರು. ೧೯೧೨ ರಲ್ಲಿ ಹಿಂದೂ ಮತ್ತು ಮುಸ್ಲಿಂ ಕಾಯದೆಗಳಲ್ಲಿ ಎಲ್‌ಎಲ್. ಎಂ ಪಾಸಾದರು. ಅಂದಿನಿಂದ ಅವರು ಅಧ್ಯಯನ, ಸಂಶೋಧನೆ, ವ್ಯಾಖ್ಯಾನ, ಲೇಖನ, ಶಿಕ್ಷಣಗಳ ತೆರಪಿಲ್ಲದ ಕರ್ಮನಿಷ್ಠ ಜೀವನವನ್ನು ಸಾಗಿಸುತ್ತ ಬಂದಿದ್ದಾರೆ. ಮಹಾರಾಷ್ಟ್ರದ ಪ್ರಾಚೀನ ಭೂಗೋಲದ ಬಗ್ಗೆ ಸಂಶೋಧನೆ ಮಾಡುವ ಬಗ್ಗೆ ೧೯೧೫-೧೬ ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಸಂಶೋಧನ ಶಿಷ್ಯವೃತ್ತಿ ಅವರಿಗೆ ಸಿಕ್ಕಿತು. ೧೯೧೭-೩೩ ರ ವರೆಗೆ ಲಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಮುಂಬಯಿ, ಬನಾರಸ್, ನಾಗಪೂರ, ಡಾಕಾ ವಿಶ್ವವಿದ್ಯಾಲಯಗಳಲ್ಲಿ ಬಿ. ಎ., ಎಂ. ಎ. (ಸಂಸ್ಕೃತ) ಮತ್ತು ಎಲ್ ಎಲ್. ಬಿ., ಎಲ್ ಎಲ್. ಎಂ. ಪರೀಕ್ಷಕರಾಗಿದ್ದರು. ೧೯೧೯-೨೮ ರ ನಡುವೆ ಮುಂಬಯಿ ವಿಶ್ವವಿದ್ಯಾಲಯುದ ಸಿನೇಟ್ ಸದಸ್ಯರಾಗಿದ್ದು, ಕಾಂ-ಗ್ರೆಸ್ ಮಂತ್ರಿಮಂಡಲ ಬಂದ ನಂತರ ಬಿ. ಜಿ. ಖೇರರ ಆಗ್ರಹದಂತೆ ಆ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿಯೂ ಎರಡು ವರ್ಷ ದುಡಿದರು.

ಈ ನಡುವೆ ಅಖಂಡವಾಗಿ ಅವರ ಲೇಖನಿಯಿಂದ ಇಂಗ್ಲಿಷ್, ಮರಾಠಿ, ಸಂಸ್ಕೃತಗಳಲ್ಲಿ ಗ್ರಂಥಗಳೂ ಲೇಖಗಳೂ ಹರಿಯುತ್ತಲೇ ಇದ್ದವು. ಗೌರವವೂ ಅವರನ್ನು ಅರಸಿಕೊಂಡು ಬರತೊಡಗಿತು. ೧೯೪೧ ರಲ್ಲಿ ಅವರಿಗೆ ಭಾರತ ಸರಕಾರ ಮಹಾಮಹೋಪಾಧ್ಯಾಯ ಬಿರುದನ್ನಿತ್ತಿತು. ಅನಂತರ ಅಲಹಾಬಾದ ವಿಶ್ವವಿದ್ಯಾಲಯ ಅವರಿಗೆ ಡಾಕ್ಟರೇಟ್‌ನ್ನಿತ್ತು ಗೌರವಿಸಿತು. ೧೯೫೪ ರಲ್ಲಿ ಅವರನ್ನು ರಾಜ್ಯಸಭೆಯ ಸದಸ್ಯರಾಗಿ ನಾಮಕರಣ ಮಾಡಲಾಯಿತು. ಪ್ರಾಚ್ಯ ವಿದ್ಯಾವಿದರ ವಿಶ್ವಪರಿಷತ್ತಿನ ಕೇಂಬ್ರಿಜ್ ಮತ್ತು ಇಸ್ತಾಂ-ಬೂಲ್ ಅಧಿವೇಶನಗಳಲ್ಲಿ ಭಾರತ ಸರಕಾರದ ಪರವಾಗಿ ಭಾಗವಹಿಸಿ ತಮ್ಮ ಪರಿಪಕ್ವಪಾಂಡಿತ್ಯದಿಂದ ವಿದೇಶಿ ವಿದ್ವಾಂಸರಿಂದ ಪ್ರಶಂಸೆ ಪಡೆದರು. ಭಾರತೀಯ ಪ್ರಾಚ್ಯ ವಿದ್ಯಾಪರಿಷತ್ತಿನ ಅಧ್ಯಕ್ಷತ್ವವನ್ನೂ ಅವರು ವಹಿಸಿದರು.

ಮಹಾಮಹೋಪಾಧ್ಯಾಯ ಕಾಣೆಯವರು ಮಾಡಿದ್ದನ್ನೆಲ್ಲ ಮನಃಪೂರ್ವಕ, ಓರಣವಾಗಿ, ಕ್ಲುಪ್ತವಾಗಿ ಮಾಡುತ್ತಾರೆ. ರಾಜ್ಯ ಸಭೆಯಲ್ಲಿ ಅವರು ಸದಾ ಜಾಗರೂಕ ಮತ್ತು ಸ್ವತಂತ್ರ ವೃತ್ತಿಯ ಸದಸ್ಯರಾಗಿದ್ದರು. ಎಂಭತ್ತರಲ್ಲಿ ಅವರು ಇನ್ನೂ ಉಷಃಕಾಲದಲ್ಲೇ ಏಳುತ್ತಾರೆ. ಒಡನೆ ಅವರು ವಾಕಿಂಗ್ ಹೊರಟು ಮಲಬಾರ್ ಹಿಲ್ಲಿನಲ್ಲಿ ನಡೆಯುತ್ತ ಸಮುದ್ರತೀರದ ಸೂರ್ಯೋದಯ ಲೀಲೆಯನ್ನು ಸವಿದು ಮನೆಗೆ ಮರಳುತ್ತಾರೆ. ೫೦ ವರ್ಷದಿಂದ ಇದು ಅನವರತ ನಡೆದು ಬಂದಿದೆ. ೮-೩೦ ರಿಂದ ಎರಡು ಗಂಟೆ ಅಭ್ಯಾಸದಲ್ಲಿ ನಿರತರಾಗಿದ್ದು ಅನಂತರ ಹೊರಟು ೧೧ ರಿಂದ ೩ ರ ವರೆಗೆ ಹೈಕೋರ್ಟಿನಲ್ಲಿದ್ದು (ಮೂರು ವರ್ಷಗಳ ಹಿಂದೆ ವಕೀಲಿಯಿಂದ ನಿವೃತ್ತಿ ಹೊಂ-ದುವ ವರೆಗೂ) ಮನೆಗೆ ಮರಳುವುದು ಈಚೆಗಿನ ವರೆಗೆ ಅವರ ರೂಢಿಯಾಗಿತ್ತು. ಅನಂತರ ಏಶಿ-ಯಾಟಿಕ್ ಸೊಸೈಟಿ ಅಥವಾ ಮುಂಬಯಿ ವಿಶ್ವ

ವಿದ್ಯಾಲಯದ ಪುಸ್ತಕಾಗಾರದಲ್ಲಿ ಸಂಜೆ ಏಳೂವರೆಯ ವರೆಗೂ ಗಾಢವಾದ ಅಭ್ಯಾಸದಲ್ಲಿ ಮಗ್ನರಾಗಿರುತ್ತಾರೆ. ಅವರ ಗ್ರಂಥಾಭ್ಯಾಸದ ಫಲವು ೫೦೦ ಭಾರಿ ನೋಟ್‌ಬುಕ್ಕುಗಳಲ್ಲಿ ಅಕಾರಾದಿಯಾಗಿ ಕ್ರಮಪಡಿಸಿದ ಟಿಪ್ಪಣಿಗಳ ರೂಪದಲ್ಲಿ ಅವರ ಹತ್ತಿರ ಇದೆಯೆಂದು ಹೇಳಿದರೆ ಅವರು ಎಂಥ ಜ್ಞಾನರಾಶಿಯನ್ನು ಕಲೆಹಾಕಿದ್ದಾರೆಂದು ವಿದಿತವಾದೀತು.

ಸಂಸಾರಿಯಾದರೂ ಆಚಾರ್ಯ ಕಾಣೆಯವರು ಸಂನ್ಯಾಸಿಯಂತೆ ವ್ರತಸ್ಥ ಜೀವನ ನಡೆಸುವವರು. ಶಾಕಾಹಾರ ನಿಷ್ಠರಾದ ಅವರು ಐವತ್ತು ವರ್ಷದಿಂದ ಹುಳಿ ಪದಾರ್ಥವನ್ನು ಮುಟ್ಟಿಲ್ಲ ರಾತ್ರಿ ಕೇವಲ ದುಗ್ಧಾಹಾರ. ನಾಲ್ಕು ಸಲ ಯುರೋಪ, ಒಮ್ಮೆ ಅಮೇರಿಕಾ ಸಂಚಾರ ಕೈಕೊಂಡಿರುವ ಅವರು ಅಲ್ಲಿಯೂ ರೊಟ್ಟಿ ಬೆಣ್ಣೆ ಹಾಲು ಬಿಸ್ಕೀಟಿನ ಮೇಲೇ ಜೀವಿಸಿದರು.

ವಕಾಲತ್ತು, ಸಂಸ್ಕೃತಾಭ್ಯಾಸ, ಲೇಖನ, ಭಾಷಣ ಮೊದಲಾದ ಅನೇಕ ಕಾರ್ಯಗಳಲ್ಲಿ ಏಕ ಕಾಲದಲ್ಲಿ ಪ್ರಸಕ್ತರಾಗಿರಬಲ್ಲ ಯೋಗಿ ಅವರು. ಅದರ ಗುಟ್ಟೇನೆಂದು ಕೇಳಿದರೆ ಯಾವಾಗ ಬೇಕೋ ಆವಾಗ ಯಾವ ವಿಷಯ ಬೇಕೋ ಅದರ ಮೇಲೆ ಚಿತ್ತವನ್ನು ಕೇಂದ್ರೀಕರಿಸಬಲ್ಲಷ್ಟು ಮನೋನಿಯಂತ್ರಣವನ್ನು ತಾವು ಪಡೆದಿರುವುದೇ ಕಾರಣ ಎಂದವರು ಹೇಳುತ್ತಾರೆ. ಗ್ರಂಥ ರಚನಾ ವಿಷಯದಲ್ಲಿ ಎಂಭತ್ತರಲ್ಲೂ ಹೊಸ ಹೊಸ ಯೋಜನೆಗಳು ಅವರಲ್ಲಿವೆ. ತಮ್ಮ ಸೀಮಾಗ್ರಂಥವಾದ "ಧರ್ಮಶಾಸ್ತ್ರದ ಇತಿಹಾಸ" ವನ್ನು ಸಂಸ್ಕೃತ ಪಂಡಿತರ ಅನುಕೂಲಾರ್ಥವಾಗಿ ಸಂಸ್ಕೃತ ಭಾಷೆಯಲ್ಲೇ ಸಾರಾಂಶ ರೂಪವಾಗಿ ಬರೆಯಬೇಕೆಂಬ ವಿಚಾರ ಅವರಿಗಿದೆ.

ಅವರು ಇಂಗ್ಲೀಷಿನಲ್ಲಿ ಬರೆದ ಉದ್ಗ್ರಂಥಗಳ ಸಂಖ್ಯೆಯೇ ೧೨ ಇದೆ. ಅವುಗಳಲ್ಲಿ ಕೆಲವು ಹಲವು ಭಾಗಗಳಲ್ಲಿವೆ. "ಸಾಹಿತ್ಯದರ್ಪಣ" ದ ಮುನ್ನುಡಿ ಮತ್ತು "ಸಂಸ್ಕೃತ ಅಲಂಕಾರ ಶಾಸ್ತ್ರದ ಇತಿಹಾಸ" ಸಾಹಿತ್ಯಶಾಸ್ತ್ರದ ಅಭ್ಯಾಸಿಗಳಿಗೆ ದಾರಿದೀಪಗಳಾಗಿವೆ. ಅನೇಕ ಮಹಾಕವಿಗಳ ಕೃತಿಗಳ ಮೇಲೆ ಅವರು ಬೆಳಕು ಬೀರಿದ್ದಾರೆ. ಧರ್ಮಶಾಸ್ತ್ರದ ಇತಿಹಾಸವಂತೂ ಅವರ ಮಹಾಭಾರತವೇ. ಇವಲ್ಲದೆ ಮರಾಠಿಯಲ್ಲಿ ಅವರು ನಾಲ್ಕು ಪ್ರಮುಖ ಗ್ರಂಥಗಳನ್ನು ಬರೆದಿದ್ದಾರೆ.

ಗ್ರಂಥಸಾಗರದಲ್ಲಿ ಮುಳುಗಿದ ಪಂಡಿತರಿಗೆ ರಸಾನುಭೂತಿಯ ಶಕ್ತಿ ಕಳೆದು ಹೋಗುವುದುಂಟು. ಕಾಣೆಯವರು ಸಹಜವಾಗಿಯೆ ಮಿತಭಾಷಿಗಳು. ಆದರೆ ತಮ್ಮ ಮಿತ್ರವರ್ಗದಲ್ಲಿ ಮಾತಾಡತೊಡಗಿದರೆಂದರೆ ರಸವೊಸರುತ್ತದೆ. ಸಂಗೀತವೆಂದರೆ ಅವರಿಗೆ ಪ್ರಾಣ, ಶಾಸ್ತ್ರೀಯ ಸಂಗೀತದ ಪೋಷಕರೂ ಗಾಯಕರೂ ಆಗಿದ್ದಾರೆ ಅವರು. ಸಂಸ್ಕೃತದಲ್ಲಿ ಅಸ್ಖಲಿತವಾಗಿ ಗಂಟೆಗಟ್ಟಳೆ ಮಾತಾಡಬಲ್ಲರು.

ಡಾ. ಕಾಣೆಯವರ ಕೌಟುಂಬಿಕ ಜೀವನ ಸುಖಶಾಂತಿ ಪೂರ್ಣವಾಗಿದೆ. ಅವರ ಈರ್ವರು ಗಂಡುಮಕ್ಕಳಲ್ಲಿ ಮೊದಲನೆಯವರು ಲಂಡನ್ ವಿಶ್ವವಿದ್ಯಾಲಯದ ಡಿ. ಎಸ್‌ಸಿ. ಪದವೀಧರರಾದ ವಿಜ್ಞಾನಿಗಳಾಗಿದ್ದು ಕೇಂದ್ರ ಸರಕಾರದಲ್ಲಿ ಉಚ್ಚ ಪದವಿಯಲ್ಲಿದ್ದಾರೆ. ಕಿರಿಯ ಮಗ ಅಮೇರಿಕದಲ್ಲಿ ತರಬೇತಾದ ಪರಮಾಣು ವಿಜ್ಞಾನಿ ಮೂವರು ಹೆಣ್ಣುಮಕ್ಕಳಲ್ಲಿ ಒಬ್ಬರು ಎಂ. ಬಿ., ಬಿ. ಎಸ್. ಡಾಕ್ಟರರು. ಇನ್ನೊಬ್ಬರು ಭಾರತ ಸರಕಾರದ ಕೃಷಿ ಸಂಶೋಧನ ಸಂಸ್ಥೆಯಲ್ಲಿದ್ದಾರೆ. ಆದರೆ ಸಂಸ್ಕೃತಾಧ್ಯಯನದ ಪರಂಪರೆ ಮಾತ್ರ ಡಾ. ಕಾಣೆಯವರಿಗೇ ಮುಕ್ತಾಯವೋ ಏನೊ.



ಅವನಿಗೆ ಶಾಲೆಗೆ ಹೋಗುವ ವಯಸ್ಸಾಯಿತು. ಅವನ ತಾಯಿ ಉತ್ಸಾಹದಾಯಕನಾದ ಬಹಳ ವಿಷಯಗಳನ್ನು ಹೇಳಿದಳು. ಅವಳು ಅವನಿಗೆ ಹೊಸ ಬಟ್ಟೆಗಳನ್ನು ತಂದಳು. ಇತರ ಮಕ್ಕಳ ವಿಚಾರವಾಗಿ ಹೇಳಿದಳು. ಇದರಿಂದ ಉತ್ತೇಜಿತನಾದ ಹುಡುಗ ಮೊದಲನೆಯ ದಿನ ಶಾಲೆಗೆ ಉತ್ಸಾಹದಿಂದ ಹೋದ. ಅಷ್ಟೇ ಉತ್ಸಾಹದಿಂದ ಮನೆಗೆ ವಾಪಸ್ಸು ಬಂದು ಶಾಲೆಯ ಸಮಾಚಾರವನ್ನೆಲ್ಲಾ ವರದಿ ಮಾಡಿದ. ಮಾರನೆಯ ದಿನ ಬೆಳಿಗ್ಗೆ ಅವನ ತಾಯಿ ಅವನನ್ನು ಎಬ್ಬಿಸಿದಾಗ, ಅವನು "ಏಕಮ್ಮಾ, ಎಬ್ಬಿಸಿದಿ?" ಎಂದು ಕೇಳಿದ.

ತಾಯಿ- "ನೀನು ಸ್ಕೂಲಿಗೆ ಹೋಗಬೇಕು" ಎಂದಳು.

ಮಗ- "ಏನು? ಪುನಃ ?" ಎಂದು ಆತ ಕೇಳಿದ. ಶ್ರೀಮತಿ 'ರೂಪಾ'

*

ಶಿಕ್ಷಕ- ದೇವರು ಸೃಷ್ಟಿಸಿದ ಪ್ರತಿಯೊಂದು ವಸ್ತುವಿನಲ್ಲೂ ಒಂದು ಉದ್ದೇಶವಿದೆ. ಈಗ ಹೇಳು ರಾಮು, ಸೊಳ್ಳೆಯಿಂದ ನಾವು ಏನು ಕಲಿಯುತ್ತೇವೆ?

ರಾಮು- ಅಸಹಾಯಕರಾಗಿ ಕಡಿಸಿಕೊಳ್ಳುವುದು ಎಷ್ಟು ಸುಲಭ ಅಂತ.

*

ಅಳ್ಳೆದೆಯ ರಾಮರಾಯರು ಕಳ್ಳನ ಸದ್ದನ್ನು ಕೇಳಿ ಹೆದರಿ ಮಂಚದಡಿಯಲ್ಲಿ ಅಡಗಿಕೊಂಡರು. ತುಸು ಹೊತ್ತಿನ ಮೇಲೆ ಯಾರೊ ತಮ್ಮ ಬಳಿ ಸರಿಯುತ್ತ ಬಂದದು ತಿಳಿದು ಅವರು 'ನೀನೇನೇ ಶಾರದೆ?' ಎಂದರು.

ಅದಕ್ಕುತ್ತರವಾಗಿ ಪಿಸು ಧ್ವನಿಯಲ್ಲಿ "ಶ್ಶ್. ಸುಮ್ಮನಿರು. ನಾನು ಕಳ್ಳ. ಇದೇ ಈಗ ಆ ಶಾರದೆಯನ್ನು ನೋಡಿದೆ... ತುಸು ಸರಿದು ಅಡಗಿಕೊಳ್ಳಲು ನನಗೂ ಸ್ಥಳ ಕೊಡು" ಎಂದ ಕಳ್ಳ.

*

ತರುಣ- ಗಜಾನನರಾಯರೇ, ನಾನು ತಮ್ಮ ಮಗಳು ಕಮಲೆಯನ್ನು ಮದುವೆಯಾಗಬಯಸುತ್ತೇನೆ. ತಮ್ಮ ಔಪಚಾರಿಕ ಸಮ್ಮತಿಯನ್ನಿತ್ತು...

ಗಜಾ- ಆಂ! ನನ್ನ ಔಪಚಾರಿಕ ಸಮ್ಮತಿಯಷ್ಟೇ ಸಾಕು ಅಂತ ನಿನಗೆ ಯಾರು ಹೇಳಿದರು?

ತರುಣ- ಕಮಲೆಯ ಅಮ್ಮ.

*

ಶಿಕ್ಷಕ- ವಿಚಾರ ಮಾಡಿ ಹೇಳು, ನಿಮ್ಮ ಮನೆಗೆ ಸಕ್ಕರೆ ಎಲ್ಲಿಂದ ಬರುತ್ತದೆ?

ವಿದ್ಯಾರ್ಥಿ- ಅಕ್ಕಪಕ್ಕದ ಮನೆಗಳಿಂದ ಸಾಲ ತರ್ತೀವಿ ಸಾರ್. —ಶಾಂತಾರಾಮ

*

ಒಮ್ಮೆ ಒಬ್ಬ ಮುದುಕಿ ಸಂಚಾರ ಹೆಚ್ಚಿಗಿರುವ ಒಂದು ಬೀದಿಯ ಮಧ್ಯದಲ್ಲಿ ನಿಂತು ಆಚೆ ಬದಿಯಲ್ಲಿದ್ದ ಪೋಲೀಸನನ್ನು ಕುರಿತು "ಆಸ್ಪತ್ರಿಗೆ ಬೇಗ ತಲುಪುವ ದಾರಿ ಯಾವುದಪ್ಪಾ?" ಎಂದು ಕೇಳಿದಳು. ಆ ಪೋಲೀಸ ಅದಕ್ಕೆ "ಈಗ ನೀವಿರುವ ಜಾಗದಲ್ಲೆ ಒಂದೈದು ನಿಮಿಷ ನಿಂತರೆ ಸಾಕು" ಎಂದು ಉತ್ತರವಿತ್ತ. —ಮಾಧವ

*

"ಸ್ವಾಮೀ, ಹೇರ್ ಕಟಿಂಗ್ ಆಗಬೇಕು ತಾನೇ? ಹ್ಯಾಗೆ ಮಾಡಲಿ?"

"ಒಂದಕ್ಷರವನ್ನೂ ಮಾತಾಡದೆ ಬಾಯಿ ಮುಚ್ಚಿಕೊಂಡು."

ರಾಧಾಬಾಯಿ- ಯಾಕೊ ಕಿಟ್ಟು, ದಾರ ಹಿಡಿದುಕೊಂಡು ಚಪ್ಪಲಿನ ಹತ್ತಿರ ನಿಂತಿರುವಿ?

ಕಿಟ್ಟು- ಅಮ್ಮಾ, ನಿನ್ನೆ ನೀನು ಅಪ್ಪನ ಹತ್ತಿರ ಚಪಲಹಾರ ಬೇಕು ಎನ್ನುತ್ತಿದ್ದಿ. ಅದಕ್ಕೆ.....

*

ಅತ- ಎಲಾ! ನಿಮ್ಮ ಮುಖವನ್ನು ಮತ್ತೆಲ್ಲಿಯೊ ನೋಡಿದಂತಿದೆಯಲ್ಲ?

ಈತ- ಸಾಧ್ಯವಿಲ್ಲ. ನಾನು ಹುಟ್ಟಿದಾಗಿನಿಂದಲೂ ನನ್ನ ಮುಖ ಇಲ್ಲಿಯೇ- ಈ ನನ್ನ ಎರಡು ಕಿವಿಗಳ ನಡುವೆಯೆ ಇದೆ.

*

ಕೋರ್ಟಿನ ಆವಾರದಲ್ಲಿ ಹತ್ತಾರು ಜನರೊಡನೆ ನಿಂತಿದ್ದ ಆ ಗೃಹಸ್ಥರು ಒಬ್ಬ ಮುಖಂಡನಂತೆ ಕಾಣುತ್ತಿದ್ದರು. ಅಲ್ಲಿ ಏತಕ್ಕೊ ಬಂದಿದ್ದ ಸುದ್ದಿಗಾರನೊಬ್ಬ ಆವರನ್ನು "ನೀವು ಗಾಂಧಿವಾದಿಗಳೇ?" ಎಂದು ಕೇಳಿದ.

'ಇಲ್ಲ' ಉತ್ತರ ಬಂತು.

"ನೀವು ಸಮಾಜವಾದಿಗಳೇ?"

"ಅಲ್ಲ, ನಾನು ಪ್ರತಿವಾದಿ."

*

ನಾಟಕಸಂಸ್ಥೆಯೊಂದರ ಮಾಲೀಕ ತನ್ನ ಸಂಸ್ಥೆಯಲ್ಲಿ ನಟನಾಗಿ ಸೇರಲು, ಅವಕಾಶ ಕೇಳಿಬಂದಿದ್ದವರೊಬ್ಬರಿಗೆ ಹೇಳಿದ.

"ಮಹನೀಯರೇ, ದಯಮಾಡಿ ನಿಮ್ಮ ವಿಳಾಸವನ್ನಿಲ್ಲಿರಿಸಿ ಹೋಗಿ. ನಾನು ನಿಮ್ಮನ್ನು ವೃದ್ಧರ ಪಾತ್ರಕ್ಕೆ ಆಹ್ವಾನಿಸುತ್ತೇನೆ."

"ವೃದ್ಧರ ಪಾತ್ರವೇ? ಆದರೆ ನಾನಿನ್ನೂ ತರುಣನಲ್ಲ ಸ್ವಾಮಿ" ಅದಕ್ಕೆ ಮಾಲೀಕ ಹೇಳಿದ "ನಾನು ನಿಮ್ಮನ್ನು ಆಹ್ವಾನಿಸುವ ಸಮಯಕ್ಕೆ ನೀವು ಖಂಡಿತ ವೃದ್ಧಾಪ್ಯಕ್ಕೇರಿರುವಿರಿ."

— ರವೀಂದ್ರನಾಥ ಎಸ್. ಬಿ.

*

"ವೆಬ್‌ಸ್ಟರ್ ಡಿಕ್ಷನರಿಯ ಅಭ್ಯಾಸ ಮಾಡಿದ್ದೀರಾ?"

"ಇಲ್ಲ. ಚಲಚ್ಚಿತ್ರವಾಗಿ ಬಂದ ಬಳಿಕ ನೋಡಿದರಾಯಿತು ಎಂದು ಬಿಟ್ಟಿದ್ದೇನೆ."



ಉಪಾಧ್ಯಾಯರು ಪರೀಕ್ಷೆ ನಡೆದ ನಂತರ ತರಗತಿಯಲ್ಲಿ ಹೇಳುತ್ತಿದ್ದರು: "ಪ್ರಿಯ ವಿದ್ಯಾರ್ಥಿಗಳೇ, ತಮ್ಮ ಉತ್ತರ ಪತ್ರಿಕೆಗಳನ್ನೆಲ್ಲಾ ನೋಡಿ ಬಹು ಸಂತಸವಾಯಿತು. ಅವನ್ನೆಲ್ಲ ಒಂದು ಅಮೂಲ್ಯ ಸ್ಥಾನದಲ್ಲಿರಿಸಬೇಕೆಂದು ಯೋಚಿಸಿದಾಗ ನನಗೆ ಹೊಳೆಯಲೇ ಇಲ್ಲ. ಎಲ್ಲರೂ ತಮಗೆ ತೋರಿದ ಸ್ಥಾನ ಸೂಚಿಸಿ, ತಮ್ಮ ಹೆಸರು ಬರೆದು ಇಲ್ಲಿ ಕೊಡಿ. ಸರಿಯಾದದ್ದಕ್ಕೆ ಒಂದು ರೂ. ಬಹುಮಾನ ಕೊಡುತ್ತೇನೆ."

"ಬಹುಮಾನ ಪಡೆದ ವಿದ್ಯಾರ್ಥಿ ಗೋವಿಂದ. ಅದನು ಸೂಚಿಸಿರುವ ಸ್ಥಳ: "ವೇಸ್ಟ್ ಪೇಪರ್ ಬ್ಯಾಸ್ಕೆಟ್!"— ಉತ್ತರಗಳನ್ನೆಲ್ಲಾ ಪರಿಶೀಲಿಸಿದ ನಂತರ ಉಪಾಧ್ಯಾಯರು ತೀರ್ಪಿತ್ತರು.

— ಸು. ರಾ. ಕನಕರಾಜ

ಕರ್ತವ್ಯದ ಕಹಳೆ

ದಿವಂಗತ ಪಂಡಿತ ತಾರಾನಾಥ

ಕರ್ತವ್ಯ! ಕರ್ತವ್ಯ! ಇದೇ ಕೂಗು. ಎಲ್ಲ ಕಡೆಯಿಂದಲೂ ಕರ್ಮವು ನನ್ನನ್ನು ತೊಡಗಿಸಿರುವುದು. ಅದರ ಕೂಡ ನನ್ನ ಹಗೆಯಿಲ್ಲ. ಯಾಕಂದರೆ ಭಕ್ತಿ, ಜ್ಞಾನ, ಕರ್ಮಗಳನ್ನು ನಾನು ಮನಮುಟ್ಟ ಪ್ರೀತಿಸುತ್ತೇನೆ.

"ಕರ್ಮ, ಕರ್ಮ, ಸತ್ಯವು ಸರ್ವತ್ರ ತುಂಬುವಂತೆ ಕರ್ಮ." ನನ್ನ ವಿವೇಕವಾದರೂ ಒತ್ತಿ ಒದರಿ ಇದನ್ನೇ ಸಾರುತ್ತದೆ. ಕರ್ಮವು ಪ್ರಕೃತಿಯ ಧರ್ಮವು. ಸತ್ತ ಮೇಲೆಯೇ ವಿಶ್ರಾಂತಿ. ಗಂಡಸರು, ಹೆಂಗಸರು, ಸಜ್ಜನರು, ದುರ್ಜನರು ಎಲ್ಲರೂ ಕರ್ಮದಲ್ಲಿ ತೊಡಗಿರುವರು. ಹೇತುವಷ್ಟೇ ಬೇರೆ ಬೇರೆ. ಕರ್ಮ ತಪ್ಪಿದ್ದಲ್ಲ. ಜನ್ಮಸಾಫಲ್ಯಕ್ಕಾಗಿ ಕೆಲವರು, ಕರ್ಮಸಾಫಲ್ಯಕ್ಕಾಗಿ ಕೆಲವರು. ಒಬ್ಬರು ಗುರುಗಳಾಗಿ ಬಾಳುವರು; ಮತ್ತೊಬ್ಬರು ಗುಲಾಮರಾಗಿ ಸಾಯುವರು.

ಜನ್ಮಸಾಫಲ್ಯವು ಹಿರಿದಾದ ಗುರಿಯು; ಅದಕ್ಕಾಗಿ ಆದ ಕರ್ಮದಿಂದ ಭವಯಾತ್ರೆಯು ಸಾರ್ಥಕವೆನಿಸುವುದಲ್ಲದೆ ಅದರಲ್ಲಿ ಸೊಗಸೆನಿಸುವುದು, ಗೊತ್ತಿರಲಿ. ಅದು ಕೈಗೂಡದಿದ್ದರೂ ಕೈಲಾದಮಟ್ಟಿಗೆ ಅದನ್ನು ಸಾಧಿಸಲು ಸರ್ವಶಕ್ತನಾದ ಪ್ರಭುವು ಸರ್ವರಿಗೂ ಶಕ್ತಿಯನ್ನಿತ್ತಿರುವನು.

ಆದರೆ ಸಾಧನೆಯು ಕಠಿನ. ಹಿಡಿದರೆ ಕಡಿಯುವುದು, ಬಿಟ್ಟರೆ ಓಡುವುದು. ಬರಿ ಧ್ಯಾನದಿಂದ ನಿನ್ನ ಮೆಟ್ಟಿಗೆ ನೀನು ಮುಟ್ಟಲಾರೆ. ನಿನ್ನನ್ನು ಪ್ರಪಂಚಕ್ಕೆ ಅಂಟಿಸಿ ಮನಶ್ಶಾಂತಿಯನ್ನು ಆರಿಸಿ ಬಿಡುವ ಸ್ವಾರ್ಥವನ್ನು ಕಳೆ; ಇಚ್ಛಾಸಮೂಹವನ್ನು ಸಂಯಮಿಸಿ ಮನಸ್ಸನ್ನು ಗೆಲ್ಲಲು ಕಲಿ. ಹೀಗಾಗಿ ಕ್ರತುಶಕ್ತಿಯು ಬಲಿತಂತೆ ಧ್ಯಾನಯೋಗದ ಹುರುಳು ಹೊಳೆದೀತು.

ಯೋಗವು ನಿಸ್ಸಂಶಯವಾಗಿ ಬಲು ಬಿಗಿಯಾದ ಕೆಲಸ; ಯಾಕಂದರೆ ಇಂದ್ರಿಯಗ್ರಾಮವು ಬಲಿಷ್ಠವು. ಅಂತರಂಗವು ಕೆಡುತ್ತಲೆ ಬಹಿರಂಗವು ಬಾಡುತ್ತದೆ. ಇದು ಸಾರ್ವತ್ರಿಕ ನಿಯಮ. ಜನ್ಮಸಾಫಲ್ಯಕ್ಕಾಗಿ ತ್ರಿಕರಣ ಪೂರ್ವಕ ಮಾಡಿದ ಕರ್ಮವೇ ಕರ್ಮ, ಇದೇ ಧರ್ಮಾಚರಣೆ.

ಧರ್ಮದಲ್ಲಿ ತ್ರಿಶಂಕು ಆಸನ ಬೇಡ. ಕರ್ತವ್ಯ ತಿಳಿದು ಕರ್ಮ ಮಾಡು, ಮಂದಿ ಗುಜುಗುಟ್ಟುವುದನ್ನು ಮನಸ್ಸಿನಲ್ಲಿ ತರಬೇಡ. ಯಾಕಂದರೆ ಚಿಂತೆಗಳು ಚಿಂತಿಸಿದಂತೆ ಹೆಚ್ಚಾಗುತ್ತವೆ ಬಹಿರಂಗದ ಗಾಳಿಯಿಂದ ಅಂತರಂಗವನ್ನು ಅಲ್ಲಾಡಿಸಕೊಡಬೇಡ. ದೃಢ ಉತ್ಸಾಹವು ಅಸ್ವಾಸ್ಥ್ಯವನ್ನೆಲ್ಲ ಹೋಗಲಾಡಿಸುವುದು. ಸುಖಲೋಲುಪ ಸಂಸಾರಿಗಳೇನನ್ನುವರೋ ಅದನ್ನು ಎಳ್ಳಷ್ಟೂ ಲಕ್ಷಿಸದೆ ಸತ್ಯದ ಸಾಕ್ಷಾತ್ಕಾರಕ್ಕಾಗಿಯೂ ಆತ್ಮೋದ್ಧಾರಕ್ಕಾಗಿಯೂ ಕರ್ಮ ಮಾಡುವವನ ಎದೆಯು ವಜ್ರಕ್ಕೂ ಅಭೇದ್ಯವು.

ಮುದ್ದೇ! ಇಗೊ! ಇದೇ! ನಿನ್ನ ಕರ್ಮದ ಕಾಲ. ಇನ್ನೂ ಎಳೇ ಹರೆಯದವ, ಎಂಥ ಏರಿಯನ್ನೂ ಏರುವಿ! ಕಟ್ಟು, ಈಗಿಂದೀಗ ಟೊಂಕ ಕಟ್ಟಿಕೊ! ಬಿತ್ತುವ ಹೊತ್ತಿಗೆ ದುಡಿಯದವರು ಸುಗ್ಗಿಯ ಹೊತ್ತಿಗೆ ಮಡಿಯುವರು. ಹೊತ್ತನ್ನು ಹೋಗಗೊಡಬೇಡ. ನಾವೇನು? ನಮ್ಮ ಜನ್ಮವೇನು? ಇಂದೆ ಹೊನ್ನು ಮುಂದೆ ಮಣ್ಣು!

ಇಲ್ಲಿಯ ಹಾದಿಯ ಮೇಲೆ ಕಳ್ಳರಿರುವರು. ದುರಭಿಮಾನ, ದುರಾಗ್ರಹ ಇವರು ಆ ತಂಡದ ಮುಖಂಡರು. ಅವರನ್ನು ಕುತ್ತಿಗೆಯ ಮೇಲೆ ಕೈ ಕೊಟ್ಟು ದಬ್ಬಿಬಿಡು; ಕಾಲಕೆಳಗೆ ವೆ ಟ್ಟಿಬಿಡು. ಜಂಬವು ತಿಳಿಗಣ್ಣೊಳಗಣ ಹೂವು. ಅದರಿಂದ ಕಣ್ಣು ಕಳಕೊಳ್ಳಬೇಡ. ನೀನು ಮೈಮರೆತು ಇರುವಾಗ ನಿನ್ನನ್ನು ಇವರು ಕೊಲ್ಲುವರು. ಇಂಥ ಅಪಮರಣಕ್ಕೆ ಈಡಾಗುವಿಯಾ?

ಬಿತ್ತಲಿಕ್ಕೆ ಆರಂಭಿಸು. ಏಳು, ನೆಲ್ಲು ಬೆಳೆಯಬೇಕಾದಲ್ಲಿ ಹುಲ್ಲು ಬೆಳೆಯಗೊಡಬೇಡ. ಬ್ರಹ್ಮಾಂಡ ಕೆಲಸ ಮಾಡಬೇಕಾಗಿದೆ. ಕರ್ಮದಿಂದ ಜ್ಞಾನವು ಲಭಿಸುವುದು. ಜ್ಞಾನವೇ ಧನ. ಆ ಧನವನ್ನು ವೆಚ್ಚಮಾಡು. ಕೈಕಟ್ಟಿಕೊಂಡು ಕೂಡ್ರಬೇಡ. ಜ್ಞಾನ-ಕರ್ಮಗಳ ಸಂಗಮವಾಗಲಿ.

ಆಶಾಬಂಧವು ಕೈಯೊಳಗಿನಾಳು; ಶ್ರದ್ಧೆಯು ಕೈಯೊಳಗಿನ ಕೋಲು! ತಿಳಿಯಿತೇ. ಸತ್ಯ ತಿಳಿದ ಮೇಲೆ ಮತ್ತೇನು ಉಳಿಯಿತು! *

‘ಬಿಲಹರಿ’ಯವರ ಮಾರ್ಮಿಕ ತಮಿಳು ಕಥೆ


ಮುತ್ತಿನಂಥ ಹೆಂಡತಿ

ಅನು: ಚಿರಂಜೀವಿ

ಮೂಡಿಯೂ ಮೂಡದಂತಿದ್ದ ಆ ಬೆಳಗಿನ ಜಾವದ ಬೆಳಕಿನಲ್ಲಿ ಆ ಮನೆಯ ಮುಂದೆ ಕುದುರೆಯ ಗಾಡಿಯೊಂದು ಬಂದು ನಿಂತಿದ್ದನ್ನು ಯಾವ ದೇವತೆ ಒಳಗೆ ಹೋಗಿ ತಿಳಿಸಿತೋ ತಿಳಿಯಲಿಲ್ಲ. ಮರು ನಿಮಿಷವೇ ಹುತ್ತದಿಂದ ಮಳೆಗಾಲದ ಹುಳುಗಳು ಹೊರಬಂದಂತಾಯಿತು.

ಹದಿನೆಂಟಕ್ಕೆ ಮೇಲೆಯೇ ಸಂಸಾರಗಳಿಂದೊಡಗೂಡಿದ್ದ ವಠಾರ ಅದು, ಪುಟ್ಟ ಗ್ರಾಮದಂತಹುದು. ಚಿಕ್ಕವೂ ದೊಡ್ಡವೂ ಆದ ಕಿರಿಯರ ಪಟಾಲಮ್ಮು ಒಂದೂವರೇ ಡಜನ್ನಿಗೂ ಮೇಲಿತ್ತು. ಹಣ್ಣು ಹಣ್ಣು ಮುದುಕರ ಸಂಖ್ಯೆ ಅರ್ಧ ಡಜನನ್ನು ಮುಟ್ಟುತ್ತಿತ್ತು. ಹತ್ತಕ್ಕೆ ಮೇಲ್ಪಟ್ಟು ಯುವಕರು, ಅವರೆಲ್ಲರನ್ನು ವರಿಸಿದ್ದ ಹೆಣ್ಣು ಜೀವಗಳು. ಇವರೆಲ್ಲರೂ ಮನೆಯ ಮುಂದಿನ ಬ್ರಹ್ಮಾಂಡವಾಗಿದ್ದ ಜಗುಲಿಯ ಮೇಲೆ ನೆರೆದರು.

ಕುದುರೆ ಗಾಡಿಯಿಂದ ದೃಢಕಾಯನೂ ಸುಂದರನೂ ಆಗಿದ್ದ ಯುವಕನೊಬ್ಬ ಕೈಯಲ್ಲಿ ಚೀಲವೊಂದನ್ನು ಹಿಡಿದುಕೊಂಡು ಕೆಳಗಿಳಿದು



ಬಂದ.

ನೆಲದಲ್ಲಿ ಏರು-ತಗ್ಗುಗಳು ಬೇಕಾದಹಾಗಿದ್ದ ಆ ಜಗುಲಿಯ ಮೂಲೆಯಲ್ಲಿ, ಇನ್ನೂ ಉಳಿದಿದ್ದ ಎರಡು ಹಲ್ಲುಗಳನ್ನು ಕಾಲು ಘಂಟೆ ಹೊತ್ತಿನಿಂದ, ಬೇವಿನ ಕಡ್ಡಿಯೊಂದರಿಂದ ಕೆದಕುತ್ತಾ ಕುಳಿತಿದ್ದ ಮುದುಕರೊಬ್ಬರು ತಮ್ಮ ಕಣ್ಣುಗಳನ್ನು ಅಗಲಿಸಿಕೊಂಡರು.

"ಈ ಹುಡುಗನನ್ನು ನೋಡಿದರೆ ನಮ್ಮ ಭಾಸ್ಕರನ ಹಾಗೆಯೇ ಇದ್ದೈಲ್ಲಾ!...." ಎಂದು ಬಾಯಿ ತೆರೆದು ಮಾತನಾಡಿದುದೇ ತಡ, "ಹಾ-ಅಯ್ಯಾ ಹೌದು! ಭಾಸ್ಕರನೇ!" ಎಂದು ಮತ್ತೊಬ್ಬ ನಡುವಯಸ್ಸಿನವರು ಅವರೊಂದಿಗೆ ದನಿಗೂಡಿಸಿದರು.

"ಹೌದು ಕಣೇ ಹೌದು! ....ಭಾಸ್ಕರನೇ ಕಣೇ!....ನೆನ್ನೆಯ ಕೂಸು ಅವ. ಸರಸರನೇ ತೆಂಗಿನ ಮರದ ಹಾಗೆ ಬೆಳೆದುಬಿಟ್ಟಿದ್ದಾನೆ. ." ಮುದುಕಿಯೊಬ್ಬಳ ಬೊಚ್ಚುಬಾಯಿ ಮೆಲುಕು ಹಾಕುತ್ತಾ ಹೇಳಿತು.

"ಭಾಸ್ಕರ್.... ಭಾಸ್ಕರ! .... ನಮ್ಮ ಭಾಸ್ಕರ ಮಾವ!...."

ಜಗುಲಿಯ ಮೇಲೆ ನಿಂತುಕೊಂಡಿದ್ದ ಕಿರಿಯರ ಒಂದು ಪುಟ್ಟ ತಂಡ ಗದ್ದಲವನ್ನೆಬ್ಬಿಸುತ್ತಾ ಕೆಳಗೆ ಧುಮುಕಿತು.

ಮರು ನಿಮಿಷ—

ಸಂದಣಿಯೂ ಗದ್ದಲವೂ ಉಕ್ಕಿ ಹೊರಬರುತ್ತಿದ್ದ ಆ ವಠಾರದ ಬಾಗಿಲಿನಲ್ಲಿ ಮೌನವು ಕವಿಯಿತು. ಅಲ್ಲಿ ನೆರೆದಿದ್ದವರೆಲ್ಲರೂ ಬಂಡಿಯಿಂದ ಇಳಿದ ಮತ್ತೊಂದು ವ್ಯಕ್ತಿಯನ್ನು ಕಣ್ಣು ರೆಪ್ಪೆ ಮಿಟುಕಿಸದೆಯೇ ನೋಡಲು ಆರಂಭಿಸಿದರು.

ಗಗನ ತೆರೆಯ ಮೇಲೆ ಫಳೀರೆಂದು ತೋರಿ ಮರೆಯಾಗುವ ಮಿಂಚೊಂದು ಸಾಕ್ಷಾತ್ಕಾರವಾಗಿ ಬಂಡಿಯಿಂದ ಕೆಳಗಿಳಿದಂತಾಯಿತು. ಅದು ಒಂದು ಬಾರಿ ತನ್ನ ಸುತ್ತಮುತ್ತಲೂ ನಾಚಿಕೆಯಿಂದ ದೃಷ್ಟಿಹರಿಸಿ, ಆ ಸುಂದರ ಯುವಕನ ಹಿಂದೆ ನಿಂತಿತು.

ಭಾಸ್ಕರ ಸ್ವಲ್ಪ ಅನುಮಾನಿಸಿದ. ಒಮ್ಮೆ ಹಿಂತಿರುಗಿ ನೋಡಿದ. ಆ ಹೆಣ್ಣಿನ ಮುಖದ ಮೇಲಿನ ಮುಗುಳು ನಗೆ ಮಾಸಿರಲಿಲ್ಲ. ವಠಾರದ ಹೊರಬಾಗಿಲಿನಿಂದಲೇ ಇಬ್ಬರೂ ಒಳಗೆ ಪ್ರವೇಶಿಸಿದರು.

"ಇಲ್ಲ್ನೋಡಪ್ಪಾ ಮಗು. ಒಂದು ನಿಮಿಷ ಹಾಗೆಯೇ. ನಿಲ್ಲು ಇದೋ ಬಂದುಬಿಟ್ಟೆ!" ಎಂದವರೇ ಯಾರೋ ಒಬ್ಬ ವಯಸ್ಸಾದಾಕೆ ಒಳಗೆ ಓಡಿದರು. ಮರುನಿಮಿಷವೇ ತಟ್ಟೆಯೊಂದನ್ನು ಹಿಡಿದುಕೊಂಡು ಪ್ರತ್ಯಕ್ಷವಾದರು.

"ಪೂರ್ವ ದಿಕ್ಕನ್ನು ನೋಡ್ತಾ ನಿಂತ್ಕೊಳ್ಳೋ! ಅವಳನ್ನೂ ನಿಲ್ಲೂಂತ ಹೇಳು! ನಮಗಂತೂ ಲಗ್ನ ಪತ್ರಿಕೆಯೂ ಸಿಗಲಿಲ್ಲ . . . ಹೂಂ . . . ಪರವಾಗಿಲ್ಲ!" ಎಂದೆನ್ನುತ್ತಾ ಆರತಿ ಎತ್ತಿದರು ಆಕೆ.

ಮನೆಯೊಳಕ್ಕೆ ಕಾಲನ್ನಿಟ್ಟರು ಅವರಿಬ್ಬರು. ಹಲ್ಲು ಕೆದಕುತ್ತಿದ್ದ ಆ ಮುದುಕರು ಅವರ ಸನಿಹಕ್ಕೆ ಬಂದರು.

"ಏನಪ್ಪಾ! ಇಲ್ಲಿ ಇರುವವರೆವಿಗೂ "ತಾತಾ, ತಾತಾ" ಎಂದು ಪ್ರಾಣ ಬಿಡುತ್ತಿದ್ದೆಯಲ್ಲಾ! ಯಾವ ಸಮಯದಲ್ಲಿ ಆ ತಾತನನ್ನು ನೆನೆಯಬೇಕೋ ಆ ಸಮಯದಲ್ಲಿ ಪಾಪ ಮರೆತುಬಿಟ್ಟೆಯೇನೋ?"

ಭಾಸ್ಕರ ಸುಮ್ಮನೇ ನಕ್ಕ.

"ಏನೋಲೇ! ಊರುಬಿಟ್ಟು ಹೋಗಿ ಒಂದೂವರೆ ವರ್ಷ ಸಹ ಆಗ್ಲಿಲ್ಲಾ; ಆಗ್ಲೇ ಹತ್ತುವರ್ಷದ ಪರಿಚಯಕ್ಕೆ ಪೂರ್ತಿಯಾಗಿ ವಿರಾಮ ಕೊಟ್ಟಿರೋ ಹಾಗಿದ್ಯಲ್ಲೋ!" ಇದು ಮತ್ತೊಬ್ಬಾತನ ವಿಚಾರಣೆ.

"ಹಾಗೆಲ್ಲಾ ಏನೂ ಇಲ್ಲ. ಏನೋ ದಿಢೀರೆಂದು ಎಲ್ಲಾ ನಿಶ್ಚಯ ಆಗೋಯ್ತು. ನಿಮಗೆಲ್ಲರಿಗೂ ವಿಷಯ ತಿಳಿಸೋದಕ್ಕೂ ಹೊತ್ತಿಲ್ಲದೆ ಹೋಯಿತು" ಎಂದು ಸಮಾಧಾನದ ಮಾತುಗಳನ್ನು ಹೇಳಿದ ಭಾಸ್ಕರ.

"ಅದ್ಹೇಗಪ್ಪಾ ನಮ್ಮ ನೆನಪು ಬರ್ಬೇಕು?

ಅರಗಿಳಿಯ ಹಾಗಿರುವ ಹೆಂಡತಿಯನ್ನು ನೋಡಿದ ಮೇಲೆ ನಿನಗೆ ಪ್ರಪಂಚವೇ ಮರೆತು ಹೋಗಿರಬೇಕು ! . . ."

ಹೆಂಗಸರಿದ್ದ ಗುಂಪಿನಿಂದ ಒಬ್ಬರು ಅಧಿಕಾರ ವಾಣಿಯಿಂದ ಪುಕಾರು ಮಾಡಿದರು.

" ಸರಿ ! ಸರಿ ! ಬಂದವರನ್ನು ಬಾಗಿಲಲ್ಲಿ ನಿಲ್ಲಿಸಿಕೊಂಡು ಏನು ಮಾತು? ಒಳಗೆ ಬರಲಿ" — ಎಂದು ಒಂದು ದನಿ ಅಪ್ಪಣೆ ಮಾಡಿತು.

ಗುಂಪು ಚದುರಿ ದಾರಿ ಬಿಟ್ಟಿತು. ಗಂಡು, ಹೆಣ್ಣು, ಕಿರಿಯ ಹಿರಿಯರ ಮಧ್ಯೆ ಮುದುರಿಕೊಂಡು ಒಳಗೆ ಪ್ರವೇಶಿಸಿದರು ದಂಪತಿಗಳು.

ದೊಡ್ಡ ಅಂಗಳ. ಅದಕ್ಕೆ ಸೇರಿದಂತೆಯೇ ಒಂದು ಕೊಳಾಯಿ. ಅದರಡಿಯಲ್ಲಿ ಏಳೆಂಟು ಬಕೀಟುಗಳು. ಹೇರಳವಾಗಿ ಕೊಳೆಯಾದ ಬಟ್ಟೆಗಳು ಅಲ್ಲಿ ಇಲ್ಲಿ ಬಿಸಾಡಲ್ಪಟ್ಟಿದ್ದುವು. 'ಕ್ಯೂ' ವರಸೆಯಲ್ಲಿ ಕೊಡಗಳು. ಕೊಳಾಯಿಯನ್ನು ಅಂಟಿಕೊಂಡೇ ಹರಿಯುತ್ತಿದ್ದ ಚರಂಡಿ. ಅದರಿಂದ ಹೊರಬರುತ್ತಿದ್ದ ಸಣ್ಣ ದುರ್ವಾಸನೆ. ಕೆದರಿದ ತಲೆಯೂ ಕೊಳೆಯ ಉಡುಪೂ ಇದ್ದ ಸಣ್ಣ ಮಕ್ಕಳ ಗುಂಪು. ಮತ್ತೆ ಸ್ವಲ್ಪ ದೂರದಲ್ಲಿ ದೊಡ್ಡದೊಂದು ಗುಂಪು. ಪ್ರತಿಯೊಬ್ಬರಿಗೂ ಅಂದು ಬಿಡುವಿರುವಂತೆಯೇ ತೋರುತ್ತಿತ್ತು. ಹೊರಬಾಗಿಲಿಗೆ ಬರದೆಯೇ ಒಳಗಡೆಯೇ ತಮ್ಮಲ್ಲಿ ತಾವೇ ಜೋರಾಗಿ ಹರಟೆ ಹೊಡೆಯುತ್ತಿದ್ದ ಜನರ ಗದ್ದಲ ಅಗಾಧವಾಗಿತ್ತು.

ಅವೆಲ್ಲವೂ ಪರಿಚಿತವಾದುವೇ. ಭಾಸ್ಕರನಿಗೆ ಅವಾವುವೂ ಹೊಸ ವಿಷಯಗಳಾಗಿರಲಿಲ್ಲ. ಇದೇ, ಈ ದೊಡ್ಡ ಗುಂಪಿನೊಡನೆಯೇ ಅವನು, ಇದೇ ಊರಿನಲ್ಲಿ ೧೦ ವರ್ಷಗಳಿಗೆ ಮೇಲ್ಪಟ್ಟು- ಅಲ್ಲಿ ವಾಸಿಸುತ್ತಿದ್ದವರ ಅನುಮತಿ – ಸ್ನೇಹ ಪಡೆದು, ಒಂದು ಕಾಸಿನ ಖರ್ಚಿಲ್ಲದೇ, ತನ್ನ ಪುಟ್ಟ ಪೆಟ್ಟಿಗೆ ಪುಸ್ತಕಗಳೊಂದಿಗೆ, ಕಾಲವನ್ನು ದೂಡಿದ್ದಾನೆ: ಆ ಊರವರ ದಯೆಯಿಂದ ಸ್ಕೂಲ್ ಫೈನಲ್ ಮುಗಿಸಿ, ಆರು ವರ್ಷಗಳ ಕಾಲ ಇದೇ ಮನೆಯ ನೆಲವನ್ನು ಸವೆಸಿದ್ದಾನೆ. ಅನಾಥನಾಗಿದ್ದ ಅವನಿಗೆ ಆಸರೆಯನ್ನು ಇತ್ತುದು ದುರ್ನಾತದ ಮೋರಿಯಿದ್ದ ಈ ಮನೆ ತಾನೇ !

" ಇಲ್ನೋಡೋ ಭಾಸ್ಕರ. ನೀನಿವತ್ತು ನಮ್ಮ ಮನೇಲೇ ಊಟ ಮಾಡಬೇಕು, ಹೌದು."

" ಇಲ್ಲಪ್ಪಾ ಮಗು, ನಮ್ಮನೇಲೇ ನಿನ್ನ ಬಟ್ಟೆ ಬರೆಗಳನ್ನು ಹಾಕ್ಬಿಟ್ಟು, ಊಟ ಮಾಡು ...."

" ಲೋ ಭಾಸ್ಕರ, ನನ್ನ ಮೊಮ್ಮಗನಿಗೆ ಇವತ್ತು ಹುಟ್ಟಿದ ಹಬ್ಬ ಕಣೋ ! ಅಪರೂಪವಾಗಿ ಬಂದಿದ್ದೀಯಾ. ಅದೂ ಪತ್ನೀ ಸಹಿತವಾಗಿ ಬಂದಿದ್ದೀಯಾ ! ನಮ್ಮನೇಲೇ ನೀನಿವತ್ತು ಕೈ ತೊಳೆಯಬೇಕು, ತಿಳೀತೇ ?"

ಮೂಲೆ ಮೂಲೆಯಲ್ಲೂ ಒಬ್ಬೊಬ್ಬ ಆಮಂತ್ರಕರು. ಅವನ ಸುಂದರ ಮುಖದಲ್ಲೂ ಬೆಪ್ಪುಕಳೆ ಕವಿಯಲು, ತನ್ನ ಹೆಂಡತಿಯ ಕಡೆಗೆ ನೋಡಿದ ಭಾಸ್ಕರ. ಆದರೆ ಆಕೆ ತನ್ನ ತಲೆಯನ್ನು ತಗ್ಗಿಸಿ ದೃಷ್ಟಿಯನ್ನು ಕೆಳಹರಿಯಬಿಟ್ಟಳು. ಭಾಸ್ಕರನಿಗೆ ಆಗ ನಾಚಿಕೆ ದಾಕ್ಷಿಣ್ಯಗಳು ಏಕಕಾಲದಲ್ಲುದಿಸಿದುವು. ತನ್ನ ಆಜಾನುಬಾಹು ದೇಹ ಒಂದು ಗೇಣಾದ ಅನುಭವ ಅವನಿಗಾಯಿತು. "ಇಲ್ಲಿಗೆ ಬಂದುದೇ ತಪ್ಪಾಯಿತು. ತಾನೊಬ್ಬನೇ ಬಂದು ಮುಗಿಸಿದ್ದಿದ್ದರೇ ಸರಿಯಿರುತ್ತಿತ್ತು. ಅವಳನ್ನೂ ಸಹ ಕರೆತಂದುದಾಯಿತು. ತನಗೇನೋ ಇದೆಲ್ಲವೂ ರೂಢಿಯಾದದ್ದೇ."

" ಹುಂ . . . . . ಮಗೂ : ಬಟ್ಟೆ ತೆಗೆದು ಸ್ನಾನ ಮಾಡ್ಬಾರ್ದೇನಪ್ಪಾ ? ನೋಡು, ನಿನಗಾಗಿ ನಲ್ಲಿಯ ಕೆಳಗೆ ಚೊಕ್ಕಟ ಮಾಡಲಾಗಿದೆ." ಯಾವುದೋ ಒಂದು ಔಪಚಾರಿಕ ದನಿ.

ನಲ್ಲಿಯ ಬಳಿ ಶುದ್ಧವಾಗಿದ್ದಿತು– ಅಲ್ಲ, ಅಲ್ಲ, ಆ ಕೆಲವು ನಿಮಿಷಗಳಲ್ಲಿ ಅದು ಶುದ್ಧವಾಗಿಸಲ್ಪಟ್ಟಿತ್ತು.

ಮತ್ತೊಂದು ಸಾರಿ ಅವಳತ್ತ ಹಿಂತಿರುಗಿ ನೋಡಿದ ಭಾಸ್ಕರ. ಅವಳಾದರೋ ಅದೇ ಮುಗುಳ್ನಗೆಯೊಂದಿಗೇ ತನ್ನ ಸುತ್ತಮುತ್ತಲೂ ನಡೆಯುತ್ತಿದ್ದ ಸೂಕ್ಷ್ಮ ನೆಲೆಯನ್ನು ಕಂಡು ಭ್ರಮೆಗೊಂಡು ನಿಂತುಕೊಂಡಿರುವಂತೆ ತೋರಿತು.

ಒಂದು ಬಗೆಯಾಗಿ ಸ್ನಾನ ಮುಗಿಯಿತು. ಅಲ್ಲಿನ ಯಾವ ಸಂಸಾರಸ್ಥರೋ ಒಂದು ಮುತ್ತುಗದ ಎಲೆಯಲ್ಲಿ ಏನನ್ನೋ ಹಾಕಿತಂದು, ಶುದ್ಧ ಮಾಡಲಾಗಿದ್ದ ನೆಲದ ಮೇಲೆ ಇಟ್ಟರು. ಅತಿಥಿಗಳಿಬ್ಬರೂ ಅದನ್ನು ತಿಂದು ಮುಗಿಸಿದರು.

"ಏನೋ, ಈವಾಗ ಎಲ್ಲೋ ಇದ್ದೀಯಾ? ಮದ್ರಾಸೋ ಬೊಂಬಾಯೋ?"

"ಏನಪ್ಪಾ ಮಗು, ಎಲ್ಲಿ ಕೆಲ್ಸ ಮಾಡ್ತೀ? ಕಂಪನಿ ಕೆಲ್ಸಾನಾ ಇಲ್ಲಾ ಸರ್ಕಾರದ ಕೆಲ್ಸಾನಾ? 'ಪಿಂಚನ್' ಬರುತ್ತಾ? ನಿನಗೆ ಏನು ಸಂಬಳ?"

"ಅದೆಲ್ಲಾ ಇರ್ಲಿ. ನಿನ್ ಹೆಂಡ್ತೀ ವಿಷ್ಯ ಹೇಳ್ಳೇ ಇಲ್ವಲ್ಲೋ? ಯಾವ ಕಡೆಯ ಹೆಣ್ಣು? ಮದ್ವೇ ಯಾ ವಾ ಗಾ ಯ್ತು? ಮಾವನಿಂದ ಆಸ್ತಿ ಏನಾದ್ರೂ ಬಂತಾ?"

"ಇದೇನು ಪ್ರಶ್ನೇನೇ? ಹೆಣ್ಣನ್ನು ನೋಡಿದ್ರೇ ದೊಡ್ಡ ಮನೆತನದವ್ಳಂತೇ ಕಾಣ್ತಾಳೆ! ಅದ್ರಲ್ಲೆಲ್ಲಾ ಭಾಸ್ಕರ ಗಟ್ಟಿಗನಲ್ವೇ? ಹಣ ಇರುವ ಜಾಗ ನೋಡೇ ಬಲೇ ಬೀಸಿರ್ತಾನೆ. ತಪ್ಪೇನು? ಹಿಂದೆ ಅವ ಅಲ್ಪಸ್ವಲ್ಪ ಕಷ್ಟಪಟ್ಟಿದ್ದಾನೆಯೇ? ಪಾಪ! ಅದನ್ನೆಲ್ಲಾ ಪರಿಹರಿಸಿಕೊಳ್ಳೋದು ಹ್ಯಾಗೆ?"

ಯಾವ್ಯಾವುವೋ ಪ್ರಶ್ನೆಗಳು. ಏನೇನೋ ಸಂಭಾಷಣೆಗಳು. ಆಗಾಗ್ಗೆ ಅಭಿಪ್ರಾಯಭೇದಗಳು.

ಎಲ್ಲಿ ಕೆಲಸ? ಏನು ಸಂಬಳ? ಹೆಂಡತಿ ತವರುಮನೆಯಿಂದ ಏನೇನು ತಂದಳು? ದೊಡ್ಡ ಮನೆತನದ ಹೆಣ್ಣೇ? ಅಥವಾ ಬಡವರ ಮಗಳೇ?

ಭಾ ಸ್ಕ ರ ಬೇಸರಿಸಿಕೊಂಡ; ಸಿಂಡರಿಸಿಕೊಂಡ. ಈ ಊರಿನಲ್ಲೇ ಇಳಿಯಬಾರದಿತ್ತು. ಇವೆಲ್ಲಾ, ಈ ಪ್ರಶ್ನೆಗಳೆಲ್ಲಾ, ಈ ಸೂಕ್ಷ್ಮ ಕ್ಷಣಗಳೆಲ್ಲಾ ಅವಳ ಮನದಲ್ಲಿ ಏನೇನು ಹೊಸ ಅಭಿಪ್ರಾಯಗಳನ್ನು ಹುಟ್ಟಿಸುತ್ತಿರಬಹುದು?

ಹಗಲು ಕಳೆಯಿತು.

ಹೆಂಡತಿಯನ್ನು ಕರೆದುಕೊಂಡು ಊರೊಳಗೆಲ್ಲಾ ಸುತ್ತಿಸಿ ಎಲ್ಲವನ್ನೂ ತೋರಿಸಿಕೊಂಡು ಬಂದ ಭಾಸ್ಕರ. ಗಂಭೀರವಾಗಿ ನಿಂತಿದ್ದ ಬೆಟ್ಟಗುಡ್ಡ, ಕೋಟೆ ಇತ್ಯಾದಿಗಳನ್ನು ಸಂಭ್ರಮದಿಂದ ವರ್ಣಿಸಿದ. ಈಶ್ವರ ಹೆಣ್ಣಾಗಿ ಬಂದು ನಿಂತಿರುವ ದೇವಸ್ಥಾನವನ್ನು ತೋರಿಸಿ, ಅದರ ಕತೆಯನ್ನು ಹೇಳಿದ. ಸನಿಹದಲ್ಲೇ ಎತ್ತರವಾಗಿ ನಿಂತಿದ್ದ ಶಾಲಾ ಕಟ್ಟಡಗಳೆಲ್ಲವನ್ನೂ ಪತ್ನಿಗೆ ಹೆಮ್ಮೆಯಿಂದ ವಿವರಿಸಿದ. ಪುನೀತವಾದ ಪೊನ್ನೀ ನದಿಯ ಬಗ್ಗೆ ಮುಗಿಲು ಮುಟ್ಟುವಷ್ಟು ಬಣ್ಣಿಸಿದ.

ರಾತ್ರಿ ಬಂದಿತು.

ಘಂಟೆ ಒಂಭತ್ತಿರಬಹುದು. ಬೆಳಗಿನಂತೆಯೇ ಮತ್ತೆ ಮನೆಯ ಬಾಗಿಲಿನಲ್ಲಿ ಕುದುರೆಯ ಗಾಡಿಯೊಂದು ಬಂದು ನಿಂತುಕೊಂಡಿತು.

"ಬಂದೂ ಬರದವನಂತೆ ಹೋಗುತ್ತಿದ್ದೀಯಲ್ಲೋ? ಇನ್ನೂ ಒಂದೆರಡು ದಿವಸಗಳು ಇದ್ದು ಹೋಗ್ಬಾರ್ದಾಗಿತ್ತೇನೋ?"

ಮುಗುಳುನಗೆಯನ್ನು ಉತ್ತರದ ಬದಲು ಅವರಿಗರ್ಪಿಸಿ, ಕೈಯಲ್ಲಿ ಚೀಲವನ್ನು ತೆಗೆದುಕೊಂಡ ಭಾಸ್ಕರ ಮತ್ತೆ ಹಣದ ಚೀಲವನ್ನು ಜೋಬಿನಿಂದ ಹೊರತೆಗೆದ. ಸುತ್ತಲೂ ನಿಂತಿದ್ದ ಕಿರಿಯರಿಗೆಲ್ಲಾ ತಲೆಗೆ ಎರಡಾಣೆಯಂತೆ ಕೊಟ್ಟ. ಹುಡುಗರಿಗೆಲ್ಲಾ ಇನ್ನಿಲ್ಲದ ಸಂತಸ!

"ಹಾಗೆಲ್ಲಾ ಏನೂ ಇಲ್ಲ. ನಾಳೇ ಆಫೀಸಿಗೆ ಹೋಗಲೇಬೇಕು ಅದಕ್ಕೋಸ್ಕರಾನೇ. ಅವಳೆಲ್ಲಿ ಕಾಣಿಸಲೇ ಇಲ್ಲ? ರೈಲಿಗೆ ಹೊತ್ತಾಗೋಯ್ತು!" ಎಂದ ಭಾಸ್ಕರ.

"ಅಯ್ಯೋ ದೇವರೆ! ನಿನ್ನ ಹೆಂಡತಿಯನ್ನು ಯಾರೂ ಕಚ್ಚಿ ತಿಂದ್ಬಿಡೋದಿಲ್ಲ! ನಿನಗಂತೂ ಹಳೆಯ ಜ್ಞಾಪಕವೇ ಇದ್ದಂತಿಲ್ಲ. ಪಾಪ, ಬಂಗಾರದಂತಾ ಹೆಣ್ಣು ಅದು. ಒಂದು ಕಾಲದಲ್ಲಿ ಗಂಡ ವಾಸಿಸುತ್ತಿದ್ದ ಮನೆಯಾಯಿತೇ ಎಂದು ಒಂದೊಂದು ಮನೆಗೂ ಹೇಳಿ ಬರಲು ಹೋಗಿದ್ದಾಳೆ!"

ಭಾಸ್ಕರ ಉತ್ತರವೀಯಲಿಲ್ಲ. ಮುದುಕಿ

ಯೊಬ್ಬಳು ಅವನ ಸನಿಹಕ್ಕೆ ಬಂದಳು.

"ಏನೋಪ್ಪ ! ಸ್ವಂತ ಮಗನ ಹಾಗೆಯೇ ಎಲ್ಲರೂ ಈ ಮನೆಯಲ್ಲಿ ಭಾವಿಸಿ, ನಿನ್ನನ್ನು ಬೆಳೆಸಿದೆವು. ಏನೋ ನೂರು ರೂಪಾಯಿಯನ್ನು ಸಂಪಾದಿಸುತ್ತೀಯಂತೆ ! ಕಂಪನಿ ಕೆಲಸವಂತೆ ! ಆ ಕಂಪನಿಯಲ್ಲಿ ಇನ್ನೂ ಮೇಲೆ ಮೇಲೆ ಹೋಗಿ ಆಫೀಸರ್ರಾಗಬಹುದಂತೆ ಎಂದು ನಿನ್ನ ಹೆಂಡತಿ ಹೇಳಿದಳು. ನಮ್ಮಗಳ ಹಾಗೆಯೇ ಅವಳೂ ಬಡವರ ಮನೆಯ ಹೆಣ್ಣು. ಬಹಳ ಸಲುಗೆಯಿಂದ ನಮ್ಮೊಂದಿಗೆ ಬೇಗ ಹೊಂದಿಕೊಂಡುಬಿಟ್ಟಳು." ಎಂದಳಾ ಮುದುಕಿ.

ಭಾಸ್ಕರ ಭ್ರಮೆಗೊಂಡು ನಿಂತ.

"ಸ್ಕೂಲ್ ಮೇಷ್ಟ್ರ ನಾಲ್ಕನೆಯ ಮಗಳಂತೆ. 'ಒಡವೆ ವಸ್ತ್ರಗಳನ್ನು ಅಧಿಕವಾಗಿ ಕೊಡಲಿಲ್ಲ. ಆದರೂ ಕರುಣೆಯಿಂದ ನನ್ನನ್ನು ಮದುವೆ ಮಾಡಿಕೊಂಡರು' ಎಂದೂ ಹೇಳಿದಳು. ನನ್ನ ಕಣ್ಣಲ್ಲಾಗ ನೀರು ತಾನಾಗೇ ಬಂದ್ಬಿಡ್ತು. 'ನಮ್ಮ ಭಾಸ್ಕರ ಯಾವಾಗಲೂ ಬಹಳ ಉದಾರ ಮನಸ್ಸಿನವನು ಕಣೇ' ಎಂದು ಅವಳಿಗೆ ನಾನು ಹೇಳಿದೆ. ಕೈಗೆ, ಮೂಗು ಕಿವಿಗಳಿಗೆ ಹಾಕಿರುವ ಒಡವೆಗಳೆಲ್ಲಾ ನಕಲಿಯಂತೆ ! ಆದರೆ ಮನಸ್ಸು ಮಾತ್ರಾ ನಕಲಿ ಅಲ್ಲಾ ನೋಡು. ಅಷ್ಟು ಮಾತ್ರಾ ಸಾಕು ನಮಗೆ."

ಕೊನೆಗೂ ಆ ಮುದುಕಿ ಮಾತು ನಿಲ್ಲಿಸಿದಳು. ಅಷ್ಟರಲ್ಲಿ ಭಾಸ್ಕರನ ಆ ಹೆಣ್ಣು ಬಂದುಬಿಟ್ಟಳು.

*

ಘಂಟೆ ಹತ್ತೂವರೆ.

ಮದ್ರಾಸಿನ ಕಡೆ ಹೋಗುತ್ತಿದ್ದ ತಿರುವನಂತಪುರಂ ಎಕ್ಸ್‌ಪ್ರೆಸ್ ಮುಂದೆ ಮುಂದೆ ಓಡುತ್ತಿತ್ತು.

ಪ್ರತ್ಯೇಕವಾಗಿಯೇ ಇದ್ದ ಮೊದಲ ತರಗತಿಯ ಡಬ್ಬಿಯ ಕಿಟಕಿಯ ಮೂಲಕವಾಗಿ ದೃಷ್ಟಿಯನ್ನು ಹೊರಕ್ಕೆ ಹರಿಯಬಿಡುತ್ತಾ ಕುಳಿತಿದ್ದ ಭಾಸ್ಕರ. ಅವನಿಗೆದುರಾಗಿಯೇ ಇದ್ದ ಮೃದುವಾದ ಆಸನದ ಮೇಲೆ ಕುಳಿತಿದ್ದ ಅವನ ಹೆಂಡತಿ ಮಾಲತಿ, ಲಕಲಕ ಹೊಳೆಯುತ್ತಿದ್ದ ದೊಡ್ಡ ಬೆಳ್ಳಿಯ ತಂಬಿಗೆಯಿಂದ, ಬಿಸಿಬಿಸಿಯಾಗಿದ್ದ ಹಾಲನ್ನು ಲೋಟಕ್ಕೆ ಸುರಿಯುತ್ತಿದ್ದಳು. ಮರುನಿಮಿಷವೇ ಆ ಹಾಲಿನ ಲೋಟದೊಂದಿಗೆ ಭಾಸ್ಕರನನ್ನು ಸಮೀಪಿಸಿದಳು.

"ಹಾಲು ತೆಗೆದುಕೊಳ್ಳಿ"

ತಲೆಯನ್ನು ಒಳತೆಗೆದುಕೊಂಡು ತಿರುಗಿ ನೋಡಿದ ಭಾಸ್ಕರ ಹೆಣ್ಣಿನ ಹೊರಹೊಮ್ಮುತ್ತಿದ್ದ ಯೌವನದ ಮಾದಕ ಕಾಂತಿಯಲ್ಲಿ, ಮಿರುಮಿರುಗುತ್ತಾ ಆಗಾಗ್ಗ ದೇಹದ ಮೇಲೆ ನಿಲ್ಲದೇ ಜಾರುತ್ತಿದ್ದ ಉತ್ತಮ ತರದ ಸಿಲ್ಕ್ ಸೀರೆ ಅವಳ ದೇಹವನ್ನು ಒಪ್ಪವಾಗಿ ಆವರಿಸಿರಲು, ಕೈ ಕಿವಿ ಮೂಗುಗಳ ಮೇಲೆ ಬೆಳಕು ಚೆಲ್ಲುವ ಬಂಗಾರದ ಒಡವೆಗಳು, ತಮ್ಮ ಬಂಗಾರದ ಬಣ್ಣದ ಜ್ಯೋತಿಯನ್ನು ಅವಳ ದೇಹದ ಮೇಲೆಲ್ಲಾ ಪಸರಿಸಿದ್ದುವು. ದೇವಲೋಕದ ಅಪ್ಸರೆಯಂತೆ ನಿಂತುಕೊಂಡಿದ್ದಳು ಅವನ ಕೈಹಿಡಿದಾಕೆ.

ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟ ಭಾಸ್ಕರ. ಲೋಟವನ್ನು ಕೆಳಗಿಟ್ಟು ಪ್ರೇಮಾದರಗಳಿಂದ ಅವನ ತೋಳ ಮೇಲೆ ಕೈಯ್ಯನ್ನಿಟ್ಟು ಅವನ ಪಕ್ಕದಲ್ಲೇ ಬಂದು ಕುಳಿತಳು ಮಾಲತಿ.

"ನನ್ನ ಮೇಲೆ ನಿಮಗೆ ಕೋಪವಿದೇ ತಾನೇ?" ಜೇನುತುಪ್ಪದಷ್ಟೇ ಸವಿಗೂಡಿದ ದನಿಯೊಂದಿಗೆ ಹೇಳಿದಳು ಮಾಲತಿ.

ಸುಮ್ಮನೇ ಸಣ್ಣ ನಗು ಬೀರಿದ ಭಾಸ್ಕರ.

"ನಾನೇಕೆ ಕೋಪಿಸಿಕೊಳ್ಳಬೇಕು ಮಾಲತಿ. ಆದರೆ, ನನ್ನೊಳಗೆ, ನನ್ನ ಶಕ್ತಿಯನ್ನು ಮೀರಿ–ಯಾವುದೋ ಅವ್ಯಕ್ತ ಭಾವನೆ ಮುಳ್ಳಿನಂತೆ ಚುಚ್ಚುತ್ತಿದೆ. ಆ ಬಡಜನರೊಂದಿಗೆ ಹಾಗೊಂದು ಸುಳ್ಳನ್ನು, ಅರಿತುಕೊಂಡೇ ತಾನೇ, ನೀನು ಮನಸ್ಸಿಟ್ಟು ಹೇಳಿದೆಯಲ್ಲವೇ ? 'ಏಕೆ' ಎಂದು ನನಗೆ ನಾನೇ ಸಾವಿರ ಸರ್ತಿ ಪ್ರಶ್ನೆ ಹಾಕಿಕೊಂಡೆ. ಉತ್ತರ ಬರಲಿಲ್ಲ !"

"ನೀವು ಯಾವುದನ್ನು ಹೇಳುತ್ತಿದ್ದೀರಿ ? 'ಬಡ

ಮೇಷ್ಟ್ರು ಮಗಳು ನಾನು. ದುಡ್ಡೂ ಕಾಸು ಏನೂ ತರಲಿಲ್ಲ. ಇವೆಲ್ಲಾ ಬರೀ ನಕಲೀ ಒಡವೆಗಳು' ಎಂದು ಹೇಳಿದ್ದನ್ನು ತಾನೇ ?"

ಮೌನವಾಗಿ ತಲೆಯಲ್ಲಾಡಿಸಿದ ಭಾಸ್ಕರ. ಇನ್ನೂ ಜರುಗಿ ಅವನಿಗೆ ಒತ್ತಿದಂತೆ ಕುಳಿತಳು ಮಾಲತಿ. ಕಣ್ಣಿನ ರೆಪ್ಪೆ ಬಡಿಯದೇ ಬಾಳಿನ ಜೊತೆಗಾರನನ್ನು ನೋಡುತ್ತಿದ್ದಳು ಅವಳು.

"ಏಕೆ? ಹಾಗೆ ಹೇಳಿದುದರಿಂದ ನಮಗೇನು ಕಡಿಮೆಯಾಯಿತು? ಭಾರೀ ಶ್ರೀಮಂತನ ಮಗಳು ನಾನು ಎನ್ನುವುದನ್ನು ನಾನವರಿಗೆ ಹೇಳಬೇಕಿತ್ತೇ ? ನಮ್ಮ ತಂದೆಯವರ ಹತ್ತಿರ ಕಾರ್ಯದರ್ಶಿಯಾಗಿ ಬಂದವರನ್ನು ಕಂಡು ಅವರಿಗೆ ಹೃದಯವನ್ನರ್ಪಿಸಿ, ತಂದೆಯವರ ಹತ್ತಿರ ವಾಗ್ಯುದ್ಧ ಹೂಡಿ, ಅವರ ಮನವನ್ನು ಬದಲಿಸಿ, ಇಷ್ಟಪಟ್ಟವರ ಕೈಹಿಡಿದ ಕತೆಯನ್ನು ಅವರಿಗೆಲ್ಲಾ ಹೇಳಲಿಲ್ಲ ಎಂದು ಕೋಪವೇ ? 'ನಿಮ್ಮ ಆದರದಲ್ಲಿ, ಬಡತನದ ಘೋರ ಹಿಡಿತದಲ್ಲಿ, ಒಂದು ಕಾಲದಲ್ಲಿ ಬಾಳಿದವರು, ಈಗ ಹಲ ಲಕ್ಷಗಳಿಗೆ ಅಧಿಪತಿ, ಭಾರೀ ಕಂಪನಿಯೊಂದನ್ನು ನಿರ್ವಹಿಸುವ ಭಾರೀ ಮನುಷ್ಯರು!' ಎಂದು ನಾನಲ್ಲಿ ಟಾಂ ಟಾಂ ಹೊಡೆದಿದ್ದರೆ, ಪಾಪ—ಪ್ರತಿಫಲದಾಶೆಯಿಲ್ಲದೆ ನಿಮ್ಮ ಮೇಲೆ ಪ್ರೀತಿ ತೋರುತ್ತಿದ್ದ ಆ ಬಡ ಜನರು ಇಷ್ಟು ಆತ್ಮೀಯತೆಯಿಂದ ಇಂದು ನನ್ನೊಂದಿಗೂ ನಿಮ್ಮೊಂದಿಗೂ ಹೊಂದಿಕೊಳ್ಳುತ್ತಿದ್ದರೇ ?"

ಮಾಲತಿ ಮಾತು ನಿಲ್ಲಿಸಿದಳು. ಪೂರ್ಣಚಂದ್ರನಂತಿದ್ದ ಅವಳ ವದನದಿಂದ ಮುತ್ತನ್ನೂ ನಾಚಿಸುವ ಒಂದೆರಡು ಬೆವರು ಹನಿಗಳು ಹೊರ ಹೊಮ್ಮಿದುವು.

"ಕುಟ್ರಾಲಂ, ಕೊಡೈಕನಾಲ್ ಎಂದೆಲ್ಲಾ ಸುತ್ತಿ ಪ್ರಯಾಣ ಮಾಡಿದ್ದ ನಾವು ಊರಿಗೆ ಹಿಂತಿರುವಾಗ ನಾನೇ ಅಲ್ಲವೇ ನಿಮಗೆ ಈ ಊರಲ್ಲಿ ಇಳಿಯುವಂತೆ ಬಲವಂತ ಮಾಡಿದವಳು ? ನಿಮಗೆ ನೆರಳು ಕೊಟ್ಟ ನೆಲ ಅದು. ಆ ನೆಲ ಕಸದ ಬೀಡಾಗಿದ್ದರೂ, ನಾನು ಅರಿತಿರುವಂತೆ, ಪುನೀತವಾದ ದೈವ ಸನ್ನಿಧಾನವನ್ನು ಹೊಂದಿದುದು. ಆ ಜನರಲ್ಲಿದ್ದ ಶುಭ್ರ ಭಾವನೆಗಳನ್ನೂ ಪ್ರತಿಫಲಾಪೇಕ್ಷೆಯಿಲ್ಲದೇ ಉಕ್ಕಿ ಹರಿಯುತ್ತಿದ್ದ ಆ ನೈಜ ಪ್ರೀತಿಯನ್ನೂ ಕಿತ್ತುಕೊಳ್ಳಲು ನಾನ್ಯಾರು ? ಅದಕ್ಕಾಗಿಯೇ ನಾನು ನಮ್ಮ ಪೆಟ್ಟಿಗೆ ಇತ್ಯಾದಿ ಸಾಮಾನುಗಳನ್ನು ಸ್ಟೇಷನ್ನಿನಲ್ಲಿಯೇ ಹಾಕಿಬಿಟ್ಟು, ಬರೀ ಕೈಚೀಲದೊಂದಿಗೆ ಮಾತ್ರ ಅಲ್ಲಿಗೆ ಹೋದರೆ ಸಾಕು ಎಂದು ಹೇಳಿದ್ದೆ."

ಹಿತವಾದ ತುಂತುರು ಮಳೆಹನಿ ಸ್ವಲ್ಪ ಹೊತ್ತು ಮೈಮೇಲೆ ಬಿದ್ದು, ಮೆಲ್ಲನೆ ನಿಂತಂತಾಯಿತು ಭಾಸ್ಕರನಿಗೆ. ಹೆಂಡತಿಯ ಕಡೆಗೊಮ್ಮೆ ನೋಡಿದ. ಸ್ವಾಭಾವಿಕವಾಗಿಯೇ ಗಾಜಿನಂತೆ ಫಳಫಳನೇ ಹೊಳೆಯುತ್ತಿದ್ದ ಅವಳ ಚಂಚಲ ನೇತ್ರಗಳು, ಈಗ ಅವಳ ಒಂದು ತೊಟ್ಟು ಕಣ್ಣೀರಿನೊಂದಿಗೆ ಕೂಡಿ ಮುತ್ತಿನಂತೆ ಹೊಳೆಯುತ್ತಿದ್ದುದನ್ನು ಕಂಡ ಭಾಸ್ಕರ. *

'ಕಲ್ಕಿ' ಕೃಪೆಯಿಂದ

ಸ್ತ್ರೀಯ ಅಶ್ರುಗಳನ್ನು ಒರೆಸುವುದಕ್ಕಿಂತ ಹೆಚ್ಚು ಗಂಡಾಂತರಕಾರಿಯಾದ ಕೆಲಸವನ್ನು ನಾನಂತೂ ಕಂಡಿಲ್ಲ; ಏಕೆಂದರೆ ಕಣ್ಣೀರು ಸ್ತ್ರೀಯ ಅಮೋಘ ಅಸ್ತ್ರ ಮಾತ್ರವಾಗಿರದೆ ಅಂಥ ಅಸ್ತ್ರವೂ ಆಗಿದೆ.

—ಬರ್ನಾರ್ಡ್ ಶಾ

* * *

ರಿಕ್ತನಾದವನು ಲಘುವಾಗುವುದು ಸಹಜ. ಗೌರವಕ್ಕೆ ಪೂರ್ಣತೆಯೇ ಬೇಕು.

—ಕಾಳಿದಾಸ

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿ ಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾಗಿ ಅರ್ಥಗಳನ್ನು ವಿವರಿಸಿದೆ.

೧. ವಿದುಷಿ

(ಅ) ಬೈಗಳು (ಆ) ತಮಾಷೆ (ಇ) ಕೆಟ್ಟವಳು (ಈ) ಪಂಡಿತಳು

೨. ಪರಿಧಾನ

(ಅ) ಹೊದಿಕೆ (ಆ) ಕೊಡುಗೈ (ಇ) ಚೆನ್ನಟ್ಟುವಿಕೆ (ಈ) ತೊಳೆಯುವುದು

೩. ಆಸ್ವಾದನ

(ಅ) ಬೆವರು (ಆ) ರುಚಿ ನೋಡುವಿಕೆ (ಇ) ಸಿದ್ಧವಾಗುವಿಕೆ (ಈ) ಸ್ವಂತ ಮನೆ

೪. ಚರ್ವಣ

(ಅ) ಅನ್ನ ಬೇಯಿಸುವುದು (ಆ) ನಡಿಗೆ (ಇ) ಪಾದ (ಈ) ಜಗಿಯುವಿಕೆ

೫. ತದ್ವತ್

(ಅ) ಒಂದು ರೋಗ (ಆ) ಪಾಂಡಿತ್ಯ (ಇ) ಅದರ ಹಾಗೆಯೆ (ಈ) ಜ್ಞಾನಿ

೬. ಆಪಾತತಃ

(ಅ) ಮೊದಲ ನೋಟಕ್ಕೆ (ಆ) ಕಾಲಿನಿಂದ (ಇ) ರೆಕ್ಕೆ (ಈ) ನೀರು

೭. ಎದೆಗುದಿ

(ಅ) ಒಂದು ಜ್ವರ (ಆ) ಚಿಂತೆ (ಇ) ಹೊಟ್ಟೆಕಿಚ್ಚು (ಈ) ಎದೆಗೆ ಪೆಟ್ಟು

೮. ಅಭಿಜಾತ

(ಅ) ತಿಳಿದದ್ದು (ಆ) ಮಾಟ (ಇ) ಶ್ರೇಷ್ಠ ಜಾತಿಯ (ಈ) ನೆನಪು

೯. ಉಪಮರ್ದ

(ಅ) ಚರ್ಚೆ (ಆ) ಮೆತ್ತಗೆ (ಇ) ಕೂಟ (ಈ) ತಿಕ್ಕಾಟ

೧೦. ವ್ಯತಿರೇಕ

(ಅ) ಸಂಗ್ರಹ (ಆ) ಮಿಗಿಲು (ಇ) ದುಃಖ (ಈ) ಕೊನೆ

೧೧. ಯಥಾವತ್

(ಅ) ಇದ್ದಕ್ಕಿದ್ದಂತೆ (ಆ) ಯಾವಾಗಲೂ (ಇ) ಅಸಡ್ಡೆಯಿಂದ (ಈ) ಈಗಿಂದೀಗ

೧೨. ಮಥನ

(ಅ) ಕಾಮ (ಆ) ಬೆಣ್ಣೆ (ಇ) ಕಡೆಯುವಿಕೆ (ಈ) ಪಿತ್ತ

'ಶಬ್ದಭಾಂಡಾರ'ದ ಸರಿಯಾದ ಅರ್ಥಗಳು

೧. **ವಿದುಷಿ** (ಈ) ಪಂಡಿತಳು, ವಿದ್ವಾಂಸಳು, ಬಲ್ಲವಳು. [ಸಂ. ವಿದ್ವಸ್ ಇದರ ಸ್ತ್ರೀಲಿಂಗ]

೨. **ಪರಿಧಾನ** (ಅ) ಉಡುಗೆ; ಬಟ್ಟೆ, ವಸ್ತ್ರ; ಹೊದ್ದ ವಸ್ತ್ರ, ಹೊದಿಕೆ; ಬಟ್ಟೆ ತೊಡುವಿಕೆ. [ಸಂ. ಪರಿ = ಸುತ್ತಲೂ, ಧಾನ= ತೊಡುವಿಕೆ].

೩. **ಆಸ್ವಾದನ** (ಆ) ರುಚಿ ನೋಡುವಿಕೆ, ಸವಿ ನೋಡುವಿಕೆ; ಸವಿ ನೋಡಿ ಮೆಚ್ಚುವಿಕೆ; ತಿನ್ನುವಿಕೆ. ಉದಾ:- ಕವಿತೆಯ ರಸಾಸ್ವಾದನ ಮಾಡಿದೆ ಅಂದರೆ ಕವಿತೆಯನ್ನೋದಿ ಸವಿಗಂಡೆ. [ಸಂ. ಆ = ಹೆಚ್ಚಾಗಿ, ಸ್ವಾದನ = ಸವಿಗಾಣುವಿಕೆ].

೪. **ಚರ್ವಣ** (ಈ) ಜಗಿಯುವಿಕೆ; ತಿನ್ನುವುದು; ಸಾವಕಾಶವಾಗಿ ಜಗಿದು ಸವಿಯನ್ನು ಅನುಭವಿಸುವುದು. **ಚರ್ವಿತ ಚರ್ವಣ** ಅಂದರೆ ಜಗಿದದ್ದನ್ನೇ ಜಗಿಯುವುದು ಅರ್ಥಾತ್ ಹೇಳಿದ್ದನ್ನೇ ಹೇಳುವುದು [ಸಂ]

೫ **ತದ್ವತ್** (ಇ) ಅದರ ಹಾಗೆಯೆ. ಉದಾ: ನಾನು ಹೇಳಿದ್ದನ್ನು ತದ್ವತ್ತಾಗಿ ಅವನು ಪುನರುಚ್ಚರಿಸಿದ. [ಸಂ. ತದ್ = ಅದು, ವತ್ = ಹಾಗೆ].

೬. **ಆಪಾತತಃ** (ಅ) ಮೊದಲ ನೋಟಕ್ಕೆ, ಮೊದಲ ಪೆಟ್ಟಿಗೆ, ಕೂಡಲೆ, ತತ್‌ಕ್ಷಣ. ಉದಾ— ಆಪಾತತಃ ಇದು ಸುಖವಾಗಿ ಕಂಡರೂ ನಿಜವಾಗಿ ಹಿತವಲ್ಲ [ಸಂ].

೭. **ಎದೆಗುದಿ** (ಆ) ಚಿಂತೆ; ಮುಂಗಾಣದಿರುವಿಕೆ; ಉಭಯ ಸಂಕಟ; ಅಂಜಿಕೆ. [ಕನ್ನಡ – ಎದೆ + ಕುದಿ].

೮. **ಅಭಿಜಾತ** (ಇ) ಶ್ರೇಷ್ಠ ಜಾತಿಯ, ಉಚ್ಚ ಕುಲದ ಉದಾ— ಅಭಿಜಾತ ಸಾಹಿತ್ಯ ಅಂದರೆ ಶ್ರೇಷ್ಠ ವರ್ಗದ, ಪ್ರಾಚೀನ ಸಾಹಿತ್ಯ. [ಸಂ. ಅಭಿ = ಮೇಲಿನ, ಜಾತ = ಹುಟ್ಟಿದ].

೯. **ಉಪಮರ್ದ** (ಈ) ತಿಕ್ಕಾಟ, ಘರ್ಷಣೆ; ನುಗ್ಗಾಗುವಿಕೆ, ನೋವು, ಗಾಯ; ಹಾನಿ, ಧ್ವಂಸ. [ಸಂ.]

೧೦. **ವ್ಯತಿರೇಕ** (ಆ) ಮಿಗಿಲು; ಮೀರಿದ್ದು; ಶ್ರೇಷ್ಠತ್ವ; ಬೇರೆಯಾಗಿರುವಿಕೆ, ಭಿನ್ನತೆ. ಉದಾ— ಈ ಎರಡರ ವ್ಯತಿರೇಕಗಳು ಎದ್ದು ಕಾಣುವಂತಿವೆ. [ಸಂ. ವಿ + ಅತಿ + ರಿಚ್].

೧೧. **ಯಥಾವತ್** (ಅ) ಇದ್ದಕ್ಕಿದ್ದಂತೆ, ಹೇಗಿತ್ತೋ ಹಾಗೆ. ಉದಾ— ಯಥಾವತ್ತಾಗಿ ಇದನ್ನು ತಿರುಗಿ ಒಪ್ಪಿಸಬೇಕು. [ಸಂ. ಯಥಾ = ಹೇಗೊ, ವತ್ = ಹಾಗೆ]

೧೨. **ಮಥನ** (ಇ) ಕಡೆಯುವಿಕೆ, ತಿಕ್ಕುವಿಕೆ, ಬೀಸುವಿಕೆ, ಅರೆಯುವಿಕೆ, ಪೀಡೆ, ನಾಶ ಮಾಡುವುದು. [ಸಂ.]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	....	ಸಾಧಾರಣ
೯—೧೦ ,,	....	ಉತ್ತಮ
೧೧—೧೨ ,,	....	ಅತ್ಯುತ್ತಮ



ಅವರ ಉದ್ಧಾರ ಇನ್ನೂ ದೃಷ್ಟಿಪಥದಲ್ಲಿಲ್ಲ

ಜಪಾನ್‌ನಲ್ಲಿಯೂ ಹರಿಜನರು!

ನೀವು ಸಾಕಷ್ಟು ಕಾಲ ಜಪಾನಿನಲ್ಲಿದ್ದರೆ ತೋರಿಕೆಗೆ ಸಾಮಾನ್ಯವಾಗಿರುವ ಒಂದು ಹಸ್ತ ಮುದ್ರೆಯನ್ನೂ ಅದು ಅದನ್ನು ಕಂಡವರ ಮೇಲೆ ಬೀರುವ ಅದ್ಭುತ ಪ್ರಭಾವವನ್ನೂ ಒಮ್ಮೆಯಲ್ಲ ಒಮ್ಮೆ ಕಂಡೇ ಕಾಣುವಿರಿ. ನೀವು ಯಾವುದಾದರೊಂದು ಹೋಟೆಲ್ಲಿನಲ್ಲೋ ಕ್ಯಾಂಟೀನಿನಲ್ಲೋ ಸಾವಕಾಶವಾಗಿ ಆಹಾರ ಪಾನೀಯಗಳನ್ನು ಸೇವಿಸುತ್ತ ಕುಳಿತಿದ್ದೀರಿ. ನಿಮ್ಮೊಡನೆ ಅತ್ಯಂತ ಸುಶಿಕ್ಷಿತ ಮತ್ತು ಪಾಶ್ಚಾತ್ಯೀಕೃತನಾದ ಜಪಾನಿ ವಿಶ್ವವಿದ್ಯಾಲಯ ಪ್ರೊಫೆಸರನೋ ವಕೀಲನೋ ಕುಳಿತು ಅತ್ಯಂತ ಪ್ರಗತಿಪರ ವಿಚಾರಗಳನ್ನು ಚರ್ಚಿಸುತ್ತಿದ್ದಾನೆ. ಆಗ ಅದು ಸಂಭವಿಸುತ್ತದೆ— ಯಾರೋ ಒಬ್ಬರು ಹುಬ್ಬೇರಿಸಿ ಅಂಗೈಯನ್ನು ಮೇಲೆತ್ತುತ್ತಾರೆ. ಆ ಕೈಯ ನಾಲ್ಕು ಬೆರಳುಗಳು ನೀಟವಾಗಿರುತ್ತವೆ, ಮತ್ತು ಹೆಬ್ಬೆರಳು ಒಳಗೆ ಮಡಚಿರುತ್ತದೆ ತತ್‌ಕ್ಷಣ ಇಡೀ ಹೋಟೆಲಿನಲ್ಲಿರುವವರ ಮೇಲೆ ಪರಿಣಾಮವಾಗುತ್ತದೆ. ಅವರು ತಿರುಗಿ ನೋಡುತ್ತಾರೆ. ಯಾರೋ ಒಬ್ಬ ಒಳಗೆ ಬರುತ್ತಿದ್ದಾನೆ. ನಿಮಗೆ ಅವನನ್ನು ನೋಡಿದರೆ ಏನೂ ಅನಿಸುವುದಿಲ್ಲ. ಆದರೆ ಅಲ್ಲಿರುವ ಪ್ರತಿಯೊಬ್ಬ ಜಪಾನಿಯೂ ಯಾವುದೋ ಬೀಭತ್ಸವನ್ನು ಕಂಡಂತೆ ಹೇಸಿಕೊಳ್ಳುತ್ತಾನೆ. ಪ್ರತಿಯೊಬ್ಬನೂ ಅಲ್ಲಿಂದೆದ್ದು ಹೊರಟು ಹೋಗಲು ಅವಸರಪಡುತ್ತಾನೆ. ನಿಮ್ಮೊಡನೆ ಪ್ರಗತಿಪರ ವಿಚಾರಗಳನ್ನು ಉತ್ಸಾಹದಿಂದ ಚರ್ಚಿಸುತ್ತಿದ್ದ ಜಪಾನಿ ಪ್ರೊಫೆಸರನೂ ನಿಮ್ಮನ್ನು ಅಲ್ಲಿಂದೆಬ್ಬಿಸಿಕೊಂಡು ಹೊರಡಲು ಒಮ್ಮೆಲೆ ಆತುರಪಡುವುದನ್ನು ಕಂಡು ನೀವು ಚಕಿತರಾಗುತ್ತೀರಿ.

ಚಕಿತರಾಗುವ ಕಾರಣವಿಲ್ಲ. ಯಾವಾತನ ಆಗಮನವು ಈ ನಾಲ್ಕರ ಸೂಚನೆ ಕೊಡುವ ಸಂಕೇತಕ್ಕೆ ಕಾರಣವಾಯಿತೋ ಆತ ಜಪಾನಿ ಅಸ್ಪೃಶ್ಯರಲ್ಲೊಬ್ಬ. ಜಪಾನಿನಲ್ಲಿಯೂ ಅಸ್ಪೃಶ್ಯರಿದ್ದಾರೆಂಬುದು ನಿಮಗೆ ಸುದ್ದಿಯಾಗಿರಬಹುದಾದರೂ ಅದು ಹೊಸದೇನೂ ಅಲ್ಲ. ಅಲ್ಲಿ ಏನಿಲ್ಲೆಂದರೂ ೧೪ ಶತಮಾನಗಳಿಂದ ಅಸ್ಪೃಶ್ಯತೆಯಿದೆ. ಅದಕ್ಕೂ ಕೆಟ್ಟದ್ದೆಂದರೆ ಅದು ಕಡಿಮೆಯಾಗುವ ಲಕ್ಷಣಗಳೇನೂ ಇಲ್ಲ.

ಈ ಜಪಾನಿ ಅಸ್ಪೃಶ್ಯರನ್ನು ಅಲ್ಲಿ "ಎಟಾ" ಎಂದು ಕರೆಯುತ್ತಾರೆ. ಎಟಾ ಎಂಬ ಶಬ್ದಕ್ಕೆ— ಸೋಜಿಗವೆನಿಸೀತು— "ಹೊಲೆ" ಎಂದೇ ಅರ್ಥ. ಶಬ್ದಶಃ "ಹೊಲಸು ಮನುಷ್ಯ" ಆತ

ಜಪಾನಿನ ಈ ದಲಿತರ ಸಂಖ್ಯೆ ೨೦ ಲಕ್ಷದಷ್ಟಿದೆ. ೫೦೦೦ ವಿವಿಧ ಉಪಜಾತಿಗಳಲ್ಲಿ ವಿಂಗಡಿಸಲ್ಪಟ್ಟ ಎಟಾ ಜನ ಅತ್ಯಂತ ಅನಾರೋಗ್ಯಕರವಾದ, ಇಕ್ಕಟ್ಟಾದ ಓಣಿಗಳಲ್ಲಿ ವಾಸಿಸುತ್ತಾರೆ. ಮೂಗು ಕೊಂಡೊಯ್ಯುವುದೇ ಕಷ್ಟವಾದ ಈ ಹೊಲೆಗೇರಿಗಳನ್ನು "ತನಕಾ" (ಗದ್ದೆಗಳ ನಡುವೆ) ಎಂದು ಕರೆಯುತ್ತಾರೆ. ನೀವು ಕೆಲವೇ ದಿನಗಳಿಗಾಗಿ ಜಪಾನಿನಲ್ಲಿದ್ದರೆ ಈ ಜನರ ಅಸ್ತಿತ್ವವೇ ನಿಮಗೆ ಪತ್ತೆಯಾಗಲಾ

ರದು. ಅದು ಜಪಾನಿನ ಬಲು ದುಃಖದಾಯಕವೂ ಕಠಿನವೂ ಆದ ಸಮಸ್ಯೆಯಾಗಿರುವುದರಿಂದ ಮೇಲ್ವರ್ಗದವರಾರೂ ಅದರ ಪ್ರಸ್ತಾಪವನ್ನೇ ವಿದೇಶೀಯರ ಮುಂದೆ ಎತ್ತುವುದಿಲ್ಲ.

ಎಟಾ ಜನ ನಮ್ಮ ದೇಶದ ಹರಿಜನರು ಮಾಡುತ್ತ ಬಂದಂಥ ಕೆಲಸವನ್ನೇ ಮಾಡುತ್ತಾರೆ. ಅವರು ಕಟುಕರು, ಸತ್ತ ಪ್ರಾಣಿಗಳ ಚರ್ಮ ಸುಲಿಯುವವರು, ಚರ್ಮ ಹದಮಾಡುವವರು, ಮಲವನ್ನು ಹೊತ್ತುಕೊಂಡು ಹೋಗುವವರು ಇವರೇ. ಸಮಾಜದ ಸುಖಜೀವನಕ್ಕೆ ಅನಿವಾರ್ಯವಾದ ಈ ಸೇವೆಗಳನ್ನು ಮಾಡುವ ಇವರಿಗೆ ಪ್ರತಿಯಾಗಿ ಸಮಾಜದ ತಿರಸ್ಕಾರ ಲಭಿಸಿದೆ. ಅವರು ಎಷ್ಟು ತಿರಸ್ಕಾರಪಾತ್ರರಾಗಿದ್ದಾರೆಂದರೆ ಉಚ್ಚವರ್ಣದವರು ಅವರ ಹೆಸರು ಹೇಳಲಿಕ್ಕೂ ಹಿಂಜರಿಯುತ್ತಾರೆ. ಅವರನ್ನು "ಯೋತ್ಸು" (ನಾಲ್ಕು) ಎಂದು ವ್ಯಂಗ್ಯವಾಗಿ ಕರೆದು ನಾಲ್ಕು ಬೆರಳುಗಳನ್ನು ತೋರಿಸಲಾಗುತ್ತದೆ. ಈ "ನಾಲ್ಕರ" ತಾತ್ಪರ್ಯ ಚತುಷ್ಪಾದ ಪ್ರಾಣಿಗಳಂತೆ ಅಮಾನವರು ಎಂದು. ಇನ್ನೊಂದು ಜುಗುಪ್ಸಿತ ಹೆಸರೆಂದರೆ, "ಕೊಕೊನೊತ್ಸು" (ಒಂಭತ್ತು) ಎಂದು. ಒಂಭತ್ತು ಹತ್ತಕ್ಕಿಂತ ಕಡಿಮೆ ತಾನೆ. ಇವರೂ ಹತ್ತಕ್ಕಿಂತ—ಅಂದರೆ ಪೂರ್ಣ ಮಾನವರಿಗಿಂತ— ಕೀಳರಂತೆ.

ಕೀಳರೇ ನಿಜ. ಜಪಾನೀ ಜನ ತುಂಬ ಸ್ವಾಭಿಮಾನಿಗಳು, ಸ್ವಚ್ಛ ಜನರು. ಎಂಥ ಬಡತನದಲ್ಲೂ ಜಪಾನೀಯ ಹೆಮ್ಮೆಯಿಂದ ತಲೆಯೆತ್ತಿ ನಡೆಯುತ್ತಾನೆ. ಆದರೆ ಈ ಎಟಾ ಜನರು ಮಾತ್ರ ಸಂಪೂರ್ಣ ಪತಿತರಾಗಿ, ಅವಮಾನಿತರಾಗಿ, ಸ್ವಾಭಿಮಾನಶೂನ್ಯರಾಗಿ ಬಾಳುತ್ತಾರೆ. ಅವರಿಗೆ ಮೇಲ್ಜಾತಿಯವರಿಂದ ಲತ್ತೆಗಳನ್ನು ತಿನ್ನುವುದು ಎಷ್ಟು ರೂಢಿಯಾಗಿದೆಯೆಂದರೆ ಯಾರಾದರೂ ಪ್ರೀತಿಯಿಂದ ಮಾತಾಡಿಸಿದರೆ ಅವರು ಸಂದೇಹದಿಂದ ಹಿಂದೆ ಸರಿಯುತ್ತಾರೆ.

ಜಪಾನಿನ ಈ ಅಸ್ಪೃಶ್ಯರು ಯಾರು, ಅಲ್ಲಿ ಈ ಅಸ್ಪೃಶ್ಯತಾ ಪದ್ಧತಿ ಹೇಗೆ ಉದಯಿಸಿತು ಎಂಬ ಬಗ್ಗೆ ಸಮಾಜಶಾಸ್ತ್ರಿಗಳಲ್ಲಿ ಒಮ್ಮತವಿಲ್ಲ. ಕೆಲ ವಿದ್ವಾಂಸರು ಅವರು ಜಪಾನೀಯರೇ ಆಗಿದ್ದು ಚರ್ಮ ಸುಲಿಯುವುದು, ಮಲವನ್ನು ಹೊರುವುದು ಮೊದಲಾದ ಕೆಲಸಗಳಲ್ಲಿ ನಿರತರಾಗಿದ್ದುದರಿಂದ ಅವರನ್ನು ಹೊಲಸು ಜನರೆಂದು ಹೊರಗಿಡಲಾಯಿತೆಂದು ಹೇಳುತ್ತಾರೆ. ಆದರೆ ಇತರ ಪಂಡಿತರ ಅಭಿಪ್ರಾಯದಲ್ಲಿ ಅವರು ಜಪಾನಿ ಕುಲದವರಲ್ಲವೇ ಅಲ್ಲ, ಅವರು ಫಿಲಿಪ್ಪೈನ್ಸ್ ಅಥವಾ ಇಂಡೊನೇಶಿಯದಿಂದ ಅನಾದಿ ಕಾಲದಲ್ಲಿ ವಲಸೆ ಬಂದು ಜಪಾನಿ ದ್ವೀಪಗಳಲ್ಲಿ ನೆಲಸಿದವರು. ೨೬ ಶತಮಾನಗಳ ಹಿಂದೆ ಇಂದಿನ ಜಪಾನೀಯರ ಮೂಲಪುರುಷರಾದ ಯಮಾ-ಟೋ ಜನ ಜಪಾನಿನ ಮೇಲೇರಿ ಬಂದು ಅದನ್ನು ಗೆದ್ದುಕೊಂಡಾಗ ಈ ಆದಿವಾಸಿಗಳನ್ನು ಗುಲಾ-ಮರಂತೆ ದುಡಿಸಿಕೊಳ್ಳತೊಡಗಿದರು. ಆದರೂ ಅವರಿಗೆ ಈ ಅಸ್ಪೃಶತೆಯ ಕಳಂಕ ಅಂಟಿಕೊಂಡದ್ದು ಕ್ರಿ. ಶ. ಆರನೇ ಶತಮಾನದಲ್ಲಿ ಜಪಾನಿಗೆ ಬೌದ್ಧಧರ್ಮದ ಪ್ರವೇಶವಾದ ನಂತರವೇ. ಅಹಿಂಸೆಯನ್ನು ಬೋಧಿಸುವ ಬೌದ್ಧಧರ್ಮವನ್ನು ಆಳರಸರು ಸ್ವೀಕರಿಸಿದ ನಂತರ ಸಮಾಜಕ್ಕಾಗಿ, ದೊಡ್ಡವರ ನಾಯಿ, ಹದ್ದು ಮೊದಲಾದ ಪ್ರಾಣಿಗಳಿಗೂ ಇನ್ನೂ ಬೌದ್ಧಧರ್ಮಸ್ವೀಕರಿಸದಿದ್ದ ಶಿಂಟೋ ಮತದ ಕುಲೀನರಿಗಾಗಿಯೂ ಮಾಂಸ ಪೂರೈಸಲು ಪ್ರಾಣಿ ವಧೆ ಮೊದಲಾದ ಹಿಂಸಾಕಾರ್ಯಗಳನ್ನು ಮಾಡುವ ಕೆಲಸ ಪೂರ್ತಿ ಎಟಾ ಜನರ ಪಾಲಿಗೇ ಬಿತ್ತು. ಬೌದ್ಧಧರ್ಮಕ್ಕೆ ವಿರುದ್ಧವಾದ ಕೃತ್ಯಗಳನ್ನು ಮಾಡುವ ಇವರು ಹೀನರೆಂದು ಬಗೆದು ಅವರನ್ನು ದೂರವಿಡಲಾಯಿತು. ಶತಮಾನಗಳು ಸಾಗಿದಂತೆ ಅವರ ವಿರುದ್ಧ ಈ ತಿರಸ್ಕಾರ ಭಾವ ಬಲಿತು ಶಾಶ್ವತವಾಗಿಬಿಟ್ಟಿತು. ಭಾರತದಲ್ಲಿಯೂ ಅಸ್ಪೃಶ್ಯತೆ ಇದೇ ರೀತಿ ಬೆಳೆಯಿತೆಂದು ನಂಬಲಾಗಿದೆ ತಾನೆ.

ಜಪಾನಿನ ಈ "ಹೊಲೆ"ಯರ ಅಸ್ತಿತ್ವವು ದೇಶದ ಹೆಸರಿಗೊಂದು ಕಳಂಕವೆಂದು ಮನಗಂಡು ಅವರ ಉದ್ಧಾರಕ್ಕಾಗಿ ಯತ್ನಗಳಾಗದೆ

ಇಲ್ಲ. ೧೮೭೧ ರಲ್ಲಿ ಹೆಚ್ಚು ಕಡಿಮೆ ಗುಲಾಮರಾಗಿದ್ದ ಎಟಾ ಜನರನ್ನು ಬಿಡುಗಡೆ ಮಾಡುವ ಕಾಯುದೆಗಳಾದವು. ಅವರ ಹೀನವಾದ ಜಾತಿ ವಾಚಕವನ್ನು ರದ್ದುಪಡಿಸಿ "ಶಿನ್‌ಹೈಮನ್" (ನವನಾಗರಿಕ) ಎಂದು ಪುನರ್ನಾಮಕರಣ ಮಾಡಲಾಯಿತು. ಗಾಂಧೀಜಿ ಭಾರತೀಯ ಅಸ್ಪೃಶ್ಯರಿಗೆ "ಹರಿಜನ" ಎಂದು ಪುನರ್ನಾಮಕರಣ ಮಾಡಿದ ಹಾಗೆಯೆ.

ಆದರೆ ಗಾಂಧೀಜಿಯಂಥ ಯಾವನೊಬ್ಬ ವಿಭೂತಿಪುರುಷನು ಎಟಾ ಜನರ ಉದ್ಧಾರಕ್ಕೆ ಟೊಂಕಕಟ್ಟದ್ದರಿಂದ ಕಾಯದೆಗಳೆಲ್ಲ ಪುಸ್ತಕದಲ್ಲೇ ಉಳಿದವು. ಆಧುನಿಕ ವಿಚಾರಗಳ ಗಾಳಿ ಬೀಸಿ ಎಟಾರಲ್ಲೆ ಕೆಲ ನಾಯಕರು ಉದಯಿಸಿ ತಮ್ಮ ವಿಮೋಚನೆಗಾಗಿ ಆಂದೋಲನ ಹೂಡಿದರು. ಅದು ಹಿಂಸೆಗೆ ತಿರುಗಿ ೧೯೨೨–೨೩ ರಲ್ಲಿ ಒಂದು ಸಾವಿರಕ್ಕೂ ಹೆಚ್ಚು ಎಟಾ ದಂಗೆಗಳಾದವು. ಆದರೆ ಅದರ ನಾಯಕರ ಮೇಲೆ ಕಮ್ಯುನಿಸ್ಟ್ ಬಲವಿನ ಸಂಶಯವಿದ್ದುದರಿಂದ ಮೇಲ್ ಜಾತಿಯವರ ಬೆಂಬಲ ಸಿಗಲಿಲ್ಲ. ಅವರ ವಿರುದ್ಧ ಪಕ್ಷಪಾತ ಹಾಗೆಯೆ ಸಾಗಿತು. ಯುದ್ಧ ಪೂರ್ವ ವರ್ಷಗಳಲ್ಲಿ ಅಧಿಕಾರಕ್ಕೇರಿದ ಸೇನಾಪತಿವರ್ಗದವರಂತೂ ಅವರನ್ನು ಮತ್ತೂ ತುಳಿದರು.

ಎರಡನೇ ಮಹಾಯುದ್ಧ ಮುಗಿದು ಮಿತ್ರರು ಜಪಾನಿನಲ್ಲಿ ಆಕ್ರಮಣ ರಾಜ್ಯಭಾರ ಸ್ಥಾಪಿಸಿದಾಗ ಎಟಾರನ್ನು ಪೂರ್ತಿ ವಿಮೋಚನೆಗೊಳಿಸಿದರು. ಅವರ ವಿರುದ್ಧ ಇದ್ದ ಕಾಯದೆಗಳು ರದ್ದಾದವು. ಅವರನ್ನು "ಶಿನ್‌ಹೈಮೆನ್" ಎನ್ನದೇ ಹಳೇ "ಎಟಾ" ಎಂಬ ಹೆಸರಿನಿಂದ ಕರೆಯುವುದು ದಂಡನಾರ್ಹವೆಂದು ಘೋಷಣೆ ಹೊರಟಿತು. ಆದರೆ ಮಿತ್ರಸೈನ್ಯಗಳು ಹೊರಟುಹೋದ ನಂತರ ಎಟಾರ ಪರಿಸ್ಥಿತಿ ಪುನಃ ಕೆಟ್ಟಿತು.

ಇಂದು ಕಾಯದೆಯ ಮೂಲಕ ಅವರ ವಿರುದ ಯಾವ ಪಕ್ಷಪಾತವೂ ಇಲ್ಲ, ಆದರೆ ಸಮಾಜ ಅವರನ್ನು ಅಸ್ಪೃಶ್ಯರೆಂದೇ ಬಗೆಯುತ್ತಿದೆ. ಅವರೊಡನೆ ಇತರ ವರ್ಗಗಳು ವಿವಾಹ ಸಂಬಂಧ ಬೆಳೆಸುವುದಿಲ್ಲ. ಒಮ್ಮೊಮ್ಮೆ ಯಾರಾದರೊಬ್ಬನು ಹೇಗಾದರೂ ವಿದ್ಯಾವಂತನಾಗಿ ಹೊಲೆಗೇರಿಯಿಂದ ಹೊರಬೀಳುತ್ತಾನೆ. ಕೆಲವರು ಸೇನಾಪತಿ ಅಥವಾ ಪ್ರೊಫೆಸರ್ ಪದದ ವರೆಗೂ ಏರಿದ್ದುಂಟು. ಆದರೆ ಹೊಲೆಗೇರಿಯಿಂದ ಪಾರಾದವರಾರೂ ತಮ್ಮ ಕುಲದವರೊಡನೆ ಸಂಪರ್ಕವಿರಿಸಿಕೊಳ್ಳುವುದಿಲ್ಲ. ಬದಲಿಗೆ ತಮ್ಮ ಮೂಲವನ್ನು ಸಂಪೂರ್ಣ ಮುಚ್ಚಿಡುತ್ತಾರೆ. ತಮ್ಮ ಮಕ್ಕಳಿಗೆ ತಮ್ಮ ಮೂಲವನ್ನು ತಿಳಿಸುವುದಿಲ್ಲ, ಮಾತ್ರವಲ್ಲ, ಎಲ್ಲಿ ತಮ ಗುಟ್ಟು ಹೊರಬೀಳುವುದೋ ಎಂಬ ನಿರಂತರ ಭಯದಲ್ಲಿ ಬದುಕುತ್ತಾರೆ.

ಸ್ಟೀಫೆನ್ ಕೆಲೆನ್ನರು ಇಂಥ ಒಬ್ಬ ತರುಣನ ಕರುಣಾಜನಕ ಕಥೆಯನ್ನು ಹೇಳುತ್ತಾರೆ. ಆತನ ತಂದೆ-ತಾಯಿಗಳು ಹೇಗೋ ಹಣ ಸಂಪಾದಿಸಿ ಅಮೇರಿಕಕ್ಕೆ ವಲಸೆ ಹೋದರು. ಆತ ಅಲ್ಲೇ ಜನಿಸಿದ, ಬೆಳೆದ. ಆದರೆ ತಮ್ಮ ಕುಲವನ್ನೂ ಅದಕ್ಕೆ ಮಾತೃಭೂಮಿಯಲ್ಲಿ ಅಂಟಿದ ಕಲಂಕವನ್ನೂ ಅವನಿಗೆ ಹೇಳಲೇ ಇಲ್ಲ. ಸ್ವಾಭಾವಿಕ ದೇಶಾಭಿಮಾನದಿಂದ ಆತ ಸ್ವದೇಶಕ್ಕೆ ಮರಳಿದಾಗ ಯಾವನೋ ಒಬ್ಬ ಅವನನ್ನು ಗುರುತಿಸಿ ನಾಲ್ಕರ ಗುರುತು ಮಾಡಿದ. ಅಂದಿನಿಂದ ಆತ ನರಕವನ್ನನುಭವಿಸಬೇಕಾಯಿತು.

ಕಾದಂಬರಿಕಾರರು ಎಟಾ ಮತ್ತು ಸಾಮಾನ್ಯ ತರುಣ-ತರುಣಿಯರೊಳಗೆ ಒದಗಿದ ಪ್ರೇಮ ಪ್ರಸಂಗಗಳನ್ನು ಆಧರಿಸಿ ಮನೋವೇಧಕ ಕಥೆಗಳನ್ನು ಹೆಣೆದಿದ್ದಾರೆ. ಆದರೆ ಅವುಗಳಲ್ಲಿ ಹೆಚ್ಚಿನವು ಕಥೆಗಳು ಮಾತ್ರ. ಸಮಾಜದ ಹೃದಯವನ್ನಲುಗಿಸಲು ಅವು ಸಮರ್ಥವಾಗಿಲ್ಲ. ತುಂಬ ಪ್ರಗತಿಪರ ವಿಚಾರಗಳನ್ನು ಪ್ರತಿಪಾದಿಸುವವರು ಕೂಡ ವ್ಯವಹಾರದಲ್ಲಿ ಈ ಹತಭಾಗ್ಯ ಎಟಾರೊಡನೆ ಕೂಡ್ರಲು, ಅವರನ್ನು ಮುಟ್ಟಲು ಹಿಂಜರಿಯುತ್ತಾರೆ.

*


ನಾರಿಯರ ಸ್ವಂತ್ರ ಭಾಷೆ

ಸಿ. ಎಸ್. ಶರ್ಮಾ

ಅವರ ಈ ಭಾಷೆ ಪ್ರಪಂಚದ ಮೂಲೆಮೂಲೆಯಲ್ಲಿಯೂ ಹರಡಿದ್ದರೂ ಅದಕ್ಕೆ ಹೆಸರೆಂಬುದಿಲ್ಲ. · ಅದರ ಪದಗಳ ಅರ್ಥ ಯಾವ ನಿಘಂಟಿನಲ್ಲೂ ನಿಮಗೆ ಸಿಗುವುದಿಲ್ಲ. ಅವರ ಭಾಷೆ ಸ್ನೇಹ, ಕರುಣೆ, ಆತ್ಮಸಮರ್ಥನೆಗಳಿಂದ ತುಂಬಿರುವಂತೆ ಅದರಿಂದ ಟೀಕೆ, ನಿಂದೆ, ಸೇಡು ಇತ್ಯಾದಿಗಳೂ ಸುಪ್ತ ಜ್ವಾಲಾಮುಖಿಗಳಂತೆ ಸಮಯಾನುಸಾರ ಹೊರಹೊಮ್ಮುತ್ತವೆ. ಭಾವನೆ ಏನೇ ಇರಲಿ, ಅಂತರಾಳದ ಅರ್ಥ ಸವಿಯಾಗಿರಲಿ ಅಥವಾ ಕಹಿಯಾಗಿರಲಿ ಈ ಭಾಷೆ ನಮ್ಮ ನಿತ್ಯ ಜೀವನದ ಅನೇಕ ಸಮಸ್ಯೆಗಳನ್ನು ಸುಲಲಿತವಾಗಿ ಬಗೆಹರಿಸುವ ದಿವ್ಯಾಸ್ತ್ರವೇ ಆಗಿದೆ. ಎಲ್ಲ ಹೆಣ್ಣು ಮಕ್ಕಳೂ ಈ ಜಾಣನುಡಿಯಲ್ಲಿ ನಿಷ್ಣಾತರಾಗಿರುತ್ತಾರೆ ಹಾಗೂ ನುಡಿಯುವಾಗ ಯಾವ ಉದ್ವೇಗವನ್ನೂ ತೋರಗೊಡದೆ ಇದಿರಾಳಿಯ ಮೇಲೆ ಸಮಯ ನೋಡಿ ತಮ್ಮ ಈ ಅಸ್ತ್ರಗಳನ್ನು ಪ್ರಯೋಗಿಸಬಲ್ಲವರಾಗಿರುತ್ತಾರೆ. ಗೃಹದೇವತೆಯ ಈ ಗುಪ್ತ ಭಾಷೆಯ ಒಂದಿಷ್ಟು ಪರಿಚಯವನ್ನಿಲ್ಲಿ ಕೊಡಲಾಗಿದೆ.

ಸತ್ಕಾರ ಸೂಕ್ಷ್ಮ

ಮುಂಜಾನೆ ನಿಮ್ಮ ಮನೆಯಲ್ಲಿ ನಿಮ್ಮ ಸಲುವಾಗಿಯಷ್ಟೇ ಉಪಾಹಾರ ಸಿದ್ಧವಾಗಿದ್ದಾಗ ಅನಿರೀಕ್ಷಿತವಾಗಿ ನಿಮ್ಮ ಮಿತ್ರರೊಬ್ಬರು ಪತ್ನೀ ಸಮೇತರಾಗಿ ಬಂದುಬಿಡುತ್ತಾರೆ. ಮಾಡಿದಷ್ಟರಲ್ಲೆ ಎಲ್ಲರಿಗೂ ಕೊಡುತ್ತಾರೆ. ಬಕಾಸುರನ ವಂಶದವರಾದ ನಿಮಗೆ ಮತ್ತಷ್ಟು ಬರಬೇಕೆಂಬ ಆಸೆ. ಒಬ್ಬರೇ ಇದ್ದಿದ್ದರೆ "ಹೋ ಉಪ್ಪಿಟ್ಟು!" ಎಂದು ಕೂಗು ಹಾಕಿ ಬಿಡುತ್ತಿದ್ದಿರಿ. ಆದರೀಗ ಬಂದವರ ಎದುರಿಗೆ ಅರಚುವಂತಿಲ್ಲ. ಸಂಕೇತ ಭಾಷೆಯಲ್ಲಿ "ಒನ್ಸ್ ಮೋರ್" ಎನ್ನುವಂತೆ ಕೆಮ್ಮುತ್ತೀರಿ. ನಿಮ್ಮ ಗೃಹಿಣಿ ಮರುಕೆಮ್ಮಿನಿಂದ "ಏಳಿ ಮೇಲಕ್ಕೆ" ಎಂದು ಸೂಚಿಸುವ ಕೆಳಮಟ್ಟಕ್ಕೆಂದಿಗೂ ಇಳಿಯುವುದಿಲ್ಲ. ಆದರೂ ನಿಮ್ಮನ್ನು ಎಬ್ಬಿಸದೆ ಬಿಡುವುದಿಲ್ಲ. ಅವರು ಕೂಡಲೆ ಕಾಫಿ ತಂದುಕೊಡುತ್ತಾ ನಿಮ್ಮ ಮಿತ್ರರ ಗೃಹಿಣಿಯನ್ನು ಕುರಿತು "ನೀವು ಇಲ್ಲೇ ಊಟ ಮಾಡಿಕೊಂಡು ಬಿಸಿಲಿಳಿಸಿಕೊಂಡು ಹೋಗಿಬಿಡಿ, ಅಡಿಗೆ ಆಗಲೇ ಅರ್ಧಮುಕ್ಕಾಲು ಆಗಿದೆ" ಎನ್ನುತ್ತಾರೆ. ನಿಮ್ಮ ಮಿತ್ರರ ಮಡದಿಯೂ ಹೆಣ್ಣು ಮಗಳಲ್ಲವೆ? ಆಕೆ "ಹೋ ! ನಾನಾಗಲೇ ಅಡಿಗೆ ಮಾಡಿಟ್ಟು ಬಂದಿದ್ದೇನೆ. ಈಗಿನ ಉಪಾ



ಹಾರವೇ ಊಟಕ್ಕಿಂತ ಹೆಚ್ಚಾಯಿತು" ಎಂದು ನಗುತ್ತಾ ವಂದಿಸುತ್ತಾರೆ. "ಎಲಾ, ತಿಂಗಳ ಕೊನೆ, ಮನೆಯಲ್ಲಿ ಅದಿಲ್ಲ ಇದಿಲ್ಲ ಎನ್ನುತ್ತಿದ್ದಳು. ಇವರನ್ನು ಊಟಕ್ಕೇ ಎಬ್ಬಿಸುತ್ತಿರುವಳಲ್ಲಾ" ಎಂದು ನೀವು ತಲ್ಲಣಿಸುವ ಕಾರಣವಿಲ್ಲ. ಆ ಮಹಿಳೆಯರಿಬ್ಬರಿಗೂ ಈ ಸತ್ಕಾರ ಸೂಕ್ಷ್ಮದ ಅರಿವು ಪೂರ್ಣವಾಗಿ ಇರುತ್ತದೆ. ಅವರಿಬ್ಬರೂ ತುಂಬ ಜಾಣೆಯರು. ತಮ್ಮ ಜಾಣತನದಿಂದ ನಿಮ್ಮನ್ನು ಆಗಿನ ಸಂದಿಗ್ಧದಿಂದ ಪಾರು ಮಾಡಿಬಿಟ್ಟಿದ್ದಾರವರು.

ವಾಕ್ಸುಧೆ

ನನ್ನ ಹತ್ತಿರದ ಬಂಧು ಒಬ್ಬಾಕೆ ಇದ್ದಾರೆ. ಆಗಾಗ ಅವರ ಮನೆಗೆ ನಾನೂ ಊಟಕ್ಕೆ ಹೋಗಬೇಕಾಗುತ್ತದೆ. ಅಲ್ಲಿ ಊಟಕ್ಕಿಂತ ಉಪಚಾರವೇ ಹೆಚ್ಚು. ಬಡಿಸುವಾಗ ಯಾವುದಾದರೊಂದು ಭಕ್ಷ್ಯಕ್ಕೆ ಅವರು ಕೈಹಾಕಿದ್ದನ್ನು ನೋಡಿಕೊಂಡು ಬಹಳಷ್ಟು ಎಲೆಗೆ ಬಿದ್ದೀತೆಂದು ತಿಂಡಿಪೋತನಾದ ನಾನು ನಿರೀಕ್ಷಿಸಿದರೆ ನನ್ನ ಎಣಿಕೆ ತಪ್ಪಾಗಿ ಅವರು ತಮ್ಮ ಕೈಚೂಟಿಯಿಂದ ಕೇವಲ ಎರಡು ಮೂರು ತೊಲೆಯಷ್ಟನ್ನು ಮಾತ್ರ ಬಡಿಸಿರುತ್ತಾರೆ. ಬಡಿಸುವ ಸಿಹಿ ತಿನಿಸಿನೊಂದಿಗೆ "ನಮ್ಮ ಶಾಮೂ ಊಟಾನೇ ಸರಿಯಾಗಿ ಮಾಡೋದಿಲ್ಲ. ಸಿಹಿ ಅಂದರೆ ಅವನಿಗೆ ಸೇರುವುದೇ ಇಲ್ಲ" ಎಂದೂ ಹೇಳಿಬಿಡುತ್ತಾರೆ. ನಾನು "ನಿಮಗೆ ಯಾರು ಹೇಳಿದರು ನಾನು



ಊಟ ಮಾಡುವುದಿಲ್ಲಂತ— ಸಿಹಿ ನನಗೆ ಸೇರುವುದಿಲ್ಲವೆ ? ಬಡಿಸಿ ನೋಡೋಣ" ಎಂದು ಹೇಳಿಬಿಡೋಣ ಎನ್ನುವಷ್ಟರಲ್ಲಿ ಅವರಾಗಲೇ ನನ್ನೆದುರಿನಿಂದ ಹೋಗಿರುತ್ತಾರೆ. ಆ ಮಹಾತಾಯಿ ತನ್ನ ಅತಿಥಿಗಳನ್ನು ವಾಕ್ಸುಧೆಯಲ್ಲೇ ತೃಪ್ತಿಪಡಿಸುವ ಕಲೆಯನ್ನು ಚೆನ್ನಾಗಿ ಸಾಧಿಸಿಕೊಂಡಿದ್ದಾರೆ.

ವ್ಯಾಜೋಪಚಾರ

ನೀವೂ ನಿಮ್ಮ ಮಿತ್ರರೂ ಪರಿವಾರ ಸಮೇತರಾಗಿ ಒಂದು ರಜಾ ದಿನ ಎಲ್ಲಿಗೊ ಹೋಗಿದ್ದ



ವರು ಹಿಂದಿರುಗುವಾಗ ನಿಮ್ಮ ಮಿತ್ರರ ಮನೆಯ ಮುಂದೆ ಹಾದು ನಿಮ್ಮ ಮನೆಗೆ ಬರಬೇಕಾಗಿರುತ್ತೆ. ಅವರ ಮನೆ ತಲುಪಿದಾಗ ನಿಮ್ಮ ಮಿತ್ರರ ಗೃಹಿಣಿ "ಒಳಗೆ ಬರುವುದಿಲ್ಲವೆ ?" ಎಂದು ನಿಮ್ಮಿಬ್ಬರನ್ನೂ ಕರೆಯುವರು. ನಿಮಗೆ "ಸಂಜೆ ತನಕ ತಲೆ ಹೋಗುವ ಕೆಲಸವೇನೂ ಇಲ್ಲ. ಇಲ್ಲಿಯೇ ಹಾಯಾಗಿ ಮಿತ್ರನೊಂದಿಗೆ ಹರಟೆ ಕೊಚ್ಚುತ್ತ ಏಕೆ ವಿಶ್ರಮಿಸಬಾರದು" ಎಂದು ಬಾಯಲ್ಲಿ ನೀರೂರಬಹುದು. ಆದರೆ ಆಮಂತ್ರಣದ ಅಂತರಾರ್ಥವನ್ನರಿತ ನಿಮ್ಮಾಕೆ "ಇಲ್ಲ, ಬಹಳ ಕೆಲಸವಿದೆ, ಇನ್ನೆಂದಾದರೂ ಬರುತ್ತೇವೆ" ಎಂದು ಹೇಳಿ ನಿಮ್ಮನ್ನೂ ಎಳೆದುಕೊಂಡು ಬಂದು ಮನೆ ಸೇರಿಯಾರೇ ಹೊರತು ಆ ಗೃಹಿಣಿಯ ವ್ಯಾಜೋಪಚಾರಕ್ಕೆ ಮರುಳಾಗರು.

ಅರ್ಥಗರ್ಭಿತ ಮೌನ

“ಇಲ್ಲಿ ನೋಡು, ನನ್ನ ತಂಗಿ ಪತ್ರ ಬರೆದಿದ್ದಾಳೆ. ದಸರಾಕ್ಕೆ ಅವಳೂ ಮಕ್ಕಳೂ ಬರುತ್ತಾರಂತೆ!” ಎಂದು ನೀವು ಉತ್ಸಾಹದಿಂದ ಪತ್ರ ಓದಿ ಹೇಳುತ್ತೀರಿ. ನಿಮ್ಮಾಕೆ ತುಟಿ ಎರಡು ಮಾಡುವುದಿಲ್ಲ. ಕಡೆಗೆ ಹೊಟ್ಟೆ ತುಂಬ ತಂಗಾಳಿಯನ್ನು ಸೇದಿ ಎಳೆದುಕೊಂಡು “.... ಬರಲಿ” ಎಂದಿಷ್ಟೇ ಹೇಳುತ್ತಾರೆ. “ಇಗೋ ನೋಡು, ನಿನ್ನ ತಮ್ಮನೂ ಬರೆದಿದ್ದಾನೆ. ಅವನೂ ಅವನ ಹೆಂಡತಿ ಇಬ್ಬರೂ ಬರುತ್ತಾರಂತೆ” ಎಂದು ಮತ್ತೊಂದು ಪತ್ರವನ್ನು ಓದುತ್ತೀರಿ. ಆಗ ನಿಮ್ಮಾಕೆ ಕಣ್ಣು ಅರಳಿಸಿ “ಕಡೆಗಾದರೂ ನಮ್ಮ ಜ್ಞಾಪಕವಾಯಿತಲ್ಲ ಅವನಿಗೆ!”...... ಎಂದು ಅನ್ನುವಾಗ ಬಿಗಿದ ತುಟಿಗಳು ನುಡಿಮುತ್ತುಗಳನ್ನು ತಡೆಬಡೆ ಇಲ್ಲದಂತೆ ಉದುರಿಸಿ ಬಿಡುತ್ತವೆ. ಮೇಲಿನೆರಡೂ ವರ್ತಮಾನಗಳಲ್ಲಿ ಮೊದಲಿನದಕ್ಕೆ ತೋರಿದ ಮೌನದ ಅರ್ಥ ನಿಮಗೆ ಮನವರಿಕೆಯಾಗಿಬಿಟ್ಟರೆ ಇಲ್ಲದ ಹಗರಣ ಮಾಡಿಬಿಡುತ್ತೀರಿ. ಆದರೆ ನಿಮ್ಮ ಲೋಕಾಭಿರಾಮ ವ್ಯಕ್ತಿತ್ವ ಈ ಚಾಲೂಕಿನ ಮಾತನ್ನು ಸ್ವಲ್ಪವೂ ಅರ್ಥ ಮಾಡಿಕೊಳ್ಳುವುದಿಲ್ಲ. ಇದೇ ದೇವರ ದಯ! ಗಂಡಸರು ಸ್ವಲ್ಪ ಅಲಿಪ್ತ ಮನೋಭಾವದವರಾದರೇ ಇಬ್ಬರಿಗೂ ಆರೋಗ್ಯಕರ. ಇಬ್ಬರೂ ಸೂಕ್ಷ್ಮಮತಿಗಳಾದರೆ ನಿತ್ಯವೂ ಕತ್ತಿ ಪರಸೆ ತಪ್ಪುವುದಿಲ್ಲ.




ಗೃಹಾಭಿಮಾನ

ನೀವೊಬ್ಬರೇ ನಿಮ್ಮ ಮಡದಿಯ ಕೈಗೆ ಸಿಕ್ಕಾಗ ಅವರು ನಿಮ್ಮನ್ನು ಅದು ಇದು ಕೇಳಿ ಹಿಂಡಬಹುದು. ಬೇರೊಬ್ಬರ ಮನೆಯ ಯಜಮಾನ, ಅವನ ಹೆಂಡತಿಗೆ ತಂದುಕೊಟ್ಟ ಒಡವೆ ವಸ್ತುಗಳನ್ನು ಬಣ್ಣಿಸಲೂಬಹುದು. ಆದರೆ ಅವರು ಸರೀಕರೆದುರು ಮಾತ್ರ ತಮ್ಮ ಮನೆಯ ಅಭಾವ ಜೀವನವನ್ನು ಕುರಿತು ಎಂದಿಗೂ ಒಟ್ಟೆನ್ನುವುದಿಲ್ಲ. ಹಾಗೇನಾದರೂ ಬಾಯಿ ಬಿಡುವುದಾದರೆ ನೀವೇ ಹೊರತು ನಿಮ್ಮ ಗೃಹಿಣಿ ಎಂದಿಗೂ ಉಸಿರು ಬಿಡುವುದಿಲ್ಲ—ಇಲ್ಲಿ ಕೇಳಿ, ನೆರೆಮನೆಯಾಕೆಯೊಡನೆ “ಏನು ಪೇಟೆ ಕಡೆ ಹೋಗುತ್ತೀರಾ?” ನಿಮ್ಮ ಮಡದಿ ಕೇಳುವರು.

“ಹುಂ, ಮೊನ್ನೆ ತಂದಿದ್ದರಲ್ಲಾ ಚೈನುಸರ; ಅದರ ಕೊಂಡಿ ಸಡಿಲಾಗಿತ್ತು. ಸರಿಮಾಡಿಸಿಕೊಂಡು ಬರಬೇಕು. ಹೋಗಿಬರೋಣ ಅಂದರು, ಹೋಗುತ್ತೇವೆ.” ನೆರೆಮನೆಯ ಆ ಗರತಿಯ ಉತ್ತರದೊಂದಿಗೆ ಆಕೆ ಕೊಂಡ ಚೈನುಸರದ (ಅಮೇರಿಕನ್ ಗೋಲ್ಡ್ ಇದ್ದರೂ ಇರಬಹುದು.) ಜಾಹಿರಾತು ಸಹ ಸೇರಿಕೊಂಡಿರುತ್ತದೆ. ಆಗ ನಿಮ್ಮ ಮನೆಯವರು “ನಾವೂ ಹೋಗಬೇಕಾಗಿದೆ. ಚಿಕ್ಕಪೇಟೆಯಲ್ಲಿ ಒಂದು ಜೊತೆ ಬಳೆ (ಬೆಳ್ಳಿಯದೋ ಏನೋ) ಮಾಡಿಸುಕ್ಕೆ ಹಾಕಿದ್ದೇವೆ. ಹೋಗಿ ತೆಗೆದುಕೊಂಡು ಬರಬೇಕು” ಎನ್ನುತ್ತಾರೆ. ಗೃಹಾಭಿಮಾನ ಅವರ ಹೃದಯ ತುಂಬಿರುವ ಅಮೂಲ್ಯವಾದ ಆಭರಣ. ಈ ಆಭರಣದಲ್ಲಿ ಮಹಿಳೆಯರು ಎಂದಿಗೂ ಅಪೂರ್ವ ತೇಜಸ್ಸನ್ನು ಹೊಂದಿ ರಂಜಿಸಬಲ್ಲರು. ನಮ್ಮ ಹಾಗೆ ‘ಇಲ್ಲ! ಇಲ್ಲ!’ ಎಂಬ ಅಭಾವ ಮಂತ್ರವನ್ನೆಂದೂ ಅವರು ಪಠಿಸುವುದಿಲ್ಲ.

ಸುರುಬತ್ತಿ

ಈ ಬತ್ತಿ ಹಚ್ಚಿಬಿಡುವುದು ಸಾಮಾನ್ಯವಾಗಿ ಇಬ್ಬರು ಮಹಿಳೆಯರು ಕಲೆತು ಮಾತನಾಡುವಾಗ. ಅವರಿಬ್ಬರೂ ಈ ವಾಗ್ಯುದ್ಧದಲ್ಲಿ ತೊಡಗಿದ್ದರೂ ಸಹ ನಾವು ನೀವು ನಿಂತು ನೋಡಿದರೆ ಅವರಿಬ್ಬರೂ ಪರಸ್ಪರ ವಂದನೆ ಪ್ರತಿ ವಂದನೆ ಸಲ್ಲಿಸುತ್ತಿದ್ದಾರೆಂದುಕೊಳ್ಳುವಷ್ಟು ಪ್ರೀತಿ



LUX
Pink
LUX
Green
LUX
Blue
LUX
Yellow
ಹಬ್ಬಗಳ ಹಬ್ಬ
ದೀಪಾವಳಿ!
'ನನ್ನ ಮೆಚ್ಚಿನ ಲಕ್ಸ್‌ಗೆ
ಕಾಮನ ಬಿಲ್ಲಿನ
4 ಬಣ್ಣಗಳು
– ಹಾಲು, ಬಿಳಿ ಬಣ್ಣವೂ ಇದೆ!'
ಎಂದು ಹೇಳುತ್ತಾಳೆ ಸಾವಿತ್ರಿ
ಸಿನಿಮ ತಾರೆಯರ ಶುದ್ಧವಾದ,
ಸೌಮ್ಯವಾದ ಸೌಂದರ್ಯ- ಸೋಪು
LUX
LTS. 106-X29 KN
ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

ಯಿಂದ ಹೋರಾಡುತ್ತಿರುತ್ತಾರೆ. ಈ ಹಿತ ಯುದ್ಧಕ್ಕೂ ಅವರ ಗುಪ್ತಭಾಷೆಯನ್ನೇ ಮಧುರವಾದ ಮಹಾಸ್ತ್ರವಾಗಿ ಉಪಯೋಗಿಸುತ್ತಾರೆ. ಇಬ್ಬರು ಕಲಿತ ಮಹಿಳೆಯರು ತಮ್ಮ ಪಾಂಡಿತ್ಯದ ಬಗ್ಗೆ ವಾದ ಮಾಡುತ್ತಿದ್ದಾಗ:

" ಅಲ್ಲವೇ ಶಾಂತಾ, ನೀನು 'ಅನಾಕೆರೀನಿನಾ' ಓದಿಲ್ಲ ಅಂತೀಯಲ್ಲಾ, ಏನು ಹೇಳಲಿ ನಾನು" ಒಬ್ಬಾಕೆ ಮತ್ತೊಬ್ಬಳ ಅಜ್ಞಾನವನ್ನು ಕುರಿತು ಹಳಿಯುತ್ತಾಳೆ.

" ಹೌದಮ್ಮ, ನೀನಂತೂ ತುಂಬ ಓದಿದ್ದೀಯ. ನಿಮ್ಮ ಯಜಮಾನರು ನಿನಗೆ ಓದುವುದಕ್ಕೆ ಬಿಡುವು ಮಾಡಿಕೊಡುತ್ತಾರೆ. ನಮ್ಮ ಮನೆಯವರಿದ್ದಾರಲ್ಲ, ಏನೂ ಕೇಳಬೇಡ. ಒಂದು ಕಡ್ಡಿ ಎತ್ತಿ ಇಡುವುದಿಲ್ಲ."

ನೋಡಿದಿರಾ, ಇಂಥ ಸೂಕ್ಷ್ಮ ಅಸ್ತ್ರ ನಿಮ್ಮ ಬತ್ತಳಿಕೆಯಲ್ಲಿದೆಯೆ, ಹೇಳಿ?

ವಿರುದ್ಧಾರ್ಥ

" ಇಲ್ಲಿ ನೋಡಿ ಈ ಸಾರಿ ದೀಪಾವಳಿಗೆ ನನಗೇನೂ ತರಬೇಡಿ."

ಇದು ನಿಮ್ಮ ಪತ್ನಿ ನಿಮಗೆ ಕೊಡುವ ದೀಪಾವಳಿ ಸಂದೇಶ. ಈ ಮಾತು ಬಂದಾಗ ದೀಪಾವಳಿಗೆ ಏನು ತರುವುದು ಎಂಬ ವಿಚಾರವೇ ಬಂದಿರುವುದಿಲ್ಲ. ಅಂತೂ ಈ ಮಾತು ದೀಪಾವಳಿಗೆ ಏನಾದರೂ ತರಬೇಕೆಂಬ ವಿಷಯವನ್ನು ಚರ್ಚೆಗೆ ಎಳೆದು ತಂದಿತು. ನೀವು " ಇರಲಿ, ಏನೋ



ಸ್ವಲ್ಪ ದುಡ್ಡಿನಲ್ಲಿ ಏನಾದರೂ ತರೋಣ" ಎಂದಿರಿ. ಗಂಡಸಾಗಿ ಹುಟ್ಟಿ ಕೈ ಹಿಡಿದವಳು ಬೇಡವೆಂದರೆ ಉಪಚಾರಕ್ಕಾದರೂ ಇಷ್ಟು ಮಾತನಾಡದಿದ್ದರೆ ನಡೆದೀತೆ. ಸರಿ, ನಿಮ್ಮ ಈ ಮಾತಿನ ಹಳಿಯ ಮೇಲೆ ಬೇಡಿಕೆಯ ವ್ಯಾಗಿನ್ನೇ ಹರಿದು ಬಂದು ನಿಮ್ಮೆದುರು ನಿಂತುಬಿಡುತ್ತದೆ. ಆಗ ಕ್ಲಿಯರೆನ್ಸ್ ಕೊಡುತ್ತೀರಾ ಇಲ್ಲವೆ 'ಢಕಾಢಿಕ್ಕಿ' ಆಗಗೊಡುತ್ತೀರಾ?

ನಾನೊಮ್ಮೆ ತೆಳುಹಳದೀ ಬಣ್ಣದ ಖಾದಿ ಶಾಲನ್ನು ಕೊಂಡಿದ್ದೆ. ಅದರ ಅಂಚು ಸೆರಗುಗಳಲ್ಲಿ ದಟ್ಟವಾದ ಹೂವು ಬಳ್ಳಿಯ ಚಿತ್ರಗಳು ಕವಿದು ತುಂಬಿದ್ದವು. ನನ್ನಾಕೆಯ ತವರಿನಲ್ಲಿ ನಡೆದ ಒಂದು ವಿಶೇಷ ಸಂದರ್ಭದಲ್ಲಿ ಅದನ್ನು ಹೊದೆದು ಓಡಿಯಾಡುತ್ತಿದ್ದೆ. ಅಲ್ಲಿದ್ದ ನಾಲ್ಕಾರು ಹೆಣ್ಣುಮಕ್ಕಳು ನನ್ನನ್ನು ಅಡ್ಡಗಟ್ಟಿದರು. ಅವರಲ್ಲಿ ನನ್ನ ಕಿರಿಯ ನಾದಿನಿ (ಕುಮಾರಿ) ನನ್ನನ್ನು "ಭಾವಾ ಈ ಮೇಲು ಹೊದಿಕೆ ಎಲ್ಲಿ ಕೊಂಡಿರಿ?" ಎಂದು ಕೇಳಿದಳು. ನನಗಾಗ ಹಿಡಿಸಲಾಗದಷ್ಟು ಆನಂದವಾಯಿತು. ನಾವು ಬಟ್ಟೆತರುವುದಾದರೂ ಏತಕ್ಕೆ ಬೇರೆಯವರು ಅದರಲ್ಲೂ 'ಪ್ರಿಯಂವದೆ' ಯರು ನೋಡಿ ಸಂತೋಷಪಡಲಿ ಎಂದಲ್ಲವೆ? ನಾನು, ಹೆಮ್ಮೆಯಿಂದ ತನ್ನ ಭುಜಕೀರ್ತಿಯನ್ನೆತ್ತಿ ತೋರಿಸುವ ಬಯಲಾಟದ ನಟನಂತೆ ನನ್ನ ಶಾಲನ್ನು ಎತ್ತಿ ತೋರಿಸುತ್ತಾ "ಏಕೆ? ಚೆನ್ನಾಗಿದೆಯೆ?" ಎಂದು ಕೇಳಿದೆ. ಅದಕ್ಕೆ ಆ ಹುಡುಗಿ "ಚೆನ್ನಾಗಿಲ್ಲದೆ ಏನು? ನಮ್ಮ ಅಜ್ಜೀದು ಇಂಥದ್ದೇ ಒಂದು ಧಾವಳಿ ಇತ್ತು. ನಮ್ಮ ಅಜ್ಜಿಗೆ ಅದರ ಮೇಲೆ ತುಂಬ ಪ್ರೀತಿ. ಸಾಯುವಾಗಲೂ ಅದನ್ನು ಹೊದ್ದುಕೊಂಡೆ ಪ್ರಾಣ ಬಿಟ್ಟರು." ಅಲ್ಲಿ ಸೆರೆದಿದ್ದವರೆಲ್ಲ 'ಹೋ!' ಎಂದು ನಗುವಿನ ತೆರೆ ಎಬ್ಬಿಸಿದರು. ಆದರೆ ಅವರ ನಡುವೆ ನಿಂತಿದ್ದ ಒಬ್ಬಾಕೆಯ ಮುಖ ಮಾತ್ರ ಮೋಡ ಮುಸುಕಿದ ಚಂದ್ರನಂತಾಗಿತ್ತು. ನಾನೇನೋ ಆ ಮಹಿಳೆಯರು ನನ್ನ ಶಾಲನ್ನು ಪ್ರಶಂಸಿಸಿರೆಂದೇ ತಿಳಿದು ಹಿಗ್ಗಿದ್ದೆನಾದರೂ ಮುಂದೆ ನನ್ನಾಕೆ ಆ ಶಾಲಿಗೆ

ಸಹಸ್ರನಾಮದೊಂದಿಗೆ ನನ್ನಿಂದ ಮುಕ್ತಿ ಕೊಡಿಸಿಬಿಟ್ಟಳು.

ತೆಂಗಿನ ಕಾಯಿ ಎಷ್ಟು ಒರಟು! ಅದರ ಚಿಪ್ಪು ಎಷ್ಟು ಗಟ್ಟಿ! ಆದರೂ ಅದರ ತಿರುಳು ಎಷ್ಟು ಮೃದು, ಮಧುರ! ಒಳ ಕೋಣೆಯಲ್ಲಿ ಕುಳಿತು ನಕ್ಕ ನಾರಿಯ ನಗುವಿನಂತೆ 'ಚಿಲಿ ಚಿಲಿ' ಗುಟ್ಟುವ, ಆ ನೀರು ಎಷ್ಟು ಸವಿ! ಈ ಗುಣಗಳಿಂದಲೇ ಆ ಕಾಯನ್ನು ನಮ್ಮ ಹಿರಿಯರು 'ನಾರೀಕೇಳ' ಎಂಬ ಸುಂದರವಾದ ಹೆಸರಿನಿಂದ ಕರೆದರು. (ನಾರೀ ಕೇಳ ಅಂದರೆ ಮಹಿಳೆಯರ ಒಡನಾಟ ಎಂದೂ ಆಗುವುದು.) ನಾರಿಯರ ಒಡನಾಟವೂ ಅಷ್ಟೆ. ಅವರ ಭಾಷಾ ಪ್ರಪಂಚವೂ ಅಷ್ಟೆ. ತೆಂಗಿನಕಾಯಿಯಂತೆ ಒರಟು, ಬಿಗಿ, ಮತ್ತು ಜಟಿಲ. ಆದರೆ ಅದರ ತಿರುಳಿನಂತೆ ಮೃದು. ನೀರಿನಂತೆ ಮಧುರ. ಅವೆರಡರಂತೆ ಆರೋಗ್ಯಕರ. ಆದರೆ ನಾವು ನೀವು ಅವರ ಭಾಷೆಯನ್ನು ಕಲಿಯುವ ಗೋಜಿಗೆ ಹೋಗುವುದು ಬೇಡ. ಅದು ಸಾಧ್ಯವೂ ಇಲ್ಲ. ಬದಲು ಅದರ ಪರಿಣಾಮದ ಹಿತವನ್ನಷ್ಟು ಹೊಂದಿಬಿಡೋಣ. *



ಶಿಷ್ಯ

ಆಚಾರ್ಯ ವಿಶ್ವಶ್ರುತಿಯ ಮೂವರು ಶಿಷ್ಯರು ತಮ್ಮ ಶಿಕ್ಷಣವನ್ನು ಮುಗಿಸಿ ಗೃಹಸ್ಥಾಶ್ರಮವನ್ನು ಸ್ವೀಕರಿಸಲೆಂದು ಗುರುಗಳ ಅನುಮತಿ ಪಡೆದರು. ಗುರುಗಳು ಕೂಡ ಜಡ ಅಂತಃಕರಣದಿಂದ ಅವರಿಗೆ ಅನುಮತಿ ದಯಪಾಲಿಸಿದರು. ಮೂವರು ಶಿಷ್ಯರು ಹೊರಡುವ ತಯಾರಿ ನಡೆಸುತ್ತಿರುವಾಗ ಗುರುಗಳಿಗೆ ಒಂದು ವಿಚಾರ ಹೊಳೆಯಿತು. ಕೂಡಲೆ ಅವರು ತಮ್ಮ ಮನೆಗೆ ಮುಂದೆ ಇದ್ದ ಹಾದಿಯ ಮೇಲೆ ಕಾಜಿನ ತುಂಡುಗಳನ್ನು ಚೆಲ್ಲಿ, ಅಲ್ಲಿಯೇ ಬಾಗಿಲ ಮುಂದೆ ಸ್ವಸ್ಥಚಿತ್ತದಿಂದ ನಿಂತರು.

ಗುರುಗಳಿಂದ ನಿರೋಪ ಪಡೆದ ಮೂವರೂ ಶಿಷ್ಯರು ಅವರ ಮನೆಯಿಂದ ಹೊರಬಿದ್ದರು. ಅವರಲ್ಲಿ ಮೊದಲಿಗನು ಕಾಜಿನ ತುಂಡುಗಳನ್ನು ದಾಟಿಹೋದನು. ಎರಡನೆ ಶಿಷ್ಯನು ಒಂದು ನಿಮಿಷ ನಿಂತು ಅದನ್ನು ನೋಡಿ ಹೊರಟುಹೋದನು. ಮೂರನೆ ಶಿಷ್ಯನು ಆ ಕಾಚಿನ ತುಂಡುಗಳನ್ನು ಕಲೆ ಹಾಕಿ ದೂರ ಒಗೆದು ಮುಂದೆ ಹೊರಟನು. ಇದನ್ನೆಲ್ಲ ತದೇಕ ಚಿತ್ತದಿಂದ ನೋಡಿದ ಗುರುಗಳು ಮೊದಲಿನ ಇಬ್ಬರು ಶಿಷ್ಯರನ್ನು ತಿರುಗಿ ಕರೆದು, "ಮಕ್ಕಳಿರಾ! ನಿಮ್ಮ ಶಿಕ್ಷಣವಿನ್ನೂ ಪೂರ್ತಿ ಆಗಿಲ್ಲ. ನಿಮಗೆ ಶಿಕ್ಷಣದ ಉದ್ದೇಶವೇ ತಿಳಿದಿಲ್ಲ" ವೆಂದು ಹೇಳಿ ಮೂರನೇ ಶಿಷ್ಯನಿಗೆ ಮಾತ್ರ ನಿರೋಪ ಕೊಟ್ಟರು.

—ಸಂಜೀವ ಲಕ್ಷ್ಮೇಶ್ವರ

ಶುದ್ಧ ಕೇಡಿಗಳ ಕೂಟದಲ್ಲಿ ಅದು ಎಂಥ ಮಾಯುಕದಿಂದ ಬದಲಾವಣೆ ತಂದಿತು!

ಮಗುವಿನ ಮಹಿಮೆ

ಬ್ರೆಟ್‌ಹಾರ್ಟನ ಒಂದು ಕಥೆಯು ರೂಪಾಂತರ

ರೋರಿಂಗ್ ಕ್ಯಾಂಪ್‌ನಲ್ಲಿ ಗದ್ದಲವೋ ಗದ್ದಲ ನಡೆದಿತ್ತು. ಅಂದರೆ ಅದೇನೂ ಹೊಡೆದಾಟ-ಬಡಿದಾಟವಾಗಿರಲಿಲ್ಲ. ೧೮೫೦ ರಲ್ಲಿ ರೋರಿಂಗ್ ಕ್ಯಾಂಪಿನಲ್ಲಿ ಹೊಡೆದಾಟವಾದರೆ ಅದೇನೂ ಇಡೀ ಊರಿಗೆ ಊರೇ ನೆರೆಯುವಂಥ ವಿಶೇಷವಾಗಿರಲಿಲ್ಲ. ಇಂದಿನ ಗದ್ದಲ ಖಂಡಿತವಾಗಿ ಅಪೂರ್ವವಾಗಿತ್ತು. ಹಿಂದೆ ಇಲ್ಲಿ ಫ್ರೆಂಚ್ ಪೀಟೆ ಮತ್ತು ಕನಕಾ ಜೋ ಪರಸ್ಪರರನ್ನು ಗುಂಡಿಕ್ಕಿ ಕೊಂದುಕೊಂಡಾಗ ತಮ್ಮ ಇಸ್ಪೀಟಿನಾಟದಿಂದ ತಲೆಯೆತ್ತಿ ಕೂಡ ನೋಡದಿದ್ದ "ಟಟಿಲ್ಸ್ ಗ್ರೋಸರಿ" ಜೂಜು ಅಡ್ಡೆಯ ಜನ ಕೂಡ ಇಂದು ಈ ಗದ್ದಲದಲ್ಲಿ ಸೇರಿಕೊಂಡಿದ್ದರು.

ಊರಿನ ತೀರ ಅಂಚಿಗೆ ಇದ್ದ ಕಟ್ಟಿಗೆಯ



ಮನೆಯೊಂದರ ಎದುರು ಜನ ನೆರೆದಿದ್ದರು. ಅವರ ಮಾತುಕಥೆ ಕೆಳದನಿಯಲ್ಲಿ ನಡೆದಿತ್ತು. ಆ ಮಾತುಕಥೆಯಲ್ಲಿ ಇಡೀ ಕ್ಯಾಂಪಿಗೆ ಪರಿಚಿತವಾಗಿದ್ದ ಚಿರೋಕಿ ಸಾಲ್ ಎಂಬಾಕೆಯ ಹೆಸರು ಪುನಃ ಪುನಃ ಕೇಳಿಬರುತ್ತಿತ್ತು.

ಚಿರೋಕಿ ಸಾಲ್ ಅವಳ ವಿಚಾರವಾಗಿ ಹೇಳದಿದ್ದರೇನೇ ಒಳ್ಳೆಯದು. ಅವಳು ಬಲು ಕೆಟ್ಟವಳು. ಚರಿತ್ರಹೀನೆ. ಆದರೆ ಈ ಸಮಯದಲ್ಲಿ ರೋರಿಂಗ್ ಕ್ಯಾಂಪಿನಲ್ಲಿ ಇದ್ದ ಹೆಂಗಸು ಜೀವ ಅವಳೊಬ್ಬಳೇ. ಅವಳೀಗ ಹೆಂಗಸರ ಸಹಾಯ ಅತ್ಯಗತ್ಯವಾದ ಪರಿಸ್ಥಿತಿಯಲ್ಲಿ ಸಿಲುಕಿದ್ದಳು. ಪ್ರೇಮಮಯ ಸ್ತ್ರೀಯರ ಸೇವೆ ಸಹಾಯಗಳು ಲಭ್ಯವಾಗಿದ್ದಾಗಲೂ ಹೆಂಗಸಾದವಳಿಗೆ ಕಠಿಣವೇ ಆಗಿರುವ ಅವಸ್ಥೆಯಲ್ಲಿ ಸಾಲ್ ಇದ್ದಳು. ಬಹುಶಃ ಅವಳ ಪಾಪದ ಫಲವಾಗಿಯೇ ಇರಬೇಕು, ಇಂಥ ಕಠಿಣ ಸಮಯದಲ್ಲಿ ಅವಳಿಗೆ ಸ್ತ್ರೀ ಜಾತಿಯ ಸಹಾಯ ಸಿಗದಂತಾಗಿತ್ತು. ಅವಳು ಎಷ್ಟೇ ಕೆಟ್ಟವಳಿದ್ದರೂ ಅವಳ ಈಗಿನ ದಾರುಣ ಸ್ಥಿತಿಯನ್ನು ಕಂಡು ನೆರೆದಿದ್ದ ಗಂಡಸರಲ್ಲಿ ಕೆಲವರಾದರೂ "ಅಯ್ಯೊ! ಪಾಪ!" ಎನ್ನತೊಡಗಿದ್ದರು.

ಪ್ರಸಂಗ ಕ್ಯಾಂಪಿಗೆ ತೀರ ನೂತನವಾಗಿತ್ತು. ರೋರಿಂಗ್ ಕ್ಯಾಂಪಿನಲ್ಲಿ "ಮರಣ" ದಿನನಿತ್ಯದ ಮಾತೇ ಎನ್ನುವಷ್ಟು ಪರಿಚಿತವಾಗಿದ್ದರೂ ಜನನವು ತೀರ ಅಪರಿಚಿವಾಗಿತ್ತು, ಹೊಸತಾಗಿತ್ತು. ಅಲ್ಲಿ ಹೊರಗಿನಿಂದ ಜನ ಬರುತ್ತಿದ್ದರೇ ವಿನಾ ಅಲ್ಲಿಯೇ ಯಾರೂ ಅವತರಿಸುತ್ತಿರಲಿಲ್ಲ. ಕೇವಲ ಗಂಡಸರ ರಾಜ್ಯವಾಗಿದ್ದ ರೋರಿಂಗ್ ಕ್ಯಾಂಪಿನಲ್ಲಿ ಅದೃಷ್ಟವಶಾತ್ ಸಾಲ್ ಪ್ರಸವವೇದನೆಯನ್ನು ಅನುಭವಿಸಹತ್ತಿದ್ದಳು.

ನೆರೆದಿದ್ದವರಲ್ಲಿ ಒಬ್ಬನನ್ನು ಉದ್ದೇಶಿಸಿ ಊರಿನ ಪ್ರಮುಖನೊಬ್ಬ— ಕೆಂಟಕ್ ಎಂದಾತನ ಹೆಸರಿದ್ದಿತು— ಹೇಳಿದ, "ಸ್ಟಂಪಿ, ನೀನು ಒಳಗೆ ಹೋಗು. ನಿನಗೆ ಇಂಥ ವಿಷಯಗಳಲ್ಲಿ ಒಂದಿಷ್ಟು ಅನುಭವವಿದೆ. ನಿನ್ನಿಂದ ಏನಾಗುವುದೋ ಅದನ್ನು ಮಾಡು." ಎಂದ.

ಆಯ್ಕೆ ಯೋಗ್ಯವಾಗಿತ್ತು. ಹಿಂದೊಮ್ಮೆ ಎರಡು ಕುಟುಂಬಗಳ ಯಜಮಾನನಾಗುವ ಅವಕಾಶವನ್ನು ಹೊಂದಿದ್ದ ಸ್ಟಂಪಿ. ಏನೋ ಒಂದು ಅಕೃತ್ಯದ ಪರಿಣಾಮವಾಗಿ ನಿರ್ವಾಸಿತರ ಊರಾಗಿದ್ದ 'ರೋರಿಂಗ್ ಕ್ಯಾಂಪ'ಗೆ ಆತ ಬಂದಿದ್ದ. ನೆರೆದಿದ್ದ ಜನ ಕೆಂಟಕ್‌ನ ಮಾತನ್ನು ಅನುಮೋದಿಸಿದರು. ಸ್ಟಂಪಿ ಜನಾಭಿಪ್ರಾಯಕ್ಕೆ ತಲೆವಾಗಿ ಮನೆಯೊಳಗೆ ನಡೆದು ಬಾಗಿಲು ಹಾಕಿಕೊಂಡ. ರೋರಿಂಗ್ ಕ್ಯಾಂಪಿನ ಪ್ರಜಾಜನ ಹೊರಗೆ ಬಯಲಲ್ಲಿ ಚಿಲಿಮೆ ಸೇದುತ್ತ ಪರಿಣಾಮವನ್ನು ಎದುರು ನೋಡುತ್ತ ಕುಳಿತುಕೊಂಡಿತು.

ಅವರೆಲ್ಲ ಸೇರಿ ಸುಮಾರು ನೂರು ಜನರಿದ್ದರು. ಅವರಲ್ಲಿ ಒಬ್ಬಿಬರು ಕಾಯದೆಯ ಹಿಡಿತದಿಂದ ತಪ್ಪಿಸಿಕೊಂಡು ಬಂದವರಾಗಿದ್ದರು. ಅನೇಕರು ಅಪರಾಧಿಗಳಾಗಿದ್ದರು. ಎಲ್ಲರೂ ಮರಣಭಯವಿಲ್ಲದ ದುಸ್ಸಾಹಸಿಗಳೇ ಆಗಿದ್ದರು. ಆದರೆ ಅವರನ್ನು ನೋಡಿದರೆ ಅವರ ಗತ ಜೀವನದ, ಅಂತರಂಗದ ಅಥವಾ ಅವರ ದುಸ್ಸಾಹಸ ಕಟುಕ ವೃತ್ತಿಯ ಲಕ್ಷಣವೊಂದೂ ಕಾಣಿಸುತ್ತಿರಲಿಲ್ಲ. ಅವರಲ್ಲಿ ತೀರ ಧೈರ್ಯಶಾಲಿಯೂ ಪ್ರಸಂಗಾವಧಾನಿಯೂ ಆಗಿದ್ದವನು ಐದು ಅಡಿಗಳಿಗಿಂತ ಎತ್ತರವಾಗಿರಲಿಲ್ಲ. ಅವನ ದನಿಯೊ ಹೆಂಗಸಿನ ದನಿಯಂತೆ ಕೋಮಲವಾಗಿತ್ತು. ಪಕ್ಕಾ ಜೂಜುಗಾರನಾದ ಓಕ್‌ಹರ್ಸ್ಟ್ ಎಂಬಾತ ಅಳುಮೋರೆಯವನಾಗಿದ್ದ. ಕೆಲವರಿಗೆ ಕೈಬೆರಳುಗಳಿರಲಿಲ್ಲ. ಕೆಲವರಿಗೆ ಕಾಲುಬೆರಳುಗಳಿರಲಿಲ್ಲ. ಇನ್ನು ಕೆಲವರಿಗೆ ಕಿವಿ ಇರಲಿಲ್ಲ. ಅಲ್ಲಿದ್ದವರಲ್ಲಿ ತೀರ ಬಲಶಾಲಿಯಾದವನ ಬಲಗೈಗೆ ಮೂರೇ ಬೆರಳುಗಳಿದ್ದವು. ಗುರಿಸಾಧಿಸುವುದರಲ್ಲಿ ನಿಸ್ಸೀಮನಾದವನಿಗೆ ಒಂದೇ ಕಣ್ಣಿತ್ತು. ಆದರೆ ಇವರೆಲ್ಲ ಕಲ್ಲಿನಂಥ ಭಾವನಾಹೀನ ನಿಷ್ಕರುಣ ಹೃದಯದ ಖದೀಮರಾಗಿದ್ದುದು ಸೂರ್ಯ-ಚಂದ್ರರಷ್ಟೇ ಸತ್ಯವಾಗಿತ್ತು.

ರೋರಿಂಗ್ ಕ್ಯಾಂಪ್ ಒಂದು ನದಿ ಮತ್ತು ಎರಡು ಕೊಳ್ಳಗಳ ನಡುವೆ ತ್ರಿಕೋಣಾಕೃತಿಯ ಊರಾಗಿತ್ತು. ಊರಿನಿಂದ ಹೊರಜಗತ್ತಿಗೆ ಹೋಗಬೇಕಾದರೆ ಈಗ ಅವರು ಯಾವ ಮನೆಯ ಎದುರು ನೆರೆದಿದ್ದರೋ ಆ ಮನೆಯ ಎದುರಿದ್ದ ಗುಡ್ಡದ ಮೇಲಿನ ಕಾಲುಹಾದಿಯಿಂದಲೇ ಹೋಗಬೇಕಾಗಿತ್ತು. ಈಗ ಆ ಗುಡ್ಡದ ಮೇಲಂಚಿನಿಂದ ಚಂದ್ರ ಮೇಲಕ್ಕೇರಿ ಬರತೊಡಗಿದ್ದ.

ನೆರೆದಿದ್ದ ಜನ ಕಟ್ಟಿಗೆ ಕೂಡಿಹಾಕಿ ಬೆಂಕಿಯುರಿಸಿದರು. ಮೈ ಬೆಚ್ಚಗಾದಂತೆ ಅವರ ಎಂದಿನ ಉತ್ಸಾಹ-ಉಲ್ಲಾಸಗಳು ತಲೆಯೆತ್ತಿದವು. ಸಾಲ್‌ಳ ಈ ಕಷ್ಟದ ಕೊನೆ ಏನಾಗುವುದು ಎಂಬ ಬಗ್ಗೆ ವಾದ ವಿವಾದ ನಡೆದು ಜಿದ್ದು ಕಟ್ಟುವ ವರೆಗೆ ಪ್ರಕರಣ ಬಂತು. ಕೆಲವರು ಸಾಲ್ ಸುಖರೂಪವಾಗಿ ಪಾರಾಗುವಳು, ಮಗು ಕೂಡ ಬದುಕುಳಿಯುವುದು ಎಂದರು. ಉಳಿದವರು ಇಲ್ಲವೆಂದರು. ಆ ಮೇಲೆ ಹುಟ್ಟುವ ಮಗು ಗಂಡೊ ಹೆಣ್ಣೊ ಎಂಬ ಬಗ್ಗೆ ಊಹಾಪೋಹ ಮಾಡಿ ಪಣ ಕಟ್ಟಿದರು. ಅಷ್ಟರಲ್ಲಿ ಚರ್ಚೆ-ವಾದಗಳ ಗದ್ದಲಗಳ ನಡುವೆ, ಗಾಳಿಗೆ ಅಲ್ಲಾಡುತ್ತಿದ್ದ ಗಿಡಮರಗಳ ಸರಪರ ಶಬ್ದದ ನಡುವೆ, ಬೆಂಕಿಯ ಚಟಪಟ ಸದ್ದಿನ ನಡುವೆ ಅವರೆಲ್ಲ ಅದು ವರೆಗೆ ರೋರಿಂಗ್ ಕ್ಯಾಂಪಿನಲ್ಲಿ ಎಂದೂ ಕೇಳಿರದಂಥ ಕೂಗೊಂದು ಕೇಳಿಸಿತು. ತಟ್ಟನೆ ಜನರ ವಾದ ನಿಂತಿತು. ಗಿಡಮರಗಳ ಸದ್ದು ಅಡಗಿತು. ನದಿಯ ಪ್ರವಾಹದ ರಭಸ ಕುಗ್ಗಿತು. ಇಡೀ ನಿಸರ್ಗವೇ ಈ ಅಪೂರ್ವ ಕೂಗನ್ನು ಕೇಳಲು ಸ್ತಬ್ಧವಾದಂತೆನಿಸಿತು.

ಊರಿಗೆ ಊರೇ ಎದ್ದು ನಿಂತಿತು. ಒಂದು ಪೀಪಾಯಿ ತುಂಬ ಮದ್ದನ್ನು ಹಾರಿಸಬೇಕು ಎಂಬ ಸೂಚನೆ ಬಂದಿತಾದರೂ ತಾಯಿಯ ಸ್ಥಿತಿಯನ್ನು ಲಕ್ಷಿಸಿ ಸಂಯಮದಿಂದ ಪಿಸ್ತೂಲಿನಿಂದ ಕೆಲವೇ ಗುಂಡುಗಳು ಹಾರಿಸಲ್ಪಟ್ಟವು. ಸ್ಟಂಪಿಯ ಹುಂಬ ಚಿಕಿತ್ಸೆಯ ಪರಿಣಾಮವಾಗಿಯೊ ಅಥವಾ ಮತ್ತಾವ ಕಾರಣದಿಂದಲೋ ಚಿರೋಕಿ ಸಾಲ್‌ಳ ಪ್ರಾಣಪಕ್ಷಿ ಪಂಜರದಿಂದ ಹಾರುವ ಲಕ್ಷಣ ಕಾಣಿಸಹತ್ತಿತು. ಮುಂದೊಂದು ತಾಸಿನಲ್ಲಿಯೆ ಅವಳು ತಿರುಗಿ ಎಂದೆಂದಿಗೂ ಬರಲು ಸಾಧ್ಯವಿಲ್ಲದ ಲೋಕಕ್ಕೆ ಹೋಗಿಬಿಟ್ಟಳು. ಜನರಿಗೆ ಈ ಸುದ್ದಿ ಅಂಥ ಆಘಾತವನ್ನೇನೂ ಮಾಡಲಿಲ್ಲ. ಅವರು ಕೇಳಿದ ಪ್ರಶ್ನೆಯೊಂದೇ: "ಮಗು ಬದುಕೀತೇ?" ಸ್ಟಂಪಿಯ ಉತ್ತರ ಸಂಶಯಾಸ್ಪದವಾಗಿತ್ತು. ಇಡೀ ರೋರಿಂಗ್ ಕ್ಯಾಂಪಿನಲ್ಲಿ ಸ್ತ್ರೀ ಜಾತಿಯ ಮತ್ತು ಸ್ತನಗಳಲ್ಲ ಹಾಲಿದ್ದ ಪ್ರಾಣಿಯೆಂದರೆ ಜೆನಿ ಎಂಬ ಕತ್ತೆಯೆ ಆಗಿತ್ತು. ಕತ್ತೆಯ ಹಾಲನ್ನು ಮಗುವಿಗೆ ಕುಡಿಸಬಹುದೇ ಎಂಬ ಬಗ್ಗೆ ಒಂದಿಷ್ಟು ಚರ್ಚೆ ನಡೆದು ಕೊನೆಗೆ ಕೊಟ್ಟುನೋಡೋಣ ಎಂದಾಯಿತು.

ಎಲ್ಲ ವ್ಯವಸ್ಥೆ ಆಗುವ ವರೆಗೆ ಒಂದು ತಾಸು ಕಳೆದು ಹೋಯಿತು. ಆ ಮೇಲೆ ಮನೆಯ ಬಾಗಿಲು ತೆರೆಯಿತು. ಸಾಲಾಗಿ ನಿಂತಿದ್ದ ಜನ ಒಬ್ಬೊಬ್ಬರಾಗಿ ಒಳಗೆ ನಡೆದರು. ಒಳಗೆ ಒಂದು ಶೆಲ್ಫಿನ ಹಲಗೆಯ ಮೇಲೆ ಸಾಲ್‌ಳ ಮೃತ ದೇಹ ಚಾದರದಿಂದ ಮುಚ್ಚಲ್ಪಟ್ಟು ಮಲಗಿತ್ತು. ಒಂದು ಮೇಜಿನ ಮೇಲೆ ಒಂದು ಪೆಟ್ಟಿಗೆಯಲ್ಲಿ ಕೆಂಪು ಉಣ್ಣೆ ಬಟ್ಟೆಯಿಂದ ಸುತ್ತಲ್ಪಟ್ಟ ಮಗು—ರೋರಿಂಗ್ ಕ್ಯಾಂಪಿನ ನೂತನ ಪ್ರಜೆ–ಇಡಲ್ಪಟ್ಟಿತ್ತು. ಪೆಟ್ಟಿಗೆಯ ಬಳಿ ಒಂದು ಹ್ಯಾಟು ಇದ್ದಿತು. "ಸಭ್ಯ ಗೃಹಸ್ಥರೇ," ಸ್ಟಂಪಿ ಹೇಳಿದ, "ಸಭ್ಯ ಗೃಹಸ್ಥರೆಲ್ಲ ಮೇಜಿನಬಳಿ ಬಂದು ಅದನ್ನು ಸುತ್ತುವರಿದು ಹಿಂಬಾಗಿಲಿಂದ ಹೊರಬಿದ್ದು ಹೋಗಬೇಕು. ಈ ಅನಾಥ ಮಗುವಿಗಾಗಿ ಏನಾದರೂ ಕೊಡಬೇಕೆನ್ನುವವರಿಗೆ ಅದರ ಮಗ್ಗಲಲ್ಲೇ ಹ್ಯಾಟಿದೆ."

ಮೊದಲನೆಯಾತ ತಲೆಯ ಮೇಲೆ ಹ್ಯಾಟನ್ನಿಟ್ಟುಕೊಂಡೇ ಒಳಗೆ ಬಂದ. ಒಳಗೆ ಬಂದವನೇ ಸುತ್ತಲೆಲ್ಲ ನೋಡಿದ. ಆತ ಯಾವ ಅಜ್ಞಾತ ಪ್ರೇರಣೆಯಿಂದಲೊ ಏನೊ ತಲೆಯ ಮೇಲಿನ

ಹ್ಯಾಟನ್ನು ತೆಗೆದ. ಉಳಿದವರೂ ಹಾಗೇ ಮಾಡಿದರು. ಇಂಥ ಸಮಾಜಗಳಲ್ಲಿ ಒಳ್ಳೆಯ ಮತ್ತು ಕೆಟ್ಟ ಕೃತಿಗಳೆರಡೂ ಸರ್‍ರನೆ ಸಾಮುದಾಯಿಕವಾಗಿ ಬಿಡುತ್ತವೆ. ಜನ ಕೂಸನ್ನು ನೋಡಿದಂತೆ ನಾನಾವಿಧವಾಗಿ ಉದ್ಗಾರಗಳನ್ನು ಹೊರಡಿಸಿದರು: "ಎಲಾ! ಎಂಥ ಬಣ್ಣ?" "ಎಲಾ! ಎಂಥ ಪುಟ್ಟ ಕೈಕಾಲುಗಳು!" ಇತ್ಯಾದಿ ಇತ್ಯಾದಿ. ಮಗುವಿಗೆ ಬಂದ ಕಾಣಿಕೆಗಳು ಈ ಉದ್ಗಾರಗಳಷ್ಟೇ ಭಿನ್ನವಾಗಿದ್ದವು, ವಿಚಿತ್ರವಾಗಿದ್ದವು: ಒಂದು ಬೆಳ್ಳಿಯ ನಶ್ಯದ ಡಬ್ಬಿ, ಒಂದು ರಿವಾಲ್ವರ್, ಒಂದು ಸುಂದರ ಕಸೂತಿ ಹಾಕಿದ್ದ ಹೆಂಗಸರ ಕರವಸ್ತ್ರ (ಜೂಜಿನ ಅಡ್ಡೆಯ ಓಕ್‌ಹರ್ಸ್ಟ್‌ನಿಂದ), ಒಂದು ವಜ್ರದ ಉಂಗುರ, ಒಂದು ಬೈಬಲ್, ಸುಮಾರು ೨೦೦ ಡಾಲರುಗಳಷ್ಟು ಚಿಲ್ಲರೆ ನಾಣ್ಯ ಇತ್ಯಾದಿ. ಇವೆಲ್ಲ ನಡೆಯುತ್ತಿರುವಾಗ ಮಗ್ಗಲಲ್ಲಿದ್ದ ಹೆಣದಷ್ಟೇ ನಿಶ್ಚಲವಾಗಿ ನಿಂತಿದ್ದ ಸ್ಟಂಪಿ. ಕೆಂಟಕ್ ಬಗ್ಗಿ ಕೂಸನ್ನು ಮುಟ್ಟಿ ನೋಡುತ್ತಿದ್ದಾಗ ನೋವಿನಿಂದ ಒದ್ದಾಡಿ ಅದು ಅವನ ಕೈಬೆರಳೊಂದನ್ನು ಗಟ್ಟಿಯಾಗಿ ನಿಮಿಷಕಾಲ ಹಿಡಿದುಕೊಂಡಿತು. ಮಗುವಿನ ಈ ಕೃತಿಯಿಂದ ಸಂಕೋಚಗೊಂಡ ಕೆಂಟಕ್ "ಥತ್! ಕಳ್ಳ ರಂ– ಗಂಡ" ಎನ್ನುತ್ತ ಅವನಂಥ ಕೇಡಿಗೆ ಅಸಾಧ್ಯವೇ ಎನ್ನುವಷ್ಟು ಮಟ್ಟಿಗೆ ನಾಜೂಕಿನಿಂದ ತನ್ನ ಬೆರಳನ್ನು ಬಿಡಿಸಿಕೊಂಡ. ಆ ಮೇಲೆ ಆತ ಟಿಪ್ಟನ್ ಎಂಬಾತನೊಡನೆ "ನನ್ನ ಬೆರಳು ಹಿಡಿದು ಅಲುಗಾಡಿಸಿತು. ಥತ್, ಕಳ್ಳ ರಂ– ಗಂಡ" ಎಂದ.

ಜನ ಎಲ್ಲ ಹೊರಟುಹೋದಾಗ ರಾತ್ರಿ ನಾಲ್ಕು ಗಂಟೆಯಾಗಿತ್ತು. ಸ್ಟಂಪಿ ಮತ್ತು ಕೆಂಟಕ್ ಅಂದು ರಾತ್ರಿ ಕಣ್ಣು ಮುಚ್ಚಲೇ ಇಲ್ಲ. ಕೆಂಟಕ್ ತುಂಬಾ ಮದ್ಯವನ್ನು ಕುಡಿದು ತನಗಾದ ಅನುಭವವನ್ನು ಮತ್ತೆ ಮತ್ತೆ ಹೇಳುತ್ತಲಿದ್ದ. ಎಲ್ಲರೂ ಹೊರಟು ಹೋದ ಮೇಲೆ ಆತ ನದೀ ತೀರಕ್ಕೆ ಹೋದ. ಮತ್ತೆ ತಿರುಗಿ ಬಂದು ಬಾಗಿಲು ಬಡಿದ. ಸ್ಟಂಪಿ ಬಾಗಿಲು ತೆರೆಯಲು "ಏನು ಸಮಾಚಾರ?" ಎಂದು ಕೇಳಿದ. "ಎಲ್ಲ ಸರಿಯಾಗಿದೆ" ಎಂದು ಸ್ಟಂಪಿ ಅನ್ನಲು "ವಿಶೇಷ ವೇನೂ ಇಲ್ಲವಲ್ಲ?" ಎಂದ. ಸಂಪಿ ಅದಕ್ಕೆ ಇಲ್ಲವೆನ್ನಲು "ನನ್ನ ಬೆರಳು ಅಲುಗಾಡಿಸಿತು ಆ ಮಗು. ಕಳ್ಳ ರಂ–ಗಂಡ" ಎಂದು ಕೆಂಟಕ್ ಹೇಳಿ ಅಲ್ಲಿಂದ ಹೊರಟು ಹೋದ.

ಮಾರನೆಯ ದಿನ ಆ ಊರಿನ ಯೋಗ್ಯತಾನುಸಾರವಾಗಿ ಚಿರೋಕಿ ಸಾಲ್‌ಳಿಗೆ ಅಂತ್ಯಕ್ರಿಯೆ ನಡೆಯಿತು. ಅದಾದ ನಂತರ ಮಗುವನ್ನೇನು ಮಾಡಬೇಕು ಎಂದು ಚರ್ಚಿಸಲು ಜನ ಸಭೆ ಕೂಡಿಸಿದರು. ಅದನ್ನು ದತ್ತಕ ತೆಗೆದುಕೊಳ್ಳಬೇಕೆಂಬ ಸೂಚನೆ ಉತ್ಸಾಹದಿಂದಲೂ ಒಮ್ಮತದಿಂದಲೂ ಸ್ವೀಕೃತವಾಯಿತು. ಆದರೆ ಅದನ್ನು ಜೋಪಾನ ಮಾಡುವುದು ಹೇಗೆ ಎಂಬ ಬಗ್ಗೆ ತುರುಸಿನ ಚರ್ಚೆ ನಡೆಯಿತು. ಚರ್ಚೆ ತುರುಸಿನದಾದರೂ ರೋರಿಂಗ್ ಕ್ಯಾಂಪಿನ ಚರ್ಚೆಗಳಲ್ಲಿ ಸಾಮಾನ್ಯವಾಗಿದ್ದ ಈರ್ಷೆ-ದ್ವೇಷಗಳು ಅದರಲ್ಲಿರಲಿಲ್ಲ. ಮಗುವನ್ನು ೪೦ ಮೈಲುದೂರದಲ್ಲಿದ್ದ ರೆಡ್‌ಡಾಗ್ ಊರಿಗೆ ಕಳಿಸಬೇಕು. ಅಲ್ಲಿ ಅದರ ಆರೈಕೆಗಾಗಿ ಸ್ತ್ರೀಯರು ಸಿಗುವಂತಿದ್ದಾರೆಂದು ಟಿಪ್ಟನ್ ಹೇಳಿದ್ದೇ ತಡ, ಜನ ಗುರುಗುಡುತ್ತಲೇ ಅವನ ಮಾತನ್ನು ವಿರೋಧಿಸಿದರು. ತಮ್ಮ ಹೊಸ ಆಸ್ತಿಯನ್ನು ದೂರವಿಡುವ ಮಾತೊಂದೂ ಜನರಿಗೆ ಒಪ್ಪಿಗೆಯಾಗದು ಎಂಬುದು ಅತಿ ಸ್ಪಷ್ಟವಾಗಿತ್ತು.

ರೋರಿಂಗ್ ಕ್ಯಾಂಪಿಗೇ ಒಬ್ಬ ದಾಯಿಯನ್ನು ಕರೆಸಿದರೆ ಹೇಗೆ ಎಂಬ ಸೂಚನೆಗೂ ವಿರೋಧ ಬಂತು. ರೋರಿಂಗ್ ಕ್ಯಾಂಪಿನಂಥ ಸ್ಥಳಕ್ಕೆ ಸಭ್ಯ ಸ್ತ್ರೀ ಯಾವಳೂ ಬರುವುದು ಸಾಧ್ಯವಿಲ್ಲ. ಇಷ್ಟೇ ಅಲ್ಲ, ನಮ್ಮಲ್ಲಿ ಸ್ತ್ರೀಯರ ವಾಸ್ತವ್ಯ ಇನ್ನು ಸುತರಾಂ ಬೇಡ ಎಂದರು ಜನ. ಸ್ಟಂಪಿ ತಾನಾಗಿ ಏನು ಹೇಳದಿದ್ದರೂ ಕೇಳಿದಾಗ ತಾನು ಮತ್ತು ಜೆನಿ (ಕತ್ತೆ) ಕೂಡಿ ಮಗುವನ್ನು ಸಾಕಬಲ್ಲೆವು ಎಂದು ಹೇಳಿದ. ಸರಿ, ವ್ಹಾ! ಎಂದರು ಜನ. ಮಗುವಿಗೆ ಬೇಕಾದ ವಸ್ತುಗಳನ್ನು ತರಲು ತಕ್ಷ

ಕ್ಷಣ ಜನರನ್ನು ಸಾಕ್ರಾಮಂಟೋಕ್ಕೆ ಓಡಿಸಲಾಯಿತು. ಅವರ ಕೈಗೆ ಹಣದ ಚೀಲವನ್ನು ಕೊಡುತ್ತ ಕೋಶಾಧ್ಯಕ್ಷ ಹೇಳಿದ: "ನೋಡಿ, ಉತ್ತಮದಲ್ಲಿ ಉತ್ತಮವಾದದ್ದನ್ನು ತರಬೇಕು. ಹಣದ ಮೋರೆ ನೋಡಲಾಗದು."

ವಿಚಿತ್ರವೆನಿಸಿದರೂ ತಾಯಿಯಿಲ್ಲದ ಆ ಮಗು ಬದುಕಿ ಬೆಳೆಯಿತು. ಆ ಸ್ಥಳದ ಹವಾಗುಣವು ಉಳಿದೆಲ್ಲ ಕೊರತೆಗಳನ್ನು ತುಂಬಿತೆಂದು ಕಾಣುತ್ತದೆ. ಅದು ಧಷ್ಟಪುಷ್ಟವಾಗಿ ಬೆಳೆಯಿತು. "ನಾನು ಮತ್ತು ಆ ಕತ್ತೆ ಈ ಮಗುವಿಗೆ ಅಪ್ಪ ಮತ್ತು ಅಮ್ಮನಂತಿದ್ದೇವೆ," ಎಂದು ಅನ್ನುತ್ತಿದ್ದ ಸ್ಟಂಪಿ. ಮಾಂಸದ ಮುದ್ದೆಯಂತಿದ್ದ ಮಗುವನ್ನೆತ್ತಿಕೊಂಡು "ನೋಡು, ನಿನ್ನ ಅಪ್ಪ ಮತ್ತು ಅಮ್ಮನಿಗೆಂದೂ ಎರಡು ಬಗೆಯಬೇಡ" ಎನ್ನುತ್ತಿದ್ದ.

ಮಗು ಒಂದು ತಿಂಗಳದ್ದಾಗುವ ಹೊತ್ತಿಗೆ ಅದಕ್ಕೊಂದು ಹೆಸರಿಡುವುದು ಅನಿವಾರ್ಯವಾಯಿತು. "ಮಗು", "ಸ್ಟಂಪಿಯ ಕೂಸು" ಎಂದು ಮುಂತಾಗಿ ಅದನ್ನು ಕರೆಯುತ್ತಿದ್ದರು. ಕೆಂಟಕ್‌ನ "ಕಳ್ಳರಂ-ಗಂಡ" ಎಂಬ ಹೆಸರೂ ಪ್ರಚಲಿತವಿತ್ತು. ಆದರೆ ಇವಾವುದೂ ಸಮರ್ಪಕವೆನಿಸದೆ ಬೇರೊಂದು ಹೆಸರಿಡಬೇಕಾಯಿತು. ಜೂಜುಗಾರರು, ದುಸ್ಸಾಹಸಿಗಳೇ ಮುಂತಾದವರು ಯಾವಾಗಲೂ ಮೂಢನಂಬಿಕೆಯುಳ್ಳವರಾಗಿರುತ್ತಾರೆ. ಇತ್ತೀಚೆಗೆ ರೋರಿಂಗ್ ಕ್ಯಾಂಪಿನ ಅದೃಷ್ಟ ತೆರೆದಿತ್ತು. ಅಲ್ಲಿಯ ಜನರು ಕೈಕೊಂಡ ಕಾರ್ಯಗಳೆಲ್ಲ ಸಫಲವಾಗುತ್ತಿದ್ದವು. ಮಗು ಹುಟ್ಟಿದ ಮೇಲೆಯೆ ಹೀಗಾದ್ದರಿಂದ ಅದಕ್ಕೆ "ಲಕ್" (ಅದೃಷ್ಟ) ಎಂಬ ಹೆಸರನ್ನಿಡಬೇಕೆಂದು ಓಕ್‌ಹರ್ಸ್ಟ್ ಸೂಚಿಸಲು ಎಲ್ಲರೂ ಒಪ್ಪಿದರು. ಧರ್ಮ, ದೇವರು ಎಂಬ ಶಬ್ದಗಳನ್ನು ನಗೆಚಾಟಿಕೆಗಾಗಿಯೆ ಉಪಯೋಗಿಸುತ್ತಿದ್ದ ಈ ಜನ ಈಗ ಅತಿ ನಿಷ್ಠಾವಂತರಾದ ಕ್ರಿಶ್ಚನ್ನರಂತೆ ಮಗುವಿನ ನಾಮಕರಣ ಸಮಾರಂಭವನ್ನು ಜರುಗಿಸಿದರು.

'ಲಕ್'ನ ಆಗಮನದಿಂದ ರೋರಿಂಗ್ ಕ್ಯಾಂಪಿನ ಜೀವನದಲ್ಲೊಂದು ಕ್ರಾಂತಿಯೆ ಆಗಿ ಹೋಯಿತು. ಈ ಬದಲಾವಣೆ ಜನರಿಗೆ ಅರಿವಿಲ್ಲದಂತೆಯೆ ಜರುಗಿತು. ಮೊಟ್ಟಮೊದಲನೆಯದಾಗಿ 'ಲಕ್' ಇರುತ್ತಿದ್ದ ಮನೆ ಸುಣ್ಣಬಣ್ಣವನ್ನು ಕಂಡಿತು. ಅಲ್ಲಿ ಮಂಚ, ಹಾಸಿಗೆಗಳು ಬಂದವು. ಅವನಿಗಾಗಿ ೮೦ ಮೈಲು ದೂರದಿಂದ ತೊಟ್ಟಿಲು ಬಂತು. ಅವನನ್ನು ನೋಡಲು ಬರುತ್ತಿದ್ದ ಜನರ ಮೇಲೆ ಈ ಶುಚಿ ಓರಣಗಳ ಪ್ರಭಾವವಾಗಿ ಅವರೂ ಸುಧಾರಿಸಿದರು. ಎಂದೂ ಸ್ನಾನ ಮಾಡದವರು ಸ್ನಾನ ಮಾಡಿ ಬರತೊಡಗಿದರು. ಜೂಜಿನ ಅಡ್ಡೆಯಾಗಿದ್ದ "ಟಟಿಲ್ಸ್ ಗ್ರೋಸರಿ"ಯ ಪ್ರತಿಸ್ಪರ್ಧಿಅಡ್ಡೆ ಕನ್ನಡಿ, ಜಮಖಾನೆಗಳನ್ನು ತರಿಸಿತು. 'ಲಕ್' ನನ್ನು ಎತ್ತಿಕೊಳ್ಳಬಯಸುವವರು ಶುಚಿಯಾಗಿರಬೇಕೆಂದು ಸ್ಟಂಪಿ ವಿಧಿಸಿದ್ದನಾದ್ದರಿಂದ ಒಮ್ಮೆ ತೊಟ್ಟುಕೊಂಡ ಬಟೆ ಹರಿದುಹೋಗುವ ವರೆಗೂ ಅದನ್ನು ಬದಲಾಯಿಸದ, ತೊಳೆಯದ ಕೆಂಟಕ್ ಕೂಡ ಅದನ್ನು ಒಗೆದು ಸ್ವಚ್ಛಮಾಡಿ ಹಾಕಿಕೊಳ್ಳತೊಡಗಿದ. ಮುಖವನ್ನು ಅದು ಹೊಳೆಯುವವರೆಗೂ ತಿಕ್ಕಿ ತಿಕ್ಕಿ ತೊಳೆದುಕೊಳ್ಳಲಾರಂಭಿಸಿದ.

ಬೇಸಿಗೆಯಲ್ಲಿ ಮಗುವನ್ನು ಜನ ತಾವು ಕೆಲಸ ಮಾಡುವ ಸ್ಥಳಕ್ಕೆ ಕರೆದೊಯ್ದು ಗಿಡದ ಟೊಂಗೆಯೊಂದಕ್ಕೆ ಕಟ್ಟಿದ ಅರಿವೆ ತೊಟ್ಟಿಲಲ್ಲಿ ಮಲಗಿಸುತ್ತಿದ್ದರು. ಅದು ವರೆಗೆ ಯಾವುದರಲ್ಲಿ ಯಾವ ಸೌಂದರ್ಯವನ್ನೂ ಕಾಣದೆ ಕಾಲಲ್ಲಿ ತುಳಿದು ಹಿಸುಕುತ್ತಿದ್ದರೋ ಅಂಥ ಹೂಬಳ್ಳಿಗಳಲ್ಲಿ ಜನರಿಗೆ ಈಗ ಸೌಂದರ್ಯಾನುಭವವಾಗತೊಡಗಿತ್ತು. ಮಗುವನ್ನು ಪ್ರಸನ್ನವಾಗಿಡಲೆಂದು ಅವರು ಅವನ್ನು ಕಿತ್ತು ತಂದು ತೊಟ್ಟಿಲಿದ್ದ ಟೊಂಗೆಗೆ ಕಟ್ಟುತ್ತಿದ್ದರು.

ರೋರಿಂಗ್ ಕ್ಯಾಂಪಿಗೆ ಅಭ್ಯುದಯದ ಕಾಲ ಬಂದಿತ್ತು. ಜನ ತಮ್ಮ ಅದೃಷ್ಟದಾಯಕನೆಂದು ಬಗೆದ 'ಲಕ್'ನ ವಿಚಾರದಲ್ಲಿ ಎಷ್ಟು ಕಳಕಳಿಯುಳ್ಳವರಾಗಿದ್ದರೆಂದರೆ ಹೊರಗಿನವರಾರೂ


Ladies Nylon Strap
Model No:-164
Price: Rs. 5.25
Ladies gold plated
Bracelet
Model No: 156
Price: Rs. 12.00
THERE IS ALWAYS A
"Bentex"
STRAP OR
BRACELET
TO SUIT YOUR
REQUIREMENT
Gents Nylon Strap
Model No: 171
Price: Rs. 3.50
Gents Leather
Strap
Model No: 130
Price: Rs. 3.50
SOLE AGENTS :
"Bentex"
SALES CORPORATION,
Bentex Building.
BOMBAY-7
Manufacturers :
COLLINS & Co.
BOMBAY 7.
AVAILABLE AT ALL WATCH DEALERS

ತಮ್ಮ ಊರಿಗೆ ಕಾಲಿಡಲು ಅವರು ಆಸ್ಪದವನ್ನೇ ಕೊಡದಾದರು. ಬಾಹ್ಯ ಜಗತ್ತಿನೊಡನೆ ಅವರ ಸಂಪರ್ಕವನ್ನು ಕಾಯ್ದುಕೊಳ್ಳುತ್ತಿದ್ದ ಟಪಾಲಿನ ಪೇದೆ ಮಾತ್ರ ಅಲ್ಲಿಗೆ ಬಂದು ಹೋಗುತ್ತಿದ್ದ. ಆತ ಬೇರೆ ಊರಿನವರಿಗೆ "ರೋರಿಂಗ್ ಕ್ಯಾಂಪಿನಲ್ಲಿ ಒಂದು ಓಣಿಯಿದೆ. ಎಂಥ ಆಧುನಿಕ ನಗರದ ಓಣಿ ಕೂಡ ಅದನ್ನು ಸರಿಗಟ್ಟಲಾರದು. ಜನ ನಿತ್ಯವೂ ಎರಡು ಸಲ ಸ್ನಾನ ಮಾಡುತ್ತಾರೆ. ಮನೆಯ ಸುತ್ತಮುತ್ತ ಹೂದೋಟಗಳನ್ನು ಮಾಡಿಕೊಂಡಿದ್ದಾರೆ. ಆದರೆ ಹೊರಗಿನವರನ್ನು ಕಂಡರೆ ಸಿಡಿದೇಳುತ್ತಾರೆ. ಅವರೊಂದು ಮೂಲನಿವಾಸಿ ಮಗುವನ್ನು ಪೂಜಿಸುತ್ತಾರೆ" ಎಂದೆಲ್ಲ ಅದ್ಭುತವಾಗಿ ಕಥೆ ಹೇಳುತ್ತಿದ್ದ.

ಅಭ್ಯುದಯವಾದಂತೆ ಹೊಸ ವಿಚಾರ ಜನರಲ್ಲಿ ಮೂಡಿತು. ಊರಿನಲ್ಲಿ ಒಂದು ಹೊಟೆಲ್ ಸ್ಥಾಪಿಸಬೇಕು. 'ಲಕ್'ನ ಹಿತದೃಷ್ಟಿಯಿಂದ ಒಂದೆರಡು ಸಂಭಾವಿತ ಕುಟುಂಬಗಳನ್ನು ಆಮಂತ್ರಿಸಿ ಇಲ್ಲಿ ನೆಲೆಸಲು ಅನುಕೂಲಮಾಡಿ ಕೊಡಬೇಕು ಎಂಬ ವಿಚಾರಬಂತು. ಸ್ತ್ರೀ ಜಾತಿಯ ಹೆಸರಿಗೆ ಹೇಸುತ್ತಿದ್ದ ಜನರಲ್ಲಿ ಈ ವಿಚಾರ ಬರಬೇಕಾದರೆ 'ಲಕ್' ಅವರಲ್ಲಿ ಅದೆಂಥ ಕೋಮಲ ಪ್ರೇಮಭಾವನೆಯನ್ನು ಹುಟ್ಟಿಸಿರಬೇಡ! ಈ ಮಾತನ್ನು ವಿರೋಧಿಸುವ ಕೆಲ ಜನ ಬೆರಳುಗಳ ಮೇಲೆ ಎಣಿಸಬಹುದಾದಷ್ಟು-ಇನ್ನೂ ಇದ್ದರು. ಏನಾದರೂ ಸಂಭವಿಸಿ ಈ ಯೋಜನೆ ಫಲಿಸದಿರಲಿ ಎಂದು ಅವರು ಬಯಸುತ್ತಿದ್ದರು. ಅವರ ಬಯಕೆ ಮುಂದೆ ಕೆಲವೇ ದಿನಗಳಲ್ಲಿ ಈಡೇರಿತು.

೧೮೫೧ ರ ಚಳಿಗಾಲ ಅವಿಸ್ಮರಣೀಯವಾಯಿತು. ಬರ್ಫ ವಿಪರೀತವಾಗಿ ಬಿದ್ದಿತು. ಗುಡ್ಡ ಪರ್ವತಗಳ ಮೇಲಿನ ಕೊರಕಲುಗಳೆಲ್ಲ ನದಿಗಳಾದವು. ನದಿಗಳೆಲ್ಲ ಮಹಾ ಸರೋವರಗಳಾದವು. ನೀರಿನ ಪ್ರವಾಹ ಇಳಿಜಾರುಗಳಲ್ಲಿ ಭೋರ್ಗರೆಯುತ್ತ ಹರಿದು ಗಿಡ-ಮರಗಳಾದಿಯಾಗಿ ಹಾದಿಯಲ್ಲಿ ಸಿಕ್ಕಿದ್ದನ್ನೆಲ್ಲ ಕೊಚ್ಚಿಕೊಂಡೊಯ್ಯಹತ್ತಿತು. ರೋರಿಂಗ್ ಕ್ಯಾಂಪಿಗೂ ನೆರೆಯ ಸೂಚನೆ ಬಂದಿತ್ತು. ಆಗ ಸಂಪಿ "ನೀರೇ ಈ ನೆಲದಲ್ಲಿ ಬಂಗಾರದ ಹುಡಿಯನ್ನು ತಂದು ಹುಗಿದಿದೆ. ಮೊದಲು ಮಾಡಿದಂತೆ ಅದು ಈ ಸಲವೂ ಮಾಡುವುದು" ಎಂದ.

ಆ ರಾತ್ರಿ ನದಿ ಉಕ್ಕೇರಿ ರೋರಿಂಗ್ ಕ್ಯಾಂಪಿನ ಮೇಲೆ ದಾಳಿ ಮಾಡಿತು. ಊರನ್ನುಳಿಸಲು ಏನೂ ಮಾಡಲು ಸಾಧ್ಯವಾಗದಷ್ಟು ರಭಸದಿಂದ ನೀರುಬಂತು. ಮರುದಿನ ಬೆಳಗಾದಾಗ ಸ್ಟಂಪಿಯ ಮನೆ ಅಳಿಸಿ ಹೋಗಿತ್ತು. ಕೆಲವೇ ದೂರದಲ್ಲಿ ಅವನ ಹೆಣ ಸಿಕ್ಕರೂ ಊರಿನ ಅದೃಷ್ಟ ದೇವತೆ "ಲಕ್" ಕಾಣಸಿಗಲಿಲ್ಲ. ಜನ ಹತಾಶರಾಗಿ, ಖಿನ್ನರಾಗಿ ಅಳಿದುಳಿದ ತಮ್ಮ ಮನೆ-ಮಾರುಗಳ ಪಾಡು ನೋಡಿಕೊಳ್ಳಲು ಹಿಂತಿರುಗುತ್ತಿದ್ದಾಗ ಯಾರೋ ನದಿಯ ದಂಡೆಯಿಂದ ಅವರನ್ನು ಕೂಗಿ ಕರೆದರು.

ಅದೊಂದು ಪರಿಹಾರ ದೋಣಿಯಾಗಿತ್ತು. ಅದರಲ್ಲಿದ್ದವರು ತಾವು ಒಬ್ಬ ಮನುಷ್ಯ ಮತ್ತು ಮಗುವನ್ನು ನೀರಿನಿಂದ ಎತ್ತಿ ತಂದಿರುವುದಾಗಿ ಹೇಳಿದರು.

ಜನ ನೋಡಿದರು. ಕೆಂಟಕ್ ಅಸಹಾಯನಾಗಿ ಬಿದ್ದುಕೊಂಡಿದ್ದ. ಅವನ ಮೈ ತುಂಬ ಅನೇಕಾನೇಕ ಗಾಯಗಳಿದ್ದರೂ ಅವನಿನ್ನೂ ತನ್ನ ತೋಳುಗಳಲ್ಲಿ ರೋರಿಂಗ್ ಕ್ಯಾಂಪಿನ ಅದೃಷ್ಟವನ್ನು ಹಿಡಿದುಕೊಂಡಿದ್ದ. ಜನ ಬಗ್ಗಿ ನೋಡಿದರು. "ಲಕ್" ಇಹಯಾತ್ರೆಯನ್ನು ಮುಗಿಸಿದ್ದ. ಕೆಂಟಕ್ ಕಣ್ತೆರೆದು "ಸತ್ತಿರುವನೇ ?" ಎಂದು ಕ್ಷೀಣಸ್ವರದಲ್ಲಿ ಕೇಳಿದ. "ಹೌದು. ನೀನೂ ಸಾಯುವ ಸ್ಥಿತಿಯಲ್ಲಿರುವಿ" ಎಂದು ಯಾರೋ ಅಂದರು. ಆಗ ಮರಣಕಳೆಯಿಂದ ಬಾಡಿದ್ದ ಕೆಂಟಕ್‌ನ ಮುಖದಲ್ಲಿ ಮಂದಹಾಸವೊಂದು ಮೂಡಿತು. "ಸಾಯುತ್ತಿರುವೆನೆ ನಾನು? ಹಾಂ. ಅವನು ನನ್ನನ್ನು ತನ್ನ ಸಂಗಡ ಕರೆದೊಯ್ಯುತ್ತಿದ್ದಾನೆ. ನನ್ನ ಮಿತ್ರರಿಗೆಲ್ಲ ಹೇಳಿ, 'ಲಕ್' ನನ್ನ ಜೊತೆ ಇದ್ದಾನೆಂದು" ಎಂದು ಆ ಬಲಾಢ್ಯ ಮನುಷ್ಯ ನೀರಿನಲ್ಲಿ ಮುಳುಗುವವ ಹುಲ್ಲುಕಡ್ಡಿಯನ್ನು ಹಿಡಿದುಕೊಳ್ಳುವಂತೆ ಆ ಪುಟ್ಟ ಮಗುವನ್ನು ಅವಚಿಕೊಂಡು ಅನಂತದಲ್ಲಿ ಲೀನನಾಗಿ ಹೋದ.

*

C 6-10



ನಿಗ್ರೋ ಭವಿಷ್ಯವಾದಿನಿಯ ಕಣಿ ನಿಜವಾಯಿತು !

ಸುಲ್ತಾನನ ತಾಯಿಯಾದ ಫ್ರೆಂಚ್ ಹುಡುಗಿ

ಗಂಗಾಧರ

ತುರ್ಕಿಯ ಬಾದಶಾಹನಿಗೆ ಕಾಣಿಕೆಯಾಗಿ ಅರ್ಪಿಸಲೆಂದು ಏಮಿ ಡ್ಯುಬಕ್ ದ ರಿವರಿಯನ್ನು ಅಲ್ಜೀರಿಯದ ಡೇ ಕಳಿಸಿಕೊಟ್ಟಿದ್ದ. ಅವಳನ್ನು ಕಾನಸ್ಟಾಂಟಿನೋಪಲ್ಲಿನ ಜನನಿಬಿಡ ರಸ್ತೆಗಳಲ್ಲಿ ಭೀಕರಕಾಯರಾದ ಕೊರ್ಸೇರರು ಕರೆದೊಯ್ಯುತ್ತಿದ್ದಾಗ ಬಾದಶಾಹನ ರಾಣೀವಾಸದ ಕಾವಲುಗಾರರಾದ ನಪುಂಸಕರು ನೀರ್ಗುದುರೆಯ ಚರ್ಮದ ಚಾವಟಿಕೆಗಳಿಂದ ಬಡಿದು ಜನರನ್ನು ಚದುರಿಸಿ ದಾರಿ ಮಾಡಿಕೊಳ್ಳುತ್ತಿದ್ದರು.

ಅರಮನೆಯ ಹೆಬ್ಬಾಗಿಲಿನ ಬಳಿ ಏಮಿ ಬಂದಳು. ಅವಳನ್ನು ಬಾದಶಾಹನ ಅಂತಃಪುರಕ್ಕೆ ಸ್ವಾಗತಿಸಲೆಂದು ನಪುಂಸಕ ಪ್ರಮುಖನಾದ ಅಜಾನುಬಾಹು ಕಿಂಝ್ಲರ್ ಆಗಾ ಬಂದ. ಏಮಿಗೆ ತನ್ನ ಕರಾಳ ಭವಿಷ್ಯ ಎದುರು ಬಂದು ನಿಂತಂ

ತಾಯಿತು. ಅವಳಿಗೆ ಇನ್ನು ಬಿಡುಗಡೆಯಿಲ್ಲ. ಇನ್ನವಳು ತಿರುಗಿ ತನ್ನವರನ್ನು, ತನ್ನ ನಾಡನ್ನು ಕಾಣಲಾರಳು. ಒಳಗೆ ಕಾಲಿಟ್ಟೊಡನೆಯೆ ಯಾವಯಾವುದೊ ಕಾರಣಕ್ಕಾಗಿ ತಲೆ ಕಡಿಸಿಕೊಂಡಿದ್ದವರ ರುಂಡಗಳ ರಾಶಿಯೊಂದು ಅವಳಿಗೆ ಕಾಣಿಸಿತು. ಎಷ್ಟೋ ರುಂಡಗಳಿಂದ ರಕ್ತವಿನ್ನೂ ತಟುಕಿಕ್ಕುತ್ತಲಿತ್ತು. ಏಮಿಯ ಕಣ್ಣುಗಳು ಭಯಾಶ್ಚರ್ಯಗಳಿಂದ ಮೊದಲು ಅಗಲವಾಗಿ ಆಮೇಲೆ ಮುಚ್ಚಿಕೊಂಡವು. ಮರುಕ್ಷಣದಲ್ಲಿ ಅವಳು ಮೂರ್ಛೆಹೋದಳು.

*

೧೭೬೩ ರಲ್ಲಿ ಪಶ್ಚಿಮ ಇಂಡೀಸ್‌ನ ಮಾರ್ಟಿನಿಕ್ ಎಂಬಲ್ಲಿ ಡ್ಯುಬಕ್ ಹುಟಿದಳು. ಉಚ್ಚ ಫ್ರೆಂಚ್ ಕುಲದವನಾದ ಅವಳ ತಂದೆ ಅವಳು ಹುಟ್ಟಿದ ವರ್ಷವೇ ಸತ್ತಿದ್ದರಿಂದ ಅವಳು ತನ್ನ ಸಂಬಂಧಿಕರ ಮನೆಯಲ್ಲಿ ಬೆಳೆದಳು. ಅವಳ ಸಂಬಂಧಿಕರು ಮತ್ತು ಅವಳ ದಾಯಿ ಏಮಿಯನ್ನು ಅತಿ ಮುದ್ದಿನಿಂದ ಬೆಳೆಸಿದರು. ಅವಳ ಸಂಗಾತಿಗಳಲ್ಲಿ ಅವಳ ಕಕ್ಕನ ಮಗಳು ಮೇರಿ ಜೊಸೆಫೈನ್ ಒಬ್ಬಳಾಗಿದ್ದಳು. ಈ ಜೊಸೆಫೈನಳೇ ಮುಂದೆ ನೆಪೋಲಿಯನ್ ಬೋನಾಪಾರ್ಟನನ್ನು ಲಗ್ನವಾಗಿ ಫ್ರಾನ್ಸಿನ ಚಕ್ರವರ್ತಿನಿಯಾದಳು. ಲಾ ಟ್ರಿನಿಟಿಯಲ್ಲಿ ಏಮಿಯ ಸಂಬಂಧಿಕರ ಆಸ್ತಿಯಿತ್ತು. ಅಲ್ಲಿ ಆಫ್ರಿಕನ್ ಗುಲಾಮರನ್ನು ಸಾಕಷ್ಟು ಚೆನ್ನಾಗಿಯೆ ನಡೆಸಿಕೊಳ್ಳುತ್ತಿದ್ದರೆನ್ನಬಹುದು. ಎಲ್ಲರಲ್ಲೂ ಮೂಢ ನಂಬಿಗೆಯಿತ್ತು. ಭವಿಷ್ಯ ಕಥನಗಳಲ್ಲಿ, ಮಂತ್ರಮಾಟಗಳಲ್ಲಿ ಎಲ್ಲರಿಗೂ ನಂಬಿಗೆಯಿತ್ತು.

ಸುಮಾರು ಹನ್ನೆರಡು ವರ್ಷದವರಿದ್ದಾಗ ಏಮಿ ಮತ್ತು ಜೊಸೆಫೈನ್ ಒಂದು ದಿನ ಯುಫೇಮಿಯಾ ಡೇವಿಡ್ ಎಂಬ ಪ್ರಸಿದ್ಧ ಭವಿಷ್ಯಕಾರಳನ್ನು ಕಂಡು ತಮ್ಮ ಭವಿಷ್ಯವನ್ನು ಕೇಳಿಕೊಳ್ಳಲು ನಿಶ್ಚಯಿಸಿದರು. ಇವರು ಆಕೆಯ ಮನೆಗೆ ಹೋದಾಗ ವೃದ್ಧ ಯುಫೇಮಿಯಾ ಒಂದು ಚಾಪೆಯ ಮೇಲೆ ಕುಳಿತು ಏನೋ ಮಂತ್ರಗಳನ್ನು ಪಠಿಸುತ್ತಿದ್ದಳು. ಅವಳ ಕೈಗೆ ಬೆಳ್ಳಿಯ ನಾಣ್ಯಗಳನ್ನಿತ್ತು ಇಬ್ಬರೂ ಹುಡುಗಿಯರು ತಮ್ಮ ಕೈ ಮುಂದೆ ಮಾಡಿದರು. ಜೊಸೆಫೈನಳ ಎರಡನೆಯ ಗಂಡ ತುಸು ಸಾದುಗಪ್ಪು ಬಣ್ಣದ ವ್ಯಕ್ತಿಯಾಗಿರುತ್ತಾನೆ, ಅವನು ತನ್ನ ಕೀರ್ತಿಯನ್ನು ಜಗದಲ್ಲೆಲ್ಲ ಮೆರೆಸುತ್ತಾನೆ, ಅನೇಕ ದೇಶಗಳು ಅವನಿಗೆ ತಲೆಬಾಗುತ್ತವೆ, ಜೊಸೆಫೈನಳು ರಾಣಿಯಾಗುತ್ತಾಳೆ, ಆದರೆ ಶ್ರೇಷ್ಠ ಪದವಿ ಪಡೆದು ಸುಖ ಜೀವನ ನಡೆಸಿದರೂ ಅವಳ ಕೊನೆ ದುಃಖದ್ದಾಗುತ್ತದೆ ಎಂದು ಯುಫೇಮಿಯಾ ಭವಿಷ್ಯ ಹೇಳಿದಳು.

ಏಮಿಯ ಕೈ ನೋಡಿ ಅವಳು ಹೇಳಿದಳು: "ನಿನ್ನ ವಿದ್ಯಾಭ್ಯಾಸಕ್ಕಾಗಿ ನಿನ್ನನ್ನು ಯುರೋಪಿಗೆ ಕಳಿಸುತ್ತಾರೆ. ಕೊರ್ಸೇರರು ನೀನಿರುವ ಹಡಗವನ್ನು ವಶಪಡಿಸಿಕೊಂಡು ನಿನ್ನನ್ನು ಹಿಡಿದೊಯ್ದು ಜನಾನಾಕ್ಕೆ ಸೇರಿಸುತ್ತಾರೆ. ಅಲ್ಲಿ ನಿನಗೊಬ್ಬ ಮಗ ಹುಟ್ಟುತ್ತಾನೆ. ಆತ ಚಕ್ರವರ್ತಿಯಾಗುತ್ತಾನೆ. ಆದರೆ ಆತನ ಸಿಂಹಾಸನದ ಮೆಟ್ಟಿಲುಗಳು ಅವನ ಹಿಂದಿನ ರಾಜನ ರಕ್ತದಿಂದ ತೊಯ್ದಿರುತ್ತವೆ. ನಿನಗೆ ಸಾರ್ವಜನಿಕವಾಗಿ ರಾಜಮರ್ಯಾದೆ ಸಿಕ್ಕದಿದ್ದರೂ ನೀನು ವಾಸಿಸುವ ಅರಮನೆಯಲ್ಲಿ ನಿನ್ನದೇ ಸಾರ್ವಭೌಮಾಧಿಕಾರವಿರುವುದು. ಸುಖದ ಬಟ್ಟಲು ಸಿಕ್ಕಿತು ಎಂಬ ಸಮಾಧಾನ ದೊರೆತ ಕ್ಷಣದಲ್ಲಿ ಅದು ಸ್ವಪ್ನದಂತೆ ಕರಗಿ ನೀನು ದೀರ್ಘಕಾಲದ ಅಸ್ವಸ್ಥದಿಂದ ಸಾಯುವಿ."

ಹುಡುಗಿಯರು ಈ ಭವಿಷ್ಯವನ್ನು ನಂಬಿದರೊ ಇಲ್ಲವೊ ಹೇಳಲು ಬಾರದು. ಆದರೆ ಇಬ್ಬರ ವಿಚಾರದಲ್ಲೂ ನಿಗ್ರೋಮುದುಕಿ ಯುಫೇಮಿಯಾ ಹೇಳಿದ ಭವಿಷ್ಯ ಸತ್ಯವಾಯಿತು. ಮುಂದೆ ಕೆಲವೇ ವರ್ಷಗಳಲ್ಲಿ ಏಮಿಯನ್ನು ವಿದ್ಯಾಭ್ಯಾಸಕ್ಕಾಗಿ ಯುರೋಪಿಗೆ ಕಳಿಸಲು ನಿರ್ಧಾರವಾದಾಗ ಅವಳಿಗೆ ಬಹುಶಃ ಈ ಭವಿಷ್ಯದ ನೆನಪಾಗಿರಬೇಕು. ನಾಂಟೇಸ್‌ನ ಡೇಮ್ಸ್‌ದ ಲಾ ವಿಜಿಟೇಶನ್ ಕಾನ್ವೆಂಟಿನಲ್ಲಿ ಏಮಿ ಕಲಿಯತೊಡಗಿ

ದಳು. ಆ ಕಾಲದ ಘನವಂತ ಕುಟುಂಬಗಳ ಸ್ತ್ರೀಯರಿಗೆ ತಕ್ಕ ಶಿಕ್ಷಣ ಕೊಡುವ ಶಾಲೆ ಎಂದು ಈ ಕಾನ್ವೆಂಟ್ ಪ್ರಸಿದ್ಧಿ ಪಡೆದಿತ್ತು. ಏಮಿ ಅಲ್ಲಿ ಎಂಟು ವರ್ಷಗಳ ವರೆಗೆ ಇದ್ದಳು. ೧೭೭೮ ರಲ್ಲಿ ಅಮೇರಿಕನ್ ವಸಾಹತುಗಳ ಬಗ್ಗೆ ಫ್ರಾನ್ಸ್ ಮತ್ತು ಇಂಗ್ಲಂಡ್‌ಗಳಲ್ಲಿ ಯುದ್ಧ ಸುರುವಾದ ದ್ದರಿಂದ ಏಮಿಗೆ ಅದಕ್ಕೂ ಮೊದಲು ಮನೆಗೆ ಮರಳುವುದಾಗಲಿಲ್ಲ.

೧೭೮೪ ರಲ್ಲಿ ಈ ಯುದ್ಧ ನಿಂತಿತು. ಏಮಿಗೆ ಆಗ ೨೧ ವರ್ಷಗಳಾಗಿದ್ದವು. ನಾಂಟೇಸಿನಿಂದ ಹಡಗಿನಲ್ಲಿ ಏಮಿ ಹೊರಟಳು. ಬಿಸ್ಕೆ ಆಖಾತ ದಲ್ಲಿ ಹಡಗು ಇದ್ದಾಗ ಭಯಂಕರ ತುಫಾನು ಎದ್ದಿತು. ಏಮಿ ಇದ್ದ ಹಡಗ ಹಳೆಯದಾಗಿತ್ತು. ಬಲು ಚಿಕ್ಕದಾಗಿತ್ತು. ಹಡಗ ಮುಳುಗುವುದು ಖಂಡಿತವಾದಂತೆಯೆ ಇತ್ತು. ಎಲ್ಲರೂ ಜೀವ ದಾಶೆ ಬಿಟ್ಟರು.

ಅಷ್ಟರಲ್ಲಿ ಸ್ಪೇನಿಶ್ ವ್ಯಾಪಾರೀ ಹಡಗವೊಂದು ತಮ್ಮತ್ತ ಧಾವಿಸಿ ಬರುವುದನ್ನು ಹಡಗಿನಲ್ಲಿದ್ದ ವರು ಕಂಡರು. ಕತ್ತಲೆಯಲ್ಲಿ ಅವರನ್ನೆಲ್ಲ ತನ್ನ- ಲ್ಲಿಗೆ ಸ್ಥಳಾಂತರಿಸಿಕೊಂಡು ಆ ಸ್ಪೇನಿಶ್ ಹಡಗ ತನ್ನ ಪ್ರಯಾಣವನ್ನು ಮುಂದುವರಿಸಿತು.

ಮರುದಿನ ಬೆಳಗಾದಾಗ ಮೋಡಗಳು ಕರಗಿ ದ್ದವು. ತುಫಾನು ನಿಂತಿತ್ತು. ಸೂರ್ಯಪ್ರಕಾಶ ದಲ್ಲಿ ತಮ್ಮ ಮೈ, ಅರಿವೆಗಳನ್ನು ಒಣಗಿಸಿ ಕೊಳ್ಳುತ್ತ ಮೃತ್ಯುವಿನ ದವಡೆಯಿಂದ ಪಾರಾದ ದ್ದಕ್ಕಾಗಿ ದೇವರನ್ನು ಕೊಂಡಾಡುತ್ತ ಎಲ್ಲರೂ ನಿಂತಿದ್ದರು. ಹಡಗು ತಲುಪಬೇಕಾಗಿದ್ದ ಪಾಲ್ಮಾ ದ ಮೆಜೋರ್ಕಾ ಬಂದರ ದೂರದಲ್ಲಿ ಕಣ್ಣಿಗೆ ಕಾಣಿಸುತ್ತಿತು. ಅಷ್ಟರಲ್ಲಿ ಅಲ್ಜೀರಿಯದ ಕೋರ್ಸೇರರ ಹಡಗೊಂದು ಅವರನ್ನು ಬೆನ್ನಟ್ಟಿ ಬಂತು. ಈ ಹಡಗುಗಳ್ಳರಿಂದ ಪಾರಾಗಲು ಸ್ಪೇನಿಶ್ ವ್ಯಾಪಾರೀ ಹಡಗಿನಲ್ಲಿ ಶಕ್ತಿಯಿರಲಿಲ್ಲ. ಕೋರ್ಸೆರರು ಸುಲಭದಲ್ಲಿ ಹಡಗನ್ನು ವಶಪಡಿಸಿ ಕೊಂಡರು. ಅದನ್ನು ಅಲ್ಜೀರ್ಸಿಗೆ ಒಯ್ದರು. ಅಲ್ಲಿಯ ಸರದಾರ ಬಾಬಾ ಮಹಮ್ಮದ ಬಿನ್ ಉಸ್ಮಾನ್ ಹಡಗುಗಳ್ಳರಿಗೆ ಆಶ್ರಯದಾತ ನಾಗಿದ್ದ. ಹಡಗುಗಳ್ಳರೆಲ್ಲ ಇವನನ್ನು ಬಲು ವಾಗಿ ಗೌರವಿಸುತ್ತಿದ್ದರು. ಏಮಿಯನ್ನು ಕಂಡಾ ಗಲೇ ಹಡಗುಗಳ್ಳರ ಕ್ಯಾಪ್ಟನ್ ಅವಳು ಬಾಬಾ ಮಹಮ್ಮದನಿಗೆ ಸಲ್ಲಬೇಕಾದವಳು ಎಂದು ನಿರ್ಧರಿಸಿದ್ದ.

ಆ ಕಾಲದಲ್ಲಿ ಆಫ್ರಿಕನ್ ಸಮುದ್ರ ತೀರದ- ಲ್ಲೆಲ್ಲ ಗುಲಾಮರ ವ್ಯಾಪಾರ ಜೋರಾಗಿ ನಡೆಯು ತ್ತಿತ್ತು. ತುರ್ಕಿಗಂತೂ ಗುಲಾಮರು ಸಂತತ ಧಾರೆಯಾಗಿ ಪೂರೈಸಲ್ಪಡುತ್ತಿದ್ದರು. ನಪುಂಸಕ ದಲಕ್ಕಾಗಿ ಕೆಲ ಬಿಳಿ ಹುಡುಗರ ಪುರುಷತ್ವವನ್ನೆ ಶಸ್ತ್ರಕ್ರಿಯೆಯ ಮೂಲಕ ನಾಶಮಾಡುತ್ತಿದ್ದರು. ಈ ಶಸ್ತ್ರಚಿಕಿತ್ಸೆಯಲ್ಲಿ ಬದುಕುಳಿದವರು ನಪುಂ- ಸಕರಾಗಿ ಸುಲ್ತಾನನ ಅಂತಃಪುರದ ಕಾವಲು ಪಡೆಯವರಾಗಿರುತ್ತಿದ್ದರು. ಶಸ್ತ್ರ ಚಿಕಿತ್ಸೆ ಮಾಡಿದ ಬಳಿಕ ಹುಡುಗರನ್ನು ಟೊಂಕ ಮಟ್ಟ ರಣರಣ ಸುಡುವ ಉಸುಕಿನಲ್ಲಿ ಹುಗಿದಿಡುತ್ತಿ ದ್ದರು. ಈ ಉಪಚಾರದಲ್ಲಿ ಅನೇಕರು ಅಸು ನೀಗುತ್ತಿದ್ದರು.

ಹೆಂಗಸರಿಗಿದ್ದ ಬೇಡಿಕೆಯಂತೂ ಹೇಳಲೇ ಬೇಡ. ಸಿರ್ಕಾಶಿಯನ್ ಅಥವಾ ಗ್ರೀಕ್ ಸುಂದ ರಿಯರನ್ನು ಅಪಹರಿಸಿ ಮಾರಿದರೆ ಅಮಿತ ಬೆಲೆ ಬರುತ್ತಿತ್ತು. ಅಕಸ್ಮಾತ್ತಾಗಿ ಪಶ್ಚಿಮ ಯುರೋ ಪಿನ ಬಂಗಾರಗೂದಲಿನ ತರುಣಿಯರನ್ನು ಹಿಡಿ- ತಂದರೆ ಕಡಲುಗಳ್ಳರ ಸರದಾರ ಅತ್ಯಂತ ಪ್ರೀತ ನಾಗುತ್ತಿದ್ದ. ಹೀಗಿರುವಾಗ ಅನುಪಮ ರೂಪಸಿ ಏಮಿಯನ್ನು ಬಿಡುಗಡೆ ಮಾಡಲು ಅವಳ ದಾಯಿ ಬೇಡಿಕೊಂಡರೆ ಯಾರು ಕೇಳಬೇಕು?

ಕಸಬಾ ನಗರದ ಬೀದಿಗಳಲ್ಲಿ ಕಾವಲುಗಾ ರರು ಸಾಗಿಸಿಕೊಂಡು ಬಂದ ಏಮಿಯನ್ನು ಕಂಡು ಅವಳ ಅನುಪಮ ಲಾವಣ್ಯದಿಂದ ಪ್ರಭಾವಿತ ನಾದ ಬಾಬಾ ಮಹಮ್ಮದ ಬಿನ್ ಉಸ್ಮಾನನಿಗೆ ಇವಳು ತನಗಿಂತಲೂ ಶ್ರೇಷ್ಠರಿಗೆ—ಬಾದಶಾಹ ನಿಗೇ-ಸಲ್ಲತಕ್ಕವಳ ಎಂದು ಅನಿಸಿತು. ಅವಳ- ನ್ನಾತ ಪೌರ್ವಾತ್ಯ ಉಡುಪಿನಿಂದ ಸಿಂಗರಿಸಿ

ಮುಖಕ್ಕೆ ಬುರಖಾ ತೊಡಿಸಿ ಕಾನಸ್ಟಾಂಟಿನೋಪಲ್ಲಿಗೆ ಕಳಿಸಿಕೊಟ್ಟ. ಅವಳ ಅದೃಷ್ಟ ಅವಳನ್ನು ಹಿಂದಿರುಗಲಾರದ ದಾರಿಯಲ್ಲಿ ನಡೆಸುತ್ತಿತ್ತು.

ಓಟೊಮನ್ ಸಾಮ್ರಾಜ್ಯದ ಬಾದಶಾಹ ಒಂದನೆಯ ಅಬ್ದುಲ್ ಹಮೀದನ ಅರಮನೆಯ ಜನಾನಾ ಬಂದರದಿಂದಲೆ ಏಮಿಯ ಕಣ್ಣಿಗೆ ಕಾಣಿಸುತ್ತಿತ್ತು. ಇಲ್ಲಿ ಸಂಧಿಸುತ್ತಿತ್ತು ಕ್ರೈಸ್ತ ಯುರೋಪನ್ನು. ಮುಸ್ಲಿಂ ಏಶಿಯ. ಕೋರ್ಸೇರರು ಅವಳನ್ನು ಅಲ್ಲಿಗೆ ಕರೆದೊಯ್ದಾಗಲೇ ಮೇಲೆ ಹೇಳಿದಂತೆ ನಪುಂಸಕ ಪ್ರಮುಖನನ್ನೂ ರುಂಡಗಳ ಭಯಂಕರ ರಾಶಿಯನ್ನೂ ಕಂಡು ಏಮಿ ಮೂರ್ಛೆ ಹೋದಳು.

*

ಅವಳಿಗೆ ಎಚ್ಚರಾದಾಗ ಅವಳು ಜನಾನಾ ಖಾನೆಯ ಮಧ್ಯದಲ್ಲಿದಳು. ಹೊಸ ಹೆಸರನ್ನು, ಹೊಸ ವ್ಯಕ್ತಿತ್ವವನ್ನುಹೊಂದಿ, ತಮ್ಮ ಜೀವನವನ್ನೆಲ್ಲ ಈ ಅಂತಃಪುರದಲ್ಲಿ ಕಳೆಯಲು ಬರುವ ನೂರಾರು ದಾಸಿಯರಲ್ಲಿ ಏಮಿ ಕೂಡ ಒಬ್ಬಳಾಗಿಹೋದಳು. ಅಂತಃಪುರದಲ್ಲಿದ್ದ ನೂರಾರು ದಾಸಿಯರಲ್ಲಿ ಹನ್ನೆರಡು ವರ್ಷದ ಹುಡುಗಿಯರಿಂದ ಹಿಡಿದು ಪ್ರೌಢೆಯರ ವರೆಗೂ ಇದ್ದರು. ಅವರಲ್ಲಿ ಒಬ್ಬರಿಗೂ ಫ್ರೆಂಚ್ ಭಾಷೆ ಬರುತ್ತಿರಲಿಲ್ಲವಾದ್ದರಿಂದ ಅವರು ಆಡುವುದೊಂದೂ ಏಮಿಗೆ ಅರ್ಥವಾಗುತ್ತಿರಲಿಲ್ಲ.

ಅಲ್ಲಿಯ ಊಟ ಅವಳಿಗೆ ಅಪರಿಚಿತವಾಗಿತ್ತು. ನಡವಳಿಕೆ ಹೊಸದಾಗಿತ್ತು. ಅಂತಃಪುರದ ಸ್ತ್ರೀಯರೆಲ್ಲ ಸ್ನಾನ, ಶೃಂಗಾರ, ಊಟ, ತಿನಿಸು, ನಿದ್ದೆ ಇವುಗಳಲ್ಲಿ ಕಾಲ ಕಳೆಯುವಂತಿತ್ತು. ಅಂತಃಪುರದ ಸುಗಂಧಿತ ಜಲದ ಸ್ನಾನದ ತೊಟ್ಟಿಗಳಲ್ಲಿ ಮೈಮೇಲೆ ನೂಲರಿವೆಯಿಲ್ಲದೆ ಓಲಾಡುತ್ತ ಸ್ನಾನ ಮಾಡಬೇಕಾದಾಗ ಏಮಿಗೆ ಹೇಗೆ ಹೇಗೋ ಆಯಿತು. ಕಾನ್ವೆಂಟಿನ ಕಠೋರ ಶಿಸ್ತಿನಲ್ಲಿ ತನ್ನ ಬರಿಮೈಯನ್ನು ತಾನೇ ನೋಡುವುದೂ ಪಾಪವೆಂದು ಅವಳಿಗೆ ಕಲಿಸಲಾಗಿತ್ತು. ಆದರೆ ಸಾವಕಾಶ ಸಾವಕಾಶವಾಗಿ ಏಮಿ ಈ ಜೀವನಕ್ಕೆ ಹೊಂದಿಕೊಳ್ಳತೊಡಗಿದಳು. ಅಂತಃಪುರದ ವಾಡಿಕೆಯಂತೆ ಅವಳ ಹೆಸರು ಬದಲಿಸಲ್ಪಟ್ಟಿತು. ಅಲ್ಲಿಯ ಸ್ತ್ರೀಯರಿಗೆಲ್ಲ ಅವರವರ ರೂಪಾದಿಗಳಿಗನುಗುಣವಾಗಿ ಚಂದ್ರಮುಖಿ, ಕಮಲೆ, ಇರುಳುವಕ್ಕಿ ಎಂಬಿವೇ ಮುಂತಾಗಿ ಬಿರುದುಗಳಿದ್ದವು. ಏಮಿಯ ಅನುಪಮ ಸೌಂದರ್ಯದ ಮೂಲಕ ಅವಳಿಗೆ 'ನಕ್ಶ್'–ಪರಮಸುಂದರಿ– ಎಂಬ ಹೆಸರು ಬಂತು.

ಅಂತಃಪುರದ ಧ್ಯೇಯವು ವಿಲಾಸವಾಗಿತ್ತು. ಅದರ ದೇವರೆಂದರೆ ಬಾದಶಾಹ. ವಿಲಾಸವೇ ಧ್ಯೇಯವಾಗಿದ್ದರೂ ಅಂತಃಪುರದ ಜೀವನ ಒಂದು ಶಿಸ್ತಿಗೆ ಒಳಗಾಗಿತ್ತು. ಸ್ವೈರಾಚಾರಕ್ಕೆ ಅಲ್ಲಿ ಅವಕಾಶವಿರಲಿಲ್ಲ. ಅಂತಃಪುರದಲ್ಲಿ ತನ್ನ ಮೇಲೆ ಬಾದಶಾಹನ ಕೃಪಾದೃಷ್ಟಿ ಬಿದ್ದಿತಾದರೆ ಭಾಗ್ಯ ತೆರೆದೀತೆಂಬ ಆಶೆಯಿಂದ ತಾವಾಗಿ ಬಂದ ಹುಡುಗಿಯರಲ್ಲಿ ಮತ್ತು ಕಾಣಿಕೆಯ ರೂಪದಲ್ಲಿ ಬಂದ ಹುಡುಗಿಯರಲ್ಲಿ ಎಷ್ಟೋ ಜನರಿಗೆ ಅವರ ಆಯುಷ್ಯವಿಡೀ ಸುಲ್ತಾನನ ದರ್ಶನ ಕೂಡ ಆಗುತ್ತಿರಲಿಲ್ಲ. ಇಂಥವರು ಶೃಂಗಾರ-ಭೋಜನಗಳಲ್ಲಿ, ಇತರರ ಮಕ್ಕಳನ್ನು ಆಡಿಸುವುದರಲ್ಲಿ ಕಾಲಯಾಪನೆ ಮಾಡುತ್ತಿದ್ದರು. ಏಕೆಂದರೆ ಒಮ್ಮೆ ಅಂತಃಪುರವನ್ನು ಹೊಕ್ಕವರು ಮತ್ತೆ ಹೊರಹೋಗುವುದು ಅಶಕ್ಯವಾಗಿತ್ತು. ವ್ಯಭಿಚಾರಕ್ಕೆ ಶಿರಶ್ಛೇದವಾಗುತ್ತಿತ್ತು; ಇಲ್ಲವೆ ಅವರನ್ನು ಚೀಲಗಳಲ್ಲಿ ಹಾಕಿ ಬಾಯಿಕಟ್ಟಿ ಬಾಸ್ಫರಸ್ ಸಮುದ್ರದಲ್ಲಿ ಮುಳುಗಿಸಿಬಿಡುತ್ತಿದ್ದರು. ಏನೇನೋ ಆಶೆಯಿಂದ ಒಳಗೆ ಬಂದು ಹತಾಶರಾದ ಹುಡುಗಿಯರು ಬಾದಶಾಹನ ಕೃಪಾದೃಷ್ಟಿ ತಮ್ಮಮೇಲೆ ಬೀಳುವ ಮುಹೂರ್ತವನ್ನೆ ಕಾಯುತ್ತ ಅದಕ್ಕಾಗಿ ಹಂಬಲಿಸುತ್ತ ಬದುಕಿರುತ್ತಿದ್ದರು.

ಅವರಲ್ಲಿ ನಪುಂಸಕರೊಡನೆ ಸಂಬಂಧ ಬೆಳೆಸಲು ಅಪೇಕ್ಷಿಸುವ ಕೆಲವರೂ ಇರುತ್ತಿದ್ದರು. ಎಲ್ಲ ನಪುಂಸಕರಿಗೂ ಮಾಡಿದ್ದ ಶಸ್ತ್ರ ಚಿಕಿತ್ಸೆ

ಯಶಸ್ವಿಯಾಗಿರುತ್ತಿರಲಿಲ್ಲ. ಅರಮನೆಯ ವೈದ್ಯರು ಸಾಕಷ್ಟು ಜಾಗ್ರತರಾಗಿರುತ್ತಿದ್ದರೂ ಅಲ್ಲೊಬ್ಬ ಇಲ್ಲೊಬ್ಬನಲ್ಲಿ ಪುರುಷತ್ವ ಉಳಿದುಕೊಂಡಿರುತ್ತಿತ್ತು. ಅಂಥವನಲ್ಲಿ ಯಾವಳಾದರೊಬ್ಬಳು ಆಸಕ್ತಳಾಗುತ್ತಿದ್ದಳು. ಆದರೆ ನಪುಂಸಕರಲ್ಲಿ ತಮ್ಮ ಜೀವನದ ಬಗೆಯಲ್ಲಿ ಜುಗುಪ್ಸೆಯಿಂದ ರಾಕ್ಷಸರಾಗಿ ಪರಿವರ್ತಿಸಿದವರೇ ಹೆಚ್ಚಾಗಿರುತ್ತಿದ್ದರು.

ಅಂತಃಪುರದ ಈ ಎಲ್ಲ ಅತೃಪ್ತ ಜೀವಿಗಳ ಪರಿವಾರ ಬಾದಶಾಹನ ಸುಖ—ಸಂತೋಷಕ್ಕಾಗಿಯೇ ಜೀವಿಸುತ್ತಿತ್ತು. ಅವರ ಜೀವನ—ಮರಣಗಳು ಆತನ ಆಧೀನದಲ್ಲಿರುತ್ತಿದ್ದವು. ಒಮ್ಮೊಮ್ಮೆ ಬಾದಶಾಹ ತನ್ನ ದಾಸಿಯರಲ್ಲಿ ಯಾರಾದರೊಬ್ಬಳನ್ನು ತನ್ನ ಮಂತ್ರಿಯೊಬ್ಬನಿಗೆ ಕೊಡುತ್ತಿದ್ದನು. ಇಷ್ಟವಿರಲಿ, ಇಲ್ಲದಿರಲಿ ಮಂತ್ರಿ ಅವಳನ್ನು ಸ್ವೀಕರಿಸಲೇ ಬೇಕಾಗುತ್ತಿತ್ತು.

ಬಾದಶಾಹನಿಗೂ ಅವನ ಪ್ರಜೆಗಳಿಗೂ ಶರೀರ ಸಂಬಂಧವಾಗುವುದು ಯೋಗ್ಯವಲ್ಲವೆಂಬ ಸಂಪ್ರದಾಯದ ಮೂಲಕ ಅಂತಃಪುರಕ್ಕೆ ಜ... ಯ, ಸಿರಿಯಾ, ರುಮಾನಿಯ ಮೊದಲಾದ ದೇಶಗಳಿಂದಲೇ ಸ್ತ್ರೀಯರನ್ನು ತರಿಸುತ್ತಿದ್ದರು. ಆಗಾಗ ಏಮಿಯಂಥವಳೂ ಲಭ್ಯಳಾಗುತ್ತಿದ್ದಳು. ಬಾದಶಾಹನ ಕೃಪೆಯಾಗದಿದ್ದರೂ ಅಂತಃಪುರದ ಜೀವನ ಐಷಆರಾಮದಲ್ಲಿ ಕಳೆಯುತ್ತಿದ್ದುದರಿಂದ ಅಲ್ಲಿ ಬರಬಯಸುವ'ಸ್ತ್ರೀಯರಿಗೇನೂ ಕೊರತೆಯಿರುತ್ತಿರಲಿಲ್ಲ.

ಉಳಿದೆಲ್ಲರಂತೆ ಅಂತಃಪುರದವಳಾಗಿ ಇರಲು ಏಮಿ ಶಿಕ್ಷಣ ಪಡೆಯಬೇಕಾಗಿತ್ತು. ಬಾದಶಾಹನನ್ನು ತೃಪ್ತಿಪಡಿಸುವ ಪ್ರೇಮಕಲೆಯ ಶಿಕ್ಷಣವನ್ನು ಇಂಥ ಹುಡುಗಿಯರಿಗೆ ಕೊಡಲಾಗುತ್ತಿತ್ತು. ಬಾದಶಾಹನ ತಾಯಿ ಅಧ್ಯಕ್ಷಳಾಗಿರುತ್ತಿದ್ದ ಪರೀಕ್ಷಕ ಮಂಡಳವು ಪಾಸು ಮಾಡಿದರೇನೇ ಸುಲ್ತಾನನ ಸಾಮೀಪ್ಯ ಸಾಧ್ಯವಾಗುತ್ತಿತ್ತು.

ಏಮಿ ಪರೀಕ್ಷೆಯಲ್ಲಿ ಪಾಸಾದಳು. ಅವಳನ್ನು ಬಾದಶಾಹನ ನಿಕಟವರ್ತಿ ಪರಿಚಾರಿಕೆಯರಲ್ಲೊಬ್ಬಳನ್ನಾಗಿ ಮಾಡಿದರು. ಇನ್ನು ಮಾರ್ಟಿನಿಕ್‌ನ ಫ್ರೆಂಚ ಮಾದರಿಯ ಜೀವನವನ್ನು ಆಸೆಯಿಂದ ನೆನೆಯುತ್ತ ನವೆಯುವುದು ವ್ಯರ್ಥವೆಂದು ಏಮಿ ಜೀವನಕ್ಕೆ ಹೊಂದಿಕೊಂಡಿದ್ದಳು. ಬಾದಶಾಹನ ಪರಿಚರ್ಯೆಗಾಗಿ ಉತ್ತೀರ್ಣಳಾಗಿದ್ದರೂ ಅವಳು ತನ್ನಂತೆಯೆ ಅನುಗ್ರಹಕ್ಕಾಗಿ ಕಾಯುತ್ತಿದ್ದ ಇನ್ನೂರು, ಮುನ್ನೂರು ಪ್ರೇಮಕಲಾಪಾರಂಗತ ತರುಣಿಯರೊಡನೆ ಸೆಣಸಿ ಗೆಲ್ಲಬೇಕಾಗಿತ್ತು. ಆವರೆಲ್ಲರೂ ಅವಳನ್ನು ಸಂದೇಹದಿಂದ, ಈರ್ಷೆಯಿಂದ, ದ್ವೇಷದಿಂದ ನೋಡುತ್ತಿದ್ದರು. ಹೀಗಿದ್ದರೂ ಏಮಿ ಮೊಟ್ಟಮೊದಲನೆಯ ಬಾರಿ ಅವಳನ್ನು ಬಾದಶಾಹನೆಡೆಗೆ ಕರೆದೊಯ್ಯಬೇಕೆಂದಾಗ ರಂಪವನ್ನೆ ಹೂಡಿಬಿಟ್ಟಳು. ಅಂತಃಪುರದ ಇತಿಹಾಸದಲ್ಲಿ ಹೀಗೆಂದೂ ಸಂಭವಿಸಿರಲಿಲ್ಲ.

ಬಾದಶಾಹನ ಕೃಪೆಯಾಗಿದೆ. ನೀನವನರಾಣಿಯಾಗುವೆ ಎಂದು ನಪುಂಸಕಪ್ರಮುಖ ಕಿಝ್ಲರ್ ಆಗಾ ಹೇಳಿ ಅವಳನ್ನು ಬಾದಶಾಹನೆಡೆಗೆ ಕರೆದೊಯ್ಯುವೆನೆಂದಾಗ ಏಮಿಯಲ್ಲಿನ್ನೂ ಸುಪ್ತವಾಗಿದ್ದ ಅವಳ ನಿಜಸಂಸ್ಕಾರ ತಲೆಯೆತ್ತಿತು. ಅವಳು ಆಗುವುದಿಲ್ಲವೆಂದಳು. ಪ್ರತಿಭಟಿಸಿದಳು. ಆದರೆ ಕಿಝ್ಲರ್ ಅವಳನ್ನು ದಂಡಿಸುವಂತಿರಲಿಲ್ಲ. ಈ ಫ್ರೆಂಚ್ ಹುಡುಗಿಯ ಸೌಂದರ್ಯದಿಂದ ಬಾದಶಾಹ ಮರುಳಾಗಿದ್ದ. ಒಮ್ಮೆ ಬಾದಶಾಹನನ್ನು ಕಚ್ಚಿದ್ದ ಒಬ್ಬ ಜಿಪ್ಸಿ ಹುಡುಗಿಯ ನೆನಪು ಬಂದು ಕಿಝ್ಲರ್ ನಡುಗಿದ. ಏಮಿ ಕೂಡಾ ಹಾಗೇನಾದರೂ ಮಾಡಿದರೆ..? ಆತ ನೆಟ್ಟಗೆ ಬಾದಶಾಹನ ತಮ್ಮನ ಅಂತಃಪುರದವಳಾದ ಕಾಡಿನೆಯ ಬಳಿಗೆ ಹೋಗಿ ಸಲಹೆ ಕೇಳಿದ. ಈಕೆ ಜೊರ್ಜಿಯದ ಒಬ್ಬ ಕ್ರಿಶ್ಚನ್ ಪಾದರಿಯ ಮಗಳು. ಕಾಡಿನೆಗೆ ಸಲೀಮನೆಂಬ ಮಗನಿದ್ದ. ಆತ ಸಿಂಹಾಸನದ ಉತ್ತರಾಧಿಕಾರಿಗಳಲ್ಲಿ ಒಬ್ಬನಾಗಿದ್ದ. ಬಾದಶಾಹನ ಉಪಪತ್ನಿಯ ಮಗ ಮುಸ್ತಾಫಾ ಎಂಬಾತನೂ ಸಿಂಹಾಸನದ ಉತ್ತರಾಧಿಕಾರಿ

ಯಾಗಿದ್ದುದರಿಂದ ಕಾಡಿನೆಗೆ ತನ್ನ ಮಗ ಸುಲ್ತಾನನಾಗುತ್ತಾನೊ ಇಲ್ಲವೊ ಎಂಬ ಸಂದೇಹವಿತ್ತು. ಏಮಿ ಬಾದಶಾಹನ ಪ್ರೀತ್ಯಾಸ್ಪದಳಾದರೆ ತನಗನುಕೂಲವಾದೀತೆಂದು ಬಗೆದ ಕಾಡಿನೆ ಏಮಿಯನ್ನು ಕರೆಸಿ ಬುದ್ಧಿ ಹೇಳಿದಳು.

"ಇಡೀ ಜೀವನವನ್ನೇ ಇಲ್ಲಿ ಕಳೆಯಬೇಕಾಗಿರುವಾಗ ತಾನಾಗಿ ಬರುತ್ತಿರುವ ಭಾಗ್ಯವನ್ನೇಕೆ ತಿರಸ್ಕರಿಸುವಿ? ನೀನು ಬಾದಶಾಹನ ಅತ್ಯಂತ ಪ್ರೀತ್ಯಾಸ್ಪದಳಾಗಬಹುದು. ನಿನಗೆ ಮಗ ಹುಟ್ಟಿ ಆತ ಬಾದಶಾಹನಾಗಲೂಬಹುದು." ಅವಳು ಬಾದಶಾಹನ ಗುಣವರ್ಣನೆಯನ್ನೂ ಮಾಡಿದಳು. ಮುಸ್ತಾಫಾ ಬಾದಶಾಹನಾಗಿ ಬಿಟ್ಟರೆ ಆಗಬಹುದಾದ ಅನಾಹುತವನ್ನು ವಿವರಿಸಿ ಅವನ ತಾಯಿಯ ಸ್ಥಾನವನ್ನು ಬಾದಶಾಹನ ದೃಷ್ಟಿಯಲ್ಲಿ ಕೆಳಗಿಳಿಸುವ ಅಗತ್ಯವನ್ನು ಹೇಳಿದಳು. "ನಾನೂ ನೀನೂ ಕ್ರೈಸ್ತ ಹಿನ್ನೆಲೆಯವರು. ಪ್ರಗತಿಪರರು. ಒಂದು ವೇಳೆ ನಿನ್ನ ಮಗ ಸುಲ್ತಾನನಾದರೆ ನಮ್ಮ ಪ್ರಭಾವವನ್ನುಪಯೋಗಿಸಿ ಈ ಅನಾಗರಿಕ ತುರ್ಕಿ ರಾಜ್ಯದಲ್ಲಿ ಸುಧಾರಣೆಗಳನ್ನು ಮಾಡಿಸಿ ಪುಣ್ಯ ಕಟ್ಟಿಕೊಳ್ಳಬಹುದು" ಎಂದೂ ಪುಸಲಾಯಿಸಿದಳು.

ಏಮಿಗೆ ಇದೆಲ್ಲ ಹೌದೆನಿಸಿತು.

ಕಾಡಿನೆಯ ಮಾತು ಸತ್ಯವಾಯಿತು. ಏಮಿ ಬಾದಶಾಹನ ಕಣ್ಮಣಿಯಾದಳು. ಒಂದು ವರ್ಷದ ನಂತರ ೧೭೮೫, ಜುಲೈ ೨೦ ರಂದು ಅವಳಿಗೆ ಮಗ ಹುಟ್ಟಿದನು. ಆತನಿಗೆ ಮಹಮ್ಮದನೆಂಬ ಹೆಸರಿಟ್ಟರು. ೬೦ ಕ್ಕೆ ಮೇಲ್ಪಟ್ಟ ವಯಸ್ಸಾಗಿದ್ದ ಬಾದಶಾಹ ಆನಂದದಿಂದ ಉತ್ಸವಗಳನ್ನೇರ್ಪಡಿಸಿದ. ಬಾದಶಾಹನ ೫೦೦ ಹೆಂಡರಲ್ಲಿ ಏಮಿ ಮತ್ತು ಮುಸ್ತಾಫಾನ ತಾಯಿ ಇಬ್ಬರೆ ಹಡೆದಿದ್ದರು ಎಂದು ಹೇಳುತ್ತಾರೆ.

ರತ್ನಖಚಿತವಾದ ತೊಟ್ಟಿಲಲ್ಲಿ ತನ್ನ ಮಗನನ್ನು ತೂಗುತ್ತ ಮುಸ್ತಾಫಾನ ದುಷ್ಟ ತಾಯಿ ಎಲ್ಲಿ ಅವನನ್ನು ಗಂಟಲು ಹಿಸುಕಿ ಕೊಲ್ಲುವಳೋ ಎಂದು ಭೀತಳಾಗಿದ್ದರೂ ಏಮಿಗೆ ಒಂದು ಸಂಗತಿ ಧೈರ್ಯ ಕೊಡುತ್ತಿತ್ತು. ಭವಿಷ್ಯವಾದಿನಿಯ ಎಲ್ಲ ಕಣಿನುಡಿಗಳು ಸತ್ಯವಾಗಿದ್ದವು. ಈತ ಚಕ್ರವರ್ತಿಯಾಗುವನೆಂದು ಅವಳಿತ್ತ ಭರವಸೆ ಹೇಗೆ ಸುಳ್ಳಾದೀತು?

ಏಮಿ ಅಂತಃಪುರದಲ್ಲಿ ೩೩ ವರ್ಷಗಳ ವರೆಗೆ ಇದ್ದಳು. ಪತಿ ಬಾದಶಾಹ ಅಬ್ದುಲ್ ಹಮೀದ ೧೭೮೯ ರಲ್ಲಿ ಸತ್ತ. ಕಾಡಿನೆಯ ಮಗ ಸಲೀಮ ಮೂರನೆಯ ಸಲೀಮ ಎಂದು ಸಿಂಹಾಸನವನ್ನೇರಿದ. ಅವನು ಏಮಿಯನ್ನು ಚೆನ್ನಾಗಿಯೆ ನಡೆಸಿಕೊಂಡ. ಆದರೆ ೧೮೦೭ ರಲ್ಲಿ ಅರಮನೆಯಲ್ಲಿ ಕ್ರಾಂತಿಯಾಗಿ ಮುಸ್ತಾಫಾ ಸಿಂಹಾಸನವನ್ನೇರಿದ. ಸಲೀಮನ ಕೊಲೆಯಾಯಿತು. ಮುಸ್ತಾಫಾನ ಕಾಲದಲ್ಲಿ ಏಮಿ ಬಚ್ಚಲುಮನೆಯಲ್ಲಿ ಅಡಗಿಸಿಟ್ಟು ತನ್ನ ಮಗನ ಜೀವವನ್ನುಳಿಸಿದಳು ಎಂದು ಹೇಳುತ್ತಾರೆ.

ಆದರೆ ಮುಂದೆ ಕೆಲವೇ ದಿನಗಳಲ್ಲಿ ಮುಸ್ತಾಫಾನ ಕೊಲೆಯಾಯಿತು. ಏಮಿಯ ಮಗ ಮಹಮ್ಮದ ಬಾದಶಾಹನಾದ. ಬಾದಶಾಹನ ತಾಯಿಯಾಗಿ ಏಮಿ ೧೮೧೭ರ ವರೆಗೆ ವೈಭವದಿಂದ ಬಾಳಿ ಬಳಿಕ ಸತ್ತಳು. ತನ್ನ ಪ್ರಭಾವದಿಂದ ಅವಳು ಅನೇಕ ಸುಧಾರಣೆಗಳನ್ನೂ ಮಾಡಿಸಿದಳು.

ನಿಗ್ರೊ ಮುದುಕಿ ಯುಫೇಮಿಯಾಳ ಭವಿಷ್ಯ ಸತ್ಯವಾಗಿಯೆ ಪರಿಣಮಿಸಿತು. ಹೌದು, ಇನ್ನೊಂದು ಭವಿಷ್ಯವೂ ಸತ್ಯವಾಯಿತು. ಮಲ ಅಣ್ಣ ಮುಸ್ತಾಫಾನ ರಕ್ತದಿಂದಷ್ಟೇ ಅಲ್ಲ, ಅವನ ತಾಯಿಯ ರಕ್ತದಿಂದಲೂ ಮಹಮ್ಮದನ ಮಾರ್ಗ ಒದ್ದೆಯಾಗಿತ್ತು. ಸಾಲದ್ದಕ್ಕೆ ಮುಸ್ತಾಫಾ ಸಾಯುವ ಹೊತ್ತಿಗೆ ಗರ್ಭಿಣಿಯರಾಗಿದ್ದ ಅವನ ಎಲ್ಲ ಹೆಂಡಂದಿರನ್ನು ಭಾಸ್ಪರಸ್‌ನಲ್ಲಿ ಮುಳುಗಿಸಲಾಗಿತ್ತು. ತುರ್ಕಿಯಲ್ಲಿ ಸಾಯು ಇಲ್ಲವೆ ಕೊಲ್ಲು ಎಂಬುದೇ ನಿಯಮವಾಗಿತ್ತಾಗ. *



ಲೈಫ್‌ಬಾಯ್ ಸೋಪಿನಿಂದ
ಸ್ನಾನ...ಏನು ಸುಖ, ಏನು ಆನಂದ!
ಚುರುಕುತನದ, ಉಲ್ಲಾಸದ ಅನುಭವವೇನು?
ಲೈಫ್‌ಬಾಯ್ ಕೊಳೆಯಲ್ಲಿರುವ ಕ್ರಿಮಿಗಳನ್ನು ತೊಳೆದು
ತೆಗೆಯುತ್ತದೆ. ಆದರಿಂದ ಮನೆಯವರೆಲ್ಲರು
ಆರೋಗ್ಯಶಾಲಿಗಳಾಗಿ ಇರುತ್ತಾರೆ.

ಲೈಫ್‌ಬಾಯ್ ಎಲ್ಲಿದೆಯೋ ಅಲ್ಲಿದೆ ಆರೋಗ್ಯ!

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

L. 26-X29 KN.

ಮಹಾರಾಷ್ಟ್ರದ ಮುಖ್ಯಮಂತ್ರಿ ಯಶವಂತರಾವ್ ಚವ್ಹಾಣರು 'ಕಿರ್ಲೋಸ್ಕರ' ಪತ್ರಿಕೆಯ ಪ್ರತಿನಿಧಿಗಿತ್ತ ಸಂದರ್ಶನವಿದು-ಇಲ್ಲಿ ಮಾತಾಡುತ್ತಿರುವುದು ಮಹಾರಾಷ್ಟ್ರದ ಮಂತ್ರಿಯಾಗಿದ್ದರೂ ಸಮಸ್ಯೆಗಳು ಎಲ್ಲ ರಾಜ್ಯಗಳಿಗೂ ಅನ್ವಯಿಸುವಂತಿವೆ

ನಮ್ಮೆದುರಿಗಿನ ಸಮಸ್ಯೆಗಳು

"ಕಿರ್ಲೋಸ್ಕರ"ದಿಂದ

"ನಮಸ್ಕಾರ ಯಶವಂತರಾಯರೇ, ತಮ್ಮ ಅಪಾರ ಕೆಲಸಗಳಲ್ಲಿ ಬಿಡುವು ಮಾಡಿಕೊಂಡು ಸಂದರ್ಶನವಿತ್ತಿದ್ದಕ್ಕಾಗಿ ಆಭಾರಿಯಾಗಿದ್ದೇವೆ. ನೀವು ರಾಜ್ಯದ ಮುಖ್ಯ ಮಂತ್ರಿಗಳು. ಧುರೀಣರು. ಆದ್ದರಿಂದ ಸಾಮಾನ್ಯ ಜನತೆಗೆ ಯಾವ ಪ್ರಶ್ನೆ ತುರ್ತದ್ದು ಎಂದೆನಿಸುತ್ತದೆ, ಯಾವ ತೊಂದರೆಗಳು ಎದುರಾಗುತ್ತಿವೆ, ನಿಮ್ಮ ಎದುರು ಅವರು ಏನನ್ನು ಹೇಳಬಯಸುತ್ತಾರೆ ಎಂಬ ವಿಷಯವನ್ನು ನಾವಿಂದು ಪತ್ರಿಕಾಕರ್ತರೆಂದು ನಿಮ್ಮೊಡನೆ ಚರ್ಚಿಸಬಯಸುತ್ತೇವೆ ಇದಕ್ಕಾಗಿ, ಅಕಸ್ಮಾತ್ ಮುಖ್ಯ ಮಂತ್ರಿಗಳು ಕುಳಿತಿದ್ದ ರೇಲ್ವೆ ಡಬ್ಬಿಯಲ್ಲಿ ನೀವು ಪ್ರವೇಶಿಸಿದಿರಿ ಎಂದಾದರೆ ಆಗ ನೀವು ಅವರಿಗೆ ಯಾವ ಪ್ರಶ್ನೆಗಳನ್ನು ಕೇಳುವಿರಿ'. ಎಂದು ನಮ್ಮ ಕೆಲ ವಾಚಕರಿಗೆ ಕೇಳಿದೆವು. ಅವರ ಉತ್ತರಗಳ ಸಾರವನ್ನು ಇಂದು ಪ್ರಶ್ನೆಗಳ ರೂಪದಲ್ಲಿ ತಮ್ಮೆದುರು ಇಡುತ್ತಿದ್ದೇವೆ. ಅದರಲ್ಲೇನಾದರೂ ಟೀಕೆ ಅಥವಾ ಅಪ್ರಿಯವಾದದ್ದು ಇದ್ದರೆ ನೀವು ಬೇಸರಿಸಬಾರದು."

"ಛೆ ಛೆ! ಕೇಳಿ."

"ಮೊದಲನೆಯ ಪ್ರಶ್ನೆ ಶಿಕ್ಷಣದ್ದು. ಶಿಕ್ಷಣದ ಪ್ರಸಾರ ಭರದಿಂದಾಗುತ್ತಿದೆ. ಆದರೆ ಇಂಗ್ಲೀಷಿನ ಮಟ್ಟ ಮತ್ತು ಮಾಧ್ಯಮದ ಅಡಚಣೆ ಇವುಗಳಿಂದ ವಿದ್ಯಾರ್ಥಿಗಳಿಗೆ ತುಂಬ ಹಾನಿಯಾಗುತ್ತಿದೆ."

"ಇಂಗ್ಲೀಷಿನ ಪ್ರಶ್ನೆ ಮಹತ್ವದ್ದು, ನಿಜ. ಆದರೆ ಅದೊಂದು ವಿಶಿಷ್ಟ ಐತಿಹಾಸಿಕ ಪರಿಸ್ಥಿತಿಯಿಂದ ಹುಟ್ಟಿದ್ದಾಗಿದೆ. ಮಹಾರಾಷ್ಟ್ರ ರಚನೆಯಾದ ನಂತರ ಎಲ್ಲ ಶಿಕ್ಷಣದ ಮಾಧ್ಯಮ ಮರಾಠಿಯಾಗಿರಬೇಕು ಎಂಬ ಜನರ ಭಾವನೆ ಮತ್ತು ಅಪೇಕ್ಷೆ ಯೋಗ್ಯವಾದರೂ ವಿಶ್ವವಿದ್ಯಾಲಯದ ಅಡಚಣೆಗಳನ್ನು ಮರೆಯಲಾಗದು. ಇಂಗ್ಲೀಷನ್ನು ಒಮ್ಮೆಲೆ ಉಚ್ಚಾಟನೆ ಮಾಡಿದರೆ ಅಥವಾ ಅದರ ಅಭ್ಯಾಸದತ್ತ ಗಮನವನ್ನು ಕಡಿಮೆ ಮಾಡಿದರೆ ಉಚ್ಚ ಶಿಕ್ಷಣ ಕೊಡುವುದೇ ಕಠಿಣವಾದೀತು ಎಂದೀಗ ಜನರ ಲಕ್ಷ್ಯಕ್ಕೆ ಬಂದಿದೆ."

"ಹೌದು. ಆದರೆ ಇಂಗ್ಲೀಷ್ ಶಿಕ್ಷಣ ಮತ್ತು ಅಭ್ಯಾಸಗಳತ್ತವೇ ಮೂಲತಃ ತುಂಬ ಅಲಕ್ಷ್ಯವಾಗುತ್ತಿದೆ. ವಿದ್ಯಾಪೀಠಗಳು ಆ ವಿಚಾರದಲ್ಲಿ ಅಗತ್ಯವಾದ ಉಪಾಯ ಯೋಜನೆಗಳನ್ನು ಮಾಡುತ್ತಿಲ್ಲ."

"ತಿಳಿಯಿತು ನಿಮ್ಮ ಅಭಿಪ್ರಾಯ. ಇಂಗ್ಲೀಷ್ ಕಲಿಸುವಾಗ ಹೊಸ ಪದ್ಧತಿಯನ್ನು ಉಪಯೋಗಿಸಬೇಕೆಂಬುದಕ್ಕೆ ನನ್ನ ಒಪ್ಪಿಗೆ ಇದೆ. ಆದರೆ ಈ ಕೆಲಸ ಶಿಕ್ಷಣ ತಜ್ಞರು ಮತ್ತು ಶಿಕ್ಷಕರು ಮಾಡಬೇಕಾದದ್ದು."

"ಆದರೆ ಹಾಗಾಗುತ್ತಿಲ್ಲ. ಇದರಿಂದಲೇ ನೂರಕ್ಕೆ ೬೦–೭೦ ರಷ್ಟು ವಿದ್ಯಾರ್ಥಿಗಳು ನಾಪಾಸಾಗುತ್ತಾರೆ."

"ನಿಜ. ನಾನು ಈ ವಿಷಯವನ್ನು ಪರಿಶೀಲಿಸಿದ್ದೇನೆ. ನಾಪಾಸಾದವರಲ್ಲಿ ಹೆಚ್ಚಿನವರು ಒಂದೇ ವಿಷಯದಲ್ಲಿ ಅಂದರೆ ಇಂಗ್ಲೀಷಿನಲ್ಲಿ ನಾಪಾಸಾ

ಗುತ್ತಾರೆ. ಈ ವಿಚಾರದಲ್ಲಿ ಉಪಾಯ ಯೋಜನೆ ಆಗಲೇಬೇಕು "

"ಹೌದಲ್ಲವೆ? ಇಂಗ್ಲೀಷು ದುರ್ಬಲವಾಗಿದ್ದರೆ ಸಾಯನ್ಸ್ ಮತ್ತು ಟೆಕ್ನಿಕಲ್ ವಿಷಯಗಳ ಅಭ್ಯಾಸವೂ ದುರ್ಬಲವಾಗುವುದಾದ್ದರಿಂದ ಇದು ಅತಿ ಮಹತ್ವದ ಪ್ರಶ್ನೆಯಾಗಿದೆ."

"ಹೌದು. ಆದರೆ ಮಾರ್ಗವನ್ನು ವಿದ್ಯಾಪೀಠಗಳು ಮತ್ತು ಶಿಕ್ಷಣತಜ್ಞರು ಸೂಚಿಸಬೇಕು."

"ತಜ್ಞರು ಎಂದು ನೀವು ಹೇಳಿದಿರಿ. ಜನರ ತಕರಾರು ಈ ಸಂಬಂಧದಲ್ಲಿಯೆ ಇದೆ. ಸರಕಾರವು ತಜ್ಞರ ಸಲಹೆಗೆ ಬೆಲೆಯನ್ನೆ ಕೊಡುವುದಿಲ್ಲ, ಎಷ್ಟೋ ಸಲ ಅವರ ಸಲಹೆಯನ್ನೇ ಕೇಳುವುದಿಲ್ಲ ಎಂದು ಜನ ಹೇಳುತ್ತಾರೆ."

"ಈ ಮಾತನ್ನುನಾನು ಖಂಡಿತ ಒಪ್ಪುವುದಿಲ್ಲ. ಅಭ್ಯಾಸಕ್ರಮ, ಶಿಕ್ಷಣ ಪದ್ಧತಿ, ಕ್ರಮಿಕ ಪುಸ್ತಕಗಳು ಇವೆಲ್ಲ ವಿಷಯಗಳಲ್ಲಿ ತಜ್ಞರ ಸಲಹೆ ಪಡೆದೇ ಕೆಲಸ ನಡೆಯುತ್ತದೆ. ತಜ್ಞರ ಸಮಿತಿಯ ನೇಮಕದ ಸಂಬಂಧದಲ್ಲಿ ರಾಜಕೀಯ ದೃಷ್ಟಿಯನ್ನಿರಿಸಿಕೊಳ್ಳಲಾಗುವುದಿಲ್ಲ. ಅವರನ್ನಾಕೆ ನೇಮಿಸಿಕೊಳ್ಳಲಿಲ್ಲ, ಇವರನ್ನಾಕೆ ನೇಮಿಸಿಕೊಳ್ಳಲಿಲ್ಲ ಎಂದು ಹೇಳಬಹುದಾದರೂ ಸಮಿತಿಯಲ್ಲಿರುವವರೆಲ್ಲ ತಜ್ಞರೇ ಆಗಿರುತ್ತಾರೆನ್ನುವುದು ನಿಜ "

"ಸಂಖ್ಯೆ ಮತ್ತು ಪ್ರಮಾಣ ಹೆಚ್ಚಿದ್ದರಿಂದ ಇಂದಿನ ಶಿಕ್ಷಣದ ದರ್ಜೆ ಕೆಳಗಿಳಿಯುತ್ತಲಿದೆ. ಅದಕ್ಕಾಗಿ ಏನಾದರೂ ಮಾಡಬೇಡವೆ ?"

"ಮಾಧ್ಯಮಿಕ ಶಿಕ್ಷಣದ ಮಟ್ಟಿಗೆ ನನ್ನ ಅಭಿಪ್ರಾಯ ಹೇಳಬಲ್ಲೆ. ಆದರೆ ಅದು ನನ್ನ ವೈಯಕ್ತಿಕ ಅಭಿಪ್ರಾಯ. ಸರಕಾರದ ನಿರ್ಣಯ ಅಥವಾ ಧೋರಣವಲ್ಲ; ನನ್ನ ಅಭಿಪ್ರಾಯದಂತೆ ಇಂದು ಮಾಧ್ಯಮಿಕ ಶಿಕ್ಷಣ ಕ್ರಮದಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕು. ಮಾಧ್ಯಮಿಕ ಶಿಕ್ಷಣ ಮುಗಿಸಿದ ವಿದ್ಯಾರ್ಥಿ ಮುಂದೆ ಕಾಲೇಜಿಗೆ ಹೋಗದಿದ್ದರೂ ತನ್ನ ಕಾಲ ಮೇಲೆ ತಾನು ನಿಲ್ಲುವ ಯೋಗ್ಯತೆ ಅವನಿಗೆ ಬಂದಿರಬೇಕು. ಇಂದು ಹಾಗಿಲ್ಲ. ಮಾಧ್ಯಮಿಕ ಶಿಕ್ಷಣದಲ್ಲಿ ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣಗಳನ್ನು ಸೇರಿಸಿ ಅದರ ಸಂಪೂರ್ಣ ಪುನಾರಚನೆಯಾಗಬೇಕು. ತಜ್ಞರು, ಸಮಾಜ ಮತ್ತು ಸರಕಾರ ಇದನ್ನೊಪ್ಪಿದರೆ ಬಹಳಷ್ಟು ಪರಿವರ್ತನೆ ಸಾಧ್ಯವಾದೀತು."



"ಕಾಲೇಜಿನಲ್ಲಿ ಯಾರು ಬೇಕಾದವರಿಗೆ ಪ್ರವೇಶ ಸಿಗುವುದರಿಂದಲೇ ಶಿಕ್ಷಣದ ಮಟ್ಟ ಕೆಳಗಿಳಿದಿದೆ ಎಂದು ತಜ್ಞರ ಅಭಿಪ್ರಾಯವಿದೆ. ಶ್ರೀ ಚಿಂತಾಮಣರಾವ ದೇಶಮುಖರು ಕೂಡ ಕಾಲೇಜಿನಲ್ಲಿ ಅರ್ಹ ವಿದ್ಯಾರ್ಥಿಗಳಿಗಷ್ಟೇ ಪ್ರವೇಶ ಸಿಗಬೇಕು ಎನ್ನುತ್ತಾರೆ. ಆದರೆ ನೀವು ವಿಶ್ವವಿದ್ಯಾಲಯಗಳ ಬಾಗಿಲು ಎಲ್ಲರಿಗೂ ತೆರೆದಿರಬೇಕೆನ್ನುತ್ತೀರಿ. ಇದು ತಜ್ಞರ ಸಲಹೆಗೆ ವಿರುದ್ಧವಾದದ್ದಲ್ಲವೇನು ?"

"ಅಲಿಗಡ ವಿದ್ಯಾಪೀಠದಲ್ಲಿ ಮಾಡಿದ ಭಾಷಣದಲ್ಲಿ ನನ್ನ ಅಭಿಪ್ರಾಯ ಹೇಳಿದ್ದೇನೆ. ಆದರೆ ನನ್ನ ಅಭಿಪ್ರಾಯ ಈಗ ಬಹುಮತದ್ದಲ್ಲ ಎಂಬುದು ನಿಜ. ತಜ್ಞರ ಅಭಿಪ್ರಾಯ ತಪ್ಪು ಎಂದು ನಾನು ಹೇಳಲಾರೆ. ನನ್ನ ದೃಷ್ಟಿಕೋಣ ಶಿಕ್ಷಣ ತಜ್ಞರದಲ್ಲ. ನಾನೊಬ್ಬ ಬುದ್ಧಿವಾದಿಯ ದೃಷ್ಟಿಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳ ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ನೋಡುತ್ತೇನೆ. ಇಂದಿನ ಪರಿಸ್ಥಿತಿ ಏನಿದೆ ?"

" ಊರು-ಊರುಗಳಲ್ಲಿ ಕಾಲೇಜುಗಳಾಗು

ತ್ತಿವೆ. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸೇರುತ್ತಾರೆ."

"ಸರಿ. ಈ ಸಾವಿರಾರು ತರುಣರ ಶಿಕ್ಷಣದ ಹಸಿವನ್ನು ನೀವು ಹೇಗೆ ತಣಿಸುವಿರಿ? ಕಾಲೇಜು ಶಿಕ್ಷಣಕ್ಕಾಗಿ ಯೋಗ್ಯತೆಯ ಆಧಾರದಿಂದ ನಿರ್ದಿಷ್ಟ ಪ್ರಮಾಣದಲ್ಲಿ ಪ್ರವೇಶವಿರಬೇಕು ಎಂಬ ತತ್ವ ಯೋಗ್ಯವೇನೊ ಹೌದು. ಆದರೆ ನಮ್ಮ ದೇಶದಲ್ಲಿ ಇಂದು ಆ ಅವಸ್ಥೆ ಬಂದಿಲ್ಲ."

"ಎಂದು ಬಂದೀತೆನ್ನುತ್ತೀರಿ ?"

"ಆ ಮಾತಂತಿರಲಿ. ಇಂಗ್ಲಂಡ್, ಅಮೇರಿಕ ಮುಂತಾದ ದೇಶಗಳಲ್ಲಿ ಈ ನಿರ್ಬಂಧ ಇದ್ದರೂ ಅಲ್ಲಿ ಉಚ್ಚ ಶಿಕ್ಷಣ ಪಡೆಯುವವರ ಪ್ರಮಾಣ ನಮ್ಮಲ್ಲಿಗಿಂತ ಎಷ್ಟೋ ಪಟ್ಟು ಹೆಚ್ಚಿಗಿದೆ. ಅವರಷ್ಟು ಪ್ರಗತಿ ನಮ್ಮಲ್ಲಾದ ಬಳಿಕ ಪ್ರವೇಶ ನಿರ್ಬಂಧವನ್ನು ಹೇರಬಹುದು. ಇಂದಲ್ಲ."

"ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳ ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ನೋಡುತ್ತೀನೆಂದಿರಿ. ಗುಣದ ದೃಷ್ಟಿಯಿಂದ ಮಟ್ಟ ಕೆಳಗಿಳಿದರೆ ಸಾಮಾಜಿಕ ಪರಿಣಾಮ ಹಾನಿಕಾರಕವಾಗದೇ ?"

"ಇಂದಿನ ವಸ್ತುಸ್ಥಿತಿಯನ್ನು ನೋಡಿರಿ. ಈ ಮೊದಲು ಯಾರಿಗೆ ಉಚ್ಚ ಶಿಕ್ಷಣ ಪಡೆಯುವುದು ಸಾಧ್ಯವಿರಲಿಲ್ಲವೊ ಅಂಥ ಜನರಿಗೆ ಈಗ ಅದು ದೊರೆಯತೊಡಗಿದೆ. ಅದರಿಂದ ಅವರ ದೃಷ್ಟಿ ವಿಶಾಲವಾಗುತ್ತಿದೆ. ಅವರ ಕಾರ್ಯಕ್ಷೇತ್ರ ವಿಸ್ತಾರವಾಗುತ್ತಿದೆ. ಸಾಮಾಜಿಕ ದೃಷ್ಟಿಯಲ್ಲಿ ಇದು ಮಹತ್ವದ್ದಲ್ಲವೆ? ಶಿಕ್ಷಣದ ಮೂಲಕ ಸಮಾಜದ ಭಿನ್ನ ಸ್ತರಗಳು ಒಂದೇ ಮಟ್ಟಕ್ಕೆ ಬರುತ್ತಿವೆ. ಈ ಅದ್ಭುತವನ್ನು ಸಾಧಿಸುವ ಸಾಮರ್ಥ್ಯ ಶಿಕ್ಷಣಕ್ಕೆ ಮಾತ್ರವೇ ಇದೆ."

"ಹಳ್ಳಿ ಹಳ್ಳಿಗಳಲ್ಲಿ ಸುಶಿಕ್ಷಿತರು ಮತ್ತು ಪದವೀಧರರು ನಿರ್ಮಾಣವಾಗಿ ಅವರು ನಿರುದ್ಯೋಗಿಗಳಾದರೆ ಪ್ರಯೋಜನವೇನು? "

"ಶಿಕ್ಷಣದಿಂದ ನೌಕರಿ ಸಿಗದಿದ್ದರೂ ಸರಿ, ನಾವು ಬಿ. ಎ., ಎಂ. ಎ. ಆಗಬೇಕು ಎಂಬ ಈರ್ಷೆ ಹಳ್ಳಿಯ ತರುಣರಲ್ಲಿ ಹುಟ್ಟುವುದಾದರೂ ಸಾಮಾನ್ಯ ಮಾತೇ? ನನ್ನ ಸಮಗಾರ ಮಿತ್ರರೊಬ್ಬರಿದ್ದಾರೆ. ಅವರು ಶ್ರೀಮಂತರು. ಅವರ ಮಗ ಬಿ. ಎ. ಆಗಿದ್ದಾನೆ. ಅವರು ನನ್ನಲ್ಲಿ ಆಗಾಗ ಬಂದು ಮಗನಿಗೆ ಸೆಕ್ರೆಟರಿಯೆಟ್ಟಿನಲ್ಲಿ ನೌಕರಿ ಕೊಡಿಸಿ ಎನ್ನುತ್ತಾರೆ. ನಿಮ್ಮ ಮಗ ನಿಮ್ಮ ಉದ್ಯೋಗವನ್ನೇ ನಡೆಸಿದರೆ ಸೆಕ್ರೆಟರಿಯೆಟ್ಟಿನಲ್ಲಿ ಹೊಸಬನಿಗೆ ಸಿಗುವಷ್ಟು ಸಂಬಳವನ್ನು ಕೊಟ್ಟು ಆ ಹುಡುಗನೇ ನಾಲ್ಕು ಜನರನ್ನು ನೌಕರಿಗಿಟ್ಟು ಕೊಳ್ಳಬಲ್ಲ ಎಂದು ನಾನು ಅವರಿಗೆ ಹೇಳುತ್ತೇನೆ. ಆದರೆ ತನ್ನ ಮನೆತನದಲ್ಲಿ ಯಾರಾದರೂ ಒಬ್ಬರು 'ಸಾಹೇಬ' ಎಂದು ಕರೆಯಿಸಿಕೊಳ್ಳಬೇಕೆಂದು ಅವರ ಇಚ್ಛೆಯಿದೆ. ಹೀಗೆ ತಲೆ-ತಲಾಂತರಗಳಿಂದ ಅತೃಪ್ತವಾಗಿರುವ ಆಕಾಂಕ್ಷೆಗಳನ್ನು ಶಿಕ್ಷಣವೊಂದರಿಂದಲೇ ಪೂರೈಸಿಕೊಳ್ಳಬಹುದು ಎಂಬ ಅರಿವು ಸಮಾಜಕ್ಕೆ ಆಗುತ್ತಿದೆ. ಈ ಸಾಮಾಜಿಕ ಪರಿಣಾಮ ಮೂಲಗಾಮಿ ಸ್ವರೂಪದ್ದಾಗಿಲ್ಲವೇ ?"

"ಹೌದು. ವಿಶೇಷತಃ ಎಲ್ಲಿ ಜನ್ಮದಿಂದ ಜಾತಿ ನಿರ್ಣಯವಾಗುವುದೋ ಅಲ್ಲಿ ಅಂದರೆ ನಮ್ಮ ಸಮಾಜದಲ್ಲಿ ಸಾಮಾಜಿಕ ವಿಷಮತೆಯನ್ನು ಹೋಗಲಾಡಿಸುವ ಕಾರ್ಯದಲ್ಲಿ ಉಚ್ಚ ಶಿಕ್ಷಣಕ್ಕಿರುವ ಮಹತ್ವವನ್ನು ನಿರಾಕರಿಸಲು ಬಾರದು."

"ಸರಿ. ಇಂಥ ಪರಿಸ್ಥಿತಿಯಲ್ಲಿ ಕಾಲೇಜುಗಳು ಮತ್ತು ಅವುಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದಲ್ಲಿ ನಾನಂತೂ ಅದನ್ನು ಸ್ವಾಗತಿಸುವವನೇ. ಮತ್ತೆ ಉಚ್ಚ ಶಿಕ್ಷಣದ ಪ್ರಸಾರ ತುಂಬ ಹೆಚ್ಚುತ್ತಿದೆಯೆಂದು ನಾವು ಹೇಳುವೆವಾದರೂ ನಮ್ಮ ಬಳಿಯಿರುವ ಹಣ ಮರ್ಯಾದಿತವಾಗಿಯೇ ಇದೆಯಾದ್ದರಿಂದ ಉಚ್ಚ ಶಿಕ್ಷಣ ಪ್ರಮಾಣ ಮೇರೆ ತಪ್ಪಿಹೋದೀತೆಂಬ ಅಂಜಿಕೆಯನ್ನಿಟ್ಟುಕೊಳ್ಳುವ ಕಾರಣವೇ ಇಲ್ಲ."

"ಶಿಕ್ಷಣದ ಬಗ್ಗೆ ಇನ್ನು ಒಂದೇ ಒಂದು ಮಾತು ಕೇಳುತ್ತೇನೆ. ಶಿಕ್ಷಣದ ಪ್ರಸಾರದಿಂದ ಸಾಮಾಜಿಕ ಜೀವನದ ಮೇಲೆ ಯಾವ ಪರಿಣಾಮವಾಗಿದೆ?"

"ನನ್ನ ಮಟ್ಟಿಗೆ ಹೇಳುವುದಾದರೆ ಇಂದು ಶಿಕ್ಷಣದ ದೂರಗಾಮಿ ಪರಿಣಾಮ ವಿಶೇಷತಃ ಹಳ್ಳಿಯ ಜೀವನದಲ್ಲಿ ಕಂಡುಬರುತ್ತಿದೆ. ನಾನು ಶಾಲಾ ವಿದ್ಯಾರ್ಥಿಯಾಗಿದ್ದಾಗಿನಿಂದ ಈಗ ಮೂವತ್ತು ವರ್ಷಗಳ ಕಾಲ ಹಳ್ಳಿಗಳಲ್ಲಿ ಸಂಚರಿ

ಸುತ್ತಿದ್ದೇನೆ. ಆಗಿಗಿಂತ ಈಗ ಹಳ್ಳಿಯ ಚಿತ್ರ ತೀರ ಬೇರೆ ಆಗಿದೆ. ಆಗ ಜನ ಪ್ರಶ್ನೆ ಕೇಳುತ್ತಿರಲಿಲ್ಲ. ಹೇಳಿದ್ದನ್ನು ಕೇಳಿಕೊಳ್ಳುತ್ತಿದ್ದರು ಮಾತ್ರ. ಇಂದು ನಾನೆಲ್ಲಿ ಹೋದರೂ—ನಾನು ಮುಖ್ಯಮಂತ್ರಿಯಾಗಿದ್ದರೂ ಕೂಡ—ನಿರ್ಭಯದಿಂದ ನನಗೆ ಪ್ರಶ್ನೆ ಕೇಳುತ್ತಾರೆ. ಈ ಪ್ರಶ್ನೆಗಳು ಮಾರ್ಮಿಕವೂ ಆಗಿರುತ್ತವೆ. ಹಳ್ಳಿಗಳಲ್ಲಿ ಕೂಡ ಇಂದು ಸುಶಿಕ್ಷಿತರೂ ಪದವೀಧರರೂ ಕಾಣಸಿಗುತ್ತಾರೆ. ಅವರು ಜನರಲ್ಲಿ ವಿಚಾರಪ್ರಸಾರ ಮಾಡುತ್ತಾರೆ. ಜನರೂ ವಿಚಾರಪ್ರವೃತ್ತರಾಗುತ್ತಾರೆ. ಶಿಕ್ಷಣದಿಂದಾದ ಜಾಗೃತಿಯಲ್ಲವೇ ಇದು ? "

" ಅದಾಯಿತು. ಆದರೆ ಹಳ್ಳಿಯ ಜನರು ಶಿಕ್ಷಣದ ಲಾಭ ಪಡೆಯುತ್ತಿದ್ದರೂ ಅವರಲ್ಲಿ ಅಸಂತೋಷ ಹಬ್ಬಿಸುವ ಇತರ ಪ್ರಶ್ನೆಗಳಿದ್ದೇ ಇವೆಯಲ್ಲ. "

"ಉದಾಹರಣಾರ್ಥ...? "

" ಒಕ್ಕಲತನದ ಕಾಯದೆ. ಈ ಕಾಯದೆಯಿಂದ ಚಿಕ್ಕ ಚಿಕ್ಕ ಜಮೀನಿದ್ದ ಮಧ್ಯಮ ವರ್ಗದವರ ಸ್ಥಿತಿ ಶೋಚನೀಯವಾಗಿದೆ. ಮುಪ್ಪಿನ ಕಾಲದಲ್ಲಿ ಹೊಲವನ್ನು ನಂಬಿಕೊಂಡಿದ್ದ ಪ್ರಾಥಮಿಕಶಾಲಾ ಶಿಕ್ಷಕರು, ವಿಧವೆಯರು ಮುಂತಾದವರಿಗೆ ಉದರನಿರ್ವಾಹದ ಸಾಧನವೇ ಉಳಿದಿಲ್ಲ. ಇಂಥವರ ಬಗ್ಗೆ ಸರಕಾರ ವ್ಯವಸ್ಥೆ ಮಾಡುವುದು ಬೇಡವೇ ? "

"ಏನು ಮಾಡಬೇಕು, ಹೇಳಿ ನೀವೇ. "

" ಸಾಮಾಜಿಕ ಸುರಕ್ಷಿತತೆ (Social Security) ಯೋಜನೆಯಾಗಬೇಕು. "

"ಹುಂ. ಆದರೆ ತಲೆಮಾರುಗಳಿಂದ ರೈತರ ಮತ್ತು ರೈತ ಕೂಲಿಗಳ ದುರವಸ್ಥೆ ನಡೆದುಬಂದಿತ್ತಲ್ಲ, ಆಗ ಈ ಆಕ್ಷೇಪವೆತ್ತುವವರ ಸಹಾನುಭೂತಿ ಮತ್ತು ಭೂತದಯೆ ಎಲ್ಲಿ ಅಡಗಿತ್ತು ? ಅದೂ ಹೋಗಲಿ, ಇಂದು ಹೊಲದ ಉತ್ಪನ್ನ ಹೆಚ್ಚಿಸುವುದೇ ಮುಖ್ಯ ಪ್ರಶ್ನೆಯಾಗಿದೆ. ಉತ್ಪಾದನ ಕ್ರಿಯೆಯಲ್ಲಿ ಯಾರಿಗೆ ಯಾವುದೂ ಸಂಬಂಧವಿಲ್ಲವೋ, ವ್ಯವಸ್ಥಾಪಕರೆಂದು ಕೂಡ ಯಾರು ಉತ್ಪಾದನೆಯ ಕಾರ್ಯದಲ್ಲಿ ಭಾಗವಹಿಸುವುದಿಲ್ಲವೋ ಅವರು ಜಮೀನಿನ ಒಡೆಯರು ಅಥವಾ ನಿಯಂತ್ರಕರಾಗಿದ್ದರೆ ಅದು ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಆತಂಕವಾಗುವುದು. ಭಂಡವಳಶಾಹಿ ಸಮಾಜದಲ್ಲಿ ಕೂಡ ಈ ಪರಿಸ್ಥಿತಿ ಅನಿಷ್ಟವೆಂದೇ ತಿಳಿಯಲಾಗುತ್ತದೆ. ಹಾಗಿರುವಾಗ ರೈತರಿಗೆ ಸಂರಕ್ಷಣೆಯನ್ನೀಯುವುದೂ ಉತ್ಪಾದನೆಯ ಒಡೆಯರನ್ನಾಗಿ ಮಾಡುವುದೂ ಕ್ರಮಪ್ರಾಪ್ತವಾಗಿದೆ. ಇಲ್ಲವಾದರೆ ಹೆಚ್ಚು ಶ್ರಮವಹಿಸುವ ಪ್ರೇರಣೆ ಅವನಿಗೆ ಆಗಲಾರದು. ಹೀಗೆ ಮಾಡುವಾಗ ಯಾರ ಹಿತಸಂಬಂಧಕ್ಕೆ ಇದರಿಂದ ಧಕ್ಕೆ ತಗಲುವುದೋ ಅವರ ರೋಷವನ್ನು ಎದುರಿಸಿಯಾದರೂ ಕಾರ್ಯ ಮಾಡಬೇಕಾಗುವುದು."

"ಆದರೆ ತೀರ ಚಿಕ್ಕ ಜಮೀನಿನ ಒಡೆಯರ–"

"ಅದನ್ನೇ ಹೇಳುತ್ತೇನೆ. ಇಂದು ಆ ಪ್ರಶ್ನೆಯೂ ಇಲ್ಲ. ೫—೧೦ ಎಕರೆ ಜಮೀನಿನವರಿಗೆ ಈ ಕಾಯದೆ ಅನ್ವಯಿಸುವುದಿಲ್ಲ ಎಂಬ ತಿದ್ದುಪಡಿ ಮಾಡಿ ನಾವು ಇದನ್ನು ಬಗೆಹರಿಸಿದ್ದೇವೆ."

"ಆದರೆ ಕೇವಲ ಇಂಥ ಕಾಯದೆಗಳಿಂದಷ್ಟೇ ಒಕ್ಕಲತನ ಉತ್ಪಾದನೆ ಹೆಚ್ಚಾದೀತೇ?"

"ಇಲ್ಲ. ಅದಕ್ಕಾಗಿ ಆಧುನಿಕ ಪದ್ಧತಿಯಿಂದ ದೊಡ್ಡ ಪ್ರಮಾಣದಲ್ಲಿ ಅದೂ ಸಹಕಾರೀ ಪದ್ಧತಿಯಿಂದ ಒಕ್ಕಲತನ ಮಾಡುವುದೊಂದೇ ಮಾರ್ಗವಾಗಿದೆ. ಅದೇ ನಮ್ಮ ಆರ್ಥಿಕ ಪ್ರಗತಿಯ ಮೂಲಮಂತ್ರವಾಗಿದೆ."

"ಸರಕಾರ ಈ ಬಗ್ಗೇನೂ ವಿಶೇಷ ಯತ್ನ ಮಾಡಿದಂತಿಲ್ಲ. ಉದ್ಯೋಗ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಯೋಜನೆಗಳನ್ನು ಮಾಡುತ್ತಿರುವಂತೆ ಒಕ್ಕಲತನದ ಆಧುನೀಕರಣದ ವಿಚಾರದಲ್ಲಿ ಅಥವಾ ಸಹಕಾರೀ ಬೇಸಾಯದ ವಿಚಾರದಲ್ಲಿ ಕೆಲಸಗಳಾಗುತ್ತಿಲ್ಲ."

"ಸರಕಾರ ಪ್ರಯತ್ನ ಮಾಡುತ್ತಿಲ್ಲ ಎಂದೇನೂ ಇಲ್ಲ. ಮುಖ್ಯ ತೊಂದರೆಯೆಂದರೆ ನಮ್ಮ ರೈತರೇ ಪ್ರಗತಿಪರರಾಗಿಲ್ಲ. ತಲೆಮಾರುಗಳಿಂದ ತಮ್ಮ ಶ್ರಮದ ಪ್ರತಿಫಲ ತಮಗೆ ಪೂರ್ಣವಾಗಿ ಸಿಗುವುದಿಲ್ಲ ಎಂಬ ಭಾವನೆ ಅವರಲ್ಲಿ ಬಿಂಬಿಸಿ ಹೋಗಿರುವುದರಿಂದ ಅವರು ಉತ್ಪಾದನೆ ಹೆಚ್ಚಿಸುವ ಕಾರ್ಯದಲ್ಲಿ ಉದಾಸೀನರಾಗಿಯೆ ಇರುತ್ತಾರೆ."

"ಅಂದ ಮೇಲೆ ರೈತರನ್ನು ಪ್ರಗತಿಪರರನ್ನಾಗಿ ಮಾಡಲು ಸರಕಾರ ಹೆಚ್ಚಿನ ಪ್ರಯತ್ನ ಮಾಡುವುದು ಬೇಡವೆ ?"

"ಮಾಡಲೇಬೇಕು. ಅದನ್ನು ಹೇಗೆ ಮಾಡಬಹುದು ಎನ್ನುವ ಮೊದಲು ನನ್ನದೊಂದು ಅನುಭವವನ್ನು ಹೇಳುತ್ತೇನೆ. ನಾನು ಮುಂಬಯಿ ರಾಜ್ಯದ ಆಹಾರಮಂತ್ರಿಯಾಗಿದ್ದಾಗಿನ ಮಾತಿದು. ಜಪಾನೀ ಪದ್ಧತಿಯ ಬೇಸಾಯದ ಪ್ರಚಾರಕ್ಕಾಗಿ ಒಂದೆಡೆ ಅದರ ಪ್ರಾತ್ಯಕ್ಷಿಕೆ ನಡೆದಿತ್ತು. ಕೆಲ ರೈತರು ಏನೋ ಮೋಜು ನೋಡುವವರಂತೆ ನಮ್ಮ ಮೋಟಾರು ಬಳಿ ನಿಂತಿದ್ದರು. ನಾನು ಅವರ ಈ ತಾಟಸ್ಥ್ಯದ ಕಾರಣವನ್ನು ಕೇಳಿದೆ: 'ಇವೆಲ್ಲ ಹೊಸ ವಿಚಾರ— ಪದ್ಧತಿಗಳು ಶ್ರೀಮಂತ ರೈತರಿಗಾಗಿ, ಸಾವಕಾರರಿಗಾಗಿ ಇವೆ. ಬೇಕೆಂದಾಗ ಅವರು ಇಂಜಿನ್, ಪಂಪ್, ಮೊದಲಾದವನ್ನು ತರಿಸಿಕೊಳ್ಳಬಲ್ಲರು. ನಮಗದು ಸಾಧ್ಯವೇ?', ಎಂದು ಅವರು ಉತ್ತರ ವಿತ್ತರು. ಇಲ್ಲಿ ಉದಾಸೀನತೆಯ ಪ್ರಶ್ನೆ ಒಂದೇ ಇಲ್ಲ. ಸಾಮಾನ್ಯ ರೈತರ ಸಾಂಪತ್ತಿಕ ಸ್ಥಿತಿಯೂ ಪ್ರತಿಕೂಲವಾಗಿರುತ್ತದೆ. ಬೇಕಾದಷ್ಟು ಸಾಧನಗಳೂ ಅವರಿಗೆ ಸಿಗುವುದಿಲ್ಲ. ಇದಕ್ಕೆ ಸಹಕಾರೀ ಅಥವಾ ಸಾಮುದಾಯಿಕ ಬೇಸಾಯವೊಂದೇ ಉಪಾಯ."

"ಆ ಬಗ್ಗೆಯೂ ಹೆಚ್ಚಿನ ಪ್ರಯತ್ನ ಎಲ್ಲಿ ನಡೆದಿದೆ? ಕೆಲವೆಡೆಗಳಲ್ಲಿ ಇಂಥ ಸಹಕಾರೀ ಬೇಸಾಯ ಯಶಸ್ವಿಯಾದರೆ ರೈತರಿಗೆ ನಂಬಿಗೆಯಾದೀತು. ಸರಕಾರ ಪ್ರತಿ ತಾಲೂಕು ಅಥವಾ ಜಿಲ್ಲೆಗಳಲ್ಲಿ ಇಂಥ ಯೋಜನೆಯನ್ನು ಅಮಲಿನಲ್ಲಿ ಏತಕ್ಕೆ ತರುತ್ತಿಲ್ಲ?"

"ರೈತರೇ ಮುಂದಾಗಿ ಈ ಪ್ರಯತ್ನ ಮಾಡಬೇಕು. ಸರಕಾರ ಸಹಾಯ ಮಾಡುವುದಾದರೂ ಅವರೇ ಮೊದಲು ಮುಂದಾಗಬೇಕು"

"ರೈತರಲ್ಲಿ ಜಾಗೃತಿ ಮಾಡಬೇಕೆಂದಾದರೂ ಸರಕಾರ ಮುಂದಾಗುವುದು ಬೇಡವೇ?"

"ನಿಃಸ್ವಾರ್ಥಿಗಳೂ ನಿಃಸ್ಪೃಹರೂ ದಕ್ಷರೂ ಆದ ಕಾರ್ಯಕರ್ತರಿದ್ದರೇನೇ ಸಹಕಾರಿ ಚಳವಳಿ ಯಶಸ್ವೀಯಾದೀತು. ಈಗಿರುವ ಅಡಚಣೆ ಇದೇ."

"ಸಹಕಾರಿ ಚಳವಳಿಯಿರಲಿ, ಅಥವಾ ಬೇರಾವ ಯೋಜನೆಯೆ ಇರಲಿ, ಸರಕಾರೀ ಕಾರಭಾರದಲ್ಲಿಯ ನೌಕರರ ಕಾಲಹರಣ ಪ್ರವೃತ್ತಿ ಇರುವ ವರೆಗೂ ಯೋಗ್ಯರೂ ಕೂಡ ಪ್ರಯತ್ನಿಸಿ ನಿರಾಶರಾಗುತ್ತಾರೆಂಬುದು ಅನುಭವದ ಮಾತಾಗಿದೆ."

"ನಿಜ. ಸಾಮಾನ್ಯ ಮನುಷ್ಯನಿಗೂ ಈ ಮಾತು ಚುಚ್ಚುವಾಗ ಮುಖ್ಯ ಮಂತ್ರಿಯಾಗಿರುವವನಿಗೆ ಹೇಗನಿಸೀತು? ನೀವೇ ಯೋಚಿಸಿ."

"ಇದಕ್ಕೆ ಉಪಾಯವನ್ನು ಸರಕಾರವೇ ಹುಡುಕಬೇಕು. ಯಾಕೆ ಮಾಡುತ್ತಿಲ್ಲ ?"

"ಇದಕ್ಕೆ ಅಧಿಕಾರದ ವಿಕೇಂದ್ರೀಕರಣವೊಂದೇ ಮಾರ್ಗ. ಪಂಚಾಯತಿ ರಾಜ್ಯ ಸ್ಥಾಪನೆ ಇದಕ್ಕಾಗಿಯೆ ಆಗಬೇಕೆನ್ನುವುದು. ಇದರಲ್ಲಿ ತುಂಬ ಗಂಡಾಂತರಗಳಿವೆಯೆಂದು ಗೊತ್ತಿದ್ದರೂ ನಾನು ದೃಢ ನಿರ್ಧಾರದಿಂದ ಈ ಕಾರ್ಯ ಮಾಡಲು ನಿರ್ಧರಿಸಿದ್ದೇನೆ."

"ಹಳ್ಳಿಗಳಲ್ಲಿ ಸ್ಥಳಿಕರಿಗೆ ಅಧಿಕಾರ ಸಿಕ್ಕರೆ, ಆಪ್ತ, ಮಿತ್ರ, ನನ್ನ ಪಕ್ಷದವ, ಜಾತಿಯವ ಎಂಬಿತ್ಯಾದಿ ಭಾವನೆಗಳೆಲ್ಲ ಬರುವ ಸಂಭವ ವಿಶೇಷವಾಗಿದೆ"

"ಹೌದು. ಅಧಿಕಾರಿ ವರ್ಗ ದೂರವಿದ್ದಷ್ಟೂ ಅದು ವ್ಯಕ್ತಿನಿರಪೇಕ್ಷವಾಗಿರಬಲ್ಲದು. ಆದರೆ ಜನರ ನಿಜ ಪ್ರಗತಿ ಸಾಧಿಸಬೇಕೆಂದಿದ್ದಲ್ಲಿ ಎಲ್ಲ ಯೋಜನೆಗಳ ಫಲವನ್ನು ಜನರಿಗೆ ಮುಟ್ಟಿಸಬೇಕೆಂದಿದ್ದಲ್ಲಿ ಜನತೆಯ ನಂಬಿಗೆಯ ಆಧಾರದ ಮೇಲೆ ಸ್ಥಾಪಿಸುವ ಅಧಿಕಾರದ ವಿಕೇಂದ್ರೀಕರಣವೊಂದೇ ಮಾರ್ಗವಾಗಿದೆ. ಆದ್ದರಿಂದಲೇ ಎಲ್ಲ ಗಂಡಾಂತರಗಳನ್ನೆದುರಿಸಿ ಪಂಚಾಯತಿ ರಾಜ್ಯದ ಯೋಜನೆಯನ್ನು ತ್ವರಿತವಾಗಿ ಕಾರ್ಯಗತ ಮಾಡಬೇಕೆಂದು ನಿರ್ಧರಿಸಿದ್ದೇನೆ."

"ಪಂಚಾಯತಿ ರಾಜ್ಯದಲ್ಲಿ ಒಂದೆಡೆ ಸ್ಥಳಿಕ ಕಾರ್ಯಕರ್ತರು, ಇನ್ನೊಂದೆಡೆ ಅಧಿಕಾರ ವರ್ಗ ಹೀಗಾಗಿ ಘರ್ಷಣೆಯಾಗಲಿಕ್ಕಿಲ್ಲವೆ?"

"ಹಾಗಾಗಬಾರದೆಂದೇ ಪಂಚಾಯತ ರಾಜ್ಯದಲ್ಲಿ ಸ್ಥಳಿಕ ಜನ ಪ್ರತಿನಿಧಿಗಳಿಗೆ ಮತ್ತು ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕು. ಏಕೆಂದರೆ ಸ್ಥಳಿಕರಿಗೆ ನಿರ್ಣಯ ಮಾಡುವ ಅಧಿಕಾರ ಕೊಡದೆ ಕೆಲಸವಾಗು

ವುದು ಕಠಿನವಾಗಿದೆ."

"ಇಲ್ಲಿ ಕೂಡ ಕಾಗದ-ಪತ್ರಗಳ ಕಾಲಹರಣ ವಾಗುವುದನ್ನು ತಡೆಯುವ ಪ್ರಶ್ನೆ ಇದೆ."

"ಹೌದು. ಇಂದು ಫೈಲುಗಳು ಕೆಳಗಿನಿಂದ ಮೇಲೆ ಸರಿಯುತ್ತವೆ. ಅವುಗಳ ಮೇಲೆ ಕೇವಲ 'ಶರಾ'ಗಳು ಕೂಡಿ ಬೀಳುತ್ತವೆ. ನಿರ್ಣಯ ಕೊಡುವ ಹೊಣೆಯನ್ನು ಯಾರೂ ಹೊರುವುದಿಲ್ಲ. ಹಣ ಎತ್ತುವ ಸಲುವಾಗಿಯೂ ಕಾಲಹರಣದ ತಂತ್ರ ಉಪಯೋಗವಾಗುತ್ತದೆ. ಈ ದೋಷ ನಿವಾರಿಸಲು ವಿಕೇಂದ್ರೀಕರಣವಾಗಬೇಕು."

"ಒಳ್ಳೆಯ ಅಧಿಕಾರಿಗಳೂ ಇರುತ್ತಾರೆ. ಅವರ ಮೇಲೆ ದಿನನಿತ್ಯದ ಕೆಲಸದ ಹೊರೆ ಬಹಳವಾಗಿ ಬೀಳುತ್ತದೆ. ದಕ್ಷತೆ ಮತ್ತು ಇಚ್ಛೆ ಇದ್ದರೂ ಅವರಿಂದ ಜನಕಲ್ಯಾಣದ ಕೆಲಸವಾಗುತ್ತಿಲ್ಲ."

"ವಿಕೇಂದ್ರೀಕರಣದಿಂದ ಈ ಅಡಚಣೆಯನ್ನು ನೀಗಿಸುವೆವು. ಈಗ ಜಿಲ್ಲೆಯಲ್ಲಿ ಕಲೆಕ್ಟರನೇ ಅತಿ ಹೆಚ್ಚಿನ ಅಧಿಕಾರವುಳ್ಳವನಾಗಿದ್ದಾನೆ. ಅವನನ್ನು ಕಡಿಮೆ ಅಧಿಕಾರವುಳ್ಳವನನ್ನಾಗಿ ಮಾಡಿ ಅವನ ದಿನನಿತ್ಯದ ಕೆಲಸಗಳಲ್ಲಿ ಬಹಳಷ್ಟನ್ನು ಕಡಿಮೆ ಮಾಡಬೇಕೆನ್ನುತ್ತೇನೆ."

"ಇದರೊಂದಿಗೇ ಸ್ಥಳಿಕ ಧುರೀಣರೂ ತಯಾರಗಬೇಕಲ್ಲವೆ? ಒಳ್ಳೆಯ ಕಾರ್ಯಕರ್ತರಿಗೆ ಅವಕಾಶ ಸಿಕ್ಕರೇನೇ ಪಂಚಾಯತಿ ರಾಜ್ಯಕ್ಕೆ ಬೆಲೆ ಬಂದೀತು."

"ದಕ್ಷ ಮತ್ತು ಪ್ರಾಮಾಣಿಕ ಕಾರ್ಯಕರ್ತರ ಸ್ಥಳಿಕ ಧುರೀಣತ್ವವನ್ನು ತಯಾರಿಸುವುದೇ ಪಂಚಾಯತಿ ರಾಜ್ಯದ ಎರಡನೆಯ ಉದ್ದೇಶವಿದೆ. ಕಾಗದ-ಪತ್ರಗಳ ಕಾಲಹರಣ ಚಕ್ರದಲ್ಲಿ ಸಿಲುಕಿರುವ ನೌಕರಶಾಹಿಯ ಕೈಯ ಅಧಿಕಾರವನ್ನು ಜನರ ಕೈಗೆ ಕೊಡುವುದು ಮತ್ತು ಸ್ಥಳಿಕ ಧುರೀಣತ್ವವನ್ನೂ ನಿರ್ಮಿಸುವುದು—ಇವೆರಡೂ ಉದ್ದೇಶಗಳು ಸಾಧ್ಯವಾದರೆ ಮಾತ್ರ ಪಂಚಾಯುತಿ ರಾಜ್ಯ ಯೋಜನೆ ಅಮಲಿನಲ್ಲಿ ಬಂದು ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯ ವೇಗ ಹೆಚ್ಚೀತು. ಈ ಯೋಜನೆಯೆಂದರೆ ಒಂದು ರೀತಿಯಲ್ಲಿ ಕತ್ತಲೆಯಲ್ಲಿ ಹಾರಿಕೊಂಡಂತೆಯೇ ಇದೆ. ಆದರೆ ಹಾರಿಕೊಳ್ಳಲೇಬೇಕಾಗಿದೆ. ನಾನಂತೂ ಹಾರಿಕೊಳ್ಳತಕ್ಕವನೇ!"

"ಇದಾಯಿತು ವಿಕಾಸದ ವಿಚಾರ. ಆದರೆ ವಿಕಾಸವಾಗುತ್ತಿರುವಾಗ ಸಮಾಜದಲ್ಲಿ ಸ್ಥಿರತೆ, ಸುರಕ್ಷಿತತೆಗಳ ಭಾವನೆ ಇರದಿದ್ದಲ್ಲಿ ಸತತವಾಗಿ ಪ್ರಗತಿಯಾಗುವುದು ಕಠಿಣವಾಗಿದೆ. ಸರ್ವಸಾಮಾನ್ಯ ಮನುಷ್ಯನಿಗೆ ಇಂದು ಸುರಕ್ಷಿತತೆಯೆನಿಸದಂತಾಗಿದೆ. ಅಪರಾಧಗಳು ಹೆಚ್ಚುತ್ತಿದ್ದರೂ ಅಪರಾಧಿಗಳಿಗೆ ಶಾಸನವಾಗುತ್ತದೆ ಎಂಬ ನಂಬಿಗೆಯಿಲ್ಲ. ತಾನು ಪ್ರಾಮಾಣಿಕನಾಗಿದ್ದೇನಾದರೂ ಶಾಸನದ ಬೆಂಬಲ ತನಗಿದೆಯೆಂಬ ವಿಶ್ವಾಸವಾಗುತ್ತಿಲ್ಲ."

"ಈ ಅಸುರಕ್ಷಿತತೆಯ ಭಾವನೆ ನಿಜವಾಗಿಯೂ ಸಾರ್ವತ್ರಿಕವಾಗಿದೆಯೆ?"

"ಓ! ಸಾರ್ವತ್ರಿಕವೆಂದರೆ...."

"ಸಿಲ್ಲಿ. ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದು ಅತಿ ಸುಲಭವಾಗಿದೆಯೆಂದು ನನಗನಿಸುವುದಿಲ್ಲ. ಹಾಗಿದ್ದರೆ, ಸುರಕ್ಷಿತತೆ ಇಲ್ಲವೆಂದಾದರೆ ಮಹಾರಾಷ್ಟ್ರದಲ್ಲಿ ಹೊರಗಿನವರು ಬಂದು ಬಂಡವಳ ತೊಡಗಿಸಲು ಧೈರ್ಯ ಮಾಡುತ್ತಿರಲಿಲ್ಲ."

"ಅಷ್ಟರ ಮಟ್ಟಿನ ಅಸುರಕ್ಷಿತತೆಯ ಭಾವನೆ ಇರದಿದ್ದರೂ ಅಪರಾಧಗಳ ಸಂಖ್ಯೆ ಹೆಚ್ಚುತ್ತಿರುವುದು ಸುಳ್ಳಲ್ಲ. ಕಳ್ಳ ಭಟ್ಟಿ ಸೆರೆಯ ಉತ್ಪಾದನೆ ಒಂದೇ ಸಮನೆ ನಡೆಯುತ್ತಿದೆ."

"ಮದ್ಯಪಾನ ಪ್ರತಿಬಂಧವು ಸರಕಾರದ ಒಂದು ವಿಶಿಷ್ಟ ಧೋರಣದ ಫಲವಾಗಿದೆ. ಆ ಕಾಯದೆಯ ಅಮಲುಬಜಾವಣೆ ಸಾಕಷ್ಟು ಪರಿಣಾಮಕಾರಿಯಾಗಿಲ್ಲ ಎಂದರೆ ಒಪ್ಪಿಕೊಂಡೇನು. ಆದರೆ ಅದರಿಂದ ಮದ್ಯಪಾನಪ್ರತಿಬಂಧವೇ ಕೆಟ್ಟದ್ದು ಎಂದು ಹೇಗೆ ಹೇಳಲಾದೀತು?"

"ಪಾನಪ್ರತಿಬಂಧ ಕಾಯದೆಯನ್ನು ಭಂಗಿಸುವ ಅಪರಾಧಗಳು ಎಷ್ಟು ಹೆಚ್ಚಿವೆಯೆಂದರೆ ಇತರ ಅಪರಾಧಗಳಿಗಿಂತ ಅದರ ಪರಿಣಾಮ ಸಮಾಜದ ಮೇಲೆ ಬೇರೊಂದು ರೀತಿಯಲ್ಲಿ ಆಗುತ್ತಿದೆ. ಇತರ ಕಾಯದೆಗಳನ್ನು ಮುರಿದಾಗ ಕಾಯದೆ ಮುರಿಯುವುದರಲ್ಲಿ ತಪ್ಪೇನಿಲ್ಲ ಎಂಬ ಭಾವನೆ ಹಬ್ಬುವುದಿಲ್ಲ. ಇನ್‌ಕಂಟ್ಯಾಕ್ಸ್ ತಪ್ಪಿಸಿದರೆ ಹಾಗೆಂದು ಸಾರ್ವಜನಿಕವಾಗಿ

ಹೇಳುವ ಧೈರ್ಯವಿಲ್ಲ. ಆದರೆ ಪಾನಪ್ರತಿಬಂಧ ಕಾಯದೆಯನ್ನು ಉಲ್ಲಂಘಿಸಿದೆವು ಎಂದು ಜನ ಬಡಾಯಿ ಕೊಚ್ಚಿಕೊಳ್ಳುತ್ತಾರೆ ಇದರಿಂದ ಕಾಯದೆ ಭಂಗ ಮಾಡುವ ಮನೋಧೈರ್ಯ ಬೆಳೆಯುತ್ತದೆ. ಕಾಯದೆಯ ಅಮಲುಬಜಾವಣೆ ಮಾಡುವ ಸರಕಾರೀ ಯಂತ್ರದಲ್ಲೂ ಭ್ರಷ್ಟಾಚಾರ ಬೆಳೆಯುತ್ತದೆ. ಸಾಮಾನ್ಯರ ಮೇಲೆ ಇದರಿಂದಾಗುವ ಪರಿಣಾಮ ತುಂಬ ಘಾತಕವಾದದ್ದು. ಈ ದೃಷ್ಟಿಯಿಂದ ಪಾನಪ್ರತಿಬಂಧ ಪ್ರಶ್ನೆಯ ವಿಚಾರವನ್ನು ವಿಮರ್ಶಿಸುವುದು ಅಗತ್ಯವಲ್ಲವೆ?"

"ಇದು ಮಹತ್ವದ ಮತ್ತು ವಾದಗ್ರಸ್ತ ಪ್ರಶ್ನೆ. ಕಳ್ಳಸೆರೆ ತಯಾರಿಸುವ ಪ್ರಮಾಣ ಕಡಿಮೆಯಿಲ್ಲ ಎಂದು ಒಪ್ಪುತ್ತೇನೆ. ಆದರೂ ಪಾನಪ್ರತಿಬಂಧದಲ್ಲಿ ನನ್ನ ವಿಶ್ವಾಸವಿದೆ. ಇಪ್ಪತ್ತು ವರ್ಷಗಳ ಹಿಂದೆ ಮುಂಬಯಿಯ ಕೂಲಿಕಾರ ವಸತಿಯನ್ನು ಕಂಡವನಿಗೆ ಈ ಮಾತು ಮನದಟ್ಟಾದೀತು. ೧೯೪೨ ರ ಚಳವಳಿಯಲ್ಲಿ ಆ ಭಾಗದಲ್ಲಿ ಭೂಗತನಾಗಿದ್ದ ನನಗೆ ಅದು ಚೆನ್ನಾಗಿ ಪರಿಚಿತವಿದೆ. ಅಲ್ಲಿ ಆಗ ಕಾಣುತ್ತಿದ್ದ ಹೃದಯ ವಿದ್ರಾವಕ ದೃಶ್ಯ ಇಂದಿಲ್ಲ. ನೀವಂದಂತೆ ಸಾಮಾಜಿಕ ಮೌಲ್ಯಗಳ ಮೇಲೆಯೆ ಪಾನಪ್ರತಿಬಂಧದ ಪರಿಣಾಮವಾಗುತ್ತಿದೆಯೆ ಎಂದು ಗಂಭೀರವಾಗಿ ಯೋಚಿಸಬೇಕೆಂಬುದು ಸರಿ."

"ಇಂದಿನ ಅಸ್ವಸ್ಥತೆ ಮತ್ತು ಅಸುರಕ್ಷಿತತೆಗೆ ಜಾತೀಯ ಭಾವನೆಯೂ ಒಂದು ಕಾರಣವಾಗಿದೆ"

"ಈ ಮಾತನ್ನು ನಿರಾಕರಿಸಲು ಬಾರದು. ಆದರೆ ಶಿಕ್ಷಣಪ್ರಸಾರ, ಔದ್ಯೋಗೀಕರಣ, ಸಾಮಾಜಿಕ ಜಾಗ್ರತಿ ಮತ್ತು ಸುಧಾರಣೆಗಳಿಂದ ಹುಟ್ಟುವ ಹೊಸ ಶಕ್ತಿಯ ವಿಕಾಸದಿಂದ ಕೆಲ ಕಾಲದಲ್ಲಿ ಜಾತೀಯವಾದ ಅಳಿದೀತು ಎಂದು ನನಗೆ ನಂಬಿಕೆಯಿದೆ."

"ಆದರೆ ಆಗಾಗ ಈ ಪ್ರವೃತ್ತಿ ಕಡಿಮೆಯಾಗ ಹತ್ತಿದೆಯೆಂದು ಅನಿಸುವಷ್ಟರಲ್ಲಿ ಚುನಾವಣೆಗಳ ಗದ್ದಲ ಬಂದು ಈ ವಿಷವೃಕ್ಷ ಮತೆ ಮತ್ತೆ ಚಿಗಿಯುತ್ತದೆ. ಹೀಗಿರುವಾಗ ಈ ವ್ಯಾಧಿ ಬೇಗ ಹೋಗುವುದು ಹೇಗೆ?"

"ಐದು ಹತ್ತು ವರ್ಷಗಳಲ್ಲಿ ಹೋದೀತು ಎಂದೇನೂ ನಾನು ಹೇಳುವುದಿಲ್ಲ. ಆದರೆ ಇಂದು ಕೂಡ ಚುನಾವಣೆಗಳಲ್ಲಿ ಯಾರೂ ಜಾತೀಯವಾದದ ಪ್ರಚಾರವನ್ನು ಬಹಿರಂಗವಾಗಿ ಮಾಡಲಾರರು ಮಾಡಿದರೂ ಯಾರೂ ಅವರ ಮಾತು ಕೇಳುವುದಿಲ್ಲ. ಇದು ಪ್ರಗತಿಯ ಒಂದು ಹೆಜ್ಜೆಯೇ ಸರಿ. ಜಾತೀಯ ವಾದಕ್ಕೆ ಜನಮತದ ಬೆಂಬಲ ಕಡಿಮೆಯಾಗುವುದು ಒಂದು ಹೊಸ ಸಾಮಾಜಿಕ ಮೌಲ್ಯವೇ ಸರಿ. ನಾವು ಇಂದು ಜೀವನದ ಅನೇಕ ಕ್ಷೇತ್ರಗಳಲ್ಲಿ ಜಾತಿಯನ್ನು ಮನ್ನಿಸುತ್ತೇವೆ. ಆದ್ದರಿಂದ ರಾಜಕೀಯ ಕ್ಷೇತ್ರದಲ್ಲೂ ಅವರ ಚುಂಚು ಪ್ರವೇಶವಾಗುತ್ತಿದೆ. ಜಾತೀಯವಾದ ಅಳಿಯುವ ವಿಚಾರದಲ್ಲಿ ಅಧೀರರೂ ಅವಸರದವರೂ ಆಗುವುದರಿಂದ ಪ್ರಯೋಜನವಾಗದು. ಜನ ಈಗ ಈ ಹುರಿಯಾಳು ಯಾವ ಜಾತಿಯವ ಎನ್ನುವುದಕ್ಕಿಂತಲೂ ನಮಗೆ ಹಿತ ಮಾಡಿಯಾನೇ ಎಂದೇ ಹೆಚ್ಚಾಗಿ ವಿಚಾರ ಮಾಡುತ್ತಾರೆ. ವಸತಿಗೃಹಗಳಲ್ಲಿ ಅನೇಕ ಜಾತಿಯ ಹುಡುಗರು ಒಟ್ಟಿಗೆ ಇರುವುದರಿಂದ ಅವರಿಗೆ ತಿಳಿದೊ ತಿಳಿಯದೆಯೊ ಜಾತೀಯ ಭಾವನೆ ಕಡಿಮೆಯಾಗುತ್ತ ನಡೆದಿದೆ. ಇಂದಿನ ಹೊಸ ಪೀಳಿಗೆ ಜೀವನದ ಹೊಸ ಮೌಲ್ಯಗಳನ್ನು ಮನಸ್ಸಿನಲ್ಲಿ ಬಿಂಬಿಸಿಕೊಂಡು ಬೆಳೆಯುತ್ತಿದೆ. ಮುಂದಿನ ಪೀಳಿಗೆಯಲ್ಲಿ ಜಾತೀಯ ಪ್ರಶ್ನೆ ಬಹಳಷ್ಟು ಮಟ್ಟಿಗೆ ಬಿಟ್ಟೀತು ಎಂದು ನನಗೆ ನಂಬಿಕೆಯಿದೆ."

"ಆದರೆ ವಿದ್ಯಾರ್ಥಿ ಮತ್ತು ಯುವಕರ ಹೊಸ ಪೀಳಿಗೆಗೆ ಹೊಸ ಸಾಮಾಜಿಕ ಪ್ರೇರಣೆಯನ್ನು ಕೊಡುವ ಕಾರ್ಯವಾದರೂ ಸಮಾಧಾನಕಾರಕವಾಗಿ ಎಲ್ಲಿ ಆಗುತ್ತಿದೆ? ಅವರಿಗೆ ಆಕರ್ಷಕವೆನಿಸುವಂಥ ಕಾರ್ಯಕ್ರಮ ಸರಕಾರದ ಬಳಿ ಎಲ್ಲಿದೆ?"

"ಈ ಪ್ರೇರಣೆ ಕೊಡುವ ಮುಖ್ಯ ಕಾರ್ಯ ಸರಕಾರ ಅಥವಾ ಮಂತ್ರಿಯದಲ್ಲ. ನಮಗಿಂತಲೂ ಹೆಚ್ಚಾಗಿ ಕಲಾವಿದರು, ಪ್ರಾಧ್ಯಾಪಕರು, ಲೇಖಕರು ಮೊದಲಾದವರು ಈ ಕಾರ್ಯವನ್ನು ಮಾಡಬೇಕು. ಸರಕಾರ ಸಮಾಜದ ಧುರೀಣರಿಗೆ ಸಹಾಯ ಮಾಡುವುದು. ಮುಖ್ಯ ಹೊಣೆಯನ್ನು

ಸರಕಾರದ ಮೇಲೆ ಹೊರಿಸುವುದು ಯೋಗ್ಯವಾಗದು."

"ವಿದ್ಯಾರ್ಥಿಗಳಿಗೆ ಕೊಯನಾ ಅಣೆಕಟ್ಟಿನಂಥ ಕಾರ್ಯ್ಯಗಳಲ್ಲಿ ಭಾಗ ವಹಿಸುವ ಅವಕಾಶವಿತ್ತರೆ ಹೊಸ ಸಂಸ್ಕಾರವನ್ನು ಅವರಲ್ಲಿ ಮೂಡಿಸುವ ಕಾರ್ಯ ಸುಗಮವಾಗದೇ ?"

"ಶ್ರಮದಾನದಂಥ ಕಾರ್ಯಕ್ರಮಗಳಿಗೆ ಈಗ ಬರೀ ಪ್ರತೀಕಾತ್ಮಕ ಮೌಲ್ಯ ಮಾತ್ರ ಉಳಿದಿದೆ. ಯೋಜನೆಗಳ ಆರಂಭದ ಕಾಲದಲ್ಲಿ ಇದು ಅವಶ್ಯಕವೂ ಉಪಯುಕ್ತವೂ ಆಗಿತ್ತು. ಈಗ ಅವನ್ನೇ ಮಾಡುತ್ತ ಹೋಗಬೇಕೆಂಬ ದೃಷ್ಟಿಕೋಣ ಕೃತ್ರಿಮ ಸ್ವರೂಪವದ್ದಾಗುವುದು. ಕೊಯನಾ ಅಣೆಕಟ್ಟಿನಂಥ ಯೋಜನೆಗಳನ್ನು ನೋಡಲು ವಿದ್ಯಾರ್ಥಿಗಳನ್ನು ಒಯ್ಯುವ ಮಾತು ಬೇರೆ, ಅದು ಒಂದು ಬಗೆಯ ಶಿಕ್ಷಣ."

"ವಿದ್ಯಾರ್ಥಿಗಳು ಹಳ್ಳಿಗಳಿಗೆ ಹೋಗಿ ರಸ್ತೆ ತಯಾರಿಸಿದರೆ ತಪ್ಪೇನು ?"

"ತಪ್ಪೇನಾಗುತ್ತದೆಂದರೆ ವಿದ್ಯಾರ್ಥಿಗಳು ಒಳ್ಳೆ ರಸ್ತೆಗಳನ್ನು ತಯಾರಿಸಲಾರರು. ಅವರು ಮಾಡಿದ ರಸ್ತೆಗಳನು ಇಂಜನಿಯರರು, ಓವರ್ ಸೀಯರರು ಸರಿಮಾಡುತ್ತ ಕೂಡ್ರಬೇಕಾಗುಗುವುದು. ಹಣ ಖರ್ಚಾಗಿಯೂ ವಿದ್ಯಾರ್ಥಿಗಳ ಶ್ರಮ ಮತ್ತು ಸಮಯ ಹಾಳಾಗುತ್ತವೆ. ಅದರ ಬದಲು ಒಕ್ಕಲತನ ಮತ್ತು ಇಂಜನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳನ್ನು ಸಂಘಟಿಸಿದರೆ ಜಮೀನು ತಪಾಸಣೆ, ಒಡ್ಡು ಕಟ್ಟುವುದು ಮುಂತಾದವುಗಳಲ್ಲಿ ಅವರ ತಾಂತ್ರಿಕ ಜ್ಞಾನದ ಉಪಯೋಗವಾದರೂ ಆದೀತು. ದೇಶದ ಸಮಸ್ತ ಮನುಷ್ಯ ಬಲ ಮತ್ತು ಕಾರ್ಯಶಕ್ತಿ ಇವುಗಳು ಶಾಸ್ತ್ರಶುದ್ಧ ಮತ್ತು ಯೋಜನಾಬದ್ಧ ರೀತಿಯಲ್ಲಿ ವಿನಿಯೋಗವಾಗಬೇಕು."

"ಈಗ ಕೊನೆಯ ಪ್ರಶ್ನೆ. ಲೇಖಕರು, ಪ್ರಾಧ್ಯಾಪಕರು ಮುಂತಾದ ಬುದ್ಧಿವಾದಿ ವರ್ಗವು ಯುವಕರಿಗೆ ಮಾರ್ಗದರ್ಶನ ಮಾಡಬೇಕೆಂದಿರಿ ನೀವು. ಆದರೆ ಇಂದು ಈ ವರ್ಗವೇ ಔದಾಸೀನ್ಯ ಮತ್ತು ವಿಫಲತೆಯ ಮಡುವಿನಲ್ಲಿ ಸಿಕ್ಕಿದೆ, ಅವರಿಗೆ ಸಾಮಾಜಿಕ ಮತ್ತು ರಾಜಕೀಯ ಪ್ರತಿಷ್ಠಾಸ್ಥಾನಗಳಿಲ್ಲ. ಅಂದಾಗ ಈ ವರ್ಗ ಸಮಾಜಕ್ಕೆ ಹೊಸ ವಿಚಾರವನ್ನೆಂತು ಕೊಟ್ಟೀತು ? ಅವರ ಮಾತನ್ನಾದರೂ ಯಾರು ಕೇಳುವರು ?"

"ನಿಜ ನಿಮ್ಮ ಮಾತು. ನನಗೆ ಈ ಮಾತು ತುಂಬ ದುಃಖವನ್ನೀಯುತ್ತಿದೆ. ಸ್ಪಷ್ಟ ಹೇಳುವುದಾದರೆ ಸುಶಿಕ್ಷಿತ ಬ್ರಾಹ್ಮಣರಲ್ಲಿ ಬಹಳಷ್ಟು ಜನ ಸದ್ಯದ ಪ್ರಜಾಪ್ರಭುತ್ವ ರಾಜಕಾರಣದಿಂದ ಮಾನಸಿಕವಾಗಿ ಅಲಿಪ್ತವಾಗುಳಿದಿದ್ದಾರೆ. ತಮಗೆ ಅಧಿಕಾರ, ಅಥವಾ ವಿಕಾಸ ಕಾರ್ಯದಲ್ಲಿ ಯಾವ ಸ್ಥಾನ ಅಥವಾ ಪಾಲು ಇಲ್ಲ ಎಂದು ಅವರಿಗನಿಸುತ್ತದೆ."

"ಇಂದು ಯಾವನೇ ಇರಲಿ, ಮುನಸಿಪಾಲ್ಟಿ ಅಥವಾ ಲೋಕಲ್ ಬೋರ್ಡ್ ಮುಂತಾದವುಗಳಲ್ಲಿ ಸೇರಿ ಅಧಿಕಾರ ಬಲದಿಂದ ದೊಡ್ಡವನಾಗಿ ಮೆರೆಯಬಲ್ಲ. ಹೀಗಿರುವಾಗ ವಿದ್ವಾಂಸರು, ವಿಚಾರವಂತರಿಗೆ ಸಮಾಜದಲ್ಲಿ ಸ್ಥಾನ ಹೇಗೆ ಸಿಗಬೇಕು ? ಅವರಿಗೆ ಸ್ವತಂತ್ರ ವಿಚಾರ ಮಂಡಿಸುವ ಪ್ರೇರಣೆ ಮತ್ತು ಧೈರ್ಯ ಎಲ್ಲಿಂದ ಬಂದೀತು? "

"ಸ್ವತಂತ್ರ ಪ್ರತಿಭೆ ಮತ್ತು ಪ್ರಜ್ಞೆ ಇರುವವರು ಅಧಿಕಾರದ ಪ್ರಲೋಭನದ ಬೆನ್ನು ಯಾಕೆ ಹತ್ತಬೇಕು? ದೈನಂದಿನ ರಾಜಕೀಯ ಜೀವನದಲ್ಲಿ ಸಂಧಾನ ಅಪರಿಹಾರ್ಯವಾಗಿದೆ. ವ್ಯಕ್ತಿ ಮತ್ತು ವ್ಯಕ್ತಿ ಸಮೂಹಗಳಲ್ಲಿ ಪರಸ್ಪರ ಸಂಬಂಧವನ್ನು ಪ್ರಸ್ಥಾಪಿಸುವ ಪ್ರತಿಯೊಂದು ಕ್ಷೇತ್ರದಲ್ಲಿ ಸಂಧಾನವಿಲ್ಲದೆ ನಡೆಯದು. ಆದರೆ ಜ್ಞಾನ ವಿಜ್ಞಾನದ ಕ್ಷೇತ್ರದಲ್ಲಿ ಸಂಧಾನಕ್ಕೆ ಅವಕಾಶವಿಲ್ಲದಿರುವಂತೆ ರಾಜಕಾರಣದಲ್ಲಿಯೂ ಮೂಲಭೂತ ಸಿದ್ಧಾಂತಗಳ ವಿಚಾರದಲ್ಲಿ ಸಂಧಾನಕ್ಕೆ ಸ್ಥಳವಿಲ್ಲ."

"ಸರಿ, ಬರುತ್ತೇವಿನ್ನ. ನಮಸ್ಕಾರ. ★



ಸ್ವಾತಂತ್ರ್ಯವೆಂಬುದು ಮನುಷ್ಯನ ಅಮೌಲ್ಯ ಆಸ್ತಿಗಳಲ್ಲಿ ಒಂದು ಎಂದು ಎಲ್ಲೆಡೆಯಲ್ಲೂ ಭಾವಿಸುತ್ತಾರೆ. ಸ್ವಾತಂತ್ರ್ಯಕ್ಕಾಗಿ ರಾಷ್ಟ್ರವು ರಾಷ್ಟ್ರದೊಂದಿಗೆ ಯುದ್ಧ ಮಾಡಿದೆ; ಕೋಟಿಗಟ್ಟಲೆ ಜನ ಅದಕ್ಕಾಗಿ ಪ್ರಾಣ ತೆತ್ತಿದ್ದಾರೆ. ಗುಲಾಮಗಿರಿ ಈಗ ಗತಕಾಲದ ಮಾತಾಗಿದೆ. ದೀನ ದಲಿತರಿಗೆ ಕೂಡ ಬಹು ಮಟ್ಟಿಗೆ ನ್ಯಾಯ ದೊರಕುತ್ತಲಿದೆ.

ಸ್ವಾತಂತ್ರ್ಯವು ನಮ್ಮ ಕಾಲದ ಆಕಾಂಕ್ಷೆ; ಅದು ಪ್ರಾಣಕ್ಕಿಂತಲೂ ಅಮೌಲ್ಯವಾದ ದಲ್ಲಿ ತನ್ನದಾಗಬಹುದಾದ ಈ ಸ್ವಾತಂತ್ರ್ಯದ ಸುಖಕನಸೇ ಆ ಕೈದಿಯ ಕಟು ಜೀವನವನ್ನು ಸಹ್ಯವನ್ನಾಗಿ ಮಾಡುತ್ತದೆ. ಜೇಲಿನಲ್ಲಿ ಕೈದಿಗಳು ಕೆಲವೊಂದು ಕೆಲಸವನ್ನು ಮಾಡಿಯೇ ತೀರಬೇಕಾಗುತ್ತದೆ; ಒಂದೇ ಬಗೆಯ ಆಹಾರವನ್ನು ದಿನದಿನವೂ ತಿಂದು ಬದುಕಬೇಕಾಗುತ್ತದೆ; ತೀರ ಕೆಟ್ಟ ಸ್ವಭಾವದ ಜನರೊಂದಿಗೆ ಕಾಲ ಕಳೆಯಬೇಕಾಗುತ್ತದೆ, ಸುತ್ತಲಿನ ಪರಿಸ್ಥಿತಿ ಮತ್ತು ವಾತಾವರಣ ನಿರುತ್ಸಾಹದಾಯಕವೂ ಬೇಸರದ್ದೂ ಆಗಿರುತ್ತದೆ. ಆದರೆ ಇವೆಲ್ಲ

ಒಂದು ತಾತ್ವಿಕ ವಿವೇಚನೆ

ಮನುಷ್ಯ ಎಷ್ಟು ಸ್ವತಂತ್ರ?

ಎಚ್. ಜಿ. ರಾವ್

ಸಂಪತ್ತು; ಹುಟ್ಟಿದ ಕ್ಷಣದಿಂದ ಮಾನವ ಆತ್ಮ ಸ್ವಾತಂತ್ರ್ಯಕ್ಕಾಗಿ ಕೂಗುತ್ತದೆ, ಚಡಪಡಿಸುತ್ತದೆ; ಅದು ಮನುಷ್ಯನ ನೈಸರ್ಗಿಕವಾದ ಜನ್ಮಸಿದ್ಧ ಹಕ್ಕು ಎಂದು ಜ್ಞಾನಿಗಳು ನಮಗೆ ಹೇಳಿದ್ದಾರೆ.

ಈಗ ಸ್ವಾತಂತ್ರ್ಯದ ಅರ್ಥದ ಬಗ್ಗೆ ಇರುವ ಈ ಸಾರ್ವತ್ರಿಕ ನಂಬಿಗೆಗಳನ್ನಷ್ಟು ವಿವೇಚಿಸಿ ನೋಡೋಣ. ಮೊದಲು ಒಬ್ಬ ದೀರ್ಘಾವಧಿ ಶಿಕ್ಷೆಗೊಳಗಾಗಿ ಜೇಲಿನಲ್ಲಿರುವ ಕೈದಿಯ ಉದಾಹರಣೆ ತೆಗೆದುಕೊಳ್ಳೋಣ. ಅವನ ಮನದಲ್ಲಿ ಸದಾ, ವರ್ಷಾನುವರ್ಷಗಳ ಕಾಲ, ಶಿಕ್ಷೆ ಮುಗಿದ ಬಳಿಕ ತನಗೆ ಸಿಗುವ ಸ್ವಾತಂತ್ರ್ಯದ ವಿಚಾರವೇ ಮುಖ್ಯವಾಗಿ ಸುಳಿಯುತ್ತದೆ. ಭವಿಷ್ಯತ್ ಕಾಲ

ವುಗಳಿಗಿಂತ ಕೈದಿಯ ಜೀವನದಲ್ಲಿ ಸ್ವಾತಂತ್ರ್ಯವಿಲ್ಲವೆಂಬುದೇ ಅತಿ ಹೆಚ್ಚಿನ ತಾಪದಾಯಕವಾದ ಸಂಗತಿಯಾಗಿರುತ್ತದೆ.

ಇನ್ನು ಜಗತ್ತಿನ ಕೂಲಿಕಾರರ ವಿಚಾರವನ್ನು ನೋಡೋಣ. ಒಂದು ದಿನ ತಪ್ಪದಂತೆ ಅವರು ಕಾರಖಾನೆಗಳಲ್ಲಿ, ಅಂಗಡಿಗಳಲ್ಲಿ, ಕಚೇರಿಗಳಲ್ಲಿ ಗಣಿಗಳಲ್ಲಿ, ಹೊಲಗಳಲ್ಲಿ, ಮತ್ತಾವುದಾದರೂ ಇಂಥದೇ ಸ್ಥಳದಲ್ಲಿ ಕೆಲಸ ಮಾಡುವುದರಲ್ಲಿ ಮುಳುಗಿ ಹೋಗಿರುತ್ತಾರೆ. ನಾಗರಿಕ ಜೀವನವನ್ನು ಬಾಳುವುದಕ್ಕಾಗಿ ಹೆಚ್ಚು ಕಡಿಮೆ ಪ್ರತಿಯೊಬ್ಬನೂ ತನ್ನ ಸ್ವಾತಂತ್ರ್ಯದಲ್ಲಿ ಬಹು ಭಾಗವನ್ನು ಬಲಿ ಕೊಡಬೇಕಾದಂಥ ಸಾಮಾಜಿಕ

ಪದ್ಧತಿ ನಮ್ಮದಾಗಿದೆ. ಸ್ವಚ್ಛಂದವಾಗಿ ಹಾರುವ ಹಕ್ಕಿಯನ್ನು ಕಂಡಾಗ ಎಷ್ಟು ಸಲ ನಮ್ಮ ಮನಸಿನಲ್ಲಿ "ಅಯ್ಯೋ ! ನಮಗೂ ಇಂಥ ಸ್ವಾತಂತ್ರ್ಯ ವಿದ್ದಿದ್ದರೆ !" ಎಂಬ ವಿಚಾರ ಬಂದಿರಲಿಕ್ಕಿಲ್ಲ !

ಲಕ್ಷಗಟ್ಟಲೆ ಜನ ನಿತ್ಯವೂ ಸೋಡ್ತಿ ಮುಂತಾದವುಗಳಿಗಾಗಿ ಒಂದಿಷ್ಟು ರೊಕ್ಕ ಹಾಳು ಮಾಡುತ್ತಾರೆ. ಯಾಕೆ ? ಬಹುಮಾನದ ಆಶೆಯಿಂದ ಎಂಬುದಂತೂ ಸರಿ. ಆದರೆ ಸಿಗಬಹುದಾದ ಆ ದೊಡ್ಡ ರಕಮಿನಿಂದ ತಮಗೆ ಲಭ್ಯವಾಗುವುದು ಎಂದು ಅವರು ತಿಳಿದುಕೊಳ್ಳುವ ಸ್ವಾತಂತ್ರ್ಯದ ವಿಚಾರವೇ ಇದಕ್ಕೆ ಮುಖ್ಯ ಕಾರಣವಾಗಿದೆ. ಲಕ್ಷಾಧೀಶನಾದರೆ ನಿತ್ಯದ ಕೆಲಸದ ಗುಲಾಮಗಿರಿ ತಪ್ಪೀತು, ಮನ ಬಂದಂತೆ ಇರಲು ಸಾಧ್ಯವಾದೀತು ಅಲ್ಲವೆ !

ಮತ್ತೆ ದಿನವಿಡೀ ಮನೆಯಲ್ಲಿ ದುಡಿಯುವ ಹೆಂಡತಿ ಇದ್ದಾಳೆ. ತನ್ನ ಗಂಡ ಮತ್ತು ಮಕ್ಕಳ ಮೇಲಿನ ಅಪಾರ ಪ್ರೇಮವೇ ಅವಳಿಗೆ ಈ ದಿನ ನಿತ್ಯದ ಅಸಾಧ್ಯ ಕೆಲಸ ಮತ್ತು ನಿರ್ಬಂಧಗಳನ್ನು ತಾಳಿಕೊಳ್ಳಲು ಶಕ್ತಿಯನ್ನು ಕೊಡುತ್ತಿರಬೇಕು. ಆದರೂ ಇಂಥವರಿಗೆ ಕೂಡ ಯಾವಾಗಾದರೊಮ್ಮೆ "ಸಾಕು ಇನ್ನು. ಎಲ್ಲಿಯಾದರೂ ಓಡಿ ಹೋಗಿ ಸ್ವತಂತ್ರವಾಗಿ, ಹಾಯಾಗಿ ಇರೋಣ" ಎಂದು ಅನಿಸದೆ ಇರುವುದಿಲ್ಲ.

ಅನೇಕಾನೇಕ ಕವಿಗಳು ಸ್ವಾತಂತ್ರ್ಯದ ಗುಣಗಾನ ಮಾಡಿದ್ದಾರೆ. ಅಂದರೆ ಸ್ವಾತಂತ್ರ್ಯವು ಕೇವಲ ಕವಿಗಳ ಅಥವಾ ತತ್ತ್ವವೇತ್ತರ ಕನಸೆಂದಲ್ಲ, ಅದು ಸಮಗ್ರ ಮಾನವ ಜಾತಿಯ ಕನಸಾಗಿದೆ. ಆದರೆ ಸ್ವಾತಂತ್ರ್ಯವು ಬರಿಯ ಕನಸೇ ಅಥವಾ ವ್ಯಾವಹಾರಿಕವಾಗಿ ಸಾಧ್ಯವಾದದ್ದೇ ? ಅದು ಭ್ರಮೆಯೆ ಅಥವಾ ಸತ್ಯವೆ ?

"ಸ್ವತಂತ್ರ ರಾಷ್ಟ್ರಗಳು", "ಪತ್ರಿಕಾ ಸ್ವಾತಂತ್ರ್ಯ", "ವಾಕ್ ಸ್ವಾತಂತ್ರ್ಯ", "ವಿಚಾರ ಸ್ವಾತಂತ್ರ್ಯ", "ಪ್ರೇಮ ಸ್ವಾತಂತ್ರ್ಯ" ಎಂದೆಲ್ಲ ನಾವನ್ನುತ್ತೇವೆ. ಆದರೆ ಈ ಜೀವನದಲ್ಲಿ ಲೌಕಿಕವಾಗಿ ಯಾರು ಸಂಪೂರ್ಣವಾಗಿ ಸ್ವತಂತ್ರರಾಗಿರುತ್ತಾರೆ, ಅಥವಾ ಎಂದಾದರೂ ಹಾಗಾಗಬಲ್ಲರೆ ?

ಅನೇಕ ರಾಷ್ಟ್ರಗಳ ವಸಾಹತುಗಳಾಗಿರುವ ಎಷ್ಟೋ ದೇಶಗಳು ಇಂದು ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸುತ್ತಿವೆ. ಇವುಗಳಲ್ಲಿ ಎಷ್ಟೋ ತಮ್ಮ ಈ ತಥಾಕಥಿತ ಸ್ವಾತಂತ್ರ್ಯವನ್ನು ಪಡೆದಿವೆ. ಆದರೆ ತಾವು ಎಷ್ಟು ಸ್ವತಂತ್ರರಾಗುತ್ತೇವೆ. ಎಂದು ಅವು ಎಣಿಸಿದ್ದವೊ ಹಾಗೆ ಆಗಿವೆಯೇ ? ಇಲ್ಲವೆಂದೇ ಕಾಣುತದೆ. ಈ ಮೊದಲು ತಮ್ಮ ಮೇಲಿದ್ದ ನಿರ್ಬಂಧಗಳನ್ನು ಅವು ಕಿತ್ತೊಗೆದಿವೆ. ನಿಜ. ಆದರೆ ತಾವೇ ಹಾಕಿಕೊಂಡ ಹೊಸ ನಿರ್ಬಂಧಗಳಿಗೆ ಅವು ಕಟ್ಟುಬಿದ್ದಿವೆ. ತಮ್ಮ ಕಾಲ ಮೇಲೆ ತಾವು ನಿಂತುಕೊಂಡು ಜಗತ್ತಿನ ಇತರ ಸ್ವತಂತ್ರ ರಾಷ್ಟ್ರಗಳೊಡನೆ ಸ್ಪರ್ಧಿಸಬೇಕಾದ ಅಗತ್ಯ ಅವುಗಳಿಗೆ ಅರಿವಾಗಿದೆ. ಈ ನೂತನ ಸ್ವತಂತ್ರ ರಾಷ್ಟ್ರಗಳಿಗೆ ಈ ಅರಿವು ಕಾಲಾಂತರದಲ್ಲಿ ಬಹು ಒಳ್ಳೆಯ ಪರಿಣಾಮವನ್ನುಂಟುಮಾಡೀತು. ತಪ್ಪುತ್ತ ಎಡವುತ್ತ ಕೆಲಸ ಮಾಡಿ ಅವುಗಳಿಗೆ ತಮ್ಮ ಬಲಾಬಲಗಳ ನೆಲೆ ಗೊತ್ತಾಗುವುದು. ಕೊನೆಯಲ್ಲಿ ಅವು ತಮ್ಮ ನಿರ್ಧಾರ ಮತ್ತು ಪ್ರಯತ್ನ ಬಲದಿಂದ ಜಗತ್ತಿನ ಗೌರವ - ಮನ್ನಣೆಗಳನ್ನು ಸಂಪಾದಿಸುವವು ಇಲ್ಲವೆ ಪುನಃ ಅರಾಜಕತೆಗೆ ಸಿಲುಕಿ ಇನ್ನಾವುದಾದರೂ ದೊಡ್ಡ ರಾಷ್ಟ್ರದ ನಿಯಂತ್ರಣಕ್ಕೊಳಗಾಗುವವು. ಹೇಗೇಆದರೂ ಅವು ತಮ್ಮ ಬಗೆಗಿನ ಮತ್ತು ಇತರ ಜನಾಂಗಗಳ ಬಗೆಗಿನ ಹೊಣೆಯಿಂದ ಮುಕ್ತವಾಗಲಾರವು. ಅಂದ ಮೇಲೆ ಈ ಸಂದರ್ಭದಲ್ಲಿ ಸ್ವಾತಂತ್ರ್ಯವೆಂಬುದು ಎಲ್ಲಿ ಬಂತು ?

ಈಗ ಪುನಃ ಮೊದಲು ಹೇಳಿದ ಕೈದಿಯ ವಿಚಾರ ಮಾಡೋಣ. ಅವನ ಶಿಕ್ಷೆಯು ಮುಗಿಯುತ್ತ ಬಂದಿದೆ. ಒಂದು ದಿನ ಜೇಲಿನ ಮಹಾದ್ವಾರ ತೆರೆದು ಅವನು ಹೊರಗೆ ಬರುತ್ತಾನೆ, 'ಸ್ವತಂತ್ರ' ನಾಗುತ್ತಾನೆ. ಆದರೆ ಆ ಸ್ವಾತಂತ್ರ್ಯದ ಮಿತಿ ಎಷು? ಇನ್ನು ಮೇಲೇನೂ ಅವನು

ನಾಲ್ಕು ಗೋಡೆಗಳ ನಡುವೆ ಬಂಧಿತನಾಗಿರುವುದಿಲ್ಲ. ಮನ ಬಂದಲ್ಲಿ ಆತ ಹೋಗಬಹುದು. ಆದರೆ ಆತ ಎಲ್ಲಿ ಹೋದರೂ ಜೇಲುವಾಸದ ಕಲಂಕ ಅವನ ಬೆನ್ನು ಬಿಡುವುದಿಲ್ಲ. ಪ್ರಾಮಾಣಿಕವಾದ ನೌಕರಿ ಮಾಡಲು ಅವನಿಗೆ ಅವಕಾಶ ಸಿಗುವುದಿಲ್ಲ. ಹಿಂದೆ ಅವನ ಜೊತೆಗಾರರಾಗಿದ್ದ ಅಪರಾಧಿಗಳು ಅವನನ್ನು ಬೆದರಿಸಬಹುದು. ಅವನ ಮೇಲೆ ಒತ್ತಡ ತರಬಹುದು; ಪೋಲೀಸರ ಯಾದಿಯಲ್ಲಿ ಅವನೊಬ್ಬ ಕೇಡಿ ಎಂದೇ ಉಲ್ಲಿಖಿತವಾಗಿರುತ್ತದೆ. ಒಂದು ವೇಳೆ ಆತ ಸುಧಾರಿಸಿದರೂ ಆತನಿಗೆ ಅವನ ಗತಕಾಲದ ನೆನಪು ಸದಾ ಬರುತ್ತಲೇ ಇದ್ದು ತಾನು ತನ್ನ ಸುತ್ತಮುತ್ತಲಿನವರಿಗಿಂತ ಕೀಳು ಎಂಬ ಭಾವನೆ ಪೀಡಿಸುತ್ತಲೇ ಇರುವುದು. ಹೀಗಾಗಿ ಬಹುಕಾಲದಿಂದ ಸ್ವಾತಂತ್ರ್ಯವು ಅವನಿಗೆ·ಅವನು ಕನಸುಕಂಡ ಸುಖ-ಸಮಾಧಾನಗಳನ್ನು ಒದಗಿಸುವ ಸಾಧನವಾಗುವುದಿಲ್ಲ.

ನಿತ್ಯವೂ ಅನಿವಾರ್ಯವಾಗಿ ಮಾಡಲೇಬೇಕಾದ ಕೆಲಸದಿಂದ ಬೇಸತ್ತ, ಹಣಕಾಸಿನ ಅಭಾವದಿಂದ ಅತೃಪ್ತನಾದ ಕೆಲಸಗಾರನಿಗೆ ಒಂದು ದಿನ ಸೋಡ್ತಿಯಲ್ಲಿ ದೊಡ್ಡ ರಕಮು ಸಿಗುತ್ತದೆನ್ನೋಣ; ಆಗೇನಾಗುತ್ತದೆ? ಹಣ ಬಂದ ಉಬ್ಬಿನಲ್ಲಿ ಕೆಲ ಕಾಲ ಅವನಿಗೆ ಸ್ವರ್ಗವೇ ಕೈಗೆ ಬಂದಂತೆನಿಸುತ್ತದೆ. ಇನ್ನವನು ದಿನನಿತ್ಯದ ಕೆಲಸದ ಜಂಜಾಟದಿಂದ ಮುಕ್ತನಾಗಬಹುದು. ಬೆಳಗಾಯಿತು ಎನ್ನುವುದರೊಳಗೆ ಎದ್ದು ಗಪಗಪ ತಿಂದು ಕೆಲಸಕ್ಕೆ ಆತ ಓಡಬೇಕಾಗಿಲ್ಲ. ಮಳೆ, ಚಳಿ, ಗಾಳಿ, ಬಿಸಿಲುಗಳೆನ್ನದೆ ಕೆಲಸಕ್ಕಾಗಿ ಧಾವಿಸಬೇಕಾಗಿಲ್ಲ. ಆತ ಇನ್ನು ಸ್ವತಂತ್ರನು. ಸಾಕು ಎನಿಸುವ ವರೆಗೆ ಹಾಸಿಗೆಯಲ್ಲಿ ಉರುಳಾಡುತ್ತಿರಬಹುದು. ಬೇಕೆಂದಾಗ ಎದ್ದು ಮನಬಂದಲ್ಲಿಗೆ ಹೋಗಿ ಸುಖಿಸಬಹುದು. ಇದೇ ಅಲ್ಲವೇ ಆತ ಹಂಬಲಿಸಿ ಬಯಸಿದ್ದ ಸ್ವಾತಂತ್ರ್ಯ?

ಹೌದು. ಆದರೆ ಕೆಲ ಸಮಯದ ವರೆಗೆ ಮಾತ್ರ. ಕೆಲವೇ ದಿನಗಳ ನಂತರ ಈತನನ್ನು ಹೊಸ ಯಜಮಾನರು— ಅಸಮಾಧಾನ, ಅತೃಪ್ತಿ, ಬೇಸರಗಳು- ಪೀಡಿಸತೊಡಗುವವು. ಆತ ಶೀಘ್ರಕೋಪಿಯೂ ಅಸಂತುಷ್ಟನೂ ಆಗಬಹುದು. ತಾನು ಹಿಂದೆ ಕೂಲಿಕಾರನಾಗಿದ್ದಾಗಿನ ದಿನಗಳೀಗ ಅವನ ನೆನಪಿಗೆ ಬರುವವು. ತಾನು ಕಳೆದುಕೊಂಡಿರುವ ಮಿತ್ರರ, ಜೀವನದ ರೀತಿನೀತಿಗಳನ್ನು ಕುರಿತು ಅವನು ಯೋಚಿಸತೊಡಗುವನು. ವಾರದ ಕೊನೆಯದಿನ ಸಂಬಳ ಕೈಗೆ ಬರುವಾಗಿನ ಆತುರ-ಸಂತೋಷಗಳು ಈಗ ಅವನ ಪಾಲಿಗುಳಿದಿಲ್ಲ. ಈ ವಾರ ಯಾವ ಸಿನೇಮಾ ನೋಡಬೇಕು ಯಾವ ಕಜ್ಜಾಯ ತಿನ್ನಲು ಸಾಧ್ಯವಾದೀತು? ಎಂಬ ಹಿತಕರ ಯೋಚನೆಯ ಸುಖನಿಮಿಷ ಅವನ ಕೈಯಿಂದ ಜಾರಿಹೋಗಿದೆ. ಆ ಕಾಲದಲ್ಲಿ ಈ ಕಲ್ಪನೆ, ನಿರೀಕ್ಷೆ, ಅವು ಯಥಾರ್ಥವಾದಾಗ ಸಿಗುತ್ತಿದ್ದ ಸಮಾಧಾನ ಎಲ್ಲವೂ ಅವನಿಗೆ ಈಗ ಗತಕಾಲದ ಮಾತಾಗಿಬಿಟ್ಟಿವೆ.

ಈಗ ಅವನ ಬಳಿ ತುಂಬ ಹಣವಿದೆ, ಸಮಯವೂ ಇದೆ. ಆದರೆ ಏನನ್ನು ಕೊಳ್ಳಬೇಕು, ಎಲ್ಲಿ ಹೋಗಬೇಕು, ಸಮಯ ಹೇಗೆ ಕಳೆಯಬೇಕು ಎನ್ನುವುದೇ ಅವನಿಗೊಂದು ದೊಡ್ಡ ಸಮಸ್ಯೆಯಾಗಿಬಿಟ್ಟಿದೆ. ಮತ್ತೆ ಹಿಂದೆ ಕೂಲಿಕಾರನಾಗಿದ್ದಾಗ ಆತ ತನ್ನ ಜೊತೆಯವರ ಸುಖದುಃಖಗಳಲ್ಲಿ ಪಾಲುಗಾರನಾಗುತ್ತಿದ್ದಂತೆ ಈಗ ಆಗಲು ಸಾಧ್ಯವಿಲ್ಲ. ಆ ಕಾಲದಲ್ಲಿ ನಡೆಸುತ್ತಿದ್ದಂಥ ಆತ್ಮೀಯ ಸಂಭಾಷಣೆ ಸಾಧ್ಯವಿಲ್ಲ. ಇದರಿಂದ ಅವನಿಗೆ ದಿಕ್ಕು ತಪ್ಪಿದಂತಾಗಿದೆ ಅವನ ನೆರೆಹೊರೆಯವರಿಂದ ಆತ ಪ್ರತ್ಯೇಕವಾಗಿಬಿಟ್ಟಿದ್ದಾನೆ. 'ಸ್ವಾತಂತ್ರ್ಯ'ವೆನ್ನುವುದು ಇದೇ ಹೌದಾದರೆ ಇದೇನೂ ತಾನು ನಿರೀಕ್ಷಿಸಿದುದಂಥದಲ್ಲ ಎಂದುಕೊಳ್ಳುತ್ತಾನೆ ಆತ. ಅವನ ಕೂಲಿ ಜೀವನಕ್ಕಿಂತಲೂ ಈ ಜೀವನ ಬೇಸರದ್ದು, ನಿರಾಶಾಜನಕವಾದದ್ದು.

ಇದರಿಂದ ಪಾರಾಗಲು ಆತ ಯಾವುದೊಂದು ಉದ್ಯೋಗವನ್ನು ಕೊರಳಿಗೆ ಕಟ್ಟಿಕೊಳ್ಳುತ್ತಾನೆ.

ಈಗ ಅವನೇ ತನ್ನ ಯಜಮಾನ. ಈಗಲಾದರೂ ಇವನು ಸ್ವತಂತ್ರನಾದನೇ? ಯಾವುದೇ ಉದ್ಯೋಗದ ಮಾಲಿಕನನ್ನು ಕೇಳಿ. ಉದ್ಯೋಗದಲ್ಲಿ ಸ್ಪರ್ಧೆ, ಕರಭಾರ, ಕೂಲಿಕಾರ ಸಮಸ್ಯೆ, ತಿರುಗಿ ಬಾರದ ಸಾಲ, ವಿಕ್ಷಿಪ್ತ ಗಿರಾಕಿಗಳು ಇವೇ ಮುಂತಾದವುಗಳಿಂದ ಕಿಸೆಯಲ್ಲಿ ನಾಲ್ಕು ಕಾಸು ಓಡಾಡುತ್ತಿದ್ದರೂ ಬೇಕೆಂದಾಗ ಮನೆಗೆ ಬಂದು ಮಲಗಬಹುದಾದರೂ ಈ ಮಾಲಿಕರ ಜೀವನ ಸ್ವತಂತ್ರ ಜೀವನವೆನಿಸಿಕೊಳ್ಳುವುದಿಲ್ಲ.

ಅದರಂತೆ ಯಾವಾಗಾದರೊಮ್ಮೆ ಈ ಎಲ್ಲ ಜಂಜಾಟವನ್ನು ಬಿಟ್ಟು ಓಡಿಹೋಗಿಬಿಡೋಣ ಎಂದೆನಿಸುವ ಗೃಹಿಣಿಯ ಮಾತು. ಅವಳ ಗಂಡ ಮನೆಗೆ ಬರುವಾಗ ದಣಿದು, ಬೇಸತ್ತು ಬರುತ್ತಾನೆ. ಮಕ್ಕಳು ಅವಳ ಜೀವ ಹಿಂಡುತ್ತಾರೆ. ಅಡಿಗೆ ಸರಿಯಾಗಿರುವುದಿಲ್ಲ. ಅಗತ್ಯವಾಗಿ ಬೇಕು ಎನಿಸುವ ವಸ್ತುಗಳೂ ಮನೆಯಲ್ಲಿ ಎಷ್ಟೋ ಸಲ ಇರುವುದಿಲ್ಲ. ಮೈಗೆ ಸ್ವಸ್ಥವಿಲ್ಲದಿದ್ದರೂ ಕೆಲಸ ತಪ್ಪಿದ್ದಲ್ಲ. ದಿನನಿತ್ಯವೂ ಇದೇ ಹಾಡು ಅಂದ ಮೇಲೆ ಅವಳಿಗೆ 'ಸಾಕಪ್ಪಾ ಸಂಸಾರ' ಎಂದೆನಿಸಿದರೆ ಆಶ್ಚರ್ಯವೇನು?

ಸರಿ. ಇನ್ನು ಇವಳು ಕೆಲ ಕಾಲವಾದರೂ ಹಾಯಾಗಿ ಇರೋಣ ಎಂದು ಗಂಡ ಮಕ್ಕಳು-ಮನೆಯನ್ನು ಬಿಟ್ಟು ಆಪ್ತರಲ್ಲೊಬ್ಬರಲ್ಲಿಗೊ, ಸ್ನೇಹಿತೆಯ ಮನೆಗೋ ಹೋದಳು ಎನ್ನೋಣ. ಅಲ್ಲಿ ಅವಳಿಗೆ ತನ್ನ ಮನೆಯಲ್ಲಿನ ತಾಪತ್ರಯವೊಂದೂ ಇರುವುದಿಲ್ಲ, ನಿಜ. ಆದರೆ ಈ ಸ್ವಾತಂತ್ರ್ಯಾನುಭವದಲ್ಲಿ ಅವಳು ನೆಮ್ಮದಿಯಿಂದಿರುವಳೇ? ತನ್ನ ಮಕ್ಕಳು ಏನು ಮಾಡುತ್ತಿರಬಹುದು, ಗಂಡ ಮನೆಗೆಲಸ ಮತ್ತು ಆಫೀಸಿನ ಕೆಲಸ ಎಂದು ಒದ್ದಾಡುತ್ತಿರಲಿಕ್ಕಿಲ್ಲವೆ? ಮಕ್ಕಳಲ್ಲಿ ಯಾರಿಗಾದರೂ ಏನಾದರೂ ಆದರೆ ನೋಡಿಕೊಳ್ಳುವವರಾರು? ಒಂದಲ್ಲ, ಎರಡಲ್ಲ, ಹತ್ತಾರು ಶಂಕೆ-ಕುಶಂಕೆಗಳು ಮನದಲ್ಲಿ ಮೂಡಿ ಅವಳಿಗೆ ಆ ಬಂಧನ ಬೇಕು, ಈ ಸ್ವಾತಂತ್ರ್ಯ ಬೇಡ ಎಂದೆನಿಸಿಬಿಡುತ್ತದೆ.

ಸಂಚಾರಿ ಜನಾಂಗಗಳ ಜೀವನವನ್ನು ನೋಡಿದಾಗ "ಹಾ! ಇವರದು ನಿಜವಾದ ಸ್ವತಂತ್ರ ಜೀವನ. ಯಾವ ಬಂಧನವಿಲ್ಲ ಇವರಿಗೆ" ಎಂದೆನಿಸುವುದು. ಆದರೆ ನಿಜವಾಗಿ ಹಾಗಿರುವುದಿಲ್ಲ. ಅವರಿಗೂ ಕಷ್ಟಗಳಿವೆ. ಅವರು ಬಿಡಾರ ಹೂಡಿದ ಸ್ಥಳದ ಆಸುಪಾಸಿನಲ್ಲಿ ಕಳವಾದರೆ ಜನರೂ ಪೋಲೀಸರೂ ಮೊದಲು ಅವರನ್ನು ಸಂಶಯ ದೃಷ್ಟಿಯಿಂದ ನೋಡುತ್ತಾರೆ. ಅನುಕೂಲವಿದ್ದರೂ ಅವರು ಒಂದೇ ಕಡೆ ಇರುವಂತಿಲ್ಲ. ಹೊಟ್ಟೆ ಬಟ್ಟೆಯ ಚಿಂತೆ ಇತರರಂತೆ ಅವರಿಗೂ ಇದೆ. ಇವೆಲ್ಲವುಗಳ ಮೂಲಕ ಅವರ ಸ್ವಾತಂತ್ರ್ಯವೂ ಮಿತಿಯುಳ್ಳದ್ದೇ ಆಗುತ್ತದೆ.

ಸಾಧು ಸಂನ್ಯಾಸಿಗಳ ಜೀವನ ಸ್ವತಂತ್ರ ಜೀವನ ಎನ್ನೋಣವೆ? ಧ್ಯೇಯ ಸಾಧನೆಗಾಗಿ ಅವರೂ ತಮ್ಮ ಮೇಲೆ ನಿರ್ಬಂಧಗಳನ್ನು ಹಾಕಿಕೊಳ್ಳಬೇಕಾಗುತ್ತದೆ.

ಆದ್ದರಿಂದ ಈ ಮೇಲಿನ ವಿಚಾರಗಳ ಮಾನದಿಂದ ನಾಗರಿಕ ಸಮಾಜದಲ್ಲಿ ಸ್ವಾತಂತ್ರ್ಯವೆನ್ನುವುದು ಅಸಾಧ್ಯ ತುತ್ತು ಎಂದೇ ಆಗುವುದು. ಅದು ಒಂದು ಕನಸು, ಭ್ರಮೆ, ಮರುಭೂಮಿಯ ಮರೀಚಿಕೆ ಅಷ್ಟೆ. ನಾವು ಯಾರೇ ಆಗಲಿ, ಎಲ್ಲೇ ಇರಲಿ, ಏನೇ ಮಾಡಲಿ, ಹಲವಾರು ರೀತಿಗಳಲ್ಲಿ ಹಲವಾರು ಬಂಧನಗಳಿಂದ ಬಿಗಿಯಲ್ಪಟ್ಟಿರುತ್ತೇವೆ. ದೇಶದ,ಸಮಾಜದ ನಿಯಮರೀತಿಗಳನ್ನು ಪಾಲಿಸಬೇಕು. ನಿಸರ್ಗದ ನಿಯಮಗಳನ್ನು ಪಾಲಿಸಬೇಕು. ನಮ್ಮ ಮತ್ತು ಇತರರ ವಿಚಾರದಲ್ಲಿ ನಾವು ನಿರ್ವಹಿಸಬೇಕಾದ ಹೊಣೆ, ಕರ್ತವ್ಯಗಳು ಇವೆ.

ಹೀಗಿದ್ದರೂ ಕೆಲ ಸಮಯಗಳಲ್ಲಿ ನಮ್ಮೆಲ್ಲರಲ್ಲಿಯೂ ಸ್ವಾತಂತ್ರ್ಯದ ಈ ಹಸಿವು ತೀವ್ರವಾಗುತ್ತದೆ. ಜೀವನವು ಇನ್ನಿಷ್ಟು ಆಕರ್ಷಕವೂ ಸುಖಮಯವೂ ಆಗುವಂತೆ ಮಾಡುವ ಹೆಚ್ಚಿನ ಪ್ರಮಾಣದ ಸ್ವಾತಂತ್ರ್ಯವು ನಮಗೆ ಸಿಗುವಂತೆ ನಾವು ಏನನೂ ಮಾಡಲಾರೆವೆ? ಈ ನಿತ್ಯ ಪ್ರಶ್ನೆಗೆ

ಒಂದು ಸಮಾಧಾನಕರವಾದ ಉತ್ತರವಿದೆ. ನಾವು ಹೆಚ್ಚು ತೃಪ್ತಿಕರವಾದ, ಸುಖಮಯವಾದ ಸಮೃದ್ಧವಾದ ಜೀವನವನ್ನು ಸಾಗಿಸಲು ಒಂದು ಹಾದಿಯಿದೆ. ಆದರೆ ಈ ಹಾದಿಯನ್ನು ಕಂಡು-ಕೊಂಡಿರುವವರು ತೀರ ಸ್ವಲ್ಪ ಜನ ಮಾತ್ರ. ಈ ಹಾದಿಯನ್ನು ಕಂಡವರಲ್ಲಿ ಕೂಡ ಕೆಲವರು ಹಾದಿ ಹೆಚ್ಚು ಕಷ್ಟಕರವಾದ್ದರಿಂದ ಹೆಜ್ಜೆಯಿಡಲು ನಿರಾಕರಿಸುತ್ತಾರೆ. ಈ ಮಾರ್ಗಕ್ರಮಣಕ್ಕಾಗಿ ಆತ್ಮಜ್ಞಾನ ಬೇಕಾಗುವುದು. ನಮ್ಮೆಲ್ಲ ಕಲ್ಪನೆ ಭಾವನೆಗಳಲ್ಲಿ ಪರಿವರ್ತನೆಯಾಗಬೇಕಾಗುವುದು.

ಆದ್ದರಿಂದ ನಾವು ಹೆಚ್ಚು ಸುಖಮಯ ಜೀವನದ ಪಥದಲ್ಲಿ ಹೋಗಬೇಕೆಂದಿದ್ದರೆ ಮೊಟ್ಟ ಮೊದಲಿಗೆ ನಾವು ಲೌಕಿಕ ರೀತಿಯಲ್ಲಿ ಸ್ವಾತಂತ್ರ್ಯವೆನ್ನುವುದು ಬರಿ ಹಗಲುಗನಸು ಎಂಬ ಸತ್ಯವನ್ನು ಒಪ್ಪಿಕೊಳ್ಳಬೇಕು. ಅಂಥ ಸ್ವಾತಂತ್ರ್ಯ ಸಾಧ್ಯವಾದರೂ ಅದರಿಂದ ಒಳ್ಳೆಯದಕ್ಕಿಂತ ಕೆಡಕೇ ಹೆಚ್ಚಾಗುವುದು ಎಂಬುದನ್ನು ಅರಿಯಬೇಕು.

ಈ ಮಾತನ್ನೊಪ್ಪಿಕೊಂಡ ಮೇಲೆ ನಮ್ಮ ದೈಹಿಕ ಮತ್ತು ಸಾಮಾಜಿಕ ಮಿತಿಗಳಲ್ಲಿಯೆ ಆದಷ್ಟು ಹೆಚ್ಚಿನ ಪ್ರಯೋಜನವನ್ನು ಹೊಂದಲು ಕಲಿಯಬೇಕು. ನಮ್ಮ ಸ್ವಾತಂತ್ರ್ಯದ ಮೇಲೆ ಅನಿವಾರ್ಯವಾಗಿ ಬಂದೇ ತೀರುವ ಗದಾಪ್ರಹಾರಗಳಿಂದ ವಿಚಲಿತರಾಗದೆ ಸಾಧ್ಯವಾದಷ್ಟು ಮಟ್ಟಿಗೆ ಸುಖಿಗಳಾಗಿರಲು ಪ್ರಯತ್ನಿಸಬೇಕು. ಮೃಗಾಲಯದಲ್ಲಿ ಹುಟ್ಟಿದ ಕಾಡುಪ್ರಾಣಿ ತನ್ನ ಪಂಜರವೇ ಜಗತ್ತೆಂದು ತಿಳಿದು ಬದುಕಲು ಕಲಿಯುವಂತೆ ನಮ್ಮ ಮನೋಭಾವವಿರಬೇಕು. ಮೃಗಾಲಯದ ಪ್ರಾಣಿಗಳನ್ನು ಪುನಃ ಅಡವಿಗೊಯ್ದು ಬಿಟ್ಟರೆ ಏನಾಗುವುದು? ಅವು ಅಲ್ಲಿ ತಮ್ಮವರೊಡನೆ ಸ್ಪರ್ಧಿಸಿ ಬಾಳಲಾರವು. ತಮ್ಮ ವೈರಿಗಳಿಂದ ರಕ್ಷಣೆ ಮಾಡಿಕೊಳ್ಳಲಾರವು. ಅವುಗಳ ಈ ಸ್ವಾತಂತ್ರ್ಯವೇ ಅವಕ್ಕೆ ಯಮಪಾಶವಾಗುವುದು. ನಮ್ಮ ವಿಚಾರವೂ ಹಾಗೆಯೆ.

ಪ್ರಾಣಿಗಳಿಗಿಂತಲೂ ಮನುಷ್ಯ ಮೇಲ್ಮಟ್ಟದ ಜೀವಿಯೇನೊ ಹೌದು. ವಿಚಾರಶಕ್ತಿಯಿರುವ ಮನುಷ್ಯನು ಜೀವನದ ತತ್ವವನ್ನು ರೂಪಿಸಿಕೊಂಡು ಜಗತ್ತನ್ನು ನಡೆಸುವ ಯಾವುದೇ ಒಂದು ಉಚ್ಚ ಶಕ್ತಿಯ ಅರಿವನ್ನು ಹೊಂದಿದವನಾಗಿದ್ದಾನೆ. ಜೀವನಕ್ಕಿರುವ ಯಾವುದೋ ಒಂದು ಮಹಾಧ್ಯೇಯದ ಅರಿವು ಮನುಷ್ಯನಿಗಿದೆ. ಅವನಿಗೆ ಸಾರಾಸಾರ ವಿಚಾರ ಮಾಡುವ ಶಕ್ತಿ ಇದೆ, ವಿವೇಕವಿದೆ.

ಇವೆಲ್ಲವುಗಳಿಂದ, ಹೆಚ್ಚಿನ ಸ್ವಾತಂತ್ರ್ಯಾಭಿಲಾಷೆ ನಮ್ಮಲ್ಲಿ ಮೂಡಿದಾಗಲೂ ನಾವು ಬಯಸುವುದು ಲೌಕಿಕ ಸ್ವಾತಂತ್ರ್ಯವಲ್ಲ, ಆದರೆ ಮಾನಸಿಕವಾದ, ಆಧ್ಯಾತ್ಮಿಕವಾದ, ಭಾವನಾತ್ಮಕವಾದ ಸ್ವಾತಂತ್ರ್ಯವೆಂದು ಸೂಚಿತವಾಗುತ್ತದೆ. ಸ್ವಾತಂತ್ರ್ಯದ ಈ ಭೇದವನ್ನು ನಾವು ಗುರುತಿಸಿದಾಗ ನಮ್ಮ ದೈಹಿಕ ಮತ್ತು ಲೌಕಿಕ ಪರಿಮಿತಿಗಳೇನೂ ಅಂಥ ಹಿಂದೆ ಜಗ್ಗುವ ಶಕ್ತಿಗಳಲ್ಲ ಎಂದು ನಮಗೆ ತಿಳಿಯತೊಡಗುತ್ತದೆ. ಏಕೆಂದರೆ ಅಡ್ಡಗಾಲು ಹಾಕುತ್ತವೆಂದು ಕಾಣಿಸುವ ಈ ಪರಿಮಿತಿ-ನ್ಯೂನತೆಗಳೇ ಮಾನಸಿಕ ಮತ್ತು ಆಧ್ಯಾತ್ಮಿಕ ಪ್ರಗತಿಗೆ ಪ್ರೇರಕವಾಗವುವು.

ಮುತ್ತಿನ ಚಿಪ್ಪಿನಲ್ಲಿರುವ ಒಂದೇ ಒಂದು ಉಸುಬಿನ ಕಣದ ಘರ್ಷಣೆಯಿಂದ ಒಂದು ಮುತ್ತು ಹೇಗೆ ಹುಟ್ಟುವುದೋ ಹಾಗೆಯೆ ಮನುಷ್ಯನ ಜೀವನದ ತಾಪತ್ರಯಗಳು ಮಹಾಹಿತಕಾರಿಯಾದ ಉನ್ನತ ತತ್ತ್ವಧ್ಯೇಯಗಳ ಉಗಮಕ್ಕೆ ಪ್ರಚೋದಕವಾಗಬಲ್ಲವು.

ಆದ್ದರಿಂದ, ಮಾನಸಿಕಶಕ್ತಿಗಳ ಕಾರ್ಯಕ್ಕಾಗಿ ಹೆಚ್ಚಿನ ಸ್ವಾತಂತ್ರ್ಯವನ್ನು ಹೇಗೆ ಸಂಪಾದಿಸಬೇಕು, ಕಾರಣ-ಪರಿಣಾಮಗಳ ಹೆಚ್ಚಿನ ಜ್ಞಾನವನ್ನು ಹೇಗೆ ಸಂಪಾದಿಸಬೇಕು ಮತ್ತು ಮಾನಸಿಕವಾಗಿ ಹೇಗೆ ಸ್ವತಂತ್ರನಾಗಬೇಕು ಎಂಬುದನ್ನೆ ಮನುಷ್ಯ ಈಗ ಕಲಿಯಬೇಕಾಗಿದೆ ಎಂದೆನ್ನಬಹುದು. ಈ ಒಂದು ರೀತಿಯಲ್ಲೆ ಅವನು ಸ್ವಾತಂತ್ರ್ಯದ ನಿಜಾರ್ಥವನ್ನೂ ಹೆಚ್ಚು ಪರಿಣಾಮಕಾರಿಯಾದ ಸುಖಮಯವಾದ ಜೀವನಕ್ಕೂ ಸ್ವಾತಂತ್ರ್ಯಕ್ಕೂ ಇರುವ ಸಂಬಂಧವನ್ನೂ ಅರಿತುಕೊಳ್ಳಬಹುದು. ★


ಆಧುನಿಕ ಮನೆಗಳಲ್ಲಿ ಸರ್ಫ್...
'ಹೊಸ ಕ್ರಮಗಳನ್ನು ಅನುಸರಿಸಿರಿ...'
ಎಂದು ಓರ್ವ ಬಂಗಾಳಿ ಗೃಹಿಣಿ ಶ್ರೀಮತಿ ನಂದಿತಾ ರಾಯ್ ಹೇಳುತ್ತಾರೆ.
'ಉದಾಹರಣೆಗೆ ಸರ್ಫನ್ನೇ ತೆಗೆದುಕೊಳ್ಳಿರಿ. ಆದನ್ನು ನಾನು ಚೆನ್ನಾಗಿ ಉಪಯೋಗಿಸಿ ನೋಡಿದ್ದೇನೆ. ಈಗ ನಾನು ಎಲ್ಲ ಬಟ್ಟೆಗಳನ್ನು ಸರ್ಫ್‌ನಿಂದಲೆ ಒಗೆಯುತ್ತೇನೆ' ಶ್ರೀಮತಿ ರಾಯ್‌ಗೆ ಅಭಿರುಚಿ ಇರುವ ವಿಷಯಗಳು ಅನೇಕವಿವೆ. 'ಸರ್ಫ್‌ಗೆ ನಾನು ಋಣಿಯಾಗಿದ್ದೇನೆ. ಆದರಿಂದಾಗಿ ನನಗೆ ಸಮಯ ಉಳಿಯುತ್ತದೆ. ಸರ್ಫ್ ನನ್ನ ಬಟ್ಟೆಗಳಿಗೆ ಅನುಪಮ ಬಿಳುಪನ್ನು ಕೊಡುತ್ತದೆ—ಅತಿ ಸುಲಭವಾಗಿ!'
Surf
Surf
FOR THE CLEANEST WASH EVER!
ಸರ್ಫ್ ನಿಮ್ಮ ಬಟ್ಟೆಗಳಿಗೆ
ಅನುಪಮ ಬಿಳುಪು ಬರುವಂತೆ ಒಗೆಯುತ್ತದೆ
ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ
SU. 21-X29 KN

ಯಾವ ದಂತಕಥೆಯನ್ನೂ ಮೀರುವ
ಈ ದಂತಕಥೆ ದಂತಕಥೆಯಲ್ಲ

ಕೃತ್ರಿಮ ದಂತಕಥೆ

ದಂತ ವೈದ್ಯರು ಒದಗಿಸುವ ಸುಂದರ ಮತ್ತು ವಾಸ್ತವ ಹಲ್ಲುಗಳಂತೆಯೆ ಕಾಣುವ ಕೃತಕ ಹಲ್ಲು ಸೆಟ್ಟುಗಳನ್ನಿಟ್ಟುಕೊಂಡು ಮೆರೆಯುವ ಇಂದಿನವರಿಗೆ ಕೇವಲ ನೂರೇ ವರ್ಷಗಳ ಹಿಂದೆ ಹಲ್ಲುಗೇಡಿಗಳ ಅಧ್ವಾನದ ಕಥೆ ಗೊತ್ತಿರಲಿಕ್ಕಿಲ್ಲ. ಆಗ ಅವರು ಸ್ವಂತದ ಹಲ್ಲು ಹೋದರೆ ಸತ್ತವರ ಹಲ್ಲುಗಳನ್ನು ಹಾಕಿಸಿಕೊಂಡು ಮೆಲುಕಾಡಿಸುತ್ತಿದ್ದರು !

೧೯ ನೇ ಶತಮಾನದ ಆದಿಭಾಗದಲ್ಲಿ ವಾಟರ್‌ಲೂ ಕಾಳಗವಾಯಿತು ಅಲ್ಲಿ ನೆಪೋಲಿಯನ್ನನ ಕತೆ ಮುಗಿಯಿತು. ಆದರೆ ಹಲ್ಲುಗೇಡಿ ಶ್ರೀಮಂತರಿಗೆ ಅದೊಂದು ಹೊಸ ಹುರುಪನ್ನು ತಂದಿತು. ಬ್ರಿಟನ್ನಿನ ಹಲ್ಲಿನ ಡಾಕ್ಟರರು ಹಲ್ಲುಗಳು ಬೇಕೆಂದು ಸಾರಿದರು. ಕಟುಕರು ರಣರಂಗಕ್ಕೆ ಧಾವಿಸಿದರು. ಅದೋ ಯಾರೊ ಸತ್ತರು. ಇವರು ಹೋಗಿ ಹಿಡಿದರು. ಹಲ್ಲು ಕಿತ್ತುಕೊಂಡರು. ವೈದ್ಯರಿಗೆ ತಂದುಕೊಟ್ಟರು. ಲಾಭಕರ ಉದ್ಯೋಗ ಬೆಳೆಯಿತು.

ಬ್ರಾನ್ಸ್‌ಬಿ ಕೂಪರ್ ಎಂಬ ಸರ್ಜನರೊಬ್ಬರ ಮುಂದೆ ಬಟ್ಲರ್ ಎಂಬೊಬ್ಬಾತ ಹೇಳಿದ್ದನಂತೆ: "ಯಾಕೆ ಸ್ವಾಮಿ ಚಿಂತಿಸುತ್ತೀರಿ ? ಒಂದು ಯುದ್ಧವಾಗಲಿ, ಅತ್ತ ಹೆಣಾ ಬೀಳಲಿ ; ಇಲ್ಲಿ ಹಲ್ಲು ನಿಮ್ಮ ಕೈಗೆ ಬಂದುವು ಅಂತ ತಿಳೀರಿ !" ಅದರಂತೆ ಆತ ಹಲ್ಲು ಮಾರಿಯೆ ೬೦೦ ಪೌಂಡು ಗಳಿಸಿಡನಂತೆ !

ಹೇಗಾದರೂ ಸಿಕ್ಕ ಹಲ್ಲುಗಳನ್ನು ಉಳಿದ ಹಲ್ಲುಗಳೊಂದಿಗೆ ಇಟ್ಟು ಹೊಡೆದು ಕೂಡಿಸುವುದು ರೂಢಿಯಾಗಿತ್ತು. ಮುಂದೆ 'ಜೀವಂತ' ಹಲ್ಲುಗಳನ್ನು ಕೂಡಿಸುವ ಹೊಸ ಕ್ರಮವೊಂದನ್ನು ದಂತ ವೈದ್ಯರು ಪ್ರಾರಂಭಿಸಿದರು. ಅವರು ಸಶಕ್ತ ಬಡ ತರುಣ ತರುಣಿಯರ ಹಲ್ಲುಗಳನ್ನು ಕಿತ್ತುಕೊಂಡು ಹಲ್ಲಿಲ್ಲದ ಶ್ರೀಮಂತರ ದವಡೆಯಲ್ಲಿ ಕೂಡಿಸುತ್ತಿದ್ದರು. ಮುಂದಿನ ಹಲ್ಲು ಮಾರುವವರಿಗೆ ಒಂದೊಂದು ಹಲ್ಲಿಗೆ ನಾಲ್ನಾಲ್ಕು ಗಿನಿ ವರೆಗೆ ಬೆಲೆ ಕೊಡುತ್ತಿದ್ದರು. ಒಂದು ಹಲ್ಲು ಸರಿಯಾದ ಅಳತೆಯದು ಹೊಂದದಿದ್ದರೆ ಅದನ್ನು ಬಿಟ್ಟು ಬೇರೊಬ್ಬನ ಹಲ್ಲನ್ನು ಕೀಳುತ್ತಿದ್ದರು. ಹಲ್ಲು ಮಾರುವವರು ತಮ್ಮ ಕಿತ್ತ ಹಲ್ಲು ಗಿರಾಕಿಯ ಬಾಯಿಗೆ ಸರಿಯಾದ ಅಳತೆಯವಾಗುವವೊ ಇಲ್ಲವೊ ನೋಡಲು ಹಲ್ಲು ಕೊಟ್ಟೂ ಕಾಯಬೇಕಾಗುತ್ತಿತ್ತು !

ಅಪಘಾತವಾದವರ, ಇಲ್ಲವೆ ರೋಗಿಗಳ ಹಲ್ಲುಗಳನ್ನು ಅವರು ಎಚ್ಚರದಪ್ಪಿ ಬಿದ್ದಾಗ ಕಿತ್ತುಕೊಳ್ಳುವ ಡಾಕ್ಟರರಿದ್ದರು. ಈ ಹಲ್ಲಿನ ಜೊತೆ ರೋಗಗಳು ಸಾಂಸರ್ಗಿಕವಾಗಿ ಹೋಗುತ್ತಿದ್ದವು. ಹತ್ತರಲ್ಲಿ ಇಬ್ಬರು ಪಲ್ಲು ಹಾಕಿಸಿಕೊಂಡವರು ಸಾಯುತ್ತಲೂ ಇದ್ದರು. ಆದರೂ ಹೊಸ ಹಲ್ಲು ಹಾಕಿಸಿಕೊಳ್ಳುವ ಹವ್ಯಾಸ ಕಡಿಮೆಯಾಗಲಿಲ್ಲ.

ಕೃತ್ರಿಮ ಹಲ್ಲಿನ ಕತೆಯ ಪ್ರಾರಂಭ ನೆಪೋಲಿಯನನಿಗಿಂತ ಹಳೆಯದು. ರೋಮನ್ ಕವಿ ಮಾರ್ಶಲ್—ಎಂಬಾತ ತನ್ನ ಕಾಲದ

ಈ. ಎಸ್. ಟರ್ನರರ ಲೇಖದ ಆಧಾರ

'ರಾತ್ರಿ ಹಲ್ಲು ತೆಗೆದಿಡುವ ಫ್ಯಾಶನೇಬಲ್ ಪರಿಚಾರಿಕೆ'ಯರನ್ನು, ಹಾಸ್ಯ ಮಾಡುತ್ತಿದ್ದನಂತೆ.

೧೭ನೇ ಶತಮಾನದ ಕೊನೆಯಲ್ಲಿ ಹಲ್ಲಿನ ಪೂರಾ ಸೆಟ್ಟುಗಳು ಬ್ರಿಟನ್ನಿನಲ್ಲಿ ಬಳಕೆಯಲ್ಲಿ ಬರಲಾರಂಭಿಸಿದ್ದವು. ಆಗ ಅದು ಹೊಸದು. ಅದಕ್ಕೆ ಜಾಹಿರಾತು ಮಾಡುತ್ತಿದ್ದರು. "ನೋಡಿರಯ್ಯ, ಈ ಹುಲ್ಲುಗಳು. ಇವು ನೈಸರ್ಗಿಕ ಎಲ್ಲ, ಕೃತ್ರಿಮವೆಂದು ಯಾರೂ ಕಂಡು ಹಿಡಿಯಲಾರರು." ಲಂಡನ್ನಿನ ವಾಚ್ಸ್ ಎಂಬ ವೈದ್ಯ ತನ್ನ ಹಲ್ಲು ರಾತ್ರಿ ಕಿತ್ತಿಡಬೇಕಿಲ್ಲ ಎಂದು ಹೇಳಿ "ಹಲ್ಲು ಮಾತಿಗೊಂದು ಅಲಂಕಾರ" ಎಂದು ಹುರಿದುಂಬಿಸುತ್ತಿದ್ದ.

ಈ ಸೆಟ್ಟುಗಳನ್ನು ಆನೆಯ ಹಲ್ಲಿನಿಂದಲೋ, ನೀರ್ಗುದುರೆಯ ಕೋರೆಯಿಂದಲೋ, ಎತ್ತಿನ ಎಲುಬಿನಿಂದಲೊ ಕೊರೆದು ತಯಾರಿಸುತ್ತಿದ್ದರು. ಮೇಣದಲ್ಲಿ ಹಲ್ಲು ಕೂಡಿಸುವ ವಿಧಾನ ಬಳಕೆಗೆ ಬರುವ ಮುಂಚೆ ಕಂಪಾಸಿನಿಂದ ಮುಖದ ಅಳತೆ ಮಾಡಿಕೊಂಡು ತಂತಿಗಳಿಂದ ಬಿಗಿದು ಇಲ್ಲವೆ ವಸಡೆಯಲ್ಲಿ ಚುಚ್ಚಿ ಹೊಲಿದು ಹಲ್ಲು ಕೂಡಿಸುತ್ತಿದ್ದರು. ಒಟ್ಟಿನ ಮೇಲೆ ಇಲಿಯ ಬಲೆಯನ್ನೇ ಬಾಯಲ್ಲಿ ಇಟ್ಟುಕೊಂಡಂತಿರುತ್ತಿತ್ತು. ಆಗಿನ ರೀತಿ!

ಅಮೇರಿಕೆಯ ಪ್ರಥಮ ಅಧ್ಯಕ್ಷ ವಾಶಿಂಗ-ಟನ್ನನೇ ಈ ಕೃತ್ರಿಮ ಹಲ್ಲುಗಳಿಂದಾಗಿ ತುಂಬ ಕಷ್ಟಪಟ್ಟಿದ್ದಾನೆ. ಅವನ ಒಂದು ಹಲ್ಲಿನ ಸೆಟ್ಟು ನೀರ್‌ಗುದುರೆಯ ಕೋರೆಯದಿತ್ತು. ಅದು ಅವನಿಗೆ ಅಪಾಯಕರವಾಗಿದ್ದಾಗ ಆತ ತನ್ನ ದಂತವೈದ್ಯನ ಹತ್ತಿರ ಹೋದ. ವೈದ್ಯ "ನೀವು ಬಹಳಷ್ಟು ಪೋರ್ಟ್ ಮದ್ಯ ಸೇವಿಸಿ ನಿಮ್ಮ ಹಲ್ಲುಗಳನ್ನು ಕಪ್ಪು ಮಾಡಿಕೊಂಡಿದ್ದೀರಿ" ಎಂದು ಹೇಳಿ ಬೆದರಿಸಿದನಂತೆ.

ಅಧ್ಯಕ್ಷರ ಕತೆಯೆ ಹೀಗಾದ ಮೇಲೆ ಸಾಮಾನ್ಯರ ಪಾಡೇನು? ನೀರ್ಗುದುರೆಯ ಹಲ್ಲುಗಳಿಂದ ತಾನೇ ಬೇಸತ್ತ ಒಬ್ಬ ಫ್ರೆಂಚ್ ದಂತ ವೈದ್ಯ ಡುಚೆಟ್ಯೂ ಎಂಬಾತ ತನಗಾಗಿ ಚೀನೀ ಮಣ್ಣಿನ ಹಲ್ಲುಗಳನ್ನು ತಯಾರಿಸಿಕೊಂಡ ಆದರವು ಗಟ್ಟಿಯಾಗಿರಲಿಲ್ಲ. ಮುಂದೆ ರತ್ನದ ವ್ಯಾಪಾರಿಗಳು ಹಲ್ಲಿನ ಸೆಟ್ಟಿಗಾಗಿ ಬಂಗಾರದ 'ತಟ್ಟೆ'ಗಳನ್ನು ಮಾಡತೊಡಗಿದರು. ತಗಡುಗಳನ್ನು ವಸಡಿಗೆ ಸರಿಯಾಗುವಂತೆ ಮಣಿಸಿ ಒತ್ತಿ ಕೂಡಿಸುವುದು ಗೊತ್ತಾದ ಮೇಲೆ ಡಾಕ್ಟರರು ಹೊಸದೊಂದು ಪ್ರಚಾರ ಪ್ರಾರಂಭಿಸಿದರು. "ತಂತಿ,-ಚುಚ್ಚಬೇಕಾಗಿಲ್ಲ; ಹೊಸ ಶೋಧ!'

ಮುಂದೆ ಚಾರ್ಲ್‌ಸ್ ಗುಡೀಯರ್ ಎಂಬವರು ರಬ್ಬರಿನಿಂದ ಈ 'ತಟ್ಟೆ'ಗಳನ್ನು ತಯಾರಿಸಿದರೆ ಅಪಾಯ ತಪ್ಪುವುದೆಂದು ತೋರಿಸಿಕೊಟ್ಟರು.

೧೯೦೦ ರಷ್ಟೊತ್ತಿಗೆ ಡಾಕ್ಟರರು ಒಂದು ಗಿನಿಗೆ (೧೬ ರೂಪಾಯಿ) ಒಂದು ಸೆಟ್ಟು ಕೊಡುವಷ್ಟು ಸುಧಾರಣೆಯಾಯಿತು. ಆಗಿನ ಜಾಹೀರಾತಿದು "(ಹಲ್ಲಿಲ್ಲದ್ದರಿಂದ) ನೀವು ನಗಲಿಕ್ಕೆ ಹೆದರುತ್ತೀರಾ? ಹಾಗಾದರೆ ನಮ್ಮ ಹಲ್ಲು ಕೊಳ್ಳಿ!" ಆದರೆ ಇದು ಇಷ್ಟೇ ಅಲ್ಲ; ಮುಂಬರಿದು ಒಬ್ಬಾತ, "ನೀವು ಲಗ್ನವಿಲ್ಲದೇ ಸಾಯಬಯಸುತ್ತೀರಾ?" ಎಂದೂ ರಮಣಿಯರಿಗೆ ಕೇಳಿಬಿಟ್ಟಿದ್ದ. ಅದೇಕೆ ನೆಪೋಲಿಯನ್ ಈ ಹಲ್ಲು ಉಪಯೋಗಿಸಿದ್ದರೆ ಇಷ್ಟು ಬೇಗ ಸಾಯುತ್ತಿದ್ದಿಲ್ಲ ಎಂದೂ ಸಾರಿದನೊಬ್ಬ.

ಕೃತಕ ಹಲ್ಲುಗಳು ನೈತಿಕ ಸಮಸ್ಯೆಗಳನ್ನೂ ಉಂಟುಮಾಡಿದವು. "ಗರ್ಲ್ಸ್ ಓನ್ ಪೇಪರ್" ಎಂಬ ಪತ್ರಿಕೆಗೆ ಒಬ್ಬ ವಾಚಕ, "ಕುವರಿಯರು ತಮ್ಮ ಲಗ್ನವಾಗುವ ವರೆಗೂ ತಮ್ಮ ವರನಿಗೆ ತಮ್ಮ ಹಲ್ಲು ಕೃತ್ರಿಮವೆಂದು ಹೇಳದೇ ಹೋಗುವುದು ನೀತಿಯಾದೀತೆ?" ಎಂದು ಕೇಳಿದ್ದ. ಅದಕ್ಕೆ ಆ ಪತ್ರಿಕೆಯ ಸಂಪಾದಿಕೆ, "ಅದು ಅಪ್ರಾಮಾಣಿಕತೆ ಏನೂ ಆಗದು!" ಎಂದು ಉತ್ತರಿಸಿದಳು

ಇಂದಿನ ಸುಧಾರಣೆಯಲ್ಲಿ ಕೃತ್ರಿಮ ಹಲ್ಲುಗಳ ಉಪಯೋಗ ಹತ್ತರಷ್ಟು ಮುಂದುವರಿದಿದೆ. ಆದರೆ ಏನಿದ್ದರೂ ಹೋರಾಡಬೇಕಾದದ್ದು ಇದ್ದ ಹಲ್ಲು ಕೀಳಲಿಕ್ಕಲ್ಲ; ಉಳಿಸಲಿಕ್ಕೆ. ಅಲ್ಲವೆ? ★



ಒಬ್ಬ ಮಹಿಳೆ
ಏಕಾಕಿನಿಯಾಗಿ
ಉತ್ತರಧ್ರುವದೊಡನೆ
ಹೋರಾಡಿದಳು

ಪತಿಪ್ರೇಮದಿಂದ ಆರ್ಕ್‌ಟಿಕ್‌ಗೊಂದು ಮಾರ್ಗ

ಗಂಗಾಧರ

ಈಗೊಂದು ನೂರು ವರ್ಷಗಳ ಹಿಂದೆ ಬರ್ಫಾಚ್ಛಾದಿತವಾದ ಸಮುದ್ರ ತೀರಕ್ಕೆ ಸಾಗಿ ಬಂದ ಜನವಿರಹಿತವಾದ ಹಡಗೊಂದನ್ನು ಎಸ್ಕಿಮೊ ಜನರ ತಂಡವೊಂದು ಅಂಜುತ್ತಂಜುತ್ತಲೇ ಏರಿತು. ಅವರಲ್ಲಿ ಕೆಲವರು ಹಡಗಿನ ಕೆಳಭಾಗವನ್ನ ತಲುಪಿದಾಗ ಅಲ್ಲಿ ಕತ್ತಲೆಯಿರುವುದನ್ನು ಕಂಡು ಬೆಳಕು ಬರಲೆಂದು ಹಡಗದ ಮಗ್ಗಲಿನ ಹಲಗೆಯನ್ನು ಕೊರೆದು ಒಂದು ಕಿಂಡಿಯನ್ನು ಮಾಡಿದರು. ಇಂಥ ಹಡಗುಗಳ ವಿಚಾರ ಅವರಿಗೆ ಗೊತ್ತಿರಲಿಲ್ಲ. ಕಿಂಡಿಯೊಳಗಿಂದ ಬೆಳಕಿನ ಬದಲು ನೀರು ನುಗ್ಗಿ ಬಂದು ಆ ಹಡಗ ಜಲಸಮಾಧಿ ಹೊಂದಿತು.

ಆ ಎಸ್ಕಿಮೊ ಜನರ ಮಟ್ಟಿಗೆ ಇದೇನೂ ಅನಾಹುತವೆನಿಸಲಿಲ್ಲ. ಆದರೆ ಇಂಗ್ಲಂಡಿನಲ್ಲಿದ್ದ ಮಹಿಳೆಯೊಬ್ಬಳು ಈ ಘಟನೆಯಿಂದ ತುಂಬ ವಿವಂಚನೆಗೊಳಗಾಗುವಂತಾಯಿತು. ಈ ಹಡಗಿನ ಶೋಧಕ್ಕಾಗಿಯೆ ಅವಳು ತನ್ನ ಸರ್ವಸ್ವವನ್ನೂ ಮೀಸಲಾಗಿಟ್ಟಿದ್ದಳು. ಏಕೆಂದರೆ ಅವಳ ಗಂಡ ಸರ್ ಜಾನ್ ಇದೇ ಹಡಗಿನಲ್ಲಿ ಆರ್ಕಟಿಕ್ ಪ್ರದೇಶದ ವಾಯುವ್ಯ ದಿಕ್ಕಿನಲ್ಲಿ ಹಡಗು ಪ್ರಯಾಣಕ್ಕೆಂದು ಹಾದಿಯನ್ನು ಶೋಧಿಸಲು ಹೊರಟಿದ್ದ. ಆದರೆ ಅವನು ತಿರುಗಿ ಬಂದಿರಲಿಲ್ಲ. ಹಡಗಿನ ಸಮಾಚಾರವೂ ಬಂದಿರಲಿಲ್ಲ.

ಮೂರುನೂರಾಐವತ್ತು ವರ್ಷಗಳಿಂದಲೂ ಇಂಥ ಹಾದಿಯೊಂದನ್ನು ಹುಡುಕುವ ಪ್ರಯತ್ನ ನಡೆದಿತ್ತು, ಅಯಶಸ್ವಿಯಾಗಿತ್ತು. ಆರ್ಕಟಿಕ್ ಪ್ರದೇಶಕ್ಕೆ ಮೂರು ಬಾರಿ ಹಡಗಿನಲ್ಲಿ ಹೋಗಿ ಬಂದ ಸರ್ ಜಾನ್ ಈ ಪ್ರಯತ್ನಕ್ಕೆ ತೊಡಗಿದಾಗ, ಇಂಥ ಅನುಭವಸ್ಥ ಹೊರಟ ಮೇಲೆ ಹಾದಿ ಸಿಕ್ಕಂತೆಯೆ ಎಂದು ಜನ ನಂಬಿದ್ದರು. ಅಂತೇ ೧೮೪೫, ಮೇ ತಿಂಗಳಲ್ಲಿ ಒಂದು ಸೋಮವಾರ ಮುಂಜಾನೆ ಥೇಮ್ಸ್ ನದಿಯಲ್ಲಿ ಪ್ರಯಾಣ ಸನ್ನದ್ಧವಾಗಿ ನಿಂತ ಸರ್ ಜಾನರ ಎರಡು ಹಡಗುಗಳನ್ನು ಬೀಳ್ಕೊಡಲು ಇಡೀ ಲಂಡನ್ ನಗ-

ರವೇ ನೆರೆದಂತೆ ಕಂಡಿತ್ತು.

ಬೇಸಿಗೆಯಲ್ಲಿ ಸಮುದ್ರದಲ್ಲಿಯ ಬರ್ಫ ಕರಗಿರುವಾಗ ಆರ್ಕಟಿಕ್‌ನಲ್ಲಿ ಪಶ್ಚಿಮಾಭಿಮುಖವಾಗಿ ಆದಷ್ಟು ದೂರ ಸಾಗಬೇಕು. ಬರ್ಫ ತಮ್ಮನ್ನು ತಡೆಗಟ್ಟಿ ನಿಲ್ಲಿಸಿದಲ್ಲಿ ಚಳಿಗಾಲವನ್ನು ಕಳೆದು ಮತ್ತೆ ಬೇಸಿಗೆ ಪ್ರಾರಂಭವಾದಾಗ ಹೊರಟು ಪ್ಯಾಸಿಫಿಕ್ ಸಾಗರವನ್ನು ಸೇರಬೇಕು ಎಂದು ಜಾನ್ ಫ್ರಾಂಕಲಿನ್ ಯೋಚಿಸಿದ್ದರು.

ಹಡಗುಗಳೇನೊ ಹೊರಟವು. ೧೮೪೫ ಮುಗಿದು ೧೮೪೬ ಬಂತು. ಆ ವರ್ಷವೂ ಬಂದಂತೆಯೆ ಹೋಯಿತು. ಆದರೆ ಫ್ರಾಂಕಲಿನ್ನರ ಹಡಗುಗಳ ಸಮಾಚಾರ ತಿಳಿಯಲಿಲ್ಲ.

ಸರ್ ಜಾನರ ಹೆಂಡತಿ ಜೇನ್ ಎರಡೇ ಬೇಸಿಗೆಗಳಲ್ಲಿ ಆರ್ಕಟಿಕ್ಕನ್ನು ತಾನು ದಾಟಬಹುದು ಎಂದು ಜಾನ್ ನಿರೀಕ್ಷಿಸಿರಲಿಕ್ಕಿಲ್ಲ, ಮೂರನೆಯ ಬೇಸಿಗೆಯಲ್ಲಾತ ಖಂಡಿತವಾಗಿಯೂ ಯಶಸ್ವಿಯಾಗಿ ಮರಳುತ್ತಾನೆ ಎಂದು ಯೋಚಿಸಿ ಮನಸ್ಸನ್ನು ಸಮಾಧಾನಪಡಿಸಿಕೊಳ್ಳುತ್ತಿದ್ದಳು.

೧೮೪೭ರ ಜೂನ್ ತಿಂಗಳು ಬಂತು. ಆರ್ಕಟಿಕ್ ಪ್ರದೇಶದಲ್ಲಿ ಬರ್ಫ ಕರಗಲು ತೊಡಗಿರಬೇಕು. ಹಡಗುಗಳು ಮತ್ತೆ ಚಲಿಸತೊಡಗಿರಬೇಕು ಎಂದು ಜನ ಎಣಿಕೆ ಹಾಕುತ್ತಿದ್ದಂತೆ ಆರ್ಕಟಿಕ್‌ಗೆ ಪ್ರಯಾಣ ಬೆಳೆಸಿದ ತನ್ನ ಗಂಡನ ಸಮಾಚಾರ ಅರುಹಿದವನಿಗೆ ೨೦೦೦ ಪೌಂಡು ಬಹುಮಾನವನ್ನು ಜೇನ್ ಸಾರಿದ್ದಾಳೆಂಬ ವಾರ್ತೆ ಇಡೀ ಇಂಗ್ಲಂಡಿನಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿತು.

ನೌಕಾಪಡೆಯ ಅಧಿಕಾರಿಯೊಬ್ಬ ಫ್ರಾಂಕಲಿನ್ನರ ಮನೆಗೆ ಧಾವಿಸಿ ಹೇಳಿದ "ಅಮ್ಮಾ, ನಿಮ್ಮ ಪತಿ ಹೋಗಿ ಬಹಳ ದಿನಗಳಾದವು. ಅವರು ನಾಶವಾಗಿದ್ದಾರೆ ಎಂದೇನಾದರೂ ನೀವು ತಿಳಿದಿಲ್ಲವಷ್ಟೆ?"

ಜೇನ್ ಆಗ ಉತ್ತರವಿತ್ತಳು: "ಇದನ್ನು ಬೇಕಾದರೆ ಹೆಂಡತಿಯ ಅಳ್ಳೆದೆಯ ಸೂಚನೆ ಎನ್ನಿ. ಆದರೆ ನನ್ನ ಗಂಡ ವಿಪತ್ತಿನಲ್ಲಿದ್ದಾನೆಂದು ಖಂಡಿತ ಹೇಳಬಲ್ಲೆ. ಯಾರಿಗೂ ಇದುವರೆಗೆ ಹೇಳದಿದ್ದ ಸಂಗತಿಯೊಂದನ್ನು ಈಗ ನಿಮಗೆ ಹೇಳುತ್ತೇನೆ, ಕೇಳಿ. ಹೊರಡುವ ಹಿಂದಿನ ದಿನ ಅವರು ಇಲ್ಲಿ ಇದೇ ಸೋಫಾದ ಮೇಲೆ ಕುಳಿತಿದ್ದರು. ತಮ್ಮೊಡನೆ ಒಯ್ಯುವ ಧ್ವಜವನ್ನು ನಾನೇ ತಯಾರಿಸಬೇಕು ಎಂದು ಅವರು ಹೇಳಿದ್ದರಿಂದ ನಾನು ಧ್ವಜವನ್ನು ಹೊಲಿಯುತ್ತ ಕುಳಿತಿದ್ದೆ. ನಾನು ಒಮ್ಮೆ ಸಹಜ ತಲೆಯೆತ್ತಿ ನೋಡಿದಾಗ ಅವರಿಗೆ ನಿದ್ದೆ ಹತ್ತಿರುವುದನ್ನು ಕಂಡೆ. ಅವರು ಅದೇ ತಾನೇ ಇನ್‌ಫ್ಲುಯೆಂಝಾ ಜ್ವರದಿಂದ ಎದ್ದಿದ್ದರು. ಹವೆ ತಂಪಾಗಿತ್ತಾದ್ದರಿಂದ ನಾನು ಧ್ವಜದ ಮೂಲೆಯೊಂದನ್ನು ಅವರ ಕಾಲುಗಳಿಗೆ ಹೊದಿಸಿದೆ. ನನ್ನ ಸ್ಪರ್ಶ ಅವರನ್ನು ಎಚ್ಚರಿಸಿರಬೇಕು. ಅವರು ಧಕ್ಕೆ ತಗಲಿದವರಂತೆ ಕಣ್ಣು ಬಿಟ್ಟರು. ಮುಖದ ಮೇಲೆ ಭಯದ ವಿಕಾರ ಮೂಡಿತ್ತು. ನನಗೆ ಕೇಳಿಸಿತೊ ಇಲ್ಲವೊ ಎನ್ನುವಷ್ಟು ಮೆಲು ಧ್ವನಿಯಲ್ಲಿ ಅವರು 'ನನ್ನ ಮೇಲೆ ಧ್ವಜ! ಜೀವಂತ ಮನುಷ್ಯನ ಮೇಲೆ ಧ್ವಜ ಹೊದಿಸುವುದಿಲ್ಲ. ಹೆಣದ ಮೇಲೆ ಹೊದಿಸುತ್ತಾರೆ' ಎಂದರು."

ಆ ಅಧಿಕಾರಿ ಆಗ ಉಪಹಾಸದಿಂದ ನಕ್ಕು "ಮೂಢ ನಂಬಿಕೆಯ ಮಾತು ಇದು. ಈ ಅಗಸ್ಟ್ ತಿಂಗಳು ಮುಗಿಯುವುದರೊಳಗಾಗಿ ನಿಮ್ಮ ಪತಿ ನಿಮ್ಮೊಡನೆ ಇದೇ ಸೋಫಾದಲ್ಲಿ ಕುಳಿತಿರುತ್ತಾರೆ, ನೋಡಿ ಬೇಕಾದರೆ" ಎಂದ.

ಆದರೆ ಮೂರನೆಯ ವರ್ಷದ ಅಗಸ್ಟ್ ಕಳೆಯಿತು. ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳೂ ಗತಿಸಿದವು. ಸರ್ ಜಾನರು ಮಾತ್ರ ಬರಲಿಲ್ಲ ಅವರ ಸುದ್ದಿಯೂ ತಿಳಿಯಲಿಲ್ಲ.

ಅವರ ಶೋಧಾರ್ಥ ಒಂದು ಪರಿಹಾರ ಪಥಕವನ್ನು ಕಳುಹಿಸಲು ಜೇನಳು ನೌಕಾಪಡೆಯ ವರಿಷ್ಠರಿಗೆ ವಿನಂತಿ ಮಾಡಿಕೊಂಡಳು. ಅವರು ಕೂಡ ಇಷ್ಟೊತ್ತಿಗೆ ಗಾಬರಿಯಾಗಿದ್ದುದರಿಂದ ಈ ವಿನಂತಿಯನ್ನು ಮನ್ನಿಸಿದರು.

೧೮೪೮, ಮಾರ್ಚ್ ತಿಂಗಳಲ್ಲಿ ಒಂದು, ಮೇ

ತಿಂಗಳಲ್ಲಿ ಮತ್ತೆರಡು ಶೋಧಕ ಪಥಕಗಳು ಹೊರಟವು. ಗಂಡನ ಶೋಧಾರ್ಥ ಹೊರಟ ಪ್ರತಿಯೊಂದು ಹಡಗಿನ ಜೊತೆಗೂ ಜೇನ್ ಒಂದು ಪತ್ರವನ್ನೂ ಕಳಿಸಿದ್ದಳು. ಆ ಪತ್ರಗಳು ಬಹು ಹೃದಯವಿದ್ರಾವಕವಾಗಿದ್ದಂತೆ ಒಂದು ಅಪೂರ್ವವಾದ ಸೊಬಗನ್ನೂ ಹೊಂದಿದ್ದವು. "ಪ್ರಿಯತಮಾ, ನನ್ನ ಹಣೆಯಲ್ಲಿ ಬರೆದಿರುವ ಎಂಥ ದುಃಖವನ್ನಾದರೂ ಎದುರಿಸುವ ಬಲವನ್ನು ತಂದುಕೊಳ್ಳಲು ಯತ್ನಿಸುತ್ತಿದ್ದೇನೆ. ಆದರೆ ಹೃದಯೇಶ್ವರಾ, ಈ ಪತ್ರವನ್ನು ನೀವೆಂದಾದರೂ ಓದುವುದಾದರೆ ನನ್ನ ದುಃಖಗಳಲ್ಲಿ ಅತಿ ಹೆಚ್ಚಿನದಾದ ದುಃಖದಿಂದ ನನ್ನನ್ನು ದೇವರು ಉಳಿಸಿದನೆಂದೇ ಹಾಗಾದೀತು. . . ."

ಅವಳು ಬರೆದ ಪತ್ರಗಳು ಆ ಶತಮಾನದ ಅತ್ಯುತ್ತಮ ಲೇಖನಮಾಲೆಯಲ್ಲಿ ಗಣಿಸಲ್ಪಟ್ಟಿವೆ. ಆ ಪತ್ರಗಳ ಶೈಲಿಯ ಶಕ್ತಿ ಕಾಣೆಯಾದವನ ಶೋಧಕ್ಕಾಗಿ ಹಿಂದೆಂದೂ ಹೊರಟಿರದಂಥ ದೊಡ್ಡ ಶೋಧಕ ಪಥಕವೊಂದನ್ನು ಕಳಿಸುವಂತೆ ಬ್ರಿಟಿಶ್ ಸರಕಾರವನ್ನು ಪ್ರೇರೇಪಿಸಿತು. ಇಷ್ಟು ಮಾತ್ರವೇ ಅಲ್ಲ, ಅಮೇರಿಕೆಯ ಅಧ್ಯಕ್ಷ ಝುಕರಿ ಟೇಲರರಿಗೆ ಜೇನ್ ಬರೆದ ಪತ್ರ ಅವರನ್ನೂ ಈ ಕಾರ್ಯಕ್ಕೆ ಕೈಹಚ್ಚುವಂತೆ ಮಾಡಿತು. ಗಂಡಸು ಹೆಂಗಸಿಗೆ ಅಥವಾ ಹೆಂಗಸು ಗಂಡಸಿಗೆ ಇದುವರೆಗೆ ಬರೆದಿರಬಹುದಾದ ಪತ್ರಗಳಲ್ಲೆಲ್ಲ ಇಂಥ ಭಾವಪೂರ್ಣ ಪತ್ರವಿರಲಾರದು ಎಂದು ಹೇಳುತ್ತಾರೆ. ಅವಳ ಪತ್ರಗಳು ರಶಿಯದ ಚಕ್ರವರ್ತಿಯನ್ನೂ ನ್ಯೂಯಾರ್ಕಿನ ಲಕ್ಷಾಧೀಶನೊಬ್ಬನನ್ನೂ ಈ ಶೋಧಕಾರ್ಯದಲ್ಲಿ ಸಹಕರಿಸುವಂತೆ ಮಾಡಿದವು.

ಜೇನ್ ತಾನು ಕೂಡ ಒಂದು ಶೋಧಕ ಪಥಕವನ್ನು ಕಳಿಸಿದಳು. ಅವಳೇನೂ ಲಕ್ಷಾಧೀಶಳಾಗಿರಲಿಲ್ಲ. ಈ ಪಥಕ ಕಳಿಸುವಷ್ಟರಲ್ಲಿ ಅವಳ ಆಸ್ತಿಯೆಲ್ಲ ಕರಗಿತ್ತು. ಸರ್ ಜಾನ್ ಹೋದ ಮೇಲೆ ನಾಲ್ಕನೆಯ ವರ್ಷದ ಅಗಸ್ಟ್ ತಿಂಗಳಲ್ಲಿ ಆರ್ಕಟಿಕ್‌ನಿಂದ ತಿರುಗಿ ಬರುವ ಹಡಗುಗಳು ಹಾಯುವ ಸ್ಥಳವಾದ ಒರ್ಕನೆ ದ್ವೀಪಗಳಿಗೆ ಹೋಗಿ ಒಂದು ಬಡ ಖಾನಾವಳಿಯಲ್ಲಿ ಇರತೊಡಗಿದಳು. ಆದರೆ ಯಾವ ಹಡಗಿನವರೂ ಅವಳಿಗೆ ಬೇಕಾದ ಸುದ್ದಿಯನ್ನು ಹೇಳಲು ಸಮರ್ಥರಾಗಲಿಲ್ಲ.

ಜೇನ್ ಅಪಯಶಸ್ಸಿನಿಂದ ಕಂಗೆಡಲಿಲ್ಲ. ಪ್ರತಿ ಚಳಿಗಾಲದಲ್ಲೂ ಅವಳು ಬೇಡಿ, ಸಾಲ ಮಾಡಿ ಹೊಸ ಪಥಕ ಕಳಿಸಲು ಹಣ ಕೂಡಿಸುತ್ತಿದ್ದಳು. ಆದರೆ ಅವಳು ಕಳಿಸಿದ ಹಡಗುಗಳೆಲ್ಲ ಹೋದಂತೆಯೆ ಮರಳಿ ಬರುತ್ತಿದ್ದುವೇ ವಿನಾ ಸರ್ ಜಾನರ ಸಮಾಚಾರ ತಿಳಿಯುವಲ್ಲಿ ಯಶಸ್ವಿಯಾಗಲಿಲ್ಲ.

೧೮೫೪ ರಲ್ಲಿ ನೌಕಾಪಡೆ ಅಧಿಕೃತವಾಗಿ ಸರ್ ಜಾನ್ ಮತ್ತು ಅವರ ಜನರು ಆರ್ಕಟಿಕ್ ಯಾತ್ರೆಯಲ್ಲಿ ನಾಶವಾದರು ಎಂದು ಪ್ರಕಟಿಸಿತು. ಜನ ಇದನ್ನೊಪ್ಪಿದರೂ ಜೇನ್ ಒಪ್ಪಲಿಲ್ಲ. ಏಕಾಂಗಿಯಾಗಿ ಅವಳು ತನ್ನ ಶೋಧಕಾರ್ಯವನ್ನು ಮುಂದುವರಿಸಿದಳು. ಇಷ್ಟೊತ್ತಿಗೆ ಅವಳ ಮಿತ್ರರು ತಮಗೆ ಸಾಧ್ಯವಾದಷ್ಟು ಹಣ ಒದಗಿಸಿ ಬರಿಗೈಯವರಾಗಿದ್ದರು. ಜೇನ್ ಸಾರ್ವಜನಿಕರಲ್ಲಿ ಬೇಡಿದಳು. ಅವಳ ಅಸಾಮಾನ್ಯ ಪತಿಪ್ರೇಮವನ್ನು ಕಂಡು ಮುಗ್ಧರಾಗಿದ್ದ ಜನ ಪೈ, ಆಣೆ, ರೂಪಾಯಿಗಳೆಂದು ವಂತಿಗೆ ಸಲ್ಲಿಸಿದರು. ೧೮೫೭ ರಲ್ಲಿ ಮತ್ತೂ ಒಂದು ಪಥಕವನ್ನು ಕಳಿಸುವಷ್ಟು ಹಣ ಅವಳಲ್ಲಿ ಕೂಡಿತು.

ಆರ್ಕಟಿಕ್ ಪ್ರವಾಸದ ಅನುಭವವಿದ್ದ ಫ್ರಾನ್ಸಿಸ್ ಮೆಕ್ಲಿಂಟಾಕ್ ಎಂಬಾತನ ನೇತೃತ್ವದಲ್ಲಿ ಈ ಕೊನೆಯ ಶೋಧಕ ಪಥಕ ಹೊರಟಿತು. ಈತನ ಸಮಾಚಾರವೂ ಎರಡು ವರ್ಷಗಳವರೆಗೆ ಬರಲಿಲ್ಲ. ಆದರೆ ಕೊನೆಗೆ ೧೮೫೯ ರ ಸೆಪ್ಟೆಂಬರ್ ತಿಂಗಳಲ್ಲಿ ಲಂಡನ್ ಬಂದರಕ್ಕೆ ಬಂದ ಹಡಗವೊಂದರಿಂದ ಕೃಶಕಾಯನಾದ ವ್ಯಕ್ತಿಯೊಬ್ಬ ಲೇಡಿ ಫ್ರಾಂಕಲಿನ್ನಳ ಮನೆಗೆ ತೆರಳಿದ.

ಆತ ಜೇನಳ ಎದುರಿಗೆ ಮನುಷ್ಯನಿರ್ಮಿತ

ಬರ್ಫದ ಪಿರಾಮಿಡ್ ಒಂದರ ಅಡಿಯಲ್ಲಿ ಸಿಕ್ಕ ಕಾಗದದ ತುಂಡೊಂದನ್ನು ಇಟ್ಟ. ಅದರ ಮೇಲೆ ೧೮೪೮, ಏಪ್ರಿಲ್ ೨೫ ರ ತಾರೀಖು ಇತ್ತು. ಈ ಕಾಗದದ ಆಧಾರದಿಂದ ಕ್ಯಾಪ್ಟನ್ ಮೆಕ್ಲಿಂ-ಟಾಕ್ ಸರ್ ಜಾನರ ಕಥೆಯನ್ನು ಹೆಣೆದಿದ್ದ.

ಸರ್ ಜಾನರ ಹಡಗುಗಳು ಹೊರಟ ಮರುವರುಷ ಬರ್ಫದಲ್ಲಿ ಸಿಕ್ಕುಬಿದ್ದಿದ್ದವು. ವಿಕ್ಟೋರಿಯ ಸ್ಟ್ರೇಟಿನಲ್ಲಿ ಸಿಗಿಬಿದ್ದ ಅವರು ಬೇಸಿಗೆಯ ಹಾದಿ ಕಾಯ್ದರು. ಆದರೆ ಎರಡು ಬೇಸಿಗೆಗಳು ಕಳೆದರೂ ಅವರ ಸುತ್ತ ಇದ್ದ ಬರ್ಫ ಕರಗಲಿಲ್ಲ. ಅಷ್ಟರಲ್ಲಿ ೨೪ ಜನ ಸತ್ತಿದ್ದರು. ಬಳಿ ಇದ್ದ ಆಹಾರಾದಿ ಸಾಮಗ್ರಿಗಳು ತೀರುತ್ತ ಬಂದಿದ್ದವು. ಉಪವಾಸ ಸಾಯುವ ಹೊತ್ತು ಬರಲು ಅವರು ದಕ್ಷಿಣದಲ್ಲಿ ೧೦೦೦ ಮೈಲುಗಳ ಆಚೆ ಇದ್ದ ಮನುಷ್ಯವಸತಿಯ ಸ್ಥಾನಕ್ಕೆ ನಡೆದುಕೊಂಡೇ ಹೋಗಲು ಅಣಿಯಾದರು. ಕಿಂಗ್ ವಿಲಿಯಂ ನಡುಗಡ್ಡೆಯ ದಂಡೆಯಲ್ಲಿ ಅವರು ಬರ್ಫದ ಪಿರಾಮಿಡ್ಡನ್ನು ಕಟ್ಟಿ ಅದರಡಿ ಈ ಸಂಗತಿಗಳನ್ನೆಲ್ಲ ಬರೆದ ಕಾಗದವನ್ನು ಒಂದು ಡಬ್ಬಿಯಲ್ಲಿಟ್ಟು ಅದಕ್ಕೆ ಮುದ್ರೆ ಹಾಕಿ ಇಟ್ಟರು.

ಈ ಜಾಡು ಹಿಡಿದು ಮೆಕ್ಲಿಂಟಾಕ್‌ನ ಜನರು ಅವರ ಶೋಧ ನಡೆಸಿದರು. ಸರ್ ಜಾನರ ಪರಿವಾರದವರ ಅನೇಕ ಸಾಮಾನುಗಳು ಅವರಿಗೆ ಹಾದಿಯಲ್ಲಿ ಕಂಡವು. ಹಡಗಿನಲ್ಲಿದ್ದಾಗಲೇ ಅಂದರೆ ೧೮೪೭, ಜೂನ್ ೧೧ ರಂದು ಸರ್ ಜಾನ್ ಫ್ರಾಂಕ್ಲಿನ್ನರು ಸತ್ತರೆಂದೂ ಅವರನ್ನು ಅವರ ಹೆಂಡತಿ ತಯಾರಿಸಿದ ಧ್ವಜದಲ್ಲಿ ಸುತ್ತಿ ಸಮುದ್ರದಲ್ಲಿ ಹೂಗಿಯಲಾಯಿತೆಂದೂ ಬರ್ಫದ ಅಡಿ ಸಿಕ್ಕ ಕಾಗದಗಳಿಂದ ತಿಳಿಯಿತು. "ನನ್ನ ಗಂಡ ವಿಪತ್ತಿನಲ್ಲಿದ್ದಾನೆ" ಎಂದು ಜೇನ್ ನೌಕಾಪಡೆಯ ಅಧಿಕಾರಿಗಳಿಗೆ ಹೇಳಿದ ತಿಂಗಳಲ್ಲೆ ಸರ್ ಜಾನ್ ಫ್ರಾಂಕ್ಲಿನ್ ಸತ್ತಿದ್ದರು.

ಜೇನಳ ಈ ಪ್ರೇಮಕಥೆ ದುರಂತಕಥೆಯೆನ್ನಬೇಕೇ? ಅವಳು ಹಾಗೆಣಿಸಲಿಲ್ಲ. ಅವಳು ಕಳಿಸಿದ ಶೋಧಕರು ಅವಳ ಗಂಡನನ್ನು ತಂದುಕೊಡಲಾರದೆ ಹೊದರೂ ೩೫೦ ವರ್ಷಗಳಿಂದ ಜನ ಕಂಡು ಹಿಡಿಯಲು ತವಕಪಡುತ್ತಿದ್ದ ಆರ್ಕಟಿಕ್ ಪ್ರದೇಶಕ್ಕೆ ವಾಯುವ್ಯ ದಿಕ್ಕಿನ ಮಾರ್ಗವನ್ನು ಕಂಡುಹಿಡಿದಿದ್ದರು. ★



ಎಲ್ಲರೂ ಎಲ್ಲವನ್ನೂ ತಿಳಿದಿರುವುದಿಲ್ಲ. — ವಿಶಾಖದತ್ತ

ಎಲ್ಲರೂ ತಮ್ಮನ್ನು ಚಂದವವರೆಂದು ತಿಳಿದುಕೊಳ್ಳುತ್ತಾರೆ. — ಕಾಳಿದಾಸ

ಕರ್ಮದಲ್ಲಿ ಮಾತ್ರ ನಿನಗೆ ಅಧಿಕಾರ. ಫಲದಲ್ಲಿಲ್ಲ. — ಶ್ರೀಕೃಷ್ಣ

ಕೆಸರನ್ನು ಮೈಮೇಲೆ ಎರಚಿಕೊಂಡು ತೊಳೆಯುವುದಕ್ಕಿಂತ ಅದನ್ನು ಮುಟ್ಟದಿರುವುದೇ ವಾಸಿ. — ಸುಭಾಷಿತ

ಯುಕ್ತಿಯುಕ್ತವಾದ ಮಾತನ್ನು ಯಾರು ಹೇಳಿದರೂ ಹೇಳಿದವನು ಚಿಕ್ಕ ಮಗುವಿರಲಿ, ಗಿಳಿಯೇ ಇರಲಿ— ತೆಗೆದುಕೊಳ್ಳಬೇಕು. — ಸುಭಾಷಿತ


—ಸಂಗ್ರಹ: ಗ ಸು ಉ

ಶವಸಂಸ್ಕಾರದ ನಾನಾ ಬಗೆಗಳು


ಸಂಗ್ರಹ: ಎಂ. ವಿ. ನಾಗರಾಜ್

ಮರಣಾನಂತರ ಶವಸಂಸ್ಕಾರ ಮಾಡುವ ಸಂಪ್ರದಾಯ ಲೋಕದಲ್ಲೆಲ್ಲ ಆಚರಣೆಯಲ್ಲಿದೆ. ವಿವಿಧ ಧಾರ್ಮಿಕ ನಂಬಿಕೆ– ಪದ್ಧತಿಗಳಿಗೆ ಅನುಗುಣವಾಗಿ ಶವಸಂಸ್ಕಾರ ಪದ್ಧತಿಯಲ್ಲಿ ಅಪೂರ್ವ ವೈವಿಧ್ಯವಿದೆ.

ಭಾರತದಲ್ಲಿ ವೇದಕಾಲದಿಂದಲೂ ದಹನ ಕ್ರಿಯೆ ಅತ್ಯಂತ ಪ್ರಚಲಿತ ಪದ್ಧತಿ. ಆದರೆ ಶವವನ್ನು ಕಾಡು ಪ್ರಾಣಿಗಳಿಗೆ ಆಹಾರವಾಗಿ ಕೊಟ್ಟ ಉದಾಹರಣೆಗಳೂ ಹೇರಳವಾಗಿವೆ. ಹೆಣವನ್ನು ಹೂಳುವ ಪದ್ಧತಿಯೂ ಆಚರಣೆಯಲ್ಲಿತ್ತು. ಶವದಾನಿಯಲ್ಲಿ ಶವವನ್ನಿಟ್ಟು ಅದರಲ್ಲಿ ವಸ್ತ್ರಗಳನ್ನೂ ಆಭರಣಗಳನ್ನೂ ಮೃತನ ಪರಲೋಕ ಜೀವನಕ್ಕಾಗಿ ಇಡುತ್ತಿದ್ದರೆಂದು ಅಥರ್ವಣ ವೇದದಿಂದ ತಿಳಿದುಬರುತ್ತದೆ. ಚಿತಾಭಸ್ಮವನ್ನು ಸುರಕ್ಷಿತವಾಗಿಡುವ ಪದ್ಧತಿಯೂ ಇತ್ತು. ದಕ್ಷಿಣ ಭಾರತದಲ್ಲಿ ಶವಗಳನ್ನು ಮದ್ಯದಿಂದ ತೊಳೆಯುತ್ತಿದ್ದರೆಂಬ ಅಂಶ ಬೌದ್ಧ ಗ್ರಂಥಗಳಿಂದ ತಿಳಿದುಬರುತ್ತದೆ. ಶವಗಳನ್ನು ಸ್ಮಶಾನದಲ್ಲಿ ಎಸೆದು ಬರುವ ಸಂಪ್ರದಾಯವೂ ಆಚರಣೆಯಲ್ಲಿತ್ತು.




ಲಾಮಾ ದಹನ



ಪಾರ್ಸಿಗಳ ಪದ್ಧತಿ

ಪ್ರಾಚೀನ ಜೈನರು ಶವಗಳನ್ನು ಕಾಡುಪ್ರಾಣಿಗಳಿಗೆ ಕೊಡುತ್ತಿದ್ದರು; ನಂತರ ದಹನ ಕ್ರಿಯೆಯ ಪದ್ಧತಿ ಆರಂಭವಾಯಿತು. ಮುಸ್ಲಿಮರು ಶವಗಳನ್ನು ಹೂಳುತ್ತಾರೆ. ಮೃತನು ಈ ಸಮಾಧಿಯಲ್ಲಿ ಕುಳಿತು ದೇವದೂತರ ಪ್ರಶ್ನೆಗಳಿಗೆ ಉತ್ತರಿಸುವನೆಂಬುದು ಅವರ ನಂಬಿಕೆ. ಪಾರಸೀ ಜನಾಂಗದವರು ಶವದ ಬಟ್ಟೆಗಳನ್ನು ತೆಗೆದು ನಗ್ನಾವಸ್ಥೆಯಲ್ಲಿ ಗೋಪುರದ ನೆಲದ




ಇಜಿಪ್ತಿನ 'ಮಮ್ಮಿ'

ಮೇಲೆ ಬಿಟ್ಟುಬರುವರು ಹದ್ದು–ಕಾಗೆ–ಗಿಡುಗಗಳಿಗೆ ಶವವನ್ನು ತಿನ್ನಲು ಅನುಕೂಲವಾಗಲೆಂದು ಅವರು ಈ ಪದ್ಧತಿ ಆಚರಿಸುತ್ತಾರೆ.

ಪ್ರಾಚೀನ ಬೆಬಿಲೋನಿಯಾದಲ್ಲಿ ಶವಗಳನ್ನು ದಹಿಸುವ ಪದ್ಧತಿಯೊಂದಿಗೆ, ವಿಶೇಷ ಪೆಟ್ಟಿಗೆಗಳಲ್ಲಿ ಕಾಯ್ದಿಡುವ ಪದ್ಧತಿ ಬಳಕೆಯಲ್ಲಿತ್ತು. ಪ್ರಾಚೀನ ಇಜಿಪ್ಟಿನಲ್ಲಿ ಶವಗಳು ಕೊಳೆಯದಂತೆ ರಕ್ಷಿಸುವ ಅಪೂರ್ವ ಕಲೆಯನ್ನೇ ಸಾಧಿಸಿದ್ದರು. ಇಂದಿಗೂ ಈ ಪದ್ಧತಿ ವಿಜ್ಞಾನಿಗಳಿಗೆ ವಿಸ್ಮಯ ತಂದಿದೆ.

ಆಸ್ಟ್ರೇಲಿಯಾದ ಮೂಲ ನಿವಾಸಿಗಳಲ್ಲಿ ಹೆಣದ ಚರ್ಮವನ್ನು ಸುಲಿದುಬಿಡುವ ರೂಢಿಯಿದೆ. ಪಶ್ಚಿಮ ಆಫ್ರಿಕದ ಜನಾಂಗಗಳಲ್ಲಿ ಹೆಣವನ್ನು ನೀರಿನಲ್ಲಿ ಮುಳುಗಿಸುವುದು ಗೌರವವೆಂದು ತಿಳಿದಿದ್ದಾರೆ. ಚೀನೀಯರು ಶವದ ಸಮ್ಮುಖದಲ್ಲಿ ಸೆರೆ, ಮೇಣದ ಬತ್ತಿ ಮತ್ತು ಆಹಾರ ಸಾಮಗ್ರಿಗಳನ್ನಿಟ್ಟು ಬರುತ್ತಾರೆ. ಟಿಬೆಟ್ಟಿನಲ್ಲಿ ಲಾಮಾ ಗುರುಗಳಿಗೆ ಮಾತ್ರ ದಹನಕ್ರಿಯೆ ನೆರವೇರಿಸುತ್ತಿದ್ದರು. ಶವವನ್ನುದಹಿಸುವ ಮುನ್ನ ತಪಸ್ವೀ ಬುದ್ಧನಂತೆ ಚಿತೆಯ ಮೇಲೆ ಹೆಣವನ್ನು ಕೂಡಿಸುತ್ತಿದ್ದರು.

ಉತ್ತರ ಧ್ರುವದಲ್ಲಿರುವ ಮೂಲ ನಿವಾಸಿಗಳು ಶವಗಳನ್ನು ಎತ್ತರವಾದ ವೃಕ್ಷದ ರೆಂಬೆಗೆ ಕಟ್ಟಿ ಬರುತ್ತಾರೆ. ಆಸ್ಟ್ರೇಲಿಯಾದ ಮೂಲ ನಿವಾಸಿ ಜನಾಂಗವೊಂದರಲ್ಲಿ ಶವಗಳನ್ನು ಹೂಳುವ ಬದಲು ತಿಂದುಬಿಡುವುದು ಧಾರ್ಮಿಕ ಕರ್ತವವೆಂದು ಭಾವಿಸುತ್ತಾರೆ.



ಎಸ್ಕಿಮೊ ಸಂಸ್ಕಾರ

ಅಮೇರಿಕಾದ "ಹುರೋನ್" ಪಂಗಡದವರು ಶವಗಳನ್ನು ವಿಶೇಷ ಮಂದಿರದಲ್ಲಿ ಇಟ್ಟುಬಿಡುತ್ತಾರೆ; ಹನ್ನೆರಡು ವರ್ಷಗಳ ನಂತರ ಶವದ ಅಸ್ಥಿಗಳನ್ನು ಶುದ್ಧಮಾಡಿ ಹೊಸ ಬಟ್ಟೆಯಲ್ಲಿಟ್ಟು ಮನೆಗೆ ತರುತ್ತಾರೆ. ಮನೆಯಲ್ಲಿ ಅದನ್ನೆ ಪ್ರದರ್ಶಿಸಿ ನಂತರ ವಿಜೃಂಭಣೆಯಿಂದ ಆ ಅಸ್ಥಿಗಳನ್ನು ಹೂಳುತ್ತಾರೆ; ಆ ಸಮಾರಂಭದಲ್ಲಿ ಭಾಗವಹಿಸಿದವರಿಗೆ ವಿಶೇಷ ಸತ್ಕಾರ ಮಾಡುತ್ತಾರೆ.

ಆಸಾಂನ "ಗಾರೊ" ಜನಾಂಗದವರು ಶವಗಳನ್ನು ನಾಲ್ಕು ದಿನ ಮನೆಯಲ್ಲಿಟ್ಟಿರುತ್ತಾರೆ. ಐದನೆಯ ದಿನ ಮಧ್ಯರಾತ್ರಿಯಲ್ಲಿ ಶವವನ್ನು ದಹಿಸುತ್ತಾರೆ. ಸತ್ತವನು ಸಾಮಾನ್ಯ ವ್ಯಕ್ತಿಯಾದರೆ ಚಿತೆಯ ಬಳಿ ನಾಯಿಯೊಂದನ್ನು ಬಲಿ ಕೊಡುತ್ತಾರೆ; ಮೃತನು ಶ್ರೀಮಂತನಾದರೆ ಬಲಿಷ್ಠವಾದ ಎತ್ತನ್ನು ಬಲಿ ಕೊಡುತ್ತಾರೆ.

"ಡೋಮ" ಜನಾಂಗದವರು ಶವವನ್ನು ಕಾಡಿನಲ್ಲಿ ಬಿಟ್ಟು ಬರುವುದು ಒಳ್ಳೆಯದೆಂದು ಭಾವಿಸಿದ್ದಾರೆ; ಆ ಜನಾಂಗದಲ್ಲಿ ಕೆಲವು ಪಂಗಡದವರು ಕಾಡಿನಲ್ಲಿ ಸೊಪ್ಪುಗಳಿಂದ ವೇದಿಕೆಯೊಂದನ್ನುನಿರ್ಮಿಸಿ, ಶವವನ್ನು ವೇದಿಕೆಯಲ್ಲಿಟ್ಟು ದಹಿಸುತ್ತಾರೆ; ನಂತರ ಮನೆಗೆ ಹಿಂದಿರುಗುವಾಗ ಹುಲ್ಲಿನ ಗುಡಿಸಲೊಂದನ್ನು ನಿರ್ಮಿಸಿ ಬರುತಾರೆ; ಆ ಪಂಗಡದವರ ಅಭಿಪ್ರಾಯದಲ್ಲಿ ಮೃತನು ಆ ಗುಡಿಸಲಿನಲ್ಲಿ ವಾಸಿಸುವನೆಂಬ ನಂಬಿಕೆಯಿದೆ.

ಕರವಾಲ ಪಂಗಡದಲ್ಲಿ ಶವಗಳ ಮೇಲೆ ನಾಣ್ಯಗಳನ್ನಿಡುವ ಪದ್ಧತಿ ಆಚರಣೆಯಲ್ಲಿದೆ. ದಹನಕ್ರಿಯೆ ಮಾಡುವಾಗ ಶವದ ಮುಖವನ್ನು

ಪೂರ್ವ ದಿಕ್ಕಿಗೂ ಕಾಲುಗಳನ್ನು ಪಶ್ಚಿಮ ದಿಕ್ಕಿಗೂ ತಿರುಗಿಸಿ ಇಡುತ್ತಾರೆ. ಮೃತನಾದವನ ತಾಯಿ ಶವಸಂಸ್ಕಾರ ನಡೆಸಬೇಕು. ಗೋಂಡ ಜನಾಂಗದವರು ಶವಗಳನ್ನು ಹೂಳುತ್ತಿದ್ದರು; ಈಗ ದಹಿಸುವ ಪದ್ಧತಿ ಆಚರಿಸುತ್ತಾರೆ. ಸ್ವರ್ಗ ಉತ್ತರ ದಿಕ್ಕಿನಲ್ಲಿವೆ ಎಂಬುದು ಅವರ ಭಾವನೆಯಾದುದರಿಂದ ಶವವನ್ನು ದಹಿಸುವಾಗ ಕಾಲುಗಳನ್ನು ಉತ್ತರ ದಿಕ್ಕಿಗೆ ತಿರುಗಿಸಿ ಇಡುತ್ತಾರೆ.

ಕೊರವ ಪಂಗಡದಲ್ಲಿ ಮೃತಪಟ್ಟ ವ್ಯಕ್ತಿಯು ಭೂತವಾಗಿ ತಮ್ಮನ್ನು ಹಿಂಸಿಸದಿರಲೆಂದು, ಶವವನ್ನು ಅಂತಿಮ ಸಂಸ್ಕಾರಕ್ಕಾಗಿ ಅಂಕುಡೊಂಕಿನ ಮಾರ್ಗದಲ್ಲಿ ತೆಗೆದುಕೊಂಡು ಹೋಗುತ್ತಾರೆ! ಸಂಸ್ಕಾರದನಂತರ ಹಿಂದಿರುಗುವಾಗ ಆ ಮಾರ್ಗದಲ್ಲಿ ಮುಳ್ಳುಗಳನ್ನಿಟ್ಟು ಬರುತ್ತಾರೆ. *

ಪಾದುಕಾ ಪುರಾಣ

ಸುಪ್ರಸಿದ್ಧ ಬಂಗಾಳಿ ನಾಟಕಕಾರರಾದ ಅರ್ಧೇಂದು ಶೇಖರರನ್ನು ರಂಗಮಂಚದ 'ಸಾಹೇಬರು' ಎಂದು ಕರೆಯುತ್ತಿದ್ದ ಕಾಲವದು. ಅವರ ಕಂಠ ಸ್ವರ ಮತ್ತು ಮುಖಾಕೃತಿಯ ಕಾರಣ ಅವರು ಆಂಗ್ಲ ಅಧಿಕಾರಿಗಳ ಪಾತ್ರ ವಹಿಸುತ್ತಿದ್ದರು.

ಒಮ್ಮೆ 'ನೀಲ ದರ್ಪಣ' ವೆಂಬ ನಾಟಕ ಅಭಿನಯಿಸಲ್ಪಡುತ್ತಿತ್ತು. ನಾಟಕದಲ್ಲಿ 'ನೀಲ್‌ಫರ್' ಸಾಹೇಬರ ಪಾತ್ರವನ್ನು ಯಥಾರೀತಿ ಅರ್ಧೇಂದುಶೇಖರರೇ ವಹಿಸುತ್ತಿದ್ದರು. ದೃಶ್ಯವೊಂದರಲ್ಲಿ, ಕ್ಷೇತ್ರಮಣಿ ಎಂಬ ರೈತಬಾಲಿಕೆ ಒಂಟಿಯಾಗಿರುವುದನ್ನು ಕಂಡು, ನೀಲ್‌ಫರ್ ಸಾಹೇಬರು ಅವಳ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸುತ್ತಿದ್ದರು. ಪ್ರೇಕ್ಷಕವೃಂದ ನೀಲಫರರ ಅಭಿನಯ ನೋಡುವುದರಲ್ಲಿ ತಲ್ಲೀನವಾಗಿತ್ತು. ಆದರೆ ದಯಾಸಾಗರರಾದ ಈಶ್ವರಚಂದ್ರ ವಿದ್ಯಾಸಾಗರರು ಈ ದೃಶ್ಯವನ್ನು ಕಂಡು ಹೆಚ್ಚು ಉತ್ತೇಜಿತರಾಗಿ ಕಾಲಿನಲ್ಲಿದ್ದ ಚಪ್ಪಲಿಯನ್ನು ಕಳಚಿ ಗುರಿಕಟ್ಟಿ ರಂಗಮಂಚದ ಮೇಲಿದ್ದ ನೀಲ್‌ಫರ್ ಸಾಹೇಬರತ್ತ ಎಸೆದರು.

ಆ ಚಪ್ಪಲಿಯನ್ನು ತಲೆಗೆ ತಗಲಿಸುತ್ತ ಅರ್ಧೇಂದು ಶೇಖರರು ತಮ್ಮ ಅಹೋಭಾಗ್ಯವನ್ನು ಕುರಿತು ಇಂತೆಂದರು— "ಇಂದೆನಗೆ ನನ್ನ ಅಭಿನಯದ ಸರ್ವಶ್ರೇಷ್ಠ ಪುರಸ್ಕಾರ ದೊರಕಿತು!"

* * *

ಒಮ್ಮೆ ನೇತಾಜಿ ಸುಭಾಷಚಂದ್ರ ಬೋಸರು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಿದ್ದರು. ಇದ್ದಕ್ಕಿದ್ದಂತೆ ಯಾರೋ ಒಬ್ಬ ದುರುಳ ಅವರತ್ತ ಒಂದು ಚಪ್ಪಲಿ ಎಸೆದನು. ಅದು ನೇತಾಜಿಯವರ ಹತ್ತಿರ ಬಂದು ಬಿದ್ದಿತು. ಅಲ್ಲಿ ನೆರೆದ ಜನರು ಈ ಘಟನೆಯಿಂದ ಬಹಳ ಚಿಂತೆಗೊಂಡರು ಸಭೆಯಲ್ಲಿ ಗಲಿಬಿಲಿ ಹರಡಿತು. ಆದರೆ ನೇತಾಜಿಯವರು ಸ್ವಲ್ಪವೂ ವಿಚಲಿತರಾಗಲಿಲ್ಲ. ಬಾಗಿ ಆ ಚಪ್ಪಲಿಯನ್ನು ಕೈಗೆತ್ತಿಕೊಂಡು ಧೀರ ಗಂಭೀರ ದನಿಯಲ್ಲಿ ಅವರು ನುಡಿದರು— "ಯಾವ ದೇಶದ ಜನತೆ ತಮ್ಮ ಸೇವಕರ ಯೋಗಕ್ಷೇಮದ ಬಗ್ಗೆ ಇಷ್ಟೊಂದು ಗಮನವಿಟ್ಟಿರುತ್ತದೋ ಆ ದೇಶ ನಿಜಕ್ಕೂ ಧನ್ಯವಾದದ್ದು. ಕಾಲ್ನಡಿಗೆಯಲ್ಲಿ ನಡೆಯುವ ನನ್ನಂಥ ಅಲ್ಪನಿಗೆ ಈ ಚಪ್ಪಲಿಯನ್ನು ಕೊಟ್ಟು ಯಾರೋ ಪುಣ್ಯಾತ್ಮರು ಬಹಳ ಉಪಕಾರ ಮಾಡಿದ್ದಾರೆ. . .ಆದರೆ ಈ ಚಪ್ಪಲಿ ಕೇವಲ ಒಂದು ಕಾಲಿನದು ಮಾತ್ರ. ಇದರ ಜೊತೆಯ ಇನ್ನೊಂದು ಚಪ್ಪಲಿಯನ್ನು ಕೊಟ್ಟುಬಿಡಿರೆಂದು ನಾನು ಅವರಲ್ಲಿ ಬಿನ್ನವಿಸಿಕೊಳ್ಳುತ್ತೇನೆ. ಹಾಗೆ ಮಾಡಿದರೆ ಬಹಳ ಉಪಕಾರವಾಗುತ್ತದೆ." —ರಾ. ನಾ. ರತನ್



ಗುರುತ್ವಾಕರ್ಷಣ, ವಿಶ್ವದ
ಗೃಹನಕ್ಷತ್ರಗಳ ಚಲನ
ವಲನ ಇವುಗಳ
ನಿಯಮಗಳನ್ನು ಕಂಡು
ಹಿಡಿದ ಮೇಧಾವಿಯ ಜೀವನ
ಅಷ್ಟು ಸುಖಪೂರ್ಣವಾಗಿರಲಿಲ್ಲ

ಸರ್ ಐಸಾಕ್ ನ್ಯೂಟನ್

ಡಿ. ಎನ್. ಶಂಕರಭಟ್ಟ

೧೬೪೨ ದಶಂಬರ ಇಪ್ಪತ್ತನಾಲ್ಕರಲ್ಲಿ ರಟ್ಲೇಂಡ್‌ಶಯರಿನ ಬಡ ಕುಟುಂಬವೊಂದರಲ್ಲಿ ಜನ್ಮವೆತ್ತಿದ ಗಂಡು ಮಗುವೊಂದು, ಮುಂದೆ ಜಗತ್ತಿನಲ್ಲಿ ಭವ್ಯ ವಿಭೂತಿಯಾಗಿ ಮೆರೆಯಲಿರುವುದೆಂದು ಯಾರೂ ಕನಸಿನಲ್ಲಿಯೂ ನೆನೆಸಿರಲಿಲ್ಲ. ಗಂಡನ ಅಕಾಲ ಮರಣದಿಂದ ವಿಧವೆಯಾದ ಚಿಕ್ಕ ವಯಸ್ಸಿನ ಹ್ಯಾನಳೇ ಆ ಮಗುವಿನ ತಾಯಿ. ವೈಧವ್ಯದ ದುಃಖದೊಡನೆ ಬಡತನದ ಬಳಲಿಕೆಯೂ ಸೇರಿ ಅವಳನ್ನು ಹಣ್ಣು ಮಾಡಿತ್ತು. ಹಾಗಾಗಿ ಹುಟ್ಟಿದ ಮಗುವೂ ಕೂಡ ರೋಗರುಜಿನಗಳತವರುಮನೆಯಾಗಿಯೆ ಲೋಕವನ್ನು ಕಂಡಿತು. ಇಡೀ ದಿನ ಕೂಗುತಿರುವ ಈ ಮಗುವನ್ನು ನೋಡಿಕೊಳ್ಳಲು ತಾಯಿಗೆಲ್ಲಿ ಸಮಯವಿದೆ? ದಿನ ಬೆಳಗಾದರೆ ಹೊಲಕ್ಕೆ ಹೋಗಿ ದುಡಿಯಬೇಕು; ಒಂದಿಷ್ಟು ಸಂಪಾದಿಸಿಕೊಂಡು ಬಂದರೆ ಮಾತ್ರ ಮಗುವಿಗಷ್ಟು ಗಂಜಿ ನೀರು ಕಾಣಿಸಬಹುದು. ಹೇಗೋ ಎರಡು ವರ್ಷಗಳು ಕಷ್ಟದಿಂದುರುಳಿದವು. ಇಷ್ಟರಲ್ಲಿ, ಬಂಧುಗಳ ಒತ್ತಾಯಕ್ಕೊಳಗಾದ ಹ್ಯಾನಳ ಪುನರ್ವಿವಾಹವೂ ನಡೆದುಹೋಯಿತು. ಅವಳು ತನ್ನ ನವೀನ ಪತಿ ಬಾರ್ನಬಾ ಸ್ಮಿತ್‌ನೊಡನೆ ಗಂಡನ ಮನೆಗೆ ನಡೆದಳು.

ತಾಯಿಯಿಂದಗಲಿದ ಈ ಪುಟ್ಟ ಹುಡುಗ ಐಸಾಕ್ ನ್ಯೂಟನ್‌ನು ಅಜ್ಜಿಯ ಪಾಲನೆಯಲ್ಲುಳಿಯಬೇಕಾಯಿತು. ಒಂದು ರೀತಿಯಲ್ಲಿ ಇದವನ ಭಾಗ್ಯವೆಂದೇ ಹೇಳಬೇಕು; ಈ ಅಜ್ಜಿ ತುಂಬ ಒಳ್ಳೆಯವಳು; ಮೊಮ್ಮಗನನ್ನು ಬಹಳವಾಗಿ ಪ್ರೀತಿಸುವಳು; ಮುದ್ದು ಮಾಟ ಮಾಡಿಸಿ


ರೋಗಗಳನ್ನು ನಿವಾರಿಸುವಳು. ಅವಳ ಮಗ ಐನ್‌ಕಾಫನೂ ನ್ಯೂಟನ್‌ನಲ್ಲಿ ತುಂಬ ಆಸಕ್ತಿಯನ್ನು ತೋರಿಸತೊಡಗಿದನು; ಅವನನ್ನು ಶಾಲೆಗೆ ಕಳಿಸಿ ಓದಿಸಬೇಕೆಂದು ತಾಯನ್ನು ಪ್ರೋತ್ಸಾಹಿಸಿದನು. ನ್ಯೂಟನ್‌ನಲ್ಲಿ ಅವನಿಗೇನೋ ಒಂದು ವಿಚಿತ್ರವಾದ ನಂಬಿಕೆ. ಬಹುಶಃ ಆ ನಂಬಿಕೆಯೊಂದಿಲ್ಲದಿದ್ದರೆ, ಭೌತಶಾಸ್ತ್ರದಲ್ಲಿ ಅಷ್ಟೊಂದು ದೊಡ್ಡ ಕ್ರಾಂತಿಯನ್ನು ತಂದು ಜಗದ್ವಂದ್ಯನಾಗಿಬಿಟ್ಟ ನ್ಯೂಟನ್‌ನ ಪ್ರತಿಭೆಯು ಹಳ್ಳಿಯ ಬಡಜನರ ನಡುವೆ ಮುದುಡಿಕೊಂಡಿದ್ದು ಕೊನೆಗೆ ಮಾಯವಾಗಿಬಿಡುತ್ತಿತ್ತು.

ನ್ಯೂಟನ್‌ನ ಬಾಲ್ಯದ ವರ್ತನೆಗಳು ಅಂತಹ ನಂಬಿಕೆಯನ್ನು ಉಳಿಸಿಕೊಳ್ಳುವ ಸ್ಥಿತಿಯಲ್ಲೇನೂ ಇರಲಿಲ್ಲ; ಶಾಲೆಯಲ್ಲಿ ಅವನೊಬ್ಬ ಸಾಧಾರಣ ಹುಡುಗನಂತೆಯೇ ತೋರಿಬರುತ್ತಿದ್ದನು. ಗ್ರಾಮದ ಶಾಲೆಯನ್ನು ಬಿಟ್ಟು ಆರು ಮೈಲು ದೂರದ ಕಿಂಗ್ಸ್ ಸ್ಕೂಲಿಗೆ ಹೋಗತೊಡಗಿದ ಮೇಲೂ ಅವನು ಸೋಮಾರಿಯಾಗಿಯೇ ಉಳಿದಿದ್ದನು. ಓದುವುದರಲ್ಲಿ ಅವನಿಗೆ ಅಭಿರುಚಿಯೇ ಇರಲಿಲ್ಲ. ಆಟದಲ್ಲೂ ಅಷ್ಟೆಯೇ. ಯಾವಾಗಲೂ ತನ್ನಷ್ಟಕ್ಕೆ ಇದ್ದುಬಿಡುತ್ತಿದ್ದನು. ಸಮಯ ಕಳೆಯಲು ಕಿಟಕಿಯಲ್ಲೋ ಬಾಗಿಲಲ್ಲೋ ತನ್ನ ಹೆಸರನ್ನು ಕೆತ್ತುತ್ತಿದ್ದನು.

ಈ ಸಮಯದಲ್ಲಿ, ಒಂದು ಸಣ್ಣ ಘಟನೆ ನಡೆದು ಹೋಗಿ, ನ್ಯೂಟನ್‌ನ ಜೀವನವನ್ನು ಪೂರ್ಣ ಬದಲಾಯಿಸಿ ಬಿಟ್ಟಿತು. ಶಾಲೆಯ ತುಂಟ ಹುಡುಗನೊಬ್ಬನು, ನ್ಯೂಟನ್‌ನನ್ನು ಯಾಕೂ ಬೇಡದ ಹುಡುಗನೆಂದು ಗೇಲಿ ಮಾಡಿ ಬಿಟ್ಟನು. ಥಕ್ಕನೆ ಉರಿದೆದ್ದ ನ್ಯೂಟನ್‌ನು ತನ್ನ ಶಕ್ತಿಯನ್ನೆಲ್ಲ ಉಪಯೋಗಿಸಿ ಅವನನ್ನು ಬೀಳಿಸಿ, ಗುದ್ದಿ, ಹಣ್ಣು ಹಣ್ಣು ಮಾಡಿದನು. ನೆರೆದಿದ್ದ ಹುಡುಗರಿಗೆಲ್ಲ ಆಶ್ಚರ್ಯ. ಈ ಬಡ ಹುಡುಗನು ಕಂಡ ಹಾಗಲ್ಲವೆಂದು ಅವರು ತಮ್ಮೊಳಗೆ ಹೇಳಿಕೊಳ್ಳತೊಡಗಿದರು. ಇಷ್ಟೇ ಅಲ್ಲ; ಅಂದಿನಿಂದ ಕ್ಲಾಸಿನಲ್ಲಿಯೂ ನ್ಯೂಟನ್‌ನು ಸರ್ವ ಪ್ರಥಮವಾಗಿ ಬರತೊಡಗಿದನು. ಈ ಹಟವು ಅವನ ಸೋಮಾರಿತನವನ್ನು ಮುರಿದಿಕ್ಕಿತು.

ನ್ಯೂಟನ್‌ನು ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿದ್ದಾಗ, ಬಾರ್ನಬಾ ಸ್ಮಿತ್‌ನು ತೀರಿಕೊಂಡುದರಿಂದ, ತಾಯಿಯು ಪುನಃ ವಿಧವೆಯಾಗಿ, ಮಗನನ್ನು ಮನೆಗೆ ಕರೆಸಿಕೊಂಡಳು. ನ್ಯೂಟನ್‌ನು ಬೇಸಾಯಕ್ಕೆ ತೊಡಗಿದರೆ, ತನ್ನ ಮೇಲೆ ಸಂಸಾರದ ಹೊರೆ ಹೆಚ್ಚು ಬೀಳಲಾರದೆಂಬುದು ಅವಳ ಅಭಿಪ್ರಾಯವಾಗಿತ್ತು. ಪಿತ್ರಾರ್ಜಿತ ಆಸ್ತಿಯೂ ನ್ಯೂಟನ್‌ನಿಗೆ ಸಾಕಷ್ಟಿತ್ತು. ಆದರೆ, ಬೇಸಾಯವು ಅವನಿಗೆ ಹಿಡಿಸುವ ಕೆಲಸವಾಗಿರಲಿಲ್ಲ. ಹೊಲದಲ್ಲಿರಲಿ, ಮನೆಯಲ್ಲೇ ಇರಲಿ, ಆತನು ಪ್ರಕೃತಿಯ ವಿಚಿತ್ರಗಳನ್ನು ತಲ್ಲೀನನಾಗಿ ನೋಡುತ್ತ, ಕೆಲವೊಮ್ಮೆ ಎಲ್ಲವನ್ನೂ ಮರೆತುಬಿಡುತ್ತಿದ್ದನು. ಯಾವುದೋ ಒಂದು ಅವ್ಯಕ್ತ ಶಕ್ತಿ ಅವನನ್ನು ದೂರ ದೂರ ಕೊಂಡು ಹೋಗುತ್ತಿತ್ತು. ಇದನ್ನೆಲ್ಲ ಕಂಡುಕೊಂಡ ಅವನ ತಾಯಿಯು ಅವನನ್ನು ಪುನಃ ಶಾಲೆಗೆ ಕಳಿಸುವುದೇ ಯೋಗ್ಯವೆಂದು ತೀರ್ಮಾನಿಸಿದಳು. ಬಂಧುಗಳೂ ಇದೇ ಅಭಿಪ್ರಾಯದಲ್ಲಿದ್ದರು. ಅಂತೂ ನ್ಯೂಟನ್‌ನು ೧೬೫೮ ರಲ್ಲಿ ಪುನಃ ಕಿಂಗ್ಸ್ ಸ್ಕೂಲನ್ನು ಸೇರಿದನು. ಅಲ್ಲಿ ಮೂರು ವರ್ಷ ಚೆನ್ನಾಗಿ ಅಭ್ಯಸಿಸಿ ಆದರ್ಶ ಹುಡುಗನೆಂದು ಹೊಗಳಲ್ಪಟ್ಟನು. ಆದರೂ ಉಳಿದವರೊಡನೆ ಕಲೆತು ಸಂತೋಷದಿಂದ ಬಾಳುವ ಭಾಗ್ಯ ಅವನ ಹಣೆಯಲ್ಲಿ ಬರೆದಿರಲಿಲ್ಲ. ಯಾವಾಗಲೂ ಏಕಾಂತದಲ್ಲೇ ಇದ್ದುಕೊಂಡು ಅವನು ಏನನ್ನೋ ಆಲೋಚಿಸುತ್ತಿದ್ದನು. ಆಟ ಆಡುವುದಕ್ಕಿಂತಲೂ ಆಟಿಗೆಗಳನ್ನು ಮಾಡುವುದರಲ್ಲಿ ಅವನಿಗೆ ಆಸಕ್ತಿ ಹೆಚ್ಚು. ಅವನು ರಚಿಸಿದ ಆಟದ ಸಾಮಾನುಗಳು ಅವನ ಪ್ರತಿಭೆಯನ್ನು ಎತ್ತಿ ತೋರಿಸುವಂತಿದ್ದುವು.

ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣನಾದ ನ್ಯೂಟನ್ ಕಷ್ಟದಿಂದ ತಾಯಿಯ ಒಪ್ಪಿಗೆ



ಹಾರುವ ಕುದುರೆ ಛಾಪ್
ಪಂಜಾಬೀ
ಸುವಾಸಿಕ
ನಸ್ಯ
ಸೇದುವುದಕ್ಕೂ,
ಹಲ್ಲು ತಿಕ್ಕುವುದಕ್ಕೂ
ಸರ್ವೋತ್ಕೃಷ್ಟ
ಪಂಜಾಬೀ ನಸ್ಯ ಸುಪ್ರಸಿದ್ಧವಾದ ವಿಜಯಾ
ನಸ್ಯದ ನಿರ್ಮಾಣಕರಿಂದಲೆ
ತಯಾರಿಸಲ್ಪಡುತ್ತದೆ.
ತಯಾರಿಸುವವರು: ವಿಜಯಾ ಸ್ನಫ್ ವರ್ಕ್ಸ್, ಸಾಸ್‌ವಡ್, ಪುಣೆ.
ದರಗಳ ಪಟ್ಟಿ ಮತ್ತು ನಮೂನೆಗಾಗಿ ಬರೆಯಿರಿ.
ಪತ್ರ ವ್ಯವಹಾರವನ್ನು ದಯವಿಟ್ಟು ಇಂಗ್ಲಿಷ್‌ನಲ್ಲಿಯೇ ಮಾಡಿರಿ.

ಯನ್ನು ಪಡೆದು ಕೇಂಬ್ರಿಜ್‌ಗೆ ತೆರಳಿದನು. ಅಲ್ಲಿ ಅವನು ಕ್ಲಾಸಿನಲ್ಲಿ ಪಾಠ ಮಾಡುವುದಕ್ಕಿಂತ ಮೊದಲೇ ಅವನು ಪಠ್ಯಗಳನ್ನೆಲ್ಲ ಅರಗಿಸಿ ಕೊಂಡುಬಿಡುತ್ತಿದ್ದನು. ಓದುವಾಗಲೂ ಸಿಕ್ಕಿದ್ದನ್ನೆಲ್ಲ ಓದುತ್ತಿರಲಿಲ್ಲ. ತನಗೆ ಯಾವ ವಿಭಾಗದಲ್ಲಿ ಅಭಿರುಚಿಯಿದೆಯೋ ಅದನ್ನು ಮಾತ್ರ ಆಳವಾಗಿ ಅಭ್ಯಸಿಸುತ್ತ ಉಳಿದ ಭಾಗದಲ್ಲಿ ಕೆಲ ಪೊಷ್ಮೆ ಏನೂ ಕಲಿಯಲಿಲ್ಲವೆಂಬ ಟೀಕೆಗೂ ಗುರಿಯಾಗುತ್ತಿದ್ದನು. ೧೬೬೫ ರಲ್ಲಿ ನ್ಯೂಟನ್ ಬಿ. ಎ. ಪದವಿಯನ್ನು ಪಡೆದನು. ಅಷ್ಟರಲ್ಲಿ ಪ್ಲೇಗು ರೋಗವು ಲಂಡನ್ನಿನಲ್ಲೆಲ್ಲ ಹಬ್ಬತೊಗಿದ್ದರಿಂದ ಅವನು ತನ್ನ ಶಿಕ್ಷಣವನ್ನು ಮುಂದುವರಿಸಲಾರದೆ ಊರಿಗೆ ಮರಳಬೇಕಾಯಿತು.

ಊರಿನಲ್ಲೂ ಅವನು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಆಕಾಶದ ತಾರೆಗಳನ್ನು ನಿರೀಕ್ಷಿಸುವುದರಲ್ಲೂ ಪ್ರಕೃತಿಯ ವೈವಿಧ್ಯವನ್ನು ಕಾಣುವುದರಲ್ಲೂ ತನ್ನ ಸಮಯವನ್ನು ಕಳೆಯುತ್ತಿದ್ದನು. ಅವನ ದೃಷ್ಟಿಯು ಸಂಶೋಧಕ ದೃಷ್ಟಿಯಾಗಿತ್ತು; ಪ್ರತಿಭೆ ತೀಕ್ಷ್ಣವಾಗಿತ್ತು; ಮನಸ್ಸು ಎಲ್ಲಕ್ಕೂ ಕಾರಣವನ್ನು ಕೇಳುವ ಸ್ವಭಾವದ್ದಾಗಿತ್ತು. ಅವನ ಜೀವನದ ಸಂಶೋಧನೆಗಳಿಗೆಲ್ಲ ಆಧಾರವಾದ ಪಂಚಾಂಗವೊಂದು ಹಳ್ಳಿಯಲ್ಲಿದ್ದಾಗಲೇ ಕಟ್ಟಲ್ಪಟ್ಟಿತು. ಬೀಜಗಣಿತ ಹಾಗೂ ಚಲನ-ಕಲನಗಳಲ್ಲಿ ಕ್ರಾಂತಿಯನ್ನೇ ತಂದ ಕೆಲವು ಮುಖ್ಯ ಸೂತ್ರಗಳನ್ನು ಆಗಲೇ ಅವನ ಮನಸ್ಸು ಸ್ಥೂಲವಾಗಿ ಚಿತ್ರಿಸಿಕೊಂಡಿತ್ತು. ಅವನ ಹೆಸರನ್ನು ಚಿರಸ್ಥಾಯಿಯಾಗಿ ಮಾಡಿದ ಗುರುತ್ವಾಕರ್ಷಣ ನಿಯಮವು ಆಗಲೇ ಒಂದು ನಿಶ್ಚಿತ ರೂಪವನ್ನು ತಳೆದಿತ್ತು.

ಶಿಕ್ಷಣವನ್ನು ಮುಂದುವರಿಸಲಾಗದೆ ಹಳ್ಳಿಯಲ್ಲಿ ಉಳಿದಿದ್ದಾಗ ನ್ಯೂಟನ್ ಇನ್ನೂ ಹಲವಾರು ಸಂಶೋಧನೆಗಳನ್ನು ನಡೆಸಿದನು. ಬೆಳಕಿನ ವಿಷಯದಲ್ಲಿ ಹಲವಾರು ಮಹತ್ವದ ವಿಷಯಗಳನ್ನು ಕಂಡುಕೊಂಡನು. ಮತ್ತು, ಗೆಲಿಲಿಯೋವಿನ ದೂರದರ್ಶಕದಲ್ಲಿ ಸುಧಾರಣೆಗಳನ್ನು ಮಾಡಲು ಪ್ರಯತ್ನಿಸಿದನು. ೧೬೬೭ ರಲ್ಲಿ ಅವನು ಪುನಃ ಕೇಂಬ್ರಿಜ್‌ಗೆ ಹಿಂದಿರುಗಿ ತನ್ನ ಅಭ್ಯಾಸವನ್ನು ಮುಂದುವರಿಸಿದನು. ಅಲ್ಲಿ, ಅವನು ಸಂಶೋಧನಾ ವಿದ್ಯಾರ್ಥಿಯಾಗಿ ನೇಮಕಗೊಂಡುದರಿಂದ ತಾಯಿಗೂ ಹಣ ಸಹಾಯ ಮಾಡಲು ಸಾಧ್ಯವಾಯಿತು. ೬೮ ರಲ್ಲಿ ಎಂ. ಎ. ಪದವಿಯನ್ನು ಪಡೆದನು. ಈ ಸಮಯದಲ್ಲಿ ಅವನು ತನ್ನ ದೂರದರ್ಶಕ ಕಲ್ಪನೆಗಳನ್ನು ವ್ಯವಹಾರಕ್ಕೆ ತಂದು ಒಂದು ಉತ್ತಮವಾದ ಉಪಕರಣವನ್ನು ಸಿದ್ಧಪಡಿಸಿದ್ದನು. ಅದು ಹಲವರ ಹೊಗಳಿಕೆಗೆ ಪಾತ್ರವಾಯಿತು. ಈಗಲೂ ಅದನ್ನು ರಾಯಲ್ ವಿಜ್ಞಾನ ಸಂಸ್ಥೆಯಲ್ಲಿ ಕಾಣಬಹುದು.

೧೬೬೯ ರಲ್ಲಿ ಬ್ಯಾರೋ ತಮ್ಮ ಕೆಲಸದಿಂದ ನಿವೃತ್ತರಾಗಲು, ನ್ಯೂಟನ್‌ನು ಗಣಿತ ಶಾಸ್ತ್ರದ ಅಧ್ಯಾಪಕನಾಗಿ ಆರಿಸಲ್ಪಟ್ಟನು. ಅಲ್ಲಿಂದ ಅವಿಚ್ಛಿನ್ನವಾಗಿ ಮೂವತ್ತೊಂದು ವರ್ಷಗಳ ಕಾಲ ಅವನ ಸೇವೆಯನ್ನು ಟ್ರಿನಿಟಿ ಕಾಲೇಜು ಅನುಭವಿಸಿತು. ನ್ಯೂಟನ್‌ನ ಪ್ರತಿಭೆಯನ್ನರಿತುಕೊಂಡ ರಾಯಲ್ ವಿಜ್ಞಾನ ಸಂಸ್ಥೆಯು ಅವನನ್ನು ತನ್ನ ಸದಸ್ಯನನ್ನಾಗಿ ಮಾಡಿಕೊಂಡಿತು. ಅದರ ಮೂಲಕ ನ್ಯೂಟನ್‌ನು ಹಲವಾರು ಶ್ರೇಷ್ಠ ತರಗತಿಯ ವೈಜ್ಞಾನಿಕ ಪ್ರಬಂಧಗಳನ್ನು ಪ್ರಕಟಿಸಿದನು. ೧೬೮೭ ರಲ್ಲಿ ಅವನ ಮಹಾಗ್ರಂಥ "ಪ್ರಿನ್ಸಿಪಿಯ" ಅಚ್ಚು ಕೂಟದಿಂದ ಹೊರಬಿದ್ದಿತು. ಈ ಗ್ರಂಥದ ಪ್ರಕಟನೆಗೆ ನ್ಯೂಟನ್‌ನ ಪರಮಭಕ್ತನಂತಿದ್ದ ಹ್ಯಾಲಿ ಎಂಬ ತರುಣ ವಿಜ್ಞಾನಿಯ ನಿಃಸ್ವಾರ್ಥ ಸೇವೆಯೇ ಮೂಲ ಕಾರಣವಾಗಿತ್ತು. ನ್ಯೂಟನ್ನನ ಗ್ರಂಥದ ಮಹಿಮೆಯನ್ನರಿತಿದ್ದ ಹ್ಯಾಲಿಯು ಬಹಳ ಬಡವನಾಗಿದ್ದರೂ ಕೂಡ, ಪ್ರಕಟನೆಯ ಭಾರವನ್ನು ಹೊತ್ತುಕೊಳ್ಳಲು ಮುಂದೆ ಬಂದಿದ್ದನು. ಅದೊಂದು ದೊಡ್ಡ ಕಥೆ.

ನ್ಯೂಟನ್‌ನೊಬ್ಬ ಕೀರ್ತಿಯ ಹುಚ್ಚನಾಗಿರಲಿಲ್ಲ, ಸಮಾಜ ಕೊಡುವ ಉಪದ್ರವವನು ಅವ

ಸೆಂದಿಗೂ ಸಹಿಸಲಾರನು. ತನ್ನಷ್ಟಕ್ಕೆ ಸಂಶೋಧನೆಗಳನ್ನು ಮಾಡಿಕೊಂಡಿರುವುದು ಅವನಿಗೆ ತುಂಬ ಇಷ್ಟವಾಗಿತ್ತು. ಹಾಗೆಂದು, ತನ್ನ ಸಂಶೋಧನೆಯ ಫಲವನ್ನು ಇನ್ನೊಬ್ಬನು ಕಸಿದುಕೊಳ್ಳಲು ಪ್ರಯತ್ನಿಸಿದಲ್ಲಿ ನ್ಯೂಟನ್‌ನು ಬಿಟ್ಟುಕೊಡುವನೆಂದರ್ಥವಲ್ಲ. ತನ್ನ ಸಮಕಾಲೀನನಾಗಿದ್ದ ಹೂಕನು ಗುರುತ್ವಾಕರ್ಷಣೆಯ ನಿಯಮವನ್ನು ತಾನೂ ಕಂಡು ಹಿಡಿದಿರುವನೆಂದು ವಾದಿಸಹೊರಟಾಗ, ನ್ಯೂಟನ್‌ನು ಕೋಪೋದ್ರಿಕ್ತನಾಗಿ, ಅವನನ್ನು ಖಂಡಿಸಿ, ವಾಚಾಮಗೋಚರವಾಗಿ ಬಯ್ಯತೊಡಗಿದನು. ಅವರು ಪರಸ್ಪರ ಹಳಿದುಕೊಳ್ಳಲು ಉಪಯೋಗಿಸಿದ ಶಬ್ದಗಳು ವಿಜ್ಞಾನಿ ಕುಲಕ್ಕೇ ಕಳಂಕ ತರುವಂತಿದ್ದವು. ಈ ಕಲಹವನ್ನು ನಿಲ್ಲಿಸಲು ಹ್ಯಾಲಿಯೇ ಮಧ್ಯಸ್ಥನಾಗಿ ಬರಬೇಕಾಯಿತು. ಇಂತಹ ಸಂದರ್ಭಗಳು ನ್ಯೂಟನ್‌ನ ಜೀವನದಲ್ಲಿ ಹಲವಾರು ಬಂದು ಹೋಗಿದ್ದುವು. ನ್ಯೂಟನ್ ಒಬ್ಬ ಮುಂಗೋಪಿ; ಥಕ್ಕನೆ ಕೋಪಿಸಿಕೊಳ್ಳುವ ಸ್ವಭಾವ ಅವನದು. ಇದಕ್ಕೆ ಕಾರಣ ಬಹುಶಃ ಅವನು ಜೀವಿಸುತ್ತಿದ್ದ ಕ್ರಮದಲ್ಲಿ ಅಡಗಿದೆ.

ಅವನು ಆಜೀವ ಬ್ರಹ್ಮಚಾರಿಯಾಗಿದ್ದುಕೊಂಡು, ತನ್ನ ಜೀವನವನ್ನೆಲ್ಲ ವಿಜ್ಞಾನಕ್ಕೆ ಧಾರೆಯೆರೆದವನು; ಟ್ರಿನಿಟಿ ಕಾಲೇಜಿನ ಹತ್ತಿರವಿದ್ದ ಕೋಣೆಯೊಂದರಲ್ಲಿ ಏಕಾಕಿಯಾಗಿ ವಾಸಿಸುತ್ತಿದ್ದನು. ಪುಸ್ತಕಗಳನ್ನೋದುವುದರಲ್ಲಿ, ವೈಜ್ಞಾನಿಕ ಉಪಕರಣಗಳನ್ನು ರಚಿಸುವುದರಲ್ಲಿ, ರಾತ್ರಿ ಹಗಲು ತನ್ನ ದೂರದರ್ಶಕದಲ್ಲಿ ಕಣ್ಣಿಟ್ಟು ಆಕಾಶವನ್ನು ನಿರೀಕ್ಷಿಸುವುದರಲ್ಲಿ ಅವನ ಸಮಯ ಕಳೆಯುತ್ತಿತ್ತು. ತಾರುಣ್ಯದ ಸ್ಫೂರ್ತಿಯಿಂದ ಭೋಗಗಳನ್ನನುಭವಿಸುತ್ತ ಸಮಾಜದಲ್ಲಿ ನಲಿಯುವ ಬದಲು, ಅವನು ನಿದ್ದೆಗೆಟ್ಟುಕೊಂಡು ಸಂಶೋಧನೆಗಳನ್ನು ನಡೆಸುತ್ತಿದ್ದನು. ಬಟ್ಟೆಬರೆಗಳ ಮೇಲೆ ಅವನ ಗಮನವೇ ಇರಲಿಲ್ಲ. ಮಾಸಿದ ಹರಕು ಅಂಗಿಗಳನ್ನು ಸಿಕ್ಕಿಸಿಕೊಂಡು ಬೂಟ್ಸಿನ ಹೊರಗೆ ಬೆರಳುಗಳನ್ನು ತೋರಿಸುತ್ತ ಮಾರ್ಗದಲ್ಲಿ ನಡೆಯುತ್ತಿದ್ದನು. ಅವನ ಕ್ಲಾಸುಗಳೂ ಹಾಗೆಯೇ. ಕೆಲವೊಮ್ಮೆ ತರಗತಿಯಲ್ಲಿ ವಿದ್ಯಾರ್ಥಿಗಳೇ ಇರುತ್ತಿರಲಿಲ್ಲವಂತೆ. ಆಗ ನ್ಯೂಟನ್ ಗಂಭೀರವಾಗಿ ತನ್ನ ಕೋಣೆಗೆ ಹಿಂತಿರುಗುತ್ತಿದ್ದನಂತೆ! ಹೊಟ್ಟೆಯ ಮೇಲೂ ಅವನದೇ ಪ್ರಯೋಗ ನಡೆಯುತ್ತಿತ್ತು. ಕಿತ್ತಳೆಹಣ್ಣಿನ ಸಿಪ್ಪೆಯನ್ನು ನೀರಲ್ಲಿ ಕುದಿಸಿ ಒಂದಿಷ್ಟು ಸಕ್ಕರೆ ಬೆರಸಿ, ಬೆಳಗ್ಗೆ ಕಾಫಿಗೆ ಬದಲು ಕುಡಿಯುತ್ತಿದ್ದನು! ಮೂವತ್ತನೆಯ ವಯಸ್ಸಿನಲ್ಲಿಯೇ ನಿಃಶಕ್ತಿ ತೋರತೊಡಗಿದ್ದನ್ನು ಕಂಡು, ಅವನು ತನಗೆ ಕ್ಷಯ ರೋಗ ಬಂತೆಂದು ಹೆದರಿಕೊಂಡಿದ್ದನು. ಮತ್ತು ಅದಕ್ಕಾಗಿ ವಿಚಿತ್ರವಾದ ಔಷಧಿಗಳನ್ನು ಸೇವಿಸುತ್ತಿದ್ದನು. ಶೀತಜ್ವರ ಬಂದಾಗ, ತನ್ನಲ್ಲಿರುವ ಬಟ್ಟೆಗಳನ್ನೆಲ್ಲ ಹೊದ್ದುಕೊಂಡು ಚೆನ್ನಾಗಿ ಬೆವರು ಬರುವಂತೆ ಬೆಚ್ಚಗೆ ಮಲಗಿಕೊಳ್ಳುತ್ತಿದ್ದನು. ಹೀಗೆ ಬೇರೆ ಬೇರೆ ರೋಗಗಳಿಗೆ ಅವನು ಮಾಡಿದ ಔಷಧಗಳ ಪಟ್ಟಿಯನ್ನು ಈಗಲೂ ಕಾಣಬಹುದು. ಅವನ ಜೀವನದಲ್ಲಿ ಸ್ವಲ್ಪವೂ ಕ್ರಮವಿರಲಿಲ್ಲ. ತನ್ನ ನಿರಂತರ ಅಭ್ಯಾಸಗಳ ನಡುವೆ ಹಸಿವನ್ನು ಹಿಂಗಿಸಿಕೊಳ್ಳುವುದಕ್ಕಾಗಿ ಏನನ್ನಾದರೂ ಸ್ವಲ್ಪ ಬೇಯಿಸಿ ಹೊಟ್ಟೆಗೆ ಹಾಕಿಕೊಳ್ಳುತ್ತಿದ್ದನು.

ಅವನ ಈ ತೆರದ ಅಪೂರ್ಣಜೀವನಕ್ಕೆ ಕಾರಣವನ್ನು ಕಂಡುಹಿಡಿಯಲು ಯಾರಿಗೂ ಸಾಧ್ಯವಾಗಿಲ್ಲ. ಬಾಲ್ಯದಲ್ಲಿ ಹುಡುಗಿಯೊಬ್ಬಳನ್ನು ಪ್ರೀತಿಸಿದ್ದನಾದರೂ ಅನಂತರ ಅವಳನ್ನು ಮದುವೆಯಾಗಲು ಹೋಗಲಿಲ್ಲ. ಅವಳನ್ನು ಸಲುಹಲು ತನ್ನ ಸಂಬಳ ಸಾಲದೆಂದು ಅವನು ತಿಳಿದುದೇ ಇದಕ್ಕೆ ಕಾರಣವಾಗಿರಲೂ ಸಾಕು. ಅವಳು ಅನಂತರ ಒಂದಲ್ಲ, ಮೂರು ಲಗ್ನಗಳನ್ನು ಮಾಡಿಕೊಂಡಿದ್ದಳು. ತನ್ನ ಅರುವತ್ತಮೂರನೆಯ ವರ್ಷದಲ್ಲಿ ನಾರಿಸ್ ಎಂಬವನಿಗೆ ಕಾಗದ ಬರೆದು ಅವಳನ್ನು ಲಗ್ನವಾಗುವ ಆಸೆಯನ್ನು ನ್ಯೂಟನ್ ತೋರಿಸಿದ್ದನಂತೆ. ಅವಳಾದರೋ ಹಲವರನ್ನು ಮದುವೆ


ನಿಮ್ಮ ಮನೆಯಿಂದ ನೋವನ್ನು ನಿವಾರಿಸಲು...
ತಲೆನೋವು
ಮೈಕೈನೋವು
ಮುಟ್ಟಿನ ದಿನಗಳು
ಸಾರಿಡಾನ್ ಉಪಯೋಗಿಸಿರಿ
ತಲೆನೋವು, ಮೈಕೈನೋವು, ಹಲ್ಲುನೋವು, ಮೈಬಿಸಿ
ಯಾಗುವುದು, ಅಸ್ವಸ್ಥತೆ ಇತ್ಯಾದಿಗಳಿಂದ ನಿಮ್ಮ
ಮನೆಯವರು ಯಾರಾದರೂ ಕಷ್ಟ ಪಡುವಾಗ
ಅವರಿಗೆ ಸಾರಿಡಾನ್ ಕೊಡಿರಿ ... ಅವರಿಗೆ
ಶೀಘ್ರವಾಗಿ, ನಿರಪಾಯಕರವಾಗಿ ಮತ್ತು
ನಿಶ್ಚಯವಾಗಿ ಉಪಶಮನವುಂಟಾಗುವುದು.
ಸಾರಿಡಾನ್ ವಿಶ್ರಾಂತಿಯನ್ನು ಮತ್ತು
ಉಲ್ಲಾಸವನ್ನು ಕೂಡ ನೀಡುತ್ತದೆ!
ದೊಡ್ಡವರಿಗೆ ಒಂದು ಮಾತ್ರೆ
ಮತ್ತು ಮಕ್ಕಳಿಗೆ ½ ರಿಂದ
¼ ಮಾತ್ರೆ ಸಾಕು.
Saridon
JWT-VT-2008
Saridon
ಒಂದೇ ಒಂದು ಮಾತ್ರೆ ಸಾಕು
ಒಂದು ಮಾತ್ರೆಗೆ 13 ನಯೆ ಪೈಸೆ
'ರೋಶ್' ಉತ್ಪಾದನ ಸೋಲ್ ಡಿಸ್ಟ್ರಿಬ್ಯೂಟರ್ಸ್ : ವೋಲ್ಟಾಸ್ ಲಿಮಿಟೆಡ್


ಯಾಗಿದ್ದಳು, ಮತ್ತು ಅವಳ ಗಂಡಂದಿರಲ್ಲಿ ಕೆಲವರು ಇನ್ನೂ ಬದುಕಿ ಉಳಿದಿದ್ದರು. ಈ ಸಂಗತಿಯು ನಿಜವಾದರೆ, ಆ ವೃದ್ಧಾಪ್ಯದಲ್ಲಿ ನ್ಯೂಟನ್‌ನಿಗೆ ಮದುವೆಯ ಆಸೆ ಏಕೆ ಹುಟ್ಟಿತೋ ಹೇಳಬರುವುದಿಲ್ಲ. ಅದರಲ್ಲೂ ಅಷ್ಟು ಲಗ್ನಗಳನ್ನು ಮಾಡಿಕೊಂಡು, ಒಬ್ಬನೊಡನೆಯೂ ಸುಖದಿಂದ ಬಾಳಲಾರದ ನಾರಿಸ್‌ಳನ್ನೇಕೆ ಆರಿಸಿಕೊಂಡನೋ! ಅಂತೂ ಅವನು ಅವಿವಾಹಿತನಾಗಿಯೇ ಉಳಿದನೆಂಬುದು ನಿಜ.

ನ್ಯೂಟನ್ ತನ್ನ ಸಂಶೋಧನೆಗಳಿಂದ ಜಗತ್ತಿನಲ್ಲೆಲ್ಲ ಪ್ರಸಿದ್ಧನಾಗಿದ್ದರೂ ಅವನ ಜೀವನ ದುಃಖಮಯವಾಗಿತ್ತು. ವಿಜ್ಞಾನದ ಉಪಕರಣಗಳಿಗಾಗಿ ಬಹಳಷ್ಟು ಖರ್ಚುಮಾಡುವ ಅವನಿಗೆ ಹಣದ ಅಡಚಣೆಯೂ ಹೇಳಲಾಗದಷ್ಟಿತ್ತು. ಕಾಲೇಜಿನಲ್ಲಿ ದೊರೆವ ಸಂಬಳವು ಎಷ್ಟುಮಾತ್ರಕ್ಕೂ ಸಾಲುತ್ತಿರಲಿಲ್ಲ. ಅದರ ಮೇಲೆ, ಕೇಳಿದವರಿಗೆಲ್ಲ ಮನಬಂದಂತೆ ದಾನ ಮಾಡಿಬಿಡುವ ಸ್ವಭಾವದ ಅವನಿಗೆ, ತನ್ನ ಅವಶ್ಯಕತೆಗಳನ್ನು ಪೂರೈಸುವುದು ತುಂಬ ಕಷ್ಟವಾಗುತ್ತಿತ್ತು. ಪಾಂಡಿತ್ಯದಲ್ಲಿ ತನ್ನಿಂದ ಎಷ್ಟೋ ಪಾಲು ಕೆಳಗಿರುವ ಜನರು ದೊಡ್ಡ ಅಧಿಕಾರದಲ್ಲಿದ್ದುಕೊಂಡು ಸಂತೋಷಪಡುತ್ತಿರುವುದು ಅವನ ಕಣ್ಣನ್ನು ಕುಕ್ಕುತ್ತಿತ್ತು.

ವಿಶ್ರಾಂತಿಯನ್ನು ತೆಗೆದುಕೊಂಡು ಆರಾಮವಾಗಿರಬೇಕಾದ ಈ ಸಮಯದಲ್ಲಿ ನ್ಯೂಟನ್ ಪಡುವ ಕಷ್ಟವನ್ನು ಕಂಡು, ಅವನ ಮಿತ್ರರಲ್ಲೊಬ್ಬನಾದ ಮಾಂಟೆಗೋ ತುಂಬ ಮರುಗಿದನು. ಮತ್ತು ಅದಕ್ಕೊಂದು ಉತ್ತಮ ನಿವಾರಣೆಯನ್ನು ಕಂಡುಕೊಂಡನು. ಮಾಂಟೆಗೋವಿನ ಸಹಾಯದಿಂದ ನ್ಯೂಟನ್ ಇಂಗ್ಲೆಂಡಿನ ಟಂಕಸಾಲೆಯ ಪಾರುಪತ್ಯಗಾರನಾಗಿ ನೇಮಿಸಲ್ಪಟ್ಟನು. ಇದು ಅವನಿಗೆ ಜೀವನದಲ್ಲಿ ಅದುವರೆಗೆ ದೊರಕದ ಸುಖವನ್ನು ತಂದಿತ್ತಿತು ಮಾತ್ರವಲ್ಲ, ಅವನ ಪ್ರತಿಭೆಯು ಹೊಸತೊಂದು ಮುಖವನ್ನು ಪ್ರಕಾಶಿಸಿತು. ತುಂಬ ಕೀಳು ಮಟ್ಟದಲ್ಲಿದ್ದ ಟಂಕಸಾಲೆಯು ಸ್ವಲ್ಪವೇ ಸಮಯದಲ್ಲಿ ನ್ಯೂಟನ್‌ನ ಶ್ರದ್ಧೆ ಹಾಗೂ ಚಾತುರ್ಯಗಳಿಂದ ತುಂಬ ಮೇಲಕ್ಕೆ ಬಂದಿತು. ಇದರಿಂದ ತೃಪ್ತಿಗೊಂಡ ಜನತೆ, ನ್ಯೂಟನ್ನನನ್ನು ಟಂಕಸಾಲೆಯ ಮುಖ್ಯಾಧಿಕಾರಿಯನ್ನಾಗಿ ನಿಯಮಿಸಿತು.

ಹೀಗೆ ನ್ಯೂಟನ್‌ನ ಜೀವನದಲ್ಲಿ ಪ್ರವೇಶಿಸಿದ ಸುಖ ಕೊನೆಯವರೆಗೂ ಉಳಿಯಿತು. ಸಂಬಳವು ಧಾರಾಳವಾಗಿ ಸಿಗುತ್ತಿದ್ದುದರಿಂದ ಅವನೊಂದು ಉತ್ತಮವಾದ ಮನೆಯನ್ನು ಕೊಂಡುಕೊಂಡನು. ತನ್ನ ತಂಗಿಯ ಮಗಳಾದ ಕ್ಯಾಥರೀನಳನ್ನೂ ತನ್ನಲ್ಲಿಗೆ ಬರಮಾಡಿಕೊಂಡನು. ಅವಳು ಅವನ ಪ್ರೀತಿಯ ಪುತ್ರಿಯಾಗಿ ಮನೆಕೆಲಸಗಳನ್ನು ನೋಡಿಕೊಂಡು ಇರತೊಡಗಿದಳು. ನ್ಯೂಟನ್‌ನು ತನ್ನ ಮುಂದಿನ ಆಯುಸ್ಸನ್ನೆಲ್ಲ ಜಗದ್ವಂದ್ಯ ವಿಜ್ಞಾನಿಯಾಗಿ ಸುಖದಿಂದ ಕಳೆದನು. ಟಂಕಸಾಲೆಯ ಅಧಿಕಾರಿಯಾಗಿದ್ದರೂ ಅವನು ತನ್ನ ಸಂಶೋಧನೆಗಳನ್ನು ಮರೆಯಲಿಲ್ಲ. ಬೇರೆ ಬೇರೆ ವಿಧದಿಂದ ತರುಣ ವಿಜ್ಞಾನಿಗಳಿಗೆ ತನ್ನ ಸಹಾಯವನ್ನೊದಗಿಸುತ್ತಿದ್ದನು. ರಾಯಲ್ ವಿಜ್ಞಾನ ಸಂಸ್ಥೆಯ ಅಧ್ಯಕ್ಷಪದವಿಯೂ ಅವನಿಗೆ ದೊರೆತಿತ್ತು.

ಆದರೆ, ೧೭೨೬ ರಿಂದ ಅವನ ದೇಹಸ್ಥಿತಿಯು ಕೆಡುತ್ತ ಬಂದಿತು. ೨೭ ರ ಮಾರ್ಚಿ ೩ ರಂದು ವಿಜ್ಞಾನಿ ಸಂಸ್ಥೆಯ ಸಭೆಯೊಂದಕ್ಕೆ ಅಧ್ಯಕ್ಷನಾಗಿ ಹೋಗಿದ್ದವನು ಹಿಂದೆ ಬಂದವನೇ ಮೂತ್ರವ್ಯಾಧಿಯಿಂದಾಗಿ ಬಳಲತೊಡಗಿದನು. ಕೆಲವು ದಿನಗಳ ನಂತರ ರೋಗ ಗುಣವಾದಂತೆ ತೋರಿಬಂದರೂ ಪುನಃ ಉಲ್ಬಣಿಸಿತು. ಮಾರ್ಚ್ ೧೮ ರಂದು ಇದ್ದಕ್ಕಿದ್ದಂತೆ, ಅವನ ಪ್ರಜ್ಞೆ ಇಲ್ಲದಾಯಿತು. ಹೀಗೆಯೇ ಒಂದೆರಡು ದಿನ ಹಾಸಿಗೆಯಲ್ಲಿ ಬಿದ್ದಿದ್ದನು. ಕೊನೆಗೆ ಮಾರ್ಚ್ ೨೦ (ಇಪ್ಪತ್ತು) ರಂದು ಮಧ್ಯರಾತ್ರಿಯಲ್ಲಿ ಅವನ ಉಸಿರು ಹಾರಿಹೋಯಿತು. ನಿಸರ್ಗದ ರಹಸ್ಯವನ್ನು ಭೇದಿಸುವುದರಲ್ಲಿ ಜೀವನವನ್ನೇ ತೇದುಬಿಟ್ಟ ಮಹಾಶಿಲ್ಪಿಯು ಹೀಗೆ ಅಮರನಾದನು. *



ಜಿರಾಲ್ಡ್ ಡ್ಯುರೆಲ್

ರೂಪರ್ಟ್ ಹಾರ್ಟ್-ಡೇವಿಸ್ ಲಂಡನ್
ಇವರ ಅನುಮತಿಯಿಂದ

ನಾನು ಪ್ರಾಣಿಗಳನ್ನು ಸಂಗ್ರಹಿಸಿದೆ

ಪಶ್ಚಿಮ ಆಫ್ರಿಕೆಯ ಬ್ರಿಟಿಶ್ ಕಾಮೆರೂನ್ಸ್‌ನಲ್ಲಿರುವ ಬಾಫುಟ ಎಂಬ ಪರ್ವತ ರಾಜ್ಯದಲ್ಲಿ ನಾನು ಸಪತ್ನೀಕನಾಗಿ ಆರು ತಿಂಗಳ ಕಾಲ ಸಂಚರಿಸಿದ ವೃತ್ತಾಂತ ಇದರಲ್ಲಿದೆ. ನಮ್ಮ ಸಂಚಾರದ ಉದ್ದೇಶ ತುಸು ವಿಚಿತ್ರವೆ, ನಮ್ಮ ಪ್ರಾಣಿಸಂಗ್ರಹಾಲಯಕ್ಕಾಗಿ ವಿವಿಧ ಪ್ರಾಣಿಗಳನ್ನು ಸಂಗ್ರಹಿಸುವುದೇ ಆಗಿದ್ದಿತು.

ದ್ವಿತೀಯ ಜಾಗತಿಕ ಯುದ್ಧಾನಂತರ ನಾನು ಅಪೂರ್ವ ಪ್ರಾಣಿಗಳ ಸಂಗ್ರಹಾರ್ಥ ಅನೇಕ ಯಾತ್ರೆಗಳನ್ನು ಏರ್ಪಡಿಸಿದ್ದೆ. ಹೀಗೆ ಅಪಾರ ಕಷ್ಟತಾಪತ್ರಯಗಳನ್ನು ಸಹಿಸಿ ಸಂಗ್ರಹಿಸಿ ತಂದ ಅಂದಚಂದದ ಪ್ರಾಣಿಗಳನ್ನು ಬೇರೆ ಪ್ರಾಣಿಸಂಗ್ರಹಾಲಯಗಳಿಗೆ ಒಪ್ಪಿಸಿಬಿಡುವಾಗ ನನ್ನ ಕರುಳೇ ಕಿತ್ತು ಬಂದಂತಾಗುತ್ತಿತ್ತು. ಯಾವುದೊಂದು ಪ್ರಾಣಿಯನ್ನು ಮಕ್ಕಳಂತೆ ನೋಡಿಕೊಂಡರೆ ಆರು ತಿಂಗಳ ಕಾಲದಲ್ಲಿ ಅದರ ಸ್ನೇಹ ಸಂಪಾದಿಸಬಹುದು. ಅದೂ ನಿಮ್ಮನ್ನು ನೆಚ್ಚಿಕೊಂಡು ನೀವು ಸಮೀಪದಲ್ಲಿದ್ದಾಗ ತನ್ನ ಸ್ವಾಭಾವಿಕ ವರ್ತನೆಯನ್ನು ತೋರ್ಪಡಿಸುತ್ತದೆ. ಈ ಪ್ರಕಾರ ಅದರ ವಿಶ್ವಾಸ ಸಂಪಾದಿಸಿ ಅದರ ಸ್ವಭಾವಾದಿಗಳನ್ನು ಅರಿತುಕೊಳ್ಳಲು ಪ್ರಾರಂಭಿಸುವಷ್ಟರಲ್ಲಿ ಅದನ್ನು ಯಾವುದೊಂದು ಪ್ರಾಣಿಸಂಗ್ರಹಾಲಯಕ್ಕೆ ಒಪ್ಪಿಸಿಬಿಡಬೇಕಾಗುತ್ತಿತ್ತು.

ಈ ಮನಸ್ತಾಪ ನನಗೆ ಉಂಟಾಗಬಾರದು ಎಂದಿದ್ದರೆ ಸ್ವಂತ ಪ್ರಾಣಿಸಂಗ್ರಹಾಲಯವೊಂದನ್ನು ಕಟ್ಟಿಕೊಳ್ಳಬೇಕು—ಅಂದಾಗ ಮಾತ್ರ

ಯಾವ ಪ್ರಾಣಿಗೆ ಎಂಥ ಪಂಜರ ಒಗ್ಗೀತು; ಯಾವ ಆಹಾರ ಹಿಡಿಸೀತು, ಎಂಥ ವರ್ತನೆ ಅದಕ್ಕೆ ಪೋಷಕವೆನಿಸೀತು ಎಂಬ ಮುಂತಾದ ಅಂಶಗಳನ್ನು ಅರಿತುಕೊಳ್ಳಲು ಸಾಧ್ಯವಾಗುವುದು. ಹೆರವರ ಪ್ರಾಣಿಸಂಗ್ರಹಾಲಯದಲ್ಲಿ ಇಂಥ ಉಪದ್ವ್ಯಾಪ ಹೇಗೆ ನಡಸಲಿಕ್ಕಾದೀತು?

ಇನ್ನು ನನ್ನ ಪ್ರಾಣಿಸಂಗ್ರಹಾಲಯವು ಸ್ವಾವಲಂಬಿಯಾಗಬೇಕಾದರೆ ಸಾರ್ವಜನಿಕರಿಗೂ ಅದನ್ನು ಮುಕ್ತದ್ವಾರವಾಗಿಟ್ಟು ನನ್ನ ಪ್ರಯೋಗಗಳನ್ನು ನಡೆಸಬೇಕಾಗುವುದು.

ಜಗತ್ತಿನ ಕೆಲ ಅಪೂರ್ವ ಪ್ರಾಣಿಗಳ ಮಾದರಿಗಳು, ಮಾನವನ ಉಪಟಳದಿಂದಾಗಿ, ನಷ್ಟವಾಗುತ್ತ ನಡೆದಿವೆ. ಇವನ್ನುಳಿಸಿಕೊಳ್ಳಲು ಕೆಲವು ಸಂಘ ಸಂಸ್ಥೆಗಳು ಪ್ರಯತ್ನಿಸುತ್ತಿವೆ. ಇನ್ನು ಕೆಲ ಪುಟ್ಟ ಪ್ರಾಣಿಗಳಂತೂ ಹೇಳ ಹೆಸರಿಲ್ಲದೆ ಅಳಿದುಹೋಗಹತ್ತಿವೆ. ಆದ್ದರಿಂದ ಜಗತ್ತಿನ ಪ್ರಾಣಿಸಂಗ್ರಹಾಲಯಗಳಲ್ಲೆಲ್ಲ ಇಂಥ ಅಪೂರ್ವ ಮಾದರಿಗಳನ್ನು ಕಾಪಾಡಿಕೊಂಡು ಬರುವುದರ ಜೊತೆಗೆ ಇವುಗಳ ತಳಿಗಳನ್ನು ಬೆಳೆಸಿಕೊಂಡು ಬರುವ ಏರ್ಪಾಡೂ ಆಗಬೇಕು. ಇವೆಲ್ಲ ಅಭಿಪ್ರಾಯಗಳಿಂದಾಗಿ ಸ್ವಂತ ಪ್ರಾಣಿಸಂಗ್ರಹಾಲಯವನ್ನು ಕಟ್ಟಬೇಕೆಂದು ಬಯಸಿದೆ.

ಪ್ರಾಣಿಸಂಗ್ರಹಾಲಯಕ್ಕಾಗಿ ಮೊದಲು ಸ್ಥಳವನ್ನು ಆರಿಸಿ, ಉಚಿತ ಏರ್ಪಾಡುಗಳನ್ನು ಮಾಡಿಕೊಂಡು ನಂತರ ಪ್ರಾಣಿಗಳ ಸಂಗ್ರಹಕ್ಕೆ ಹೊರಡುವುದು ಕ್ರಮಪ್ರಾಪ್ತವಾದ ಸಂಗತಿ. ನಾನು ಎಂದಿಗೂ ಯಾವ ಸಂಗತಿಯನ್ನೂ ಹಾಗೆ ಮಾಡಿದವನಲ್ಲ. ಆದ್ದರಿಂದ ಮೊದಲು ಪ್ರಾಣಿಗಳನ್ನು ಸಂಗ್ರಹಿಸಿ ನಂತರ ಅವುಗಳ ವಾಸದ ಏರ್ಪಾಡು ಮಾಡುವುದಾಗಿ ನಿರ್ಧರಿಸಿದೆ.

ಸಕಾಲಿಕ ಆಮಂತ್ರಣ

ನಾನು ಸಪತ್ನೀಕನಾಗಿ ಪರಿವಾರ ಸಮೇತ ಪಶ್ಚಿಮ ಆಫ್ರಿಕಗೆ ಬಂದುಬಿಟ್ಟೆ. ಅಲ್ಲಿಯ ಬಿಸಿಲಿನ ಬೇಗೆ ನನ್ನನ್ನಾಗಲೆ ದಹಿಸತೊಡಗಿತ್ತು. ವಿಕ್ಟೋರಿಯಾ ಆಖಾತದಲ್ಲಿರುವ ಬೋಗೇನ ವಿಲ್ಲಾ ಎಂಬಲ್ಲಿ ಉಳಿದುಕೊಂಡು ಉತ್ತರದಲ್ಲಿ ಪರ್ವತರಾಜ್ಯವಾಗಿರುವ ಬಾಫುಟದ ಫೋನ್‌ನಿಗೆ ಪತ್ರ ಬರೆಯುವ ವಿಚಾರವನ್ನೆ ಮೆಲುಕು ಹಾಕುತ್ತಿದ್ದೆ. ಫೋನ್‌ನ ರಾಜ್ಯದಲ್ಲಿ ನಾನಾವಿಧವಾದ ಅಪೂರ್ವ ಪ್ರಾಣಿಗಳು ವಾಸವಾಗಿದ್ದವು. ಎಂಟು ವರ್ಷಗಳ ಹಿಂದೊಮ್ಮೆ ಬಂದು ಆತನ ರಾಜ್ಯದಲ್ಲಿ ಕೆಲ ತಿಂಗಳು ಸಂಚರಿಸಿ ಪ್ರಾಣಿ ವಿಶೇಷಗಳನ್ನು ಹಿಡಿದೊಯ್ದಿದ್ದೆ. ಶ್ರೀಮಂತನೂ ಚತುರನೂ ಚಾಣಾಕ್ಷನೂ ಆಗಿದ್ದ ಫೋನ್ ಉತ್ತಮ ಯಜಮಾನನೂ ಆಗಿದ್ದ. ಉಪಭೋಗಿಸುವುದಕ್ಕಾಗಿಯೇ ಜೀವನ ಇದೆ ಎಂದು ನಂಬಿದ್ದ ಆತನ ಜೊತೆಯಲ್ಲಿ ನಾನು ಕಳೆದ ಸಲ ಅನೇಕ ದಿನಗಳನ್ನು ಸುಖೋಲ್ಲಾಸಗಳಲ್ಲಿ ಕಳೆದಿದ್ದೆ. ನಾನು ಇಂಗ್ಲಂಡಿಗೆ ಹಿಂತಿರುಗಿದ ನಂತರ ನನ್ನ ಪ್ರವಾಸದ ಕುರಿತು ಬರೆದ ಪುಸ್ತಕದಲ್ಲಿ ಫೋನ್‌ನನ್ನು ಪಾನಾಸಕ್ತನೆಂದೂ ನೃತ್ಯ ಸಂಗೀತಪ್ರಿಯನೆಂದೂ ಮಕ್ಕಳಂತೆ ನಿರ್ಮಲಾಂತಃಕರಣಿಯೆಂದೂ ಚಿತ್ರಿಸಿದ್ದೆ. ನನ್ನ ಈ ವರ್ಣನೆಯನ್ನು ಓದಿ ಫೋನ್‌ನು ತಾನೊಬ್ಬ ಮದ್ಯ ವಿಷಯ ಲಂಪಟನಾದ ಕುಡುಕನೆಂದು ಭಾವಿಸಿಕೊಳ್ಳಬಹುದಾಗಿತ್ತು. ಅಂತೆಯೆ ಈ ಸಲ ನಾನು ಆತನಿಗೆ ಬಹಳ ಜಾಗರೂಕತೆಯಿಂದ ಪತ್ರ ಬರೆದೆ:

“ ಪ್ರಿಯ ಸ್ನೇಹಿತ.

ನಾನು ಕಾಮೆರೂನ್ಸ್‌ಗೆ ಹಿಂತಿರುಗಿದ್ದೇನೆ. ಕಳೆದ ಸಲ ಬಂದಾಗ ನಿನ್ನೊಡನೆ ಕಳೆದ ದಿನಗಳನ್ನು ನಾನಿನ್ನೂ ಮರೆತಿಲ್ಲ. ಈ ಸಲ ನಾನು ಸಪತ್ನೀಕನಾಗಿ ಬಂದಿದ್ದೇನೆ. ನಿನ್ನ ರಾಜ್ಯವನ್ನೂ ಜನರನ್ನೂ ಕಾಣಲು ಆಕೆಗೂ ಅವಕಾಶ ದೊರೆತೀತೆಂದು ನಂಬಿದ್ದೇನೆ. ನಾವು ಪ್ರಾಣಿಸಂಗ್ರಹ ಕಾರ್ಯಕ್ಕೆಂದು ನಿಮ್ಮಲ್ಲಿಗೆ ಬಂದಾಗ ನಿಮ್ಮ ಅತಿಥಿಗ್ರಹದಲ್ಲಿ ಉಳಿದುಕೊಳ್ಳಬಹುದೆ? ನಿನ್ನ ಉತ್ತರ ನಿರೀಕ್ಷಿಸುತ್ತಿದ್ದೇನೆ.

ಜಿರಾಲ್ಡ್ ಡ್ಯುರೆಲ್."

ವಿಶೇಷ ದೂತನೊಬ್ಬನ ಕೈಯಲ್ಲಿ ಈ ಪತ್ರ

ವನ್ನೂ ಕಾಣಿಕೆಯಾಗಿ ಎರಡು ಬಾಟ್ಲಿ ವಿಸ್ಕಿಯನ್ನೂ ಕೊಟ್ಟು ಫೋನ್‌ನ ಕಡೆಗೆ ಕಳಿಸಿದೆ. ವಾರ ತಿರುಗುವುದರೊಳಗಾಗಿ ಆ ದೂತನು ಫೋನ್‌ನ ಪತ್ರ ಸಮೇತ ಹಿಂತಿರುಗಿದ. ಸಂಭ್ರಮದಿಂದ ನಾನು ಆ ಪತ್ರವನ್ನು ಮೇಜಿನ ಮೇಲೆ ಬಿಡಿಸಿ ಓದತೊಡಗಿದೆ ನನ್ನ ಹೆಂಡತಿ ಜೇಕಿಯೂ ಕತ್ತು ಚಾಚಿ ಆ ಪತ್ರ ಓದುತ್ತಿದ್ದಳು.

"ಪ್ರಿಯ ಸ್ನೇಹಿತನೆ,

ಕಾಮೆರೂನ್ಸ್‌ದಿಂದ ನೀನು ಕಳಿಸಿದ ಪತ್ರ ಓದಿ ಸಂತೋಷವಾಯಿತು. ನಾನು ನಿಮ್ಮ ದಾರಿಯನ್ನೇ ಕಾಯುತ್ತಿದ್ದೇನೆ. ನನ್ನ ಅತಿಥಿಗೃಹವು ನಿಮ್ಮ ಸ್ವಾಗತಕ್ಕೆ ಸದಾ ಸಿದ್ಧವಿದೆ. ನಿನ್ನ ಹೆಂಡತಿಗೆ ನನ್ನ ಶುಭಾಶಯಗಳು. ಆಕೆಯು ಇಲ್ಲಿಗೆ ಬಂದಾಗ ಚತುರ ಸಂಭಾಷಣೆಗೆ ಸಿದ್ಧವಾಗಿರಲು ತಿಳಿಸು.

ನಿನ್ನ ವಿಶ್ವಾಸಿಕ,
ಬಾಫುಟದ ಫೋನ್."

*

ಭಾಗ ೧ - ದಾರಿಯಲ್ಲಿ ಒಲ್ಲದ ಹೆಬ್ಬಾವು

ವಿಕ್ಟೋರಿಯದಿಂದ ಬಾಫುಟ್‌ಕ್ಕೆ ಹೊರಟ ನಾವು ದಾರಿಯಲ್ಲಿ ಮ್ಯಾಂಫೆಯಲ್ಲಿ ಹತ್ತು ದಿನ ಉಳಿದು ಮುಂದೆ ಸಾಗಬೇಕೆಂದಿದ್ದೆವು. ಮೂರು ಲಾರಿಗಳಲ್ಲಿ ನಾವು ಹೊರಟಿದ್ದೆವು. ಮೊದಲನೇ ಲಾರಿಯಲ್ಲಿ ಜೇಕಿ ಮತ್ತು ನಾನು, ಎರಡನೆಯದರಲ್ಲಿ ನನ್ನ ಸಹಾಯಕ ಬಾಬ್ ಮತ್ತು ಮೂರನೆಯದರಲ್ಲಿ ನನ್ನ ಕಾರ್ಯದರ್ಶಿ ಸೋಫಿ ಹೀಗೆ ಆರೂಢರಾಗಿದ್ದೆವು. ಮೂರನೆ ದಿನ ಮುಚ್ಚಂಜೆಯ ಹೊತ್ತಿಗೆ ಮ್ಯಾಂಫೆಗೆ ತಲುಪಿದೆವು. ಅಲ್ಲಿ ಯುನೈಟೆಡ್ ಆಫ್ರಿಕಾ ಕಂಪನಿಯ ಮ್ಯಾನೇಜರ ನನ್ನು ಕಂಡು ನಮ್ಮ ಊಟ ವಸತಿಗಳ ಏರ್ಪಾಡು ಮಾಡಿಕೊಳ್ಳಬೇಕಾದ್ದರಿಂದ ಹುಡುಕಾಡಿಕೊಂಡು ಆ ಕಂಪನಿಯ ಮನೆಯೆದುರು ನಮ್ಮ ಲಾರಿಗಳನ್ನು ತರುಬಿದೆವು.

ಬೆಂದು, ಬಸವಳಿದು ಬಾಯಾರಿ ಬಂದಿದ್ದ ನಮಗೆ ಆಗ ಪಾನೀಯ, ಸ್ನಾನ, ಭೋಜನಗಳು ಬೇಕಾಗಿದ್ದವು. ಇದಕ್ಕೂ ಅಗತ್ಯವಾಗಿ ನಾವು ಹಿಡಿದು ತಂದಿದ್ದ ಮುಂಗುಲಿಯನ್ನು ಬಂಧಿಸಿಡಲು ಒಂದು ಮರದ ಪೆಟ್ಟಿಗೆ ಬೇಕಾಗಿತ್ತು. ಇಪ್ಪತ್ತೈದು ಮೈಲು ಹಿಂದಿದ್ದ ಒಂದು ಹಳ್ಳಿಯಲ್ಲಿ ಇದನ್ನು ಕೊಂಡಿದ್ದೆ. ಕಾಲುಗಳು ಮಾತ್ರ ಕಪ್ಪಾಗಿದ್ದ ಈ ಮುಂಗುಲಿ ಅಪೂರ್ವವೆನಿಸಿತ್ತು. ಈ ಮುಂಗುಲಿ ಮರಿಯು ಲಾರಿಯ ತುಂಬೆಲ್ಲ ನೆಗೆದಾಡಲಾರಂಭಿಸಿದ್ದರಿಂದ ಬೇಸರಗೊಂಡು ನಿರುಪಾಯನಾಗಿ ನಾನು ಅದನ್ನು ನನ್ನ ಶರ್ಟಿನ ಒಳಗೆ ಬಂಧಿಸಿದ್ದೆ. ಅರ್ಧ ಗಂಟೆ ಕಾಲದಿಂದಲೂ ಅದು ನನ್ನ ಹೊಟ್ಟೆ ಬೆನ್ನುಗಳನ್ನೆಲ್ಲ ಸುತ್ತುತ್ತ ತನ್ನ ಹದನವಾದ ಉಗುರುಗಳಿಂದ ನನ್ನ ಚರ್ಮವನ್ನು ಬಗೆಯುತ್ತ ಪಾರಾಗಿ ಹೋಗಲು ಪ್ರಯತ್ನಿಸುತ್ತಿತ್ತು. ಇದನ್ನು ಗಟ್ಟಿಯಾಗಿ ಬಚ್ಚಿಟ್ಟುಕೊಂಡೇ ನಾನು ಆ ಮನೆಯನ್ನು ಪ್ರವೇಶಿಸಿದೆ. ಒಂದು ಮೇಜಿನ ಮುಂದೆ ಇಸ್ಪೇಟು ಆಡುತ್ತ ಕುಳಿತಿದ್ದ ಮೂವರು ನನ್ನನ್ನು ಕಂಡು ಪ್ರಶ್ನಾರ್ಥಕ ದೃಷ್ಟಿಯಿಂದ ನೋಡಿದರು.

"ನಮಸ್ಕಾರ, ನಾನು ಡ್ಯರೆಲ್" ಎಂದೆ.

ಅವರಲ್ಲಿ ಒಬ್ಬ ಕಪ್ಪು ಕುಳ್ಳ ಗೃಹಸ್ಥ ಎದ್ದು ಬಂದು ಹಸಾಂದೋಲನ ಮಾಡಿದರೂ ನನ್ನ ಪರಿಚಯ ಕೇಳದೆ 'ನಿಮಗೆ ಇಸ್ಪೇಟ್ ಆಟ ಗೊತ್ತೆ?' ಎಂದು ಕೇಳಿದ. ನಾನು ಇಲ್ಲವೆನ್ನಲು ನನ್ನ ಹೆಸರನ್ನು ಕೇಳಿದ. ನಾನು ಪುನಃ ಹೆಸರು ಹೇಳಿದೊಡನೆ ಹೇಳಿದ:

"ನಮ್ಮ ಕಚೇರಿಯವರು ಹೇಳಿ ಕಳಿಸಿದ ಪ್ರಾಣಿ ಸಂಗ್ರಾಹಕರು ನೀವೇ ಏನು? ಎರಡು ದಿನಗಳಿಂದಲೂ ನಿಮ್ಮ ದಾರಿ ಕಾಯುತ್ತಿದ್ದೇವೆ."

"ಲಾರಿಗಳು ಪದೇ ಪದೇ ಸತ್ಯಾಗ್ರಹ ಹೂಡದಿದ್ದರೆ ನಾವು ಮೊನ್ನೆಯೆ ಇಲ್ಲಿರಬಹುದಾಗಿತ್ತು."

ಆತ ಪಾನೀಯವನ್ನು ಸ್ವೀಕರಿಸಲು ಹೇಳಿದ ಕೂಡಲೆ ನಾನು ಹೊರಗಿದ್ದ ಎಲ್ಲರನ್ನೂ ಕರೆದು

ಕೊಂಡು ಬಂದೆ.

"ಇದೇನು, ನಿನ್ನ ಹೊಟ್ಟೆ ಹೀಗೆ ಕುಣಿಯುತ್ತಿದೆ. ಅಥವಾ ನಾನೇ ಹೆಚ್ಚು ಕುಡಿದಿದ್ದೇನೊ?" ಎಂದು ಆತ ಕೇಳಿದ.

"ಅಲ್ಲಿ ಒಳಗೆ ಮುಂಗುಲಿ ಮರಿಯಿದೆ" ಎಂದು ಹೇಳಿದೆ.

ಎರಡು ದಿನ ನಾವು ಆತನ ಆತಿಥ್ಯವನ್ನು ಯಥೇಷ್ಟವಾಗಿ ಸ್ವೀಕರಿಸಿದೆವು. ನಮ್ಮಂಥ ನಾಲ್ವರು ಪ್ರಾಣಿಸಂಗ್ರಾಹಕರನ್ನು ಇಟ್ಟುಕೊಳ್ಳುವವನಿಗೆ ಎಂಟೆದೆಯೆ ಇರಬೇಕು. ನಾವು ಬಂದಿಳಿದ ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ನಮ್ಮ ಯಜಮಾನ ಜಾನ್‌ನ ಮನೆಯ ವರಾಂಡಾದಲ್ಲಿ ಮುಂಗುಲಿಯೊಂದೇ ಅಲ್ಲದೆ ಒಂದು ಇಣಚಿ (ಅಳಿಲು) ಒಂದು ಮಂಗನ ಮರಿ, ಎರಡು ಮಂಗಗಳು ಬಿಡಾರ ಬಿಟ್ಟವು. ಅಲ್ಲಿಯ ಬೇಟೆಗಾರನಿಗೂ ಹೇಳಿ ಕಳಿಸಿದ್ದಾಯಿತು.

ಒಂದಿನ ಅಪರಾಹ್ನದಲ್ಲಿ ಆಗಸ್ಟಿನ್ ಎಂಬ ಬೇಟೆಗಾರನು ಆರಡಿ ಎತ್ತರದ ಕಾಡಿಗೆಗಿಂತಲೂ ಕಪ್ಪಾದ ಆಫ್ರಿಕನ್ನನೊಬ್ಬನನ್ನು ಕರೆದುಕೊಂಡು ಬಂದ. ಆತನೂ ನಮ್ಮನ್ನು ತನ್ನ ಮನಸಿನಲ್ಲೇ ತೂಗಿ ನೋಡುತ್ತಿದ್ದಂತಿತ್ತು.

"ಏನು ಬೇಟೆ ತಂದಿರುವಿ?" ಎಂದು ಪ್ರಶ್ನಿಸಿದೆ. "ಬೇಟೆ ಏನೂ ಇಲ್ಲ. ನಮಗೆ ಹಗ್ಗ ಬೇಕು ಕೊಡಿಸುವಿರಾ? ಹೆಬ್ಬಾವು ಇಲ್ಲೇ ಸಮೀಪದ ಪೊದೆಗಳಲ್ಲಿ ಅಡಗಿದೆ. ಹಗ್ಗವಿಲ್ಲದೆ ನಾವದನ್ನು ಹಿಡಿಯಲಾರೆವು" ಎಂದು ಆತ ಹೇಳಿದ. ಕೂಡಲೆ ಉರಗಗಳನ್ನು ಹಿಡಿಯುವುದರಲ್ಲಿ ಚತುರನಾಗಿದ್ದ ಬಾಬ್‌ನ ಚಪಲ ಹೆಚ್ಚಿತು. ಸಧ್ಯಾಂಪ್ಟನ್‌ದಲ್ಲಿ ಹಡಗವನ್ನೇರಿದ ದಿನದಿಂದಲೂ ಬಾಬ್ ಉರಗಗಳ ಕುರಿತೇ ಮಾತಾಡುತ್ತಿದ್ದ. ಈಗ ಆತನಿಗೆ ಅವಕಾಶ ದೊರೆತಿತ್ತು.

ಅದೆಷ್ಟು ದೊಡ್ಡದಿದೆ ಎಂದು ನಾನು ವಿಚಾರಿಸಲಾಗಿ ಆಗಸ್ಟಿನ್‌ನು ತನ್ನ ತೊಡೆ ತಟ್ಟಿ ತೋರಿಸಿ "ಇಷ್ಟು ಗಾತ್ರದ್ದಿದೆ ಸಾಹೇಬ. ಇಂದು ಬೆಳಿಗ್ಗೆ ನಾವು ಆ ಪೊದೆಗಳ ಸಮೀಪದಲ್ಲಿ ಬರುತ್ತಿದ್ದಾಗ ಅದನ್ನು ನೋಡಿದೆವು. ಧಾವಿಸಿದೆವು, ಆದರೂ ಹಿಡಿಯಲಿಕ್ಕಾಗಲಿಲ್ಲ. ಅದು ಹೋರ(ಬಿಲ)ನ್ನು ಕಂಡು ಒಳಹೊಕ್ಕಿತು. ಅದನ್ನು ಕಟ್ಟಿ ಹಿಡಿದೆಳೆಯಲು ನಮ್ಮ ಹತ್ತರ ಹಗ್ಗವೂ ಇರಲಿಲ್ಲ. ಭಾರಿ ಬಲಿಷ್ಠವಾಗಿದೆ" ಎಂದು ಅವಸರವಸರವಾಗಿ ತಿಳಿಸಿದ.

"ಅಲ್ಲಿ ಯಾರನ್ನಾದರೂ ಕಾವಲು ಇಟ್ಟು ಬಂದಿದ್ದೀರಾ?" ಎಂದು ಪ್ರಶ್ನಿಸಿದೆ. ಇಬ್ಬರನ್ನು ಅಲ್ಲಿ ಬಿಟ್ಟು ಬಂದಿರುವುದಾಗಿ ತಿಳಿಸಿದ.

ಬಾಬ್ ಮತ್ತು ಬೆನ್‌ರೊಂದಿಗೆ ನಾನು ಹಗ್ಗ, ಜಾಳಿಗೆಗಳ ಸಹಿತವಾಗಿ ಆಗಸ್ಟಿನ್ನನ ಬೆನ್ನು ಹತ್ತಿ ಹೆಬ್ಬಾವಿನ ಸಂಶೋಧನಕ್ಕೆ ಹೊರಟೆ. ಬಿಸಿಲೇರಿದಂತೆ ಕೆಳಗಿನ ಕಲ್ಲುಬಂಡೆಗಳು ಕಾದು ಬೆವರು ಮೈಯಿಂದ ಧಾರಾಕಾರವಾಗಿ ಸುರಿಯಹತ್ತಿತು.

"ಹಾಳು ಹೆಬ್ಬಾವು ನೆರಳಿನಲ್ಲಿಯೆ ಎಲ್ಲಾದರೂ ಅಡಗಿಕೊಂಡಿರಬೇಕು. ಈ ಕಾದ ಬಂಡೆಗಳ ಮೇಲೆ ರೊಟ್ಟಿ ಸುಡಬಹುದು" ಎಂದೆ.

"ಇನ್ನೇನು ಸಮೀಪದಲ್ಲಿಯೆ ಇದೆ" ಎಂದು ಆಗಸ್ಟಿನ್ ತೋರಿದ ಕಡೆಗೆ ನೋಡಲಾಗಿ ಕಲ್ಲುಬಂಡೆಗಳ ದಿನ್ನೆಯ ಮೇಲೆ ಸಾಕಷ್ಟು ದೂರದಲ್ಲಿ ಇಬ್ಬರು ಕುಳಿತದ್ದು ಕಂಡುಬಂದಿತು. ನಮ್ಮನ್ನು ಕಂಡ ಕೂಡಲೆ ಅವರು ಎದ್ದು ನಿಂತು ತಮ್ಮ ಬರ್ಚಿಗಳನ್ನು ಎತ್ತಿ ಹಿಡಿದು ಸ್ವಾಗತಿಸಿದರು.

ನಾವು ಆ ದಿನ್ನೆಯ ಹತ್ತರ ಹೋಗಿ ನೋಡಿದರೆ ಅನೇಕ ಚಿಕ್ಕ-ಪುಟ್ಟ ಗುಹೆಗಳಿಂದ ಅದು ತುಂಬಿ ಹೋಗಿತ್ತಲ್ಲದೆ ಹಾವಿನಂಥ ಪ್ರಾಣಿಗಳು ಒಂದರಿಂದ ಇನ್ನೊಂದಕ್ಕೆ ನುಸುಳಿಕೊಂಡು ಹೋಗಲೂ ಬರುವಂತೆ ಒಳಗೆ ಕಿಂಡಿಗಳಿದ್ದವು. ಅಲ್ಲಿದ್ದ ಬೇಟೆಗಾರರು ಆ ಹೆಬ್ಬಾವನ್ನು ಹೊರಹೊರಡಿಸಲೆಂದು ನೆಲದ ಮೇಲಿನ ಒಣ ಹುಲ್ಲಿಗೆ ಬೆಂಕಿ ಹಚ್ಚಿಬಿಟ್ಟಿದ್ದರೂ ಅದು ಒಳಗೇ ಅಡಗಿಕೊಂಡು ಕುಳಿತಿತ್ತು.

ನಾನು ಮತ್ತು ಬಾಬ್ ಬೇಟೆಗಾರರು ತೋರಿಸಿದ ಗವಿಯನ್ನು ಹೊಕ್ಕು ಹೆಬ್ಬಾವು ಎಲ್ಲಿದೆಂಬು


Ragotine
TRADE MARK
Ragotine
FINE
RAGI MALT
AN IDEAL
FOOD BEVERAGE
RAGOTINE is manufactured from
energizing extracts and MALTED RAGI
FINE CHEMICAL WORKS, MYSORE
Ragotine
AN IDEAL
FOOD BEVERAGE
FINE CHEMICAL WORKS
MYSORE

ದನ್ನು ಕಂಡುಕೊಂಡು ನಂತರ ಅದನ್ನು ಹೇಗೆ ಹಿಡಿಯಬೇಕೆಂಬ ಆಲೋಚನೆ ಮಾಡತಕ್ಕದ್ದು ಎಂದು ನಿರ್ಧರಿಸಿ ಗವಿಯನ್ನು ಪ್ರವೇಶಿಸಿದೆವು. ಒಳಗೆ ಹೋದಂತೆ ಅದು ಕಿರಿದಾಗುತ್ತ ಹೋಗಿ ಒಬ್ಬನೇ ಹೊಟ್ಟೆ ಹೊಸೆಯುತ್ತ ಹೋಗುವುದಕ್ಕೆ ಮಾತ್ರ ಇಂಬುಗೊಟ್ಟಿತ್ತು. ನಾವು ಮುಂದುವರಿದಂತೆಲ್ಲ ಹೆಬ್ಬಾವಿನ ಫೂತ್ಕಾರ ಕೇಳಿಬರುತ್ತಿದ್ದದ್ದರಿಂದ ಅದು ಅಲ್ಲಿದ್ದ ಬಗ್ಗೆ ನಂಬಿಕೆಯಾಯಿತು. ಕೊನೆಗೆ ಟಾರ್ಚ್ ಬೆಳಕು ಬಿಟ್ಟು ನೋಡಲಾಗಿ ನಮ್ಮಿಂದ ಎಂಟೇ ಅಡಿ ದೂರದಲ್ಲಿ ಹದಿನೈದು ಅಡಿಗಳಷ್ಟು ಉದ್ದವಾದ ಮತ್ತು ಆಗಸ್ಟಿನ್ ಹೇಳಿದ್ದಕ್ಕಿಂತಲೂ ಭಾರಿ ಗಾತ್ರದ ಹೆಬ್ಬಾವು ಸುರುಳಿ ಸುತ್ತಿಕೊಂಡು ಕುಳಿತಿತ್ತಲ್ಲದೆ ನಾವು ಬೆಳಕು ಬಿಟ್ಟಕೂಡಲೆ ಫೂತ್ಕರಿಸಿತು.

ನಾವು ಹೊರಗೆ ಬಂದು ಇಪ್ಪತ್ತು ಅಡಿ ಉದ್ದವಾದ ಗಟ್ಟಿ ರೆಂಬೆಯೊಂದನ್ನು ತರಿಸಿ ಅದರ ತುದಿಗೆ ಕೊಕ್ಕೆಯೊಂದನ್ನು ಕಟ್ಟಿ ಆ ರೆಂಬೆಯನ್ನು ಚುಚ್ಚಿ ಹೆಬ್ಬಾವನ್ನು ಕೊಕ್ಕೆಯಲ್ಲಿ ಹಿಡಿದು ಹೊರಗೆಳೆಯಲು ಸಿದ್ಧತೆ ಮಾಡಿಕೊಂಡೆವು. ನಾನು ಮತ್ತು ಬಾಬ್ ಪುನಃ ಗವಿಯನ್ನು ಹೊಕ್ಕೆವು. ರೆಂಬೆಗೋಲನ್ನು ಹಿಡಿದುಕೊಂಡ ಆತ ಮುಂದೆ, ಹಿಂದೆ ಟಾರ್ಚ್ ಹಿಡಿದುಕೊಂಡು ನಾನು; ಹೀಗೆ ಹೋಗಿ ದೂರದಿಂದಲೇ ರೆಂಬೆಯನ್ನು ಚುಚ್ಚಿ ಕೊಕ್ಕಿಗೆ ಹೆಬ್ಬಾವನ್ನು ಸಿಲುಕಿಸಿಕೊಂಡಿದ್ದಾಯಿತು. ಭಾರಿ ಪ್ರಯತ್ನದಿಂದ, ಶಕ್ತಿಯಿಂದ, ಸಾವಧಾನದಿಂದ ಅದನ್ನು ಹೊರಗೆ ಎಳೆಯುತ್ತ ನಾವು ಹಿಂದೆ ಹಿಂದೆ ಸರಿಯುತ್ತಿದ್ದೆವು. ಇನ್ನೇನು, ಇನ್ನೊಮ್ಮೆ ರಭಸದಿಂದ ಜಗ್ಗಿಬಿಟ್ಟರೆ ಅದು ಹೊರಗೆ ಬಂದು ಬೀಳುತ್ತದೆ ಎಂಬ ಧೈರ್ಯದಿಂದ ಬಾಬ್ ಆ ರೆಂಬೆಯನ್ನು ಎಳೆದಾಗ ಆತನ ಕಾಲಿಗೆ ಆಧಾರವಾಗಿದ್ದ ಕಲ್ಲು ಜಾರಿದ್ದರಿಂದ ಹಿಡಿತ ತಪ್ಪಿದಂತಾಗಿ ಹೆಬ್ಬಾವು ಕೊಕ್ಕೆಯಿಂದ ತಪ್ಪಿಸಿಕೊಂಡು ಅಲ್ಲಿಯೆ ಇದ್ದ ಚಿಕ್ಕ ಹೋರಿನಲ್ಲಿ ಹೊಕ್ಕುಬಿಟ್ಟಿತು. ನಾವು ಎದ್ದು ಸುಧಾರಿಸಿಕೊಂಡು ನೋಡುವಷ್ಟರಲ್ಲಿ ಅಂಗೈಯಗಲದ ಹೋರಿನಲ್ಲಿ ಅದು ಹೋಗಿಬಿಟ್ಟಿತ್ತು; ಕೇವಲ ನಾಲ್ಕಡಿಯಷ್ಟು ಅದರ ಬಾಲ ಹೊರಗೆ ಇದ್ದದ್ದೂ ಮಾಯವಾಗಹತ್ತಿತ್ತು. ಬಾಬ್ ಮತ್ತು ನಾವೆಲ್ಲ ಆ ಬಾಲವನ್ನು ಹಿಡಿದು ಎಷ್ಟೇ ಜಗ್ಗಿದರೂ ಅದು ನುಸುಳಿಕೊಂಡು ಕಣ್ಮರೆಯಾಗಿಬಿಟ್ಟಿತು.

ಉಸ್ಸಪ್ಪ ಎಂದು ನಾವೆಲ್ಲ ಅಲ್ಲಿಯೆ ಬಂಡೆಗಳ ಮೇಲೆ ಕುಳಿತು ಸಿಗರೇಟು ಹಚ್ಚಿದೆವು.

"ಅದು ಭಾರಿ ಹೆಬ್ಬಾವು ಸಾಹೇಬರೆ. ನಮ್ಮ ನಿಮ್ಮಂಥವರ ಕೈಗೆ ಸಿಗುವುದಿಲ್ಲ" ಎಂದ ಆಗಸ್ಟಿನ್.

೨- ಬೋಳುತಲೆಯ ಹಕ್ಕಿಗಳು

ಮ್ಯಾಂಫೆಯ ಹತ್ತರದ ಕ್ರಾಸ್ ನದಿಯ ಆಚೆಗೆ ಎಂಟು ಮೈಲು ದೂರದಲ್ಲಿ ದಟ್ಟಡವಿಯಲ್ಲಿ ಎಶೋಬಿ ಎಂಬುದೊಂದು ಚಿಕ್ಕಹಳ್ಳಿ, ಅಲ್ಲಿಯ ಜನ ಉತ್ತಮ ಬೇಟೆಗಾರರು. ಕಳೆದ ಸಲ ನಾನು ಇಲ್ಲಿಗೆ ಬಂದಿದ್ದಾಗ ಎಶೋಬಿಯಲ್ಲಿ ಕೆಲ ದಿನ ತಂಗಿದ್ದು ಹಲವು ಪ್ರಾಣಿಗಳನ್ನು ಹಿಡಿದೊಯ್ದಿದ್ದೆ. ಆದ್ದರಿಂದ ಈ ಸಲ ಕೂಡ ಅಲ್ಲಿಯ ಬೇಟೆಗಾರರಿಗೆ ನಾನು ಬಂದ ಸುದ್ದಿ ಮುಟ್ಟಿಸಿದೆ.

ಮರುದಿನ ವಿಲಿಸ್ ಎಂಬ ಬೇಟೆಗಾರನು ಬಂದು ನನ್ನನ್ನು ಕಂಡು ಹನ್ನೆರಡು ತತ್ತಿಗಳ




ನಮ್ಮ ಅಸಂಖ್ಯಾತ ಗಾಹ್ರಕ ವೃಂದಕ್ಕೆ ದೀಪಾವಳಿಯ ನಮ್ಮ ಶುಭಾಶಯಗಳು
ರಾವಳ್‌ಗಾವ್
ಪೆಪ್ಪರ್‌ಮಿಂಟ್‌ಗಳು ಮತ್ತು ಟಾಫಿಗಳು
ಸೆಲಿಂಗ್ ಏಜೆಂಟ್ಸ್:
ಮೆಸರ್ಸ್ ಮೋತಿಲಾಲ್ ಗಿರ್‌ಧಾರಿಲಾಲ್ ಅಘಾರ್‌ಕರ್
ಮಾಳ್‌ಗಾಂವ್, ಡಿಸ್ಟ್ರಿಕ್ಟ್ ನಾಸಿಕ್.

ಕಾಣಿಕೆ ಅರ್ಪಿಸಿದ. ನಾನೂ ಆತನಿಗೆ ಒಂದು ಸಿಗಾರೇಟ್ ಪ್ಯಾಕ್ ಕೊಟ್ಟೆ. ಆತನು ಈ ಎಂಟು ವರ್ಷಗಳಲ್ಲಿ ತಾನು ಗೈದ ಸಾಹಸಗಳನ್ನು ಬಣ್ಣಿಸುತ್ತ ಹಠಾತ್ತಾಗಿ, "ಸಾಹೇಬರೆ, ನಿಮಗೆ ಆ ಹಕ್ಕಿ ನೆನಪಿದೆಯೆ?" ಎಂದು ಕೇಳಿದ ಕೂಡಲೆ ನಾನು ಕುತೂಹಲದಿಂದ "ಅದಾವುದೊ" ಎಂದು ವಿಚಾರಿಸಿದೆ.

"ಅದೇ ಆ ಬೋಳುತಲೆಯ ಹಕ್ಕಿ. ನೀವು ಹಿಂದಕ್ಕೆ ಬಂದಿದ್ದಾಗ ನಾನೆ ಅಂಥವೆರಡು ಹಕ್ಕಿಗಳನ್ನು ತಮಗೆ ಇತ್ತಿರಲಿಲ್ಲವೆ?" ಎಂದ.

"ಕೆಂಪು ತಲೆಯ ಹಕ್ಕಿಯೆ?"

"ಹೌದು ಸಾಹೇಬ. ನಿಮಗೆ ಆ ಹಕ್ಕಿ ಬಹಳ ಪ್ರಿಯವಾದದ್ದೆಂದು ತಿಳಿದ ನಾನು ನೀವು ಪುನಃ ಬಂದಿರುವ ಸುದ್ದಿ ಕೇಳಿ ಅವುಗಳಿದ್ದಲ್ಲಿಗೇ ಹೋಗಿ ನೋಡಿಕೊಂಡು ಬಂದೆ."

"ಎಲ್ಲಿ ಎಷ್ಟಿವೆ ಅವು, ಹೇಗೆ ವಾಸಿಸುತ್ತವೆ? ಎಂಥ ಗೂಡುಗಳನ್ನು ನೋಡಿದಿ?"

"ಅಲ್ಲಿ ದೂರ ಗುಡ್ಡದ ಮೇಲೆ, ಅವುಗಳ ಮೂರು ಗೂಡುಗಳನ್ನು ಕಂಡಿದ್ದೇನೆ. ಒಂದೂ ಪೂರ್ತಿಯಾಗಿಲ್ಲ."

"ಏನು ಸಂಭ್ರಮವಿದು" ಎಂದು ಅದೇ ತಾನೆ ವರಾಂಡಕ್ಕೆ ಬಂದಿದ್ದ ಜೇಕಿ ಕೇಳಿದಳು

"ಪಿಕಾಥಾರ್ಟಿಸ್" ಎಂದಷ್ಟೆ ನಾನು ಹೇಳಿದ ಕೂಡಲೆ ಆಕೆಗೆ ಎಲ್ಲ ಹೊಳೆದುಹೋಯಿತು.

ಯುರೋಪಿನಲ್ಲಿ ಈ ಹಕ್ಕಿಗಳು ಜೀವಂತ ಕಾಣಸಿಗುವುದಿಲ್ಲ. ಸತ್ತ ಹಕ್ಕಿಯ ಚರ್ಮಗಳು ಕೆಲ ಪ್ರಾಣಿ ಸಂಗ್ರಹಾಲಯಗಳಲ್ಲಿವೆ. ಲಂಡನ್ ಪ್ರಾಣಿಸಂಗ್ರಹಾಲಯದ ಅಧಿಕಾರಿ ಸೆಸಿಲ್ ವೆಬ್ ಈ ಹಕ್ಕಿಗಳನ್ನು ಜೀವಂತ ಹಿಡಿದು ತರಬೇಕೆಂದು ನನಗೆ ಹೇಳಿದ್ದರಿಂದ ನಾನು ಎಂಟು ವರ್ಷಗಳ ಹಿಂದೆ ಇಲ್ಲಿಗೆ ಬಂದಿದ್ದಾಗ ಪ್ರಯಾಸದಿಂದ ಎರಡು ಹಕ್ಕಿಗಳನ್ನು ಸಂಪಾದಿಸಿದ್ದೆ. ಆದರೆ ಅವು ಲಂಡನ್ ಮುಟ್ಟುವ ಪೂರ್ವದಲ್ಲಿ ಹಡಗದಲ್ಲಿಯೇ ಪುಪ್ಪುಸ ವಿಕಾರದಿಂದ ಸತ್ತುಹೋದವು.

"ಒಳ್ಳೇದು. ಜೇಕಿ, ನಾನೇ ಎಶೋಬಿಗೆ ಹೋಗಿ ಅವನ್ನು ನೋಡಿಕೊಂಡು ಸಾಧ್ಯವಾದರೆ ಹಿಡಿದು ತರುತ್ತೇನೆ. ನೀನು ಮತ್ತು ಸೋಫಿ ಇಲ್ಲಿಯ ನಮ್ಮ ಪ್ರಾಣಿಗಳನ್ನು ನೋಡಿಕೊಂಡಿರಿ. ಅವು ಸಿಗಲಿಲ್ಲವಾದರೂ ಅವನ್ನು ಕಾಡಿನಲ್ಲಿ ನೋಡಿಬಂದಷ್ಟೇ ಆಯಿತು" ಎಂದು ಹೇಳಿದೆ.

ಮರುದಿನ ಬೆಳಿಗ್ಗೆ ಇನ್ನೂ ತಂಪು ಹೊತ್ತಿನಲ್ಲಿಯೆ ನಾವು ನದಿಯನ್ನು ದಾಟಿ, ಎಶೋಬಿಗಾಗಿ, ಎದುರಿನ ದಟ್ಟ ಕಾಡನ್ನು ಹೊಕ್ಕೆವು.

ಈ ಕಾಡಿನಲ್ಲಿ ಅಂಥ ವಿಶೇಷವೇನೂ ನೋಡಲಿಕ್ಕೆ ಸಿಗಲಿಕ್ಕಿಲ್ಲವೆಂದು ನಾನು ಬಾಬ್‌ನನ್ನು ಮೊದಲಿಗೇ ಎಚ್ಚರಿಸಿದ್ದರೂ ಆತನು ಕಂಡ ಕಂಡ ಗಿಡದ ಹೊದರುಗಳನ್ನೆಲ್ಲ ಕೆದರುತ್ತ ಸಾಗಿದ. ಉಷ್ಣ ಕಟಿಬಂಧದಲ್ಲಿಯ ಅರಣ್ಯಗಳೆಂದರೆ ಕಾಡುಪ್ರಾಣಿಗಳಿಂದ ತುಂಬಿಹೋಗಿವೆ ಎಂಬ ವರ್ಣನೆಗಳನ್ನು ಓದಿ ಓದಿ ನನಗೆ ಸಾಕಾಗಿ ಹೋಗಿದೆ. ಅಲ್ಲಿ ಕಾಡುಪ್ರಾಣಿಗಳು ಇರುವುದಿಲ್ಲವೆಂದಲ್ಲ. ಆದರೆ ಇದ್ದವುಗಳು ಕೂಡ ನಿಮ್ಮ ಹಾದಿಯಲ್ಲಿ ಸುಳಿಯುವುದಿಲ್ಲ. ಎಶೋಬಿವರೆಗಿನ ಎಂಟು ಮೈಲುಗಳ ದಾರಿಯನ್ನು ದಟ್ಟಡವಿಯಲ್ಲಿ ಕ್ರಮಿಸಿ ಹೋದರೂ ವನ್ಯ ಪ್ರಾಣಿಗಳು ನಿಮಗೆ ಕೇವಲ ಬೆರಳ ಮೇಲೆ ಎಣಿಸುವಷ್ಟು ಕಾಣಸಿಗಬಹುದು. ಪೊದೆಗೊಂದರಂತೆ ಕಾಡುಪ್ರಾಣಿಯಿದೆಯೆಂದು ಹೇಳುವವರ ಮಾತು ನಿಜವಾದರೆ ನನ್ನ ಕಾರ್ಯಭಾರವೆಷ್ಟು ಹಗುರಾದೀತು!

ನಾವು ಎಶೋಬಿಯನ್ನು ತಲುಪಿದಾಗ ಸೂರ್ಯ ನಡುನೆತ್ತಿಗೇರಿದ್ದ. ಈ ಎಂಟು ವರ್ಷಗಳಲ್ಲಿ ಆ ಹಳ್ಳಿಯಲ್ಲಿ ಅಂಥ ಯಾವ ಬದಲಾವಣೆಯೂ ಆಗಿರಲಿಲ್ಲ. ಹುಲ್ಲಿನ ಚಪ್ಪರದ ಮನೆಗಳ ಅಂಕುಡೊಂಕಾದ ಸಾಲುಗಳು; ನಡುವಿನ ದಾರಿಯೆ ಮಕ್ಕಳಿಗೂ ನಾಯಿಗಳಿಗೂ ಕೋಳಿಗಳಿಗೂ ವಿಹಾರಸ್ಥಾನವಾಗಿದ್ದಿತು.

ಎಲಿಸ್ ಬಂದು ಸ್ವಾಗತಿಸಿದ ಕೂಡಲೆ ನಮ್ಮ ಆಳುಗಳು ತಲೆಹೊರೆಗಳನ್ನು ಅಲ್ಲಿಯೆ ನಡು

ಬೀದಿಯಲ್ಲಿ ಇಳಿಹಿದರು. "ಹಕ್ಕಿಗಳನ್ನು ನೋಡಲು ಯಾವಾಗ ಹೊರಡೋಣ ಎಲಿಸ್?" ಎಂದು ಕೇಳಿದೆ.

"ಈಗ ಉರಿಬಿಸಿಲು ಸಾಹೇಬ ಸಂಜೆಗೆ ಹೋದರೆ ಒಳ್ಳೆಯದು."

"ಹಾಗಾದರೆ ನಾಲ್ಕು ಗಂಟೆಗೆ ಸರಿಯಾಗಿ ಬಾ; ಸುಳ್ಳಾಡಬೇಡ. ನಮಗೆ ಆ ಹಕ್ಕಿಯನ್ನು ತೋರಿಸದಿದ್ದರೆ ನಿನ್ನನ್ನು ಕೊಂದು ಹಾಕುತ್ತೇನೆ."

"ಆಗಲಿ ಸಾಹೇಬ."

ಅಪರಾಹ್ನದಲ್ಲಿ ಆತನ ಮಾರ್ಗದರ್ಶನದಲ್ಲಿ ನಾವು ಹಳ್ಳಿಯನ್ನು ಹಿಂದೆ ಬಿಟ್ಟು ಹೊರಬಿದ್ದ ಕೂಡಲೆ ಆತನು ಎದುರಿಗಿನ ಗುಡ್ಡವೊಂದನ್ನು ತೋರಿಸಿ ಪಿಕಾಥಾರ್ಟಿಸ್ ಹಕ್ಕಿಗಳು ವಾಸವಾಗಿರುವುದು ಅಲ್ಲಿಯೆ ಎಂದು ತಿಳಿಸಿದ.

"ಇಲ್ಲಿಯೆ ಸಾಹೇಬ, ಅವು ಇರುವುದು" ಎಂದು ಎಲಿಸ್ ತನ್ನ ಸ್ಥೂಲಕಾಯವನ್ನು ಬಂಡೆಗಲ್ಲಿನ ಮೇಲೆ ಒರಗಿಸಿದ. ನಾವೂ ವಿಶ್ರಮಿಸಿದೆವು. ಮರುಕ್ಷಣದಲ್ಲಿ ಆತನು ಅಲ್ಲಿಯೆ ತುಸು ಮುಂದೆ ಚಾಚಿದ್ದ ಬಂಡೆಯೊಂದರ ಮೇಲೆ ಸಾಗಿ ಬಾಗಿನೋಡಿ ಸಂತೋಷದಿಂದ ಬಂಡೆಯೊಂದರ ತುದಿಗೆ ಕೈದೋರಿ 'ಇದೇ ಆ ಹಕ್ಕಿಯ ಗೂಡು' ಎಂದ. ನಮ್ಮಿಂದ ಹತ್ತು ಅಡಿ ಎತ್ತರದ ಮೇಲೆ ಆ ಗೂಡು ಇದ್ದಿತು.

ಕೆಮ್ಮಣ್ಣು ಕಡ್ಡಿಗಳಿಂದ ತಯಾರಾದ ಅದು ಗುಬ್ಬಿಯ ದೊಡ್ಡ ಗೂಡಿನಂತೆ ಕಾಣುತ್ತಿತ್ತು. ಹಲವು ಹಸಿರು ಕಡ್ಡಿಗಳನ್ನು ಹೆಣೆಯಲಾಗಿತ್ತು. ಸುಮಾರಾಗಿ ಯಾರೂ ಅದನ್ನು ಕಂಡುಹಿಡಿಯುವಂತಿರಲಿಲ್ಲ. ಫುಟ್‌ಬಾಲ್‌ನಷ್ಟು ದೊಡ್ಡದಾದ ಆ ಗೂಡು ಬಂಡೆಗಳ ಮರೆಯಲ್ಲಿ ಮಳೆಗಾಳಿಗಳಿಂದ ಸುರಕ್ಷಿತವಾಗಿದ್ದಿತು. ಅದರೊಳಗೇನಾದರೂ ಇರಬಹುದೆ ಎಂಬ ಕುತೂಹಲದಿಂದ ನಾನು ಅದರ ಎದುರಿನ ಮರವನ್ನೇರಿ ಹಣಿಕಿಕ್ಕಿ ನೋಡಲು ಅದು ಖಾಲಿ ಇದ್ದಿತು. ಮುಂದೆ ಸಾಗಿ ನೋಡಲಾಗಿ ಮತ್ತೆರಡು ಗೂಡುಗಳು ಕಂಡುಬಂದವಾದರೂ ಅವುಗಳಲ್ಲಿ ಕೂಡ ಮರಿಗಳಾಗಲಿ ತತ್ತಿಗಳಾಗಲಿ ಇರಲಿಲ್ಲ.

"ತುಸು ಹೊತ್ತು ಇಲ್ಲಿಯೆ ನಿಂತರೆ ಅದು ಬರುತ್ತದೆ" ಎಂದ ಎಲಿಸ್.

"ಹೌದೇ. ಹಾಗೇ ಆಗಲಿ?" ಎಂದೆ. ಆ ಗೂಡುಗಳು ನಮಗೆ ಕಾಣುವಂತೆ ಆದರೆ ನಾವು ಹಕ್ಕಿಗಳಿಗೆ ಕಾಣದಂತೆ ಒಂದು ದೊಡ್ಡ ಬಂಡೆಯ ಹಿಂದೆ ಅವಿತುಕೊಂಡೆವು.

ಸೂರ್ಯನು ಅಸ್ತಗಂತನಾಗಹತ್ತಿದ್ದ. ನಮ್ಮ ಎದುರಿಗಿದ್ದ ಮೂವತ್ತು ಅಡಿ ಎತ್ತರದ ಗಿಡದ ಮೇಲೆ ಆತನ ಕೆಂಗದಿರುಗಳು ಇನ್ನೂ ಇದ್ದವು. ಕತ್ತಲೆ ಸಾವಕಾಶವಾಗಿ ಪಸರಿಸಹತ್ತಿತು. ಅಷ್ಟರಲ್ಲಿ ಹಠಾತ್ತಾಗಿ ಪಿಕಾಥಾರ್ಟಿಸ್ ಹಕ್ಕಿ ಪ್ರತ್ಯಕ್ಷವಾಯಿತು. ಉಷ್ಣಕಟಿಬಂಧದ ಅಡವಿಗಳಲ್ಲಿ ಪ್ರಾಣಿಗಳೂ ಹಕ್ಕಿಗಳೂ ಅನಿರೀಕ್ಷಿತವಾಗಿ ಹಠಾತ್ತಾಗಿ ಪ್ರತ್ಯಕ್ಷವಾಗುತ್ತವೆ. ಈ ಪ್ರಾಣಿಗಳನ್ನು ಕಾಡಿನಲ್ಲಿಯೆ ನೋಡುವುದರಲ್ಲಿ ಒಂದು ಅಪೂರ್ವ ಸೌಂದರ್ಯಾನುಭವವಿರುತ್ತದೆ. ಬಾಬ್ ಮತ್ತು ನಾನು ಚಕಿತರಾಗಿ ಸಂಭ್ರಮದಿಂದ ಆ ಹಕ್ಕಿಯನ್ನು ನೋಡುತ್ತ ಕುಳಿತೆವು.

'ಪಿಕಾಥಾರ್ಟಿಸ್' ದೊಡ್ಡ ಗಿಡುಗನಂತಿದ್ದು ಟುಮುಕಾಗಿದ್ದಿತು. ಉದ್ದವಾದ ಕಾಲುಗಳು ಸಶಕ್ತವಾಗಿದ್ದು ಅದರ ದೃಷ್ಟಿ ಡೇಗೆಯಂತೆ ತೀಕ್ಷ್ಣವಾಗಿದ್ದಿತು. ಪಕ್ಕಗಳೂ ಪುಚ್ಛವೂ ಬೂದಿ ಬಣ್ಣದವಾಗಿದ್ದವು. ಅದರ ತಲೆ ಬೋಳಾಗಿದ್ದಿತು. ಅದರ ಹಣೆಮುಂದಲೆಗಳು ನೀಲಿ, ನೆತ್ತಿಯು ತಿಳಿಗೆಂಪು, ಹಿಂಭಾಗ ಹಾಗೂ ಪಕ್ಕಗಳು ಕಪ್ಪು; ಹೀಗೆ ತ್ರಿವರ್ಣರಂಜಿತ ಕಿರೀಟವನ್ನೇ ಆ ಹಕ್ಕಿ ಧರಿಸಿದಂತಿದ್ದಿತು. ಅದು ಒಮ್ಮೆಲೆ ಗಿಡದಿಂದ ನೆಲಕ್ಕಿಳಿದು ಅತ್ತಿತ್ತ ನೆಗೆದಾಡಿ ಪುನಃ ಹಾರಿಹೋಯಿತು. ಅದರ ದನಿ ಮಾತ್ರ ಕೇಳುತ್ತಿತ್ತು. ಒಂದೆರಡು ನಿಮಿಷದಲ್ಲಿ ಅದು ತನ್ನ ಜೊತೆಗಾರ್ತಿಯನ್ನು ಕರೆದುಕೊಂಡು ಬಂದು ಆ ಗೂಡನ್ನು ಪರೀಕ್ಷಿಸಿ ಪುನಃ ಹಾರಿಹೋಗಿಬಿಟ್ಟಿತು.

ಆ ರಾತ್ರಿ ಅಲ್ಲಿಯೆ ಉಳಿದು ಮರುದಿನ ಗೂ-

ಡನ್ನು ಪರೀಕ್ಷಿಸುವಾ ಎಂದು ಎಲಿಸ್ ಸೂಚಿಸಿದರೂ ಹಳ್ಳಿಗೇ ಹಿಂತಿರುಗೋಣವೆಂದು ನಾನು ಹೇಳಿದೆ

ಪಿಕಾಥಾರ್ಟಿಸ್ ಹಕ್ಕಿಗಳನ್ನು ಕಣ್ಣಾರೆ ಕಂಡಿದ್ದಕ್ಕೆ ನನಗೆ ತುಂಬ ಸಂತೋಷವಾಗಿದ್ದರೂ ಅವುಗಳ ಮರಿಗಳು ಸಿಗುವುದಿಲ್ಲವೆಂದು ನಿರಾಶೆಯಾಗಿದ್ದಿತು. ಆದ್ದರಿಂದ ಮರುದಿನ ಕ್ಯಾಂಪಿಗೆ ಹಿಂತಿರುಗಬೇಕೆಂದು ನಿರ್ಧರಿಸಿದೆ. ಒಣ ಮರಗಳ ಪೊದರುಗಳಲ್ಲಿ ಅಡಗಿಕೊಂಡಿರುವ ಪ್ರಾಣಿಗಳನ್ನು ಹೊಗೆ ಹಾಕಿ ಹೊರಬೀಳಿಸಿ ಹಿಡಿಯುವುದೇ ಕಾಮೆರೂನ್ಸ್‌ನಲ್ಲಿ ಅಧಿಕ ಫಲದಾಯಕವೆಂದು ನಾನು ಮನಗಂಡಿದ್ದರಿಂದ ಕ್ಯಾಂಪಿಗೆ ಹಿಂತಿರುಗುವಾಗ ದಾರಿಯಲ್ಲಿ ಆ ಪ್ರಯೋಗ ಮಾಡಿನೋಡಬೇಕೆಂದೆ.

ಮರುದಿನ ಬೆಳಿಗ್ಗೆ ಎಶೋಬಿಯಿಂದ ಕ್ಯಾಂಪಿಗೆ ಹೊರಟೆವು.

ಕಾಡಿನಲ್ಲಿ ಮೂರು ಮೈಲು ನಡೆದುಬಂದ ನಂತರ ನೂರೈವತ್ತು ಅಡಿ ಎತ್ತರದ ಒಣ ಮರವೊಂದು ಕಂಡುಬಂದಿತು. ಗಿಡಕ್ಕೆ ಹೊಗೆ ಹಾಕುವುದು ಮಹಾ ಪ್ರಯಾಸದ ಕೆಲಸವಾದ್ದರಿಂದ ಆ ಗಿಡದಲ್ಲಿ ಅಡಗಿಕೊಂಡಿರುವ ಪ್ರಾಣಿಗಳು ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲವಾಗಬಲ್ಲವೆ ಎಂಬುದನ್ನು ನೋಡಿಕೊಳ್ಳಬೇಕು. ಕೋಲಿನಿಂದ ಆ ಗಿಡವನ್ನು ಚೆನ್ನಾಗಿ ಬಾರಿಸಿದರೆ ಒಳಗಿರುವ ಪ್ರಾಣಿಗಳು ಅತ್ತಿತ್ತ ಗಾಬರಿಯಿಂದ ಓಡಾಡಹತ್ತುತ್ತವೆ. ಸದ್ದು ಕೇಳಿಬರದಿದ್ದರೂ ಅವುಗಳ ಓಡಾಟಕ್ಕೆ ಒಣ ಗಿಡದ ಕಟ್ಟಿಗೆ ಪುಡಿ ಉದುರುತ್ತದೆ. ಹೀಗೆ ಪ್ರಾಣಿಗಳಿವೆಂಬುದನ್ನು ಖಚಿತಪಡಿಸಿಕೊಂಡ ನಂತರ ಆ ಗಿಡಕ್ಕೆ ಮೇಲೆ ಎಲ್ಲೆಲ್ಲಿ ತೂತುಗಳಿವೆಯೊ ಅವನ್ನೆಲ್ಲ ದುರ್ಬೀನಿನ ಸಹಾಯದಿಂದ ಗುರುತಿಸಿ ಅವುಗಳಿಗೆ ಜಾಳಿಗೆ ಕಟ್ಟಿಬಿಡಬೇಕು. ನಂತರ ಗಿಡದ ತುದಿಗೆ ಒಬ್ಬನನ್ನು

ಕುಳ್ಳಿರಿಸಿ ಅಲ್ಲಿ ಬಂದು ಅಡಗಿಕೊಳ್ಳುವ ಪ್ರಾಣಿಗಳನ್ನು ಅಲ್ಲಿಂದ ಹೊರಡಿಸಲು ಹೇಳಬೇಕು. ಬಳಿಕ ಕಾಂಡದ ಹತ್ತರ ಹೊದರಿನಲ್ಲಿ ತರಗೆಲೆಗಳನ್ನು ತುಂಬಿ ಉರಿ ಹಚ್ಚಬೇಕು. ಈಗ ತುಸು ಮೈಮರೆತರೆ ಉರಿಯು ಹೆಚ್ಚಿ ಇಡೀ ಗಿಡವೇ ಸುಟ್ಟು ಹೋಗಬಹುದು. ಆ ಉರಿಯ ಮೇಲೆ ಹಸಿ ಹುಲ್ಲುಕಡ್ಡಿಗಳನ್ನು ಹಾಕಿ ಹೊಗೆಯನ್ನು ಹೆಚ್ಚಿಸಬೇಕು. ಆ ಹೊಗೆಯು ಗಿಡವನ್ನೆಲ್ಲ ತುಂಬುತ್ತ ಹೋದಂತೆ ಗಿಡದಲ್ಲಿ ಅವಿತುಕೊಂಡ ನಾನಾ ಪ್ರಾಣಿಗಳು–ಹಾವು, ಬೆಕ್ಕು, ಇಲಿ, ತೊಗಲುಬಾವಲಿ—ಹೊರಬಿದ್ದು ಗಿಡಕ್ಕೆ ಕಟ್ಟಿದ ಜಾಳಿಗೆಗಳಲ್ಲಿ ಸಿಕ್ಕಿಬೀಳುತ್ತವೆ. ಇದೊಂದು ರೋಮಾಂಚಕಾರಿ ಅನುಭವ.

ನಮ್ಮ ಈ ಸಾಹಸದಲ್ಲಿ ಆ ಪೊಳ್ಳುಮರದಿಂದ ಐದು ತೊಗಲುಬಾವಲಿಗಳು ಎರಡು ಹಸಿರು ಇಣಚಿಗಳು, ಎರಡು ಹಸಿರು ಇಲಿಗಳು, ಆರು ದೊಡ್ಡಿಲಿಗಳು, ದೊರೆತವು. ಒಂದು ಚಿಣಗಿ ಹಾವು ಗಿಡದಿಂದ ಹೊರಬಿದ್ದರೂ ಜಾಳಿಗೆಯಿಂದ ಪಾರಾಗಿ ಕಾಡಿನಲ್ಲಿ ಅದೃಶ್ಯವಾಯಿತು.

ಇಷ್ಟೊಂದು ಪ್ರಾಣಿಗಳು ದೊರೆತದ್ದರಿಂದ ಎಲ್ಲರೂ ಸಂಭ್ರಮದಿಂದ ಕುಣಿದಾಡಹತ್ತಿದರು. ಗಿಡದ ಮೇಲಿದ್ದವನಂತೂ ತನ್ನ ಅಬ್ಬರದಲ್ಲಿ ಎಲ್ಲಿ ಕೆಳಗುರುಳುವನೊ ಎಂದೆನಿಸಿತ್ತು. ಹೊಗೆಯೆಲ್ಲ ಅಡಗಿದ ಮೇಲೆ ನಾವು ಸಿಗರೇಟು ಹಚ್ಚಿಕುಳಿತಾಗ ಗಿಡದ ಮೇಲಿದ್ದವನು ಎರಡು ಕಟ್ಟಿದ ಚೀಲಗಳನ್ನು ಹಿಡಿದುಕೊಂಡು ಕೆಳಗಿಳಿದ.

"ಏನಿದೆ ಇದರಲ್ಲಿ?" ಎಂದು ಕೇಳಿದೆ.

"ಬೇಟೆ ಸಾಹೇಬರೆ."

"ಎಂಥ ಬೇಟೆಯೊ? ಇಲಿಯೊ? ಮಂಗನೋ?" ಎಂದು ಉದ್ರೇಕದಿಂದ ವಿಚಾರಿಸಿದೆ

"ಮಂಗನಂಥದು ಸಾಹೇಬರೆ."

ಸಾವಧಾನದಿಂದ ನಾನು ಆ ಚೀಲದ ಬಾಯಿ ಬಿಚ್ಚಿ ನೋಡಲಾಗಿ ಏಕಾಂತದಲ್ಲಿ ಪರಪುರುಷನನ್ನು ಕಂಡು ಬೆಚ್ಚಿದ ವಿಧವೆಯ ಕಣ್ಣುಗಳಂತಿದ್ದ ಕಣ್ಣುಗಳಿಂದ ನನ್ನನ್ನೆ ದೃಷ್ಟಿಸುತ್ತಿದ್ದ



ಉದ್ದಗಿವಿಯ ಚಿಕ್ಕ ಮುಖವೊಂದು ಕಾಣಿಸಿತು. ಕಪಿಯಂತಿದ್ದ ಆ ಪ್ರಾಣಿಯ ಕೈಗಳು ಮನುಷ್ಯನಂತಿದ್ದು ಬೆರಳುಗಳು ಕೂಡ ಹಾಗೇ ಇದ್ದವು. ಆದರೆ ಹೆಬ್ಬೆರಳಿನ ಉಗುರು ಮಾತ್ರ ಉದ್ದವಾಗಿ ಕೊಂಕಾಗಿತ್ತು.

"ಏನಿದು?" ಎಂದು ಕೇಳಿದ ಬಾಬ್.

"ಈಯೊಟಿಕಸ್ ಎಲೆಗಾಂಟುಲಸ್ ಎಂದು ಇದರ ಶಾಸ್ತ್ರೀಯ ಹೆಸರು. ಇದೊಂದು ಕಪಿ ವಿಶೇಷ ಯುರೋಪಿನಲ್ಲಿ ಕಾಣಸಿಗುವುದಿಲ್ಲ. ಇದನ್ನು ಹಿಡಿಯಲೆಂದೇ ನಾನು ಇಲ್ಲಿಗೆ ಬರುತ್ತಿದ್ದದ್ದು. ಇದನ್ನು ಜೀವಂತವಾಗಿ ಯುರೋಪಿಗೆ ಒಯ್ದರೆ, ಅಲ್ಲಿ ಇದೇ ಮೊದಲನೆಯದಾಗುವುದು" ಎಂದು ಸಂಭ್ರಮದಿಂದ ತಿಳಿಸಿದೆ.

ನಾನು ಎಲಿಸ್‌ನ ಕಡೆಗೆ ತಿರುಗಿ, "ಇಂಥ ಪ್ರಾಣಿಗಳು ಸಿಕ್ಕಷ್ಟು ನನಗೆ ಬೇಕು. ಒಂದೊಂದಕ್ಕೆ ಒಂದೊಂದು ಪೌಂಡಿನಂತೆ ಹಣ ಕೊಡುತ್ತೇನೆ. ಎಶೋಬಿಯ ಎಲ್ಲ ಬೇಟೆಗಾರರಿಗೆ ತಿಳಿಸಿರಿ" ಎಂದು ಹೇಳಿ ಇದಕ್ಕೊಂದು ಒಳ್ಳೆಯ ಪಂಜರ ಒದಗಿಸಲು ಆದಷ್ಟು ಬೇಗ ಮ್ಯಾಂಫೆಗೆ ಹಿಂತಿರುಗೋಣ ಎಂದು ಬಾಬ್‌ನಿಗೆ ನುಡಿದೆ.

ಭಾಗ ೨— ಬಾಫುಟಕ್ಕೆ ಫೋನ್‌ನ ಭೇಟಿ

ಎಶೋಬಿಯಿಂದ ಮ್ಯಾಂಫೆಗೆ ಹಿಂತಿರುಗಿದ ಕೂಡಲೆ, ಬಾಬ್ ಮತ್ತು ಸೋಫಿಯನ್ನು ಇನೂ

ಕೆಲವು ಮಾದರಿ ಪ್ರಾಣಿಗಳನ್ನು ಸಂಗ್ರಹಿಸುವು ದಕ್ಕಾಗಿ ಮ್ಯಾಂಫೆಯಲ್ಲಿಯೆ ಬಿಟ್ಟು, ನಾನು ಮತ್ತು ಜೇಕಿ ಸಾಮಾನುಗಳನ್ನೆಲ್ಲ ಲಾರಿಗಳಲ್ಲಿ ತುಂಬಿಕೊಂಡು ಬಾಫುಟಕ್ಕೆ ಹೊರಟೆವು.

ಅಂದು ಮುಚ್ಚಂಜೆಯ ಹೊತ್ತಿಗೆ ನಾವು ಬಾಫುಟಕ್ಕೆ ತಲುಪಿ ಫೋನ್‌ನ ಅರಮನೆಯ ಆವಾರದಲ್ಲಿದ್ದೆವು. ಎಡಗಡೆಗೆ ವಿಶಾಲವಾದ ಅಂಗಳ. ಅದರಾಚೆಗಿರುವ ಚಿಕ್ಕ ಚಿಕ್ಕ ಗುಡಿಸಲುಗಳಲ್ಲಿ ಫೋನ್‌ನ ಹೆಂಡಂದಿರೂ ಮಕ್ಕಳೂ ವಾಸಿಸುತ್ತಿದ್ದರು. ಆ ಗುಡಿಸಲುಗಳ ಮಧ್ಯೆ ಒಂದು ದೊಡ್ಡದಾದ ಗುಡಿಸಲು; ಅಲ್ಲಿ ಫೋನ್‌ನ ತಂದೆಯ ಭೂತ ಸುಳಿದಾಡುತ್ತಿದೆಂಬ ನಂಬಿಗೆ ಎಲ್ಲರದೂ. ರಸ್ತೆಯ ಬಲಗಡೆಗೆ ಇದ್ದ ಎರಡಂತಸ್ತಿನ ಕಲ್ಲಿನ ಕಟ್ಟಡವೇ ಫೋನ್‌ನು ಕಟ್ಟಿಸಿದ್ದ ಅತಿಥಿ ಗೃಹ. ಕಟ್ಟಡದ ಸುತ್ತಲೂ ವರಾಂಡಾ, ಹೂಬಳ್ಳಿಗಳಿಂದ ಭೂಷಿತವಾಗಿದ್ದಿತು.

ದಣಿದು ಬಂದಿದ್ದ ನಾವು ಸಾಮಾನುಗಳನ್ನೆಲ್ಲ ಕೆಳಗಿಳಿಸಿ ಹಚ್ಚಿಟ್ಟು ಜೊತೆಯಲ್ಲಿ ತಂದಿದ್ದ ಹಕ್ಕಿ ಪ್ರಾಣಿಗಳ ಊಟವನ್ನು ತೀರಿಸುವುದರೊಳಗಾಗಿ ನಮ್ಮ ಅಡಿಗೆಯವ ಫಿಲಿಪ್ ನಮಗಾಗಿ ರುಚಿಕಟ್ಟಾದ ಭೋಜನ ತಯಾರಿಸಿದ್ದ.

ಮರುದಿನ ಬೆಳಿಗ್ಗೆ ಎದ್ದು ನಮ್ಮ ಯಜಮಾನ ಫೋನ್‌ನನ್ನು ಕಾಣಲು ಹೊರಟೆವು. ಅಂಗಳವನ್ನು ದಾಟಿ ಫೋನ್‌ನ ಜನಾನಖಾನೆಯ ಮಧ್ಯದಲ್ಲಿ ಹೋದ ಬಳಿಕ ಪೇರಲ ಗಿಡಗಳಿಂದ ಸುತ್ತುಗಟ್ಟಲ್ಪಟ್ಟ ಫೋನ್‌ನ ಬಂಗಲೆ ಕಾಣಿಸಿತು. ಎತ್ತರದ ವರಾಂಡದಲ್ಲಿ ಫೋನ್ ನಮ್ಮ ಸ್ವಾಗತಕ್ಕಾಗಿ ಸಿದ್ಧನಾಗಿ ನಿಂತಿದ್ದ. ಹರ್ಷೋದ್ಗಾರಗಳಿಂದ ಪರಸ್ಪರ ಸ್ವಾಗತವಾದ ನಂತರ ನಾನು ನನ್ನ ಹೆಂಡತಿ ಜೇಕಿಯನ್ನು ಫೋನ್‌ನಿಗೆ ಪರಿಚಯ ಮಾಡಿಕೊಟ್ಟೆ. ಆರಡಿ ಮೂರಂಗುಲದ ಎತ್ತರದ ಫೋನ್‌ನ ಎದುರಿಗೆ ನನ್ನ ಐದಡಿ

ಒಂದಂಗುಲದ ಸತಿ ಗೊಂಬೆಯಂತೆ ಕಂಡಳು.

"ನಡೆಯಿರಿ, ಒಳಗೆ ಹೋಗೋಣ" ಎಂದು ಫೋನ್ ನಮ್ಮನ್ನು ಒಳಗೆ ಕರೆದೊಯ್ದ.

ಒಳಗೆ ಹೋಗಿ ಸುಂದರವಾದ-ಸೋಫಾಗಳ ಮೇಲೆ ಮಂಡಿಸಿದ ಬಳಿಕ ಫೋನ್‌ನ ಹೆಂಡಂದಿರು ಪಾನೀಯದ ಟ್ರೇ ಹೊತ್ತು ತಂದಿಳುಹಿದರು. ಈ ಎಂಟು ವರ್ಷಗಳಲ್ಲಿ ಫೋನ್‌ನ ಮದ್ಯಪಾನವೇನೂ ಕಡಿಮೆಯಾಗಿರಲಿಲ್ಲೆಂಬುದು ಆಗ ಸ್ಪಷ್ಟವಾಯಿತು.

"ನನ್ನ ಪುಸ್ತಕದಲ್ಲಿ ನಿಮ್ಮ ಬಗ್ಗೆ ಏನೇನೋ ಬರೆದುಬಿಟ್ಟಿದ್ದೇನೆ. ನಿಮಗೇನೂ ಸಿಟ್ಟಿಲ್ಲವಷ್ಟೆ" ಎಂದು ಹೆದರುತ್ತಲೇ ವಿಚಾರಿಸಿದೆ.

"ಸಿಟ್ಟೆಲ್ಲಿಯದು ಮಾರಾಯಾ; ಆ ರಾಣಿಯನ್ನು ನೋಡಲು ನಾನು ಲಾಗೋಸಿಗೆ ಹೋದಾಗ ಅಲ್ಲಿಯ ಬಿಳಿಯರೆಲ್ಲ ನಿನ್ನ ಪುಸ್ತಕದಲ್ಲಿ ನನ್ನ ಹೆಸರು ಬರೆಸಿಕೊಂಡುಬಿಟ್ಟರು" ಎಂದು ಅಟ್ಟಹಾಸದಿಂದ ಉತ್ತರಿಸಿದ.

ನನ್ನ ಪುಸ್ತಕಕ್ಕೆ ಈತನು ಸ್ವಾಕ್ಷರ ಕೊಡುವುದು! ಅವಾಕ್ಕಾಗಿ ನಾನು ಆತನ ಮುಖವನ್ನೇ ನೋಡುತ್ತ ಕುಳಿತೆ. ಆತನ ಕಣ್ಣುಗಳು ವಿಸ್ಕಿ ಬಾಟಲಿಯಲ್ಲಿ ಕೀಲಿಸಿದ್ದವು. ನಾವು ಹೊರಡಲು ಎದ್ದುನಿಂತದ್ದನ್ನು ಕಂಡು ಫೋನ್ ಸಂಜೆಯ ಮಧುಪಾನಕ್ಕೆ ಆಮಂತ್ರಣವಿತ್ತನಲ್ಲದೆ, ಇಲ್ಲಿಯ ಮನೋರಂಜನೆಯೇನೆಂಬುದನ್ನು ಆಗ ನಿಮಗೆ ತೋರಿಸುತ್ತೇನೆಂದು ಜೇಕಿಗೆ ಹೇಳಿದ. ಆಕೆ ಮುಗುಳ್ನಗೆ ನಕ್ಕಳು.

"ಇಷ್ಟು ಪಾನ ಮಾಡಿದ ಮೇಲೆ ಉಪಹಾರಕ್ಕೆ ರುಚಿಯೇ ಉಳಿಯಲಿಲ್ಲ" ಎಂದಳು ಆಕೆ ದಾರಿಯಲ್ಲಿ.

"ಇದು ಏನೇನೂ ಅಲ್ಲ. ಇಂದು ರಾತ್ರಿ ನೋಡುವಿಯಂತೆ" ಎಂದೆ.

"ರಾತ್ರಿ ನಾನು ಕುಡಿಯುವುದೇ ಇಲ್ಲ. ನಿಮ್ಮೆಬ್ಬರಿಗೇ ಬಿಟ್ಟುಬಿಡುತ್ತೇನೆ."

ಆತಿಥಿಗೃಹಕ್ಕೆ ಬಂದು ಉಪಹಾರ ತೀರಿಸಿಕೊಂಡು ಪ್ರಾಣಿಗಳ ಪಂಜರಗಳನ್ನು ಹೊಂದಿಸಿಡುತ್ತಿರುವಾಗಲೇ ಕೆಲವರು ತಲೆಯ ಮೇಲೆ ಚಿಕ್ಕ ಬುಟ್ಟಿಗಳನ್ನು ಹೊತ್ತುಕೊಂಡು ಬಂದು ನಮಗೆ ಸಾಷ್ಟಾಂಗ ನಮಸ್ಕರಿಸಿ ಬುಟ್ಟಿಗಳನ್ನು ನಮ್ಮ ಮುಂದಿಟ್ಟರು.

"ಏನು ಇದೆಲ್ಲ?" ಎಂದು ಪ್ರಶ್ನಿಸಿದೆ.

"ಹೊಸ ಬೇಟೆ ಸಾಹೇಬರೆ" ಅಂದರು.

"ನಮಗೆ ಇವು ಬೇಕೆಂದು ನಿಮಗೆ ಹೇಗೆ ಗೊತ್ತಾಯಿತೊ?"

"ನಮ್ಮ ದೊರೆಗಳು ಎಲ್ಲ ಹೇಳಿಟ್ಟಿದ್ದಾರೆ."

"ಫೋನ್ ಹೀಗೆ ನಾವು ಬರುವುದಕ್ಕೆ ಮೊದಲೆ ನಮ್ಮ ಬಗ್ಗೆ ಪ್ರಚಾರ ಮಾಡಿರುವನಾದರೆ ಒಂದೆರಡು ದಿನಗಳಲ್ಲಿಯೇ ನೂರಾರು ಪ್ರಾಣಿಗಳು ಬಂದು ಸೇರಬಹುದು" ಎಂದಳು ಜೇಕಿ.

ಬುಟ್ಟಿಯಲ್ಲಿರುವುದೇನು ಎಂದು ಕೇಳಿದರೆ ಅವರು "ಅಳಿಲು-ಅಳಿಲು ಸ್ವಾಮಿ. ಪುಟ್ಟದು, ಕಚ್ಚುವುದಿಲ್ಲ" ಎಂದು ಏನೇನೋ ಹೇಳಹತ್ತಿದರು.

ನಿರುಪದ್ರವಿ ಪ್ರಾಣಿಯದು ಎಂದು ನಂಬಿ ಬುಟ್ಟಿಗೆ ಕೈಹಾಕಿದೆ. ನಾಗರ ಹಾವು ಇದ್ದರೂ



ಇರಬಹುದು ಎಂದು ಜೇಕಿ ಎಚ್ಚರಿಸಿದಳು. ಬುಟ್ಟಿಯನ್ನು ಬಿಡಿಸಿ ನೋಡಲಾಗಿ ಒಳಗೆ ಮೂರುವರೆ ಅಂಗುಲದ ಪುಟ್ಟ ಅಳಿಲು ಇದ್ದಿತು. ಇನ್ನೂ ಮರಿಯಾಗಿದ್ದ ಅದು ಮೋಹಕವಾಗಿದ್ದಿತು. ಅದನ್ನು ಕಂಡು ಜೇಕಿಗೆ ಅಪಾರ ಸಂಭ್ರಮ. ಅದ್ದರಿಂದ "ನೀನು, ಬೇಕಾದರೆ ಇದನ್ನಿಟ್ಟುಕೊಳ್ಳಬಹುದು ಜೇಕಿ. ಕಪ್ಪು ಕಿವಿಯ ಇಂಥ ಇಣಚಿಗಳು ಸಿಗುವುದು ಕಷ್ಟ. ಆದರೆ ಇದರ ಹೊಟ್ಟೆಗೆ ಹಾಕುವುದೇ ಮಹಾ ಪ್ರಯಾಸ" ಎಂದೆ.

"ಓ, ಇದು ಸಶಕ್ತವಿದೆ. ಚಿಂತಿಸಬೇಕಾಗಿಲ್ಲ" ಎಂದಳು.

ಇದುವರೆಗೆ ನಮ್ಮ ಕೈಗೆ ಸಿಕ್ಕಿದ್ದ ಇಣಚಿಗಳೆಲ್ಲ ಸತ್ತುಹೋಗಿದ್ದವು.

"ಈ ಇಣಚಿ ಚೆನ್ನಾಗಿದೆ. ಇಂಥವು ಇನ್ನೂ ಸಿಕ್ಕರೆ ಬೇಕು. ಈಗ ಇದಕ್ಕೆ ಎರಡು ಶಿಲ್ಲಿಂಗುಗಳನ್ನು ಕೊಡುತ್ತೇನೆ. ಎರಡು ವಾರಗಳ ನಂತರ ನಾನೀಗ ಕೊಡುವ ಚೀಟಿಯನ್ನು ತಂದು ತೋರಿಸಬೇಕು. ಆಗ ಈ ಇಣಚಿ ಜೀವಂತವಿದ್ದರೆ ಮತ್ತೆ ಐದು ಶಿಲಿಂಗ್ ಕೊಡುತ್ತೇನೆ," ಎಂದು ಆತನಿಗೆ ಒಂದು ಚೀಟಿ ಕೊಟ್ಟು ಎಚರಿಸಿದೆ.

ನಾನು ಇನ್ನೊಂದು ಬುಟ್ಟಿಯನ್ನು ಬಿಚ್ಚಿದ ಕೂಡಲೆ ಇಲಿಯಂಥ ಪೋತಿಯೊಂದು ಹೊರಗೆ ಬಂದು ನನ್ನ ಬೆರಳನ್ನು ಕಚ್ಚಿತು. ಹಾಯ್ ಎಂದು ಅರಚಿದೊಡನೆ ಬೇಟೆಗಾರರೂ ನೊಂದುಕೊಂಡರು.

"ಏನದು ?" ಎಂದು ಜೇಕಿ ಧಾವಿಸಿದಳು.

"ಮುಂಗುಲಿ ಮರಿ. ಇಲ್ಲಿಯ ಮುಂಗುಲಿಗಳು ಆಕಾರಮಾನದಿಂದ ಬಲುಭೀಕರವಾಗಿರುತ್ತವೆ."

"ಎರಡು ಪ್ರಕಾರದ ಮುಂಗುಲಿಗಳಿರುವುದು ಒಳ್ಳೆಯದಲ್ಲವೆ" ಎಂದಳು.

"ಆಗಲಿ" ಎಂದು ಅದನ್ನೂ ಇಟ್ಟುಕೊಂಡೆ. ಅದಕ್ಕೆಂದು ಪಂಜರವನ್ನು ಹುಡುಕುವ ವರೆಗೆ ಆದನ್ನು ಚೀಲದಲ್ಲಿ ಬಂಧಿಸಿಟ್ಟೆ.

ರಾತ್ರಿ ಭೋಜನದ ನಂತರ ಒಂದು ವಿಸ್ಕಿ ಬಾಟ್ಲಿ, ಸಾಕಷ್ಟು ಸಿಗಾರೇಟುಗಳು, ಪೆಟ್ರೊ-ಮ್ಯಾಕ್ಸ್ ದೀಪ ಹಿಡಿದುಕೊಂಡು ಫೋನ್‌ನ ಮನೆಗೆ ಸಾಗಿದೆವು. ರಾತ್ರಿಯಾಗಿದ್ದರೂ ಸೆಕೆ ಇದ್ದಿತು. ಜನಾನಖಾನೆಯ ಗುಡಿಸಲುಗಳನ್ನು ದಾಟಿ ಹೋಗುವಾಗ ಮೀನ ಮಾಂಸಗಳ ಅಡಿಗೆಯ ರುಚಿ ವಾಸನೆ ಮೂಗಿಗೆ ತಟ್ಟುತ್ತಿತ್ತು. ಫೋನ್‌ನ ಮಕ್ಕಳು 'ಹತ್ತಂಬಾಳ ಹಲಗಿಬಡ್ಡಿ' ಆಟದಲ್ಲಿ ತೊಡಗಿದ್ದರು. ಫೋನ್‌ನು ತನ್ನ ಮನೆಯ ಬಾಗಿಲಲ್ಲಿಯೆ ನಮ್ಮ ದಾರಿ ಕಾಯುತ್ತ



ನಿಂತಿದ್ದ.

ನಮ್ಮನ್ನು ಕಂಡವನೇ "ಸಂತೋಷ ಸಂತೋಷ!" ಎಂದು ಸ್ವಾಗತಿಸಿ ನರ್ತನ ಶಾಲೆಗೆ ಕರೆದೊಯ್ದ. ಆತನ ಇಬ್ಬರು ಹೆಂಡಂದಿರು ಪಾನೀಯದ ಟ್ರೇಯೊಂದಿಗೆ ನಮಗಿಂತ ಮುಂದೆ ಧಾವಿಸಿದರು.

ನರ್ತನಶಾಲೆ ಚಚ್ಚೌಕಾದ ವಿಶಾಲವಾದ ಮನೆಯಾಗಿದ್ದಿತು. ಚಿಕ್ಕವಾದ ಕೆಲವೇ ಕಿಟಿಕಿಗಳು ಇದ್ದವು ಅದಕ್ಕೆ. ಒಂದು ಕಡೆಗೆ ಗೋಡೆಗೆ ಹೊಂದಿ ಕೆಲವು ಕುರ್ಚಿಗಳನ್ನಿಡಲಾಗಿತ್ತು. ಅಲ್ಲಿ ಮೇಗಡೆ ಗೋಡೆಗಳಿಗೆ ರಾಜಕುಟುಂಬದವರ ಭಾವಪಟಗಳನ್ನು ತೂಗಹಾಕಲಾಗಿದ್ದಿತು. ನಾವು ನರ್ತನಶಾಲೆಯನ್ನು ಪ್ರವೇಶಿಸಿದ ಕೂಡಲೆ ಫೋನ್‌ನ ೪೦-೫೦ ಜನ ಹೆಂಡಂದಿರು ಕರತಾಡನ ಹರ್ಷೋದ್ಗಾರಗಳಿಂದ ನಮ್ಮನ್ನು ಸ್ವಾಗತಿಸಿದರು. ಫೋನ್‌ನ ಮಂತ್ರಿಗಳೂ ಇದರಲ್ಲಿ ಸೇರಿಕೊಂಡರು.

ಫೋನ್ ನಮ್ಮಿಬ್ಬರನ್ನೂ ನಿಟ್ಟಿಸಿ ನೋಡಿ "ಇನ್ನಿದು ಸಂತೋಷದ ಗಳಿಗೆ" ಎಂದು ವ್ಹಿಸ್ಕಿಯನ್ನು ಗ್ಲಾಸುಗಳಿಗೆ ಸುರಿದ.

ಬ್ಯಾಂಡ್‌ಮೇಳ ಬಂದಿತು. ನಾಲ್ವರು ಯುವಕರು, ಫೋನ್‌ನ ಇಬ್ಬರು ಹೆಂಡಿಂದಿರು ಅದರಲ್ಲಿದ್ದರು. ಮೂರು ಡೋಲುಗಳೂ ಎರಡು ಕೊಳಲುಗಳೂ ಕಾಳುತುಂಬಿದ ಒಂದು ಬುಡುಬುಡಿಕೆಯಂಥದು ಮೇಳದಲ್ಲಿಯ ವಾದ್ಯಗಳು. ಇವರು ಬಂದು ಒಂದು ಮೂಲೆಯನ್ನು ಆಕ್ರಮಿಸಿದರು. ಫೋನ್‌ನ ಆಜ್ಞೆಯಾದ ಕೂಡಲೆ ಬ್ಯಾಂಡ್ ಪ್ರಾರಂಭವಾಯ್ತು.

"ಮಿತ್ರಾ, ನೀನು ಹಿಂದಕ್ಕೆ ಇಲ್ಲಿಗೆ ಬಂದಾಗ ಯುರೋಪಿಯನ್ ನೃತ್ಯ ಕಲಿಸಿದ್ದು ನೆನಪಿದೆಯೆ ?" ಎಂದು ಫೋನ್ ಕೇಳಿದ.

ಕೊಂಗಾ ಎಂಬ ನೃತ್ಯವನ್ನು ಆಗ ನಾನು ಅವರಿಗೆ ಕಲಿಸಿದ್ದೆ. ಫೋನ್‌ನ ಪರಿವಾರದವರಿಗೆ ಅದು ಬಹಳ ಹಿಡಿಸಿತ್ತು.

ಫೋನ್ ಇನ್ನೊಮ್ಮೆ ಅರಚಿಕೊಂಡೊಡನೆ ಆತನ ಇಪ್ಪತ್ತು ಹೆಂಡಂದಿರು ನೃತ್ಯಾಂಗಣಕ್ಕೆ ಬಂದು ಶರ್ಯತ್ತಿನಲ್ಲಿ ಓಡಲು ಸಿದ್ಧರಾದವರಂತೆ ಮಂಡಿಯೂರಿ ಕುಳಿತರು. "ಏನು ಮಾಡುತ್ತಾರೆ" ಎಂದು ಕೇಳಿದಳು ಜೇಕಿ. "ಕೊಂಗಾ ನೃತ್ಯದ ಪ್ರದರ್ಶನ ನಡೆಯುವಂತೆ ತೋರುತ್ತದೆ" ಎಂದು ಉತ್ತರಿಸಿದೆ.

ಬ್ಯಾಂಡಿನ ಮೇಳದಲ್ಲಿ ಆ ಹೆಂಗಳೆಯರು ಕೊಂಗಾ ನೃತ್ಯವನ್ನು ಚೆನ್ನಾಗಿ ಪ್ರದರ್ಶಿಸಿದರು.

"ಚೆನ್ನಾಗಿ ನರ್ತಿಸುತ್ತಿದ್ದಾರೆ, ಮಿತ್ರಾ" ಎಂದೆ. ಜೇಕಿಯೂ ಈ ಪ್ರದರ್ಶನವನ್ನು ಮೆಚ್ಚಿಕೊಂ-ಕೊಂಡಳು.

"ನೀನೇ ಕಲಿಸಿದ ನೃತ್ಯ ಇದು" ಎಂದು ಹೇಳಿ ಜೇಕಿಯ ಕಡೆಗೆ ಹೊರಳಿ "ನಿನ್ನ ಗಂಡ ಶಕ್ತಿಶಾಲಿ. ಕುಣಿತ ಕುಡಿತ, ಕುಡಿತ ಕುಣಿತ ಹೀಗೆ ನಾವು ಸಂತೋಷದಿಂದ ಹೊತ್ತುಗಳೆದೆವು" ಎಂದು ನನ್ನನ್ನು ಪ್ರಶಂಸಿಸಿದ.

ಮೇಳದವರು ವಾದ್ಯಗಳನ್ನು ನುಡಿಸುವುದನ್ನು ನಿಲ್ಲಿಸಿದ ಕೂಡಲೆ ನಮ್ಮ ಕರತಾಡನದ ಪ್ರಶಂಸೆಯಿಂದ ಲಜ್ಜಿತರಾದ ಫೋನ್‌ನ ಹೆಂಡಂದಿರು ನೃತ್ಯಾಂಗಣದಿಂದ ನೆಲಕ್ಕೆ ಸರಿದರು. ಅವರ ಬೊಗಸೆಗಳಲ್ಲಿಯೆ ಅವರಿಗೆ ಮದ್ಯ ನೀಡಲಾಯ್ತು. ಫೋನ್ ನಮ್ಮ ಗ್ಲಾಸುಗಳನ್ನು ತುಂಬಿದ.

ಬಳಿಕ ನಾನೂ ಜೇಕಿ ಕೂಡಿ ದ್ರುತಗತಿಯ ಫಾಕ್ಸ್‌ಟ್ರಾಟ್ (ನೃತ್ಯ) ಮಾಡಿ ತೋರಿಸಿದೆವು.

" ಉತ್ತಮ ! ಉತ್ತಮ ! " ಎಂದು ಫಾನ್ ಪ್ರಶಂಸಿಸಿದ.

" ಏಯ್! ಕಾಲ್ತುಳಿಯ ಬೇಡ" ಎಂದು ಜೇಕಿ ನನ್ನನ್ನು ಎಚ್ಚರಿಸಿದಳು.

" ಇಷ್ಟು ರಾತ್ರಿಯಲ್ಲಿ ಜೋಲಿ ತಪ್ಪುತ್ತದೆ" ಎಂದೆ. " ಫೋನ್‌ನೊಡನೆ ನೀನೇಕೆ ನರ್ತಿಸಬಾರದು ? " ಎಂದೂ ಕೇಳಿದೆ.

" ಯಾವ ನೃತ್ಯ ಆಗಬಹುದು ? "

" ನೀನೇ ಹೊಸದಾಗಿ ಆತನಿಗೆ ಸುಲಭವಾದ ನೃತ್ಯ ಕಲಿಸು. "

ನಾವು ನಮ್ಮಲ್ಲಿಯೆ ವಿಚಾರ ಮಾಡಿಕೊಂಡು

C 6-17

ಫೋನ್‌ನ ಕಡೆಗೆ ಹೋಗಿ, "ನಾನು ನಿಮಗೆ ಯುರೋಪಿಯನ್ ನರ್ತನ ಕಲಿಸಿದ್ದೆ. ಈಗ ನನ್ನ ಹೆಂಡತಿ ನಿಮಗೆ ಮತ್ತೊಂದು ಹೊಸ ನರ್ತನ ಕಲಿಸಬೇಕೆಂದಿದ್ದಾಳೆ" ಎಂದು ಹೇಳಿಕೊಂಡ.

"ಆಗಲಿ, ಆಗಲಿ. ಸಿದ್ಧನಿದ್ದೇನೆ" ಎಂದ ಫೋನ್.

ವಾದ್ಯಮೇಳದವರಿಗೆ ಹೊಸ ನರ್ತನಕ್ಕೆ ತಕ್ಕಂತೆ ದಾಟಿಯನ್ನು ಹೇಳಿಕೊಟ್ಟೆವು. ಅವರು ಅರಗಿಸಿಕೊಂಡ ನಂತರ ಜೇಕಿ ಸಂಬಾ ನರ್ತನದ ಪ್ರಾಸ್ತಾವಿಕ ಮಟ್ಟುಗಳನ್ನು ಹೇಳಿಕೊಟ್ಟಳು. ಆತನೂ ಹೆಜ್ಜೆಗಳನ್ನು ಬೇಗನೆ ಕಲಿತುಕೊಂಡ. ಮುಂದೆ ಅವರಿಬ್ಬರೂ ನರ್ತಿಸತೊಡಗಿದಾಗ ಜೇಕಿ ಫೋನ್‌ನ ವಸ್ತ್ರಾಲಂಕಾರದಲ್ಲಿ ಮುಚ್ಚಿ ಹೋದಂತೆ ಕಂಡುಬರುತ್ತಿದ್ದಳು. ಬರಬರುತ್ತ ಜೇಕಿಯ ತಾಳಕ್ಕೆ ಆತ ನಡೆಯುತ್ತಿದ್ದಂತೆ ವ್ಯಕ್ತ ವಾಯಿತು. ಸುಮಾರು ಅರ್ಧಗಂಟೆ ಇವರ ಕುಣಿತ ನಡೆದು ಫೋನ್‌ನು ದಣಿದವನಾಗಿ ತನ್ನ ಕುರ್ಚಿಯಲ್ಲಿ ವಿಶ್ರಮಿಸಿದ.

"ನಿನ್ನ ಹೆಂಡತಿ ಉತ್ತಮವಾಗಿ ನರ್ತಿಸುತ್ತಾಳೆ. ಆಕೆಗೆ ವಿಶೇಷ ಪಾನೀಯದ ಬಹುಮಾನ ನೀಡಬೇಕೆಂದಿದ್ದೇನೆ" ಎಂದ ಫೋನ್.

ತನಗೊದಗಿದ ಗಂಡಾಂತರದ ಅರಿವಿಲ್ಲದೆ ಜೇಕಿ ತನ್ನ ಕುರ್ಚಿಯಲ್ಲಿ ವಿಶ್ರಮಿಸಿದ್ದಳು.

"ನಿನ್ನ ನರ್ತನ ಮೆಚ್ಚಿ ಫೋನ್ ನಿನಗೆ ವಿಶೇಷ ಪಾನೀಯ ನೀಡಲಿದ್ದಾನೆ" ಎಂದು ಎಚ್ಚರಿಸಿದೆ. ಜೇಕಿಗೂ ಹೊಳೆದುಹೋಯಿತು, ಫೋನ್‌ನ ವಿಶೇಷ ಪಾನೀಯವೆಂದರೆ ದೇಶೀಯವಾದ ಉಗ್ರ ಸೆರೆ ಎಂದು.

"ಅಯ್ಯೋ ದೇವರೆ, ಇನ್ನೇನು ಗತಿ! ನನಗಂತೂ ಅದನ್ನು ಕಂಡರೆ ಆಗುವುದಿಲ್ಲ."

"ಜೇಕಿ, ಒಂದು ಗ್ಲಾಸ್ ಎತ್ತಿಕೋ. ರುಚಿ ನೋಡಿ ಇಂಥ ಉತ್ತಮ ಮದ್ಯ ಸೇವಿಸಿದ್ದೆಂದರೆ ಇದೇ ಎಂದು ಫೋನ್‌ನಿಗೆ ಹೇಳಿಬಿಟ್ಟು ಉಳಿದ ಮದ್ಯವನ್ನು ಆತನ ಹೆಂಡಂದಿರೊಂದಿಗೆ ಹಂಚಿಕೊಳ್ಳುವುದಾಗಿ ಆತನಿಗೆ ಹೇಳಿಬಿಡು" ಎಂದು ಸೂಚಿಸಿದೆ.

ಮದ್ಯದ ಐದು ಹೂಜೆಗಳು ಬಂದವು. ಫೋನ್‌ನು ಎಲ್ಲ ಹೂಜೆಗಳಲ್ಲಿಯ ಮದ್ಯವನ್ನು ಒಂದೊಂದು ಗುಟುಕು ರುಚಿ ನೋಡಿ ಅತ್ಯುತ್ತಮವಾದದ್ದನ್ನು ನಿರ್ಧರಿಸಿ ಅದನ್ನೇ ಜೇಕಿಗೆ ಕೊಡಲು ಹೇಳಿದ. ಮುಂದಿನ ನಾಟಕ ನಾನು ಸೂಚಿಸಿದಂತೆಯೆ ನಡೆಯಿತು.

ನಸುಕಿನ ೨॥ ಗಂಟೆಯಾಗಿದ್ದಿತು. ನಾವಿಬ್ಬರೂ ಎದ್ದು ಫೋನ್‌ನನ್ನು ಅಭಿನಂದಿಸಿ ಅತಿಥಿಗೃಹಕ್ಕೆ ಹಿಂತಿರುಗಿದೆವು.

ಪಂಜರದಲ್ಲಿಯ ಪ್ರಾಣಿಗಳು

ಮ್ಯಾಂಫೆಯಿಂದ ಬಾಬ್ ಮತ್ತು ಸೋಫಿ ಬಂದು ಬಾಪುಟದಲ್ಲಿ ನಮ್ಮನ್ನು ಕೂಡಿಕೊಂಡೊಡನೆ ನಾವು ನಮ್ಮ ಹೆಚ್ಚುತ್ತಿರುವ ಪ್ರಾಣಿ ಸಂಗ್ರಹವನ್ನು ಸುವ್ಯವಸ್ಥಿತವಾಗಿಸಹತ್ತಿದೆವು. ಉರಗಗಳಿಗೊಂದು, ಖಗಗಳಿಗೊಂದು ಹಾಗೂ ಸಸ್ತನ ಪ್ರಾಣಿಗಳಿಗೊಂದು ಹೀಗೆ ಮೂರು ಪ್ರತ್ಯೇಕ ವಿಭಾಗಗಳನ್ನು ಅತಿಥಿಗೃಹದ ಅಟ್ಟದ ಮೇಲಿನ ವರಾಂಡಾದಲ್ಲಿ ನಿರ್ಮಿಸಿದೆವು. ಒಬ್ಬೊಬ್ಬರು ಒಂದೊಂದು ವಿಭಾಗವನ್ನು ನೋಡಿಕೊಳ್ಳಬೇಕೆಂದೂ ಗೊತ್ತಾಯಿತು. ಬೆಳಿಗ್ಗೆ ಎದ್ದ ಕೂಡಲೆ ನಾವೆಲ್ಲ ಒಟ್ಟಿಗೆ ಸುತ್ತಾಡಿ ಎಲ್ಲ ಪ್ರಾಣಿಗಳು ಸುರಕ್ಷಿತವಾಗಿವೆಯೋ ಎಂದು ನೋಡಿಕೊಳ್ಳುತ್ತಿದ್ದೆವು. ನಂತರ ನಮ್ಮ ನಮ್ಮ ವಿಭಾಗದ ಕೆಲಸಕ್ಕೆ ಪ್ರಾರಂಭ. ಮೊದಲು ತಮ್ಮ ಕೆಲಸವನ್ನು ಪೂರೈಸಿದವರು ಇನ್ನುಳಿದವರಿಗೆ ನೆರವಾಗುತ್ತಿದ್ದೆವು. ಈ ಎಲ್ಲ ಪ್ರಾಣಿಗಳನ್ನು ತಿಕ್ಕಿ ಸ್ವಚ್ಛಮಾಡಿ ಅವುಗಳ ಹೊಟ್ಟೆಗೆ ಹಾಕಿದನಂತರ ನಮ್ಮ ಉಪಹಾರ. ಮಧ್ಯಾಹ್ನ ಊಟದ ಹೊತ್ತಿಗೆ ಪ್ರಾಣಿಗಳ ಬಗೆಗಿನ ನಮ್ಮ ಟಿಪ್ಪಣಿಗಳನ್ನು ಪರಿಶೀಲಿಸುತ್ತಿದ್ದೆವು.

ಇಂಥ ಸಂಚಾರದಲ್ಲಿ ಪ್ರಾಣಿ ಸಂಗ್ರಹಣ ತೀರ ಸುಲಭ ಕಾರ್ಯ. ಅಲ್ಲಿ ಜನಕ್ಕೆ ನಿಮ್ಮ ಸುಳಿವು ಹತ್ತಿದರೆ ಸಾಕು, ಪ್ರಾಣಿಗಳನ್ನು

ಸಾಕಷ್ಟು ಎನಿಸುವಷ್ಟು ತಂದು ಸುರಿಯುತ್ತಾರೆ. ಅಪೂರ್ವ ಮಾದರಿಗಳು ಸಿಗುವುದು ಕ್ವಚಿತ್ತಾಗಿ. ಅಂಥವುಗಳಿಗಾಗಿ ನಾವೇ ಅಲೆದಾಡಿ ಪರಿಶ್ರಮಿಸಬೇಕು. ಅವನ್ನು ಹಿಡಿದು ತಂದಮೇಲೆ ಪೋಷಿಸುವ ಕಾರ್ಯ ನಿಜಕ್ಕೂ ಕಠಿಣ. ಆ ಪ್ರಾಣಿಗೆ ಬಂಧನದಿಂದಾದ್ದ ಆಘಾತಕ್ಕಿಂತ ಶತ್ರು ಸಹವಾಸದ ಭೀತಿ ಅಧಿಕವಾಗಿರುವ ಸಂಭವ ಹೆಚ್ಚು ಮತ್ತು ಅಂಥ ಶತ್ರು ನೀವೇ ಎಂದೂ ಅದು ಪರಿಗಣಿಸಬಹುದು. ಒಮ್ಮೊಮ್ಮೆ ಈ ಪ್ರಾಣಿಗಳು ಪಂಜರವಾಸದಲ್ಲಿಯೇ ಸುಖ ಕಂಡುಕೊಂಡು ನಿಮ್ಮ ಸ್ನೇಹಿತರಾಗಿಬಿಡಬಹುದು. ಶಮೆ ದಮೆಗಳಿಂದಲೇ ನೀವು ಈ ಸ್ನೇಹ ಸಂಪಾದಿಸಬಹುದು. ತಿಂಗಳುಗಟ್ಲೆ ಕಾಡಿ ನಿಮ್ಮನ್ನು ನಿರಾಶಗೊಳಿಸಿದ ಪ್ರಾಣಿಯು ಒಂದು ದಿನ ಹಠಾತ್ತಾಗಿ ನಿಮ್ಮ ಸ್ನೇಹಿತನಾಗಿ ಬಿಡಬಹುದು. ನಿಮ್ಮ ತಾಳ್ಮೆಯ ಬೆಲೆ ನಿಮಗೆ ಆಗ ತಿಳಿಯುತ್ತದೆ.

ಇವುಗಳಿಗೆ ಆಹಾರ ಹಾಕುವುದೂ ಒಂದು ಸಮಸ್ಯೆ. ನಾವು ಈ ಪ್ರಾಣಿಗಳ ಸ್ವಭಾವ ವಿಶೇಷಗಳನ್ನೂ ಆಹಾರ ವಿಹಾರಾದಿಗಳನೂ ಅರಿತವರಾಗಿರಬೇಕಲ್ಲದೆ ಅವುಗಳ ಸ್ವಾಭಾವಿಕ ಆಹಾರಕ್ಕೆ ಬದಲಾಗಿ ಎಂಥ ಆಹಾರವನ್ನು ಕೊಡಬೇಕು ಎಂಬುದನ್ನೂ ತಿಳಿದವರಾಗಿರಬೇಕು. ನಮ್ಮಲ್ಲಿದ್ದ ಒಂದು ಹಕ್ಕಿಯು ತನ್ನ ಸ್ವಾಭಾವಿಕ ಆಹಾರವಾದ ಹಣ್ಣು, ಬ್ರೆಡ್ಡು, ಕಾಯಿಪಲ್ಲೆಗಳನ್ನು ತಿನ್ನುವುದನ್ನು ಬಿಟ್ಟು ಮೂರು ದಿನ ಬರಿ ಶಾವಿಗೆಯನ್ನೇ ತಿಂದು ನಮ್ಮನ್ನೆಲ್ಲ ಚಕಿತಗೊಳಿಸಿತ್ತು. ನಮ್ಮ ಐದು ಮಂಗಗಳು ಐದು ತೆರನಾಗಿವೆ. ಎರಡು ಕಪಿಗಳು ಕುದಿಸಿದ ತತ್ತಿಗಳನ್ನು ಪ್ರೀತಿಯಿಂದ ತಿನ್ನುತ್ತಿದ್ದರೆ ಇನ್ನುಳಿದ ಮೂರು ಮಂಗಗಳು ತತ್ತಿಗಳನು ತೋರಿಸಿದರೆ ಸಾಕು ಓಡಿ ಹೋಗುತ್ತಿದ್ದವು. ಅಂದ ಮೇಲೆ ನೂರಾರು ಪ್ರಾಣಿಗಳನ್ನು

ಚೆನ್ನಾಗಿ ಆರೋಗ್ಯಕರ ಸ್ಥಿತಿಯಲ್ಲಿ ಕಾಪಾಡಿಕೊಂಡು ಬರುವುದು ಎಂಥ ಕಠಿಣ ಕಾರ್ಯವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಮರಿಗಳನ್ನು ಪೋಷಿಸುವುದು ಇನ್ನೂ ಕಷ್ಟವಾದರೂ ನಮ್ಮ ಕಪ್ಪುಕಿವಿಯ ಇಣಚಿ ಮರಿಯು ಮಾತ್ರ ಅದ್ಭುತವಾಗಿತ್ತು. ಬಿಸ್ಕೀಟಿನ ಡಬ್ಬಿಯಲ್ಲಿ ಬಿಸಿ ನೀರಿನ ಚೀಲದ ಮೇಲೆ ಸುಖ ನಿದ್ರೆ ಮಾಡುತ್ತಿತ್ತು; ಹಸಿವೆಯಾದ ಕೂಡಲೆ ಕಿರಿಚಾಡಿ ರಂಬಾಟ ಮಾಡುತ್ತಿತ್ತು. ಆಹಾರ ಬರುವ ವರೆಗೆ ಸುಮ್ಮನಾಗುತ್ತಿರಲಿಲ್ಲ. ಕಿತ್ತಳೆ ಬಣ್ಣದ ತಲೆ, ಕಪ್ಪುಅಂಚಿನ ಕಿವಿಗಳು, ಕಪ್ಪಾದ ಕಣ್ಣುಗಳು ಪುಷ್ಟವಾದ ಮೈ ಹೀಗೆ ಅದು ಸುಂದರವಾಗಿ ಎಲ್ಲರನ್ನೂ ಆಕರ್ಷಿಸುತ್ತಿದ್ದಿತು. ಚುರುಕಾಗಿದ್ದ ಅದರ ಚಲನವಲನಗಳೂ ಮೋಹಕವಾಗಿದ್ದವು.

ಎಶೋಬಿಯ ಹತ್ತರ ಕಾಡಿನಲ್ಲಿ ನಾವು ಹಿಡಿದು ತಂದಿದ್ದ ಮಂಗನಮರಿಯೂ ಮುದ್ದಾಗಿದ್ದಿತು. ಆಗಾಗ ಹಿಂಗಾಲುಗಳ ಮೇಲೆ ಕುಣಿದಾಡುತ್ತ ತನ್ನ ಕಪಿಸಹಜ ಚೇಷ್ಟೆಗಳಿಂದ ನಮ್ಮನ್ನು ತಣಿಸುತ್ತಿದ್ದಿತು. ಒಮ್ಮೆ ಪಂಜರದೊಳಗೆ ಹಾರಿ ಬಂದಿದ್ದ ಪಾತರಗಿತ್ತಿಯನ್ನು ಫಕ್ಕನೆ ಹಿಡಿದು ಕೆಲ ನಿಮಿಷ ಕುತೂಹಲದಿಂದ ನಿರೀಕ್ಷಿಸಿ ಪಟಕ್ಕನೆ ಬಾಯಿಗೆ ಹಾಕಿಕೊಂಡಿತು. ಫಡಫಡಿಸುತ್ತಿದ್ದ ಪಾತರಗಿತ್ತಿಯ ಪಕ್ಕಗಳು ಅದರ ಮೀಸೆಯಂತೆ ಕಾಣುತ್ತಿದ್ದವು.



ನಟಭಯಂಕರ ಗೂಬೆ

ನೈಸರ್ಗಿಕ ವಾತಾವರಣದಲ್ಲಿಯೆ ಕಾಡು ಪ್ರಾಣಿಗಳ ಚಲಚ್ಚಿತ್ರ ತೆಗೆಯಬೇಕಾದರೆ ಹಾಲಿವುಡ್ಡಿನ ಸಂಪತ್ಸಾಧನೆಗಳು ಬೇಕು. ನನ್ನಂಥ ಸಾಮಾನ್ಯನು ಆ ಸಾಹಸಕ್ಕಿಳಿಯಬೇಕಾದರೆ ಮರ್ಯಾದಿತ ಕ್ಷೇತ್ರದಲ್ಲಿಯೆ. ಹಕ್ಕಿ ಕಣ್ಣಿಗೆ ಬಿದ್ದಿತೆನ್ನುವಷ್ಟರಲ್ಲಿ ಗಿಡಗಂಟಿಯಲ್ಲಿ ಮಾಯವಾಗಿ ಬಿಟ್ಟಿರುತ್ತದೆ. ಆದ್ದರಿಂದ ಇಂಥ ಪ್ರಾಣಿಗಳ ಬಗ್ಗೆ ಚಲಚ್ಚಿತ್ರ ತಯಾರಿಸುವುದೆಂದರೆ ಅಶ್ವಮೇಧ ಯಜ್ಞ ಮಾಡಿದಂತೆಯೆ ಸರಿ. ಅದಕ್ಕಾಗಿ ದೊಡ್ಡ ಪಂಜರವನ್ನು ತಯಾರಿಸಿ ಅದರಲ್ಲಿ ಈ ಪ್ರಾಣಿಗಳನ್ನು ಬಿಟ್ಟು ಅವುಗಳ ಚಲನವಲನಗಳನ್ನು ಚಿತ್ರಿಸಿಕೊಳ್ಳಬೇಕಾದುದೇ ಸುಲಭ ಮಾರ್ಗ. ಆಗ ಕೂಡ ಚಿತ್ರಿಸಬಹುದಾದ ಯೋಗ್ಯ ಕ್ಷಣಕ್ಕಾಗಿ ಎರಡೆರಡು ದಿನ ಕಾಯಬೇಕಾಗುತ್ತದೆ. ಹಸಿದ ಇಲಿಯನ್ನು, ಹಣ್ಣುಗಳನ್ನು ಹರಡಿದ ಪಂಜರದಲ್ಲಿ ಬಿಟ್ಟರೆ ಬಕಾಸುರನಂತೆ ಧಾವಿಸಿ ಆ ಹಣ್ಣುಗಳಿಗೆರಗುತ್ತದೆ. ಹೀಗೆ ಪ್ರಾಣಿಗಳ ವಿಶಿಷ್ಟ ಮನೋಧರ್ಮಗಳನ್ನು ಅರಿತುಕೊಂಡು ಯೋಗ್ಯ ವಾತಾವರಣದಲ್ಲಿ ಅವನ್ನು ಬಿಟ್ಟು ಆಕರ್ಷಕ ದೃಶ್ಯಗಳನ್ನು ಚಿತ್ರಿಸಿಕೊಳ್ಳಬೇಕಾಗುತ್ತದೆ.

ಗೂಬೆಗಳಲ್ಲಿ ಸುಂದರವಾಗಿರುವ ವುಡ್‌ಫರ್ಡ್ ಜಾತಿಯ ಗೂಬೆಯೊಂದಿತ್ತು ನನ್ನಲ್ಲಿ. ಅದರ ಚಲಚ್ಚಿತ್ರ ತೆಗೆದುಕೊಳ್ಳಬೇಕೆಂದು ಮನಸ್ಸು ಮಾಡಿದೆ. ಈ ಗೂಬೆ ಕಣ್ಣು ಮಿಟುಕಿಸುವುದು ನೋಟಕ್ಕೆ ಬಲು ಚಂದ. ಪಂಜರದಲ್ಲಿಯೂ

ನಾವು ಹೇಳಿದಂತೆ ಈ ಗೂಬೆ ಕಣ್ಣಸನ್ನೆಯನ್ನು ಮಾಡಬಲ್ಲುದಾಗಿತ್ತು. ಸುಲಭದಲ್ಲಿಯೆ ಇದರ ಚಿತ್ರ ತೆಗೆಯಬಹುದೆಂದು ಭಾವಿಸಿದೆ.

ದೊಡ್ಡ ಪಂಜರದಲ್ಲಿ ಗಿಡಬಳ್ಳಿಗಳಿಂದ ಕೃತಕವಾಗಿ ಕಾಡಿನ ದೃಶ್ಯವನ್ನು ತಯಾರಿಸಿ ಹೊರಗೆ ಕ್ಯಾಮೆರಾ ಯೋಗ್ಯ ಸ್ಥಳದಲ್ಲಿ ಸಜ್ಜಾಗಿಟ್ಟುಕೊಂಡು ಆ ಗೂಬೆಯನ್ನು ತಂದು ಒಳಗೆ ರೆಂಬೆಯ ಮೇಲಿಟ್ಟೆ. ಬೆದರುಗಣ್ಣುಗಳಿಂದ ಅದು ಅಲ್ಲಿ ಕುಳಿತಿತ್ತು. ನಾನು ಕ್ಯಾಮೆರಾ ಸುರು ಮಾಡಿದಾಗ ಅದರ ಸದ್ದಿಗೆ ಅದು ಒಮ್ಮೆ ಕಣ್ಣು ಮಿಟುಕಿಸಿ ನಮ್ಮನ್ನು ನೋಡಲೊಲ್ಲದವರಂತೆ ನಮ್ಮ ಕಡೆಗೆ ಬೆನ್ನು ತಿರುಗಿಸಿತು. ನಾನು ಹೋಗಿ ಸಾವಧಾನದಿಂದ ಅದನ್ನೆತ್ತಿ ತಿರುಗಿಸಿ ಮೊದಲಿನಂತಿಟ್ಟು ಕ್ಯಾಮೆರಾದ ಕಡೆಗೆ ತಿರುಗಿ ಬಂದೆ. ಹೊರಳಿ ನೋಡಲಾಗಿ ಅದು ಪುನಃ ಮುಖ ತಿರುಗಿಸಿಬಿಟ್ಟಿತ್ತು. ಇನ್ನೇನು ಗತಿ ಎಂದು, ಕೆಳಗಿನ ಹುಲ್ಲುಕಡ್ಡಿಗಳನ್ನೇ ಕಿತ್ತು ಆ ಗೂಬೆ ಕುಳಿತದ್ದಕ್ಕೆ ಸರಿ ಹೋಗುವ ಹಾಗೆ ಹೊಂದಿಸಿಟ್ಟು ಬೆವರೊರೆಸಿಕೊಳ್ಳುತ್ತ ಬಂದು ಕ್ಯಾಮೆರಾವನ್ನೂ ಎತ್ತಿ ಯೋಗ್ಯ ಸ್ಥಳಕ್ಕೆ ಸಾಗಿಸಿ ಸರಿಪಡಿಸಿ ಚಿತ್ರೀಕರಣ ಪ್ರಾರಂಭಿಸಬೇಕೆಂದು ನೋಡಿದಾಗ ಅದು ಪುನಃ ಸತ್ಯಾಗ್ರಹ ಹೂಡಿತ್ತು. ಅಷ್ಟರಲ್ಲಿ ಮೋಡಗವಿದು ಚಿತ್ರೀಕರಣವೇ ಅಸಾಧ್ಯವಾಯಿತು.

ಕಪಿಸಂಕುಲ

ನನ್ನ ಸಂಗ್ರಹದಲ್ಲೆಲ್ಲ ಕಪಿವರ್ಗಕ್ಕೆ ಸೇರಿದ ಪ್ರಾಣಿಗಳು ನನ್ನನ್ನು ಅಧಿಕವಾಗಿ ಆಕರ್ಷಿಸಿವೆ. ನಮ್ಮ ಮಕ್ಕಳಂತೆ ಅವುಗಳ ಸ್ವಭಾವ. ತೀಕ್ಷ್ಣ ಬುದ್ಧಿಶಕ್ತಿ, ಚುರುಕುತನ, ಜೀವಿಸಬೇಕೆಂಬ ಸದ್ಯಃಪ್ರವೃತ್ತಿ, ನಿಮ್ಮನ್ನೇ ನಂಬಿಕೊಂಡಿರುವ ಗುಣವಿಶೇಷ. ಇವುಗಳಿಂದಾಗಿ ಈ ಮಂಗನ

ವರ್ಗದ ಪ್ರಾಣಿಗಳು ನಿಮ್ಮ ಮೆಚ್ಚುಗೆಯನ್ನು ತೀವ್ರದಲ್ಲಿಯೇ ಗಳಿಸುತ್ತವೆ.

ಕಾಮೆರೂನ್ಸ್‌ನಲ್ಲಿ ಮಂಗಗಳನ್ನು ಬೇಟೆಯಾಡಿ ಅವುಗಳ ಮಾಂಸವನ್ನು ತಿನ್ನುವ ರೂಢಿಯೂ ವಿಶೇಷವಾಗಿ ಬಳಕೆಯಲ್ಲಿದೆ. ಕಪಿಸಂಹಾರಕ್ಕೆ ಅಲ್ಲಿ ನಿರ್ಬಂಧವಿಲ್ಲ. ಆದ್ದರಿಂದ ಮರಿಗಳನ್ನು ಹೊತ್ತು ತಿರುಗುವ ತಾಯಿಮಂಗಗಳನ್ನು ಕೊಲ್ಲುವುದೇ ಹೆಚ್ಚು. ಇದರಿಂದ ಒಂದೇ ಕಲ್ಲಿಗೆ ಎರಡು ಹಕ್ಕಿ ಎಂಬಂತೆ ತಾಯಿಯ ಜೊತೆಗೆ ಮರಿಯೂ ಭೋಜನಕ್ಕೆ ನಿರಾಯಾಸದಿಂದ ಲಭ್ಯವಾಗುತ್ತದೆ. ಅಥವಾ ಮರಿಯನ್ನು ಬೆಳೆಯಗೊಟ್ಟು ದೊಡ್ಡದಾದ ಮೇಲೆ ಅದನ್ನು ಕೊಂದು ತಿನ್ನುತ್ತಾರೆ. ಆದರೆ ನನ್ನಂಥ ಪ್ರಾಣಿಸಂಗ್ರಾಹಕನೊಬ್ಬನು ಸಮೀಪದಲ್ಲಿದ್ದಾನೆಂದು ಅವರಿಗೆ ತಿಳಿದರೆ ಸಾಕು, ಈ ಮರಿಗಳನ್ನೆಲ್ಲ ನಮಗೇ ಮಾರಿಬಿಡುತ್ತಾರೆ.

ಬಾಫುಟದಲ್ಲಿಯ ನಮ್ಮ ವಾಸ್ತವ್ಯದ ಕೊನೆ-ಕೊನೆಗೆ ಗೋರಿಲ್ಲಾ ಮುಂತಾದವುಗಳನ್ನುಬಿಟ್ಟು ೧೭ ಮಂಗಗಳೇ ನಮ್ಮ ಸಂಗ್ರಹಾಲಯದಲ್ಲಿದ್ದವು; ಸಾಕಷ್ಟು ಮನೋರಂಜನೆಯನ್ನೂ ಒದಗಿಸುತ್ತಿದ್ದವು. ಕಪ್ಪುಮೂತಿಯ, ಕೆಂಗೂದಲಿನ, ಬೆಳ್ಳನ್ನ ಎದೆಯ ಮುಸುವಗಳು ಬಹು ಚಿತ್ತಾಕರ್ಷಕವಾಗಿದ್ದವು. ಹುಳ-ಹುಪ್ಪಡಿಗಳು, ಚೇಳುಗಳು ಇವುಗಳ ಆಹಾರ. ಹುಲ್ಲುಗಾವಲುಗಳಲ್ಲಿ ಗುಂಪುಗಟ್ಟಿಕೊಂಡು ಅಲೆದಾಡುತ್ತಿರುತ್ತವೆ. ಏನಾದರೂ ಗಂಡಾಂತರ ಬಂದರೆ 'ಪ್ರಾಪ್-ಪ್ರಾಪ್' ಎಂದು ಕಿರಚುತ್ತ ಜೂಜಿನ ಕುದುರೆಗಳಂತೆ ಪಲಾಯನ ಹೇಳುತ್ತವೆ.

ನಮ್ಮಲ್ಲಿದ್ದ ನಾಲ್ಕು ಮುಸುವಗಳನ್ನು ಒಂದೇ ಪಂಜರದಲ್ಲಿಟ್ಟಿದ್ದೆವು. 'ಉಳಿದ ಮಂಗಗಳು ಅತ್ತಿತ್ತ ನೆಗೆದಾಡಬಲ್ಲವಾದರೆ ಈ ಮುಸುವಗಳು ವಿಶಿಷ್ಟ ನರ್ತನವನ್ನು ಮಾಡಿ ತೋರಿಸಬಲ್ಲವು ಎಂದು ನನ್ನ ಅಭಿಪ್ರಾಯ. ಇವುಗಳ ನರ್ತನವೆಂದರೆ ಮೊದಲು ನಾಲ್ಕೂ ಕಾಲುಗಳ ಆಧಾರದಿಂದ, ರಬ್ಬರ ಚಂಡಿನಂತೆ ನೆಲದಿಂದ ಮೇಲು-ಮೇಲಕ್ಕೆ ನೆಗೆಯುತ್ತ ಹೋಗುವುದು, ಸುಮಾರು ಎರಡು ಅಡಿ ಎತ್ತರದ ವರೆಗೆ ಹೀಗೆ ಪುಟಿದೆದ್ದ ನಂತರ ಹಠಾತ್ತಾಗಿ ಭೂಮಿಗಿಳಿದು ಹಿಂಗಾಲುಗಳ ಮೇಲೆ ನಿಂತು ಇಡೀ ಮೈಯನ್ನು ಗಡಿಯಾರದ ಪೆಂಡ್ಯುಲಮ್ಮಿನಂತೆ ಅತ್ತಿತ್ತ ಎರಡೂ ಬದಿಗೆ ಹೊಯ್ದಾಡಿಸುವುದು. ಹತ್ತಿಪ್ಪತ್ತು ಸಲ ಹೀಗೆ ಮಾಡಿದ ನಂತರ ಕೋಲಿನಂತೆ ಸೆಟೆದು ನಿಂತು ತಲೆಯ ಹಿಂದೆ ಕೈಕಟ್ಟಿ ಆಕಾಶವನ್ನು ನೋಡುತ್ತ ಚಕ್ರಾಕಾರವಾಗಿ ಸುತ್ತುತ್ತಿರುವುದು. ಹೀಗೆ ತಿರುತಿರುಗಿ ದೊಪ್ಪನೆ ನೆಲಕ್ಕೆ ಬಿದ್ದುಬಿಡುವುದು.

ನಮ್ಮಲ್ಲಿದ್ದ ಕಪಿಗಳಲ್ಲೆಲ್ಲ ಗೋರಿಲ್ಲಾ ಒದಗಿಸುವ ಮನೋರಂಜನೆಯೆ ಅಧಿಕವಾದುದು. ಭಾರಿ ರಾಜಜೀವಿ ಅದರದು. ಒಂದಿನ ಒಬ್ಬನು ಗೋರಿಲ್ಲಾದ ಈ ಗಂಡು ಮರಿಯನ್ನು ಹೊತ್ತು ತಂದ. ತನ್ನ ಸೇವಕನಾದ ಆತನಿನ್ನೇನು ಮಾಡಿಯಾನು ಎಂಬಂತೆ ಆತನನ್ನು ನೋಡುತ್ತಿತ್ತು. ಆ ಮರಿಯ ಬೆಲೆಯ ಕುರಿತು ನಮ್ಮಲ್ಲಿ ದೀರ್ಘ ಚರ್ಚೆ ನಡೆದು ನಾನು ಅದನ್ನು ಕೊಂಡುಕೊಂಡು, ಅದನ್ನು ಸ್ವೀಕರಿಸಿ ಬಾಳೆಹಣ್ಣನ್ನು ಅದಕ್ಕಿತ್ತರೂ ಆ ಮರಿ ಹಣ್ಣನ್ನು ಸ್ವೀಕರಿಸಿದ್ದೂ ಗಂಭೀರವಾಗಿಯೆ. ಚೋಮಂಡಲೆ ಸೆಂಟ್‌ಜಾನ್ ಎಂದು ಅದಕ್ಕೆ ಹೆಸರಿಟ್ಟು ಅನುಕೂಲಕ್ಕಾಗಿ ಅದನ್ನು ಚಮ್ ಎಂದು ಕರೆಯಲಾರಂಭಿಸಿದೆವು.

ಅದಕ್ಕಾಗಿ ಪ್ರತ್ಯೇಕ ಪಂಜರ ನಿರ್ಮಿತವಾಯಿತು. ಬೆಳಿಗ್ಗೆ ಒಬ್ಬನು ಅದನ್ನು ತಿರುಗಾಡಿಸಿಕೊಂಡು ಬರಬೇಕು. ನಮ್ಮೊಂದಿಗೆ ನಮ್ಮ ಟೇಬಲ್ ಮೇಲೆಯೇ ಅದರ ಚಹಾಪಾನ ಮುಗಿಯಬೇಕು. ಅದು ಬಂದು ನನ್ನನ್ನು ಮುದ್ದಿಸಿ ಟೇಬಲ್ ಮೇಲಿನ ಎನ್ಯಾಮಲ್ ಟಂಬ್ರೆಲನ್ನು ಹಿಡಿದುಕೊಂಡು ಚಹಾಕ್ಕಾಗಿ ಸಿದ್ಧವಾಗುತ್ತಿತ್ತು. ಚಹಾ ಹಾಕಿದ ಕೂಡಲೆ ಒಂದೇ ಗುಟುಕಿಗೆ ಇಡೀ ಟಂಬ್ರೆಲನ್ನು ಮುಗಿಸಿ ತಳಕ್ಕೆ ಕರಗದೆ ಉಳಿದಿದ್ದ ಸಕ್ಕರೆಯನ್ನು ನೆಕ್ಕಿ ಮತ್ತೆ ಸಿಕ್ಕೀತೇನೊ ಎಂದು ಕುಳಿತುಬಿಡುತ್ತಿತ್ತು. ತನಗಿನ್ನಿಲ್ಲವೆಂದಾದ ಮೇಲೆ ಅದು ನಾನು ಚಹ ಕುಡಿಯು

ವುದನ್ನು ನೋಡುತ್ತ ಕುಳಿತುಕೊಳ್ಳುತ್ತಿತ್ತು. ಚಹಾಪಾನದ ನಂತರ ಅದರ ಆಟಪಾಟಗಳು. ಅದರ ಕಪಿಚೇಷ್ಟೆಗಳನ್ನೆಲ್ಲ ನಾನು ನೋಡಿ ಪ್ರಶಂಸಿಸಲೇಬೇಕು. ಇಲ್ಲದೆ ಹೋದರೆ ಅದು ನನ್ನನ್ನು ಎಳೆದಾಡಿ, ತನ್ನತ್ತ ಆಕರ್ಷಿಸಿಕೊಳ್ಳುತ್ತಿತ್ತು. ನಾನು ಅದರ ಚೇಷ್ಟೆಗಳನ್ನು ನೋಡಿ ಸಂತೋಷದಿಂದ ಚಪ್ಪಾಳೆ ತಟ್ಟಿದರೆ ಅದು ಸಂತೋಷದಿಂದ ಹಲ್ಲು ಕಿರಿಯುತ್ತಿತ್ತು.

ಅಲ್ಲಿಯ ಡಚ್ ರೈತನೊಬ್ಬ ಸಾಕಿದ್ದ ಐದು ವರ್ಷದ ಮಿನಿ ಎಂಬ ಗೋರಿಲ್ಲಾ ಕೂಡ, ಆತನು ಸ್ವದೇಶಕ್ಕೆ ತೆರಳಿದ್ದರಿಂದ ನಮ್ಮ ರಕ್ಷಣೆಗೆ ಬಂದಿತು. ಇಷ್ಟು ದೊಡ್ಡ ಗೋರಿಲ್ಲಾನನ್ನು ಫೋನ್ ನೋಡಿದ್ದಿಲ್ಲವಾದ್ದರಿಂದ ಈ ಸುದ್ದಿ ಕೇಳಿದ ರಾತ್ರಿಯೆ ಅದನ್ನು ನೋಡಲು ಧಾವಿಸಿ ಬಂದ. ನೋಡಿದರೆ ಪಂಜರದಲ್ಲಿ ಅದು ಇದ್ದಂತೆ ಕಾಣಲಿಲ್ಲ. ಪೆಟ್ರೊಮ್ಯಾಕ್ಸನ್ನು ಎತ್ತಿಹಿಡಿದು ನೋಡಲಾಗಿ ಆಚೆಯ ಕೊನೆಯ ಮೂಲೆಯಲ್ಲಿ ಅದು ಒಣಗಿದ ಬಾಳೆ ಎಲೆಗಳ ಸುಪ್ಪೊತ್ತಿಗೆಯ ಮೇಲೆ ಸುಖವಾಗಿ ಪವಡಿಸಿತ್ತು.

"ವ್ಹಾ ! ಮನುಷ್ಯನಂತೆಯೆ ಮಲಗಿದೆಯಲ್ಲ!" ಎಂದರು ಫೋನ್ ಪರಿವಾರದವರು.

ದೀಪದ ಬೆಳಕಿಗೆ ಎಚ್ಚತ್ತು ಮಿನಿ ಹಾಸಿಗೆಯಿಂದೆದ್ದು ಪಂಜರದ ಸರಳುಗಳ ಹತ್ತರ ಬಂದು ನಮ್ಮನ್ನು ನೋಡತೊಡಗಿತು.

ಫೋನ್ ತುಸು ಹಿಂದೆ ಸರಿದ.

"ಹೆದರಬೇಕಾಗಿಲ್ಲ ಅದೇನೂ ಮಾಡುವುದಿಲ್ಲ" ಎಂದು ಉತ್ತೇಜಿಸಿದೆ.

ಫೋನ್ ಸಾವಧಾನದಿಂದ ಮುಂದುವರಿದು ಪಂಜರದ ಸರಳುಗಳನ್ನುಮುಷ್ಟಿಯಿಂದ ಕುಟ್ಟಿದ. ಮಿನಿ ಕೂಡ ಆತನ ಅನುಕರಣ ಮಾಡಿತು.

"ಓಹೋ! ನಮ್ಮಂಥವೇ ಕೈಗಳು!" ಎಂದು ಫೋನ್ ಚಕಿತನಾಗಿ ನುಡಿದ. ಫೋನ್ ಪುನಃ ಸರಳುಗಳನ್ನು ಬಾರಿಸಿದ. ಮಿನಿ ಮತ್ತೆ ಹಾಗೇ ಮಾಡಿತು.

"ಮಿನಿ, ನಿನ್ನೊಡನೆ ಸಂಗೀತ ನಡೆಸಿದೆ."

"ಇದು ಗೋರಿಲ್ಲಾ ಸಂಗೀತವೇ?" ಎಂದು ಫೋನ್ ಅಟ್ಟಹಾಸದಿಂದ ನಕ್ಕ. ಅಷ್ಟಕ್ಕೆ ಸಂತುಷ್ಟವಾದ ಮಿನಿ ಪಂಜರದಲ್ಲಿ ಎರಡು— ಮೂರು ಸುತ್ತು ಸುತ್ತಿ ಒಂದೆರಡು ಲಾಗ ಹಾಕಿ, ಪ್ಲಾಸ್ಟಿಕ್ ಬಟ್ಟಲನ್ನು ಹ್ಯಾಟಿನಂತೆ ತಲೆಗೇರಿಸಿಕೊಂಡು ಪುನಃ ನಮ್ಮ ಮುಂದೆ ಬಂದು ಕುಳಿತಿತು.

ಅದರ ಚೇಷ್ಟೆಗಳಿಂದ ದಂಗಾಗಿ ಹೋಗಿದ್ದ ಫೋನ್‌ನನ್ನು ಅಲ್ಲಿಂದ ಹೊರಡಿಸುವುದು ಸಾಧ್ಯವಿಲ್ಲವೆಂದು ನಾನು ಆ ಪಂಜರದ ಹತ್ತಿರವೇ ಮೇಜನ್ನು ಮಂಡಿಸಿ ಮದ್ಯಪಾನದ ಏರ್ಪಾಡು ಮಾಡಿದೆ.

ಅರ್ಧ ಗಂಟೆ ಕಾಲ ಮಿನಿಯ ಚೇಷ್ಟೆಗಳು ನಡೆದ ನಂತರ ಫೋನ್‌ನು ಪಂಜರದ ಸಮೀಪಕ್ಕೆ ಮೂತಿಯನ್ನು ಒಯ್ದನು. ಮಿನಿ ಕೂಡ ಉತ್ತೇಜಿತವಾಗಿ ತನ್ನ ಉದ್ದ ಮೂತಿಯನ್ನು ಚಾಚಿ ಫೋನ್‌ನನ್ನು ಮುದ್ದಿಸಿಬಿಟ್ಟಿತು. ಫೋನ್‌ನಿಗೆ ಎಲ್ಲಿಲ್ಲದ ಹುಚ್ಚು ನಗೆ ಪ್ರಾರಂಭವಾಯಿತು. ಆಗ ಮಿನಿ ಫೋನ್‌ರಲ್ಲಿ ನಗುವ ಸ್ಪರ್ಧೆ ಸುರುವಾಗಿ ಐದು ನಿಮಿಷ ಸಾಗಿತು. ಕೊನೆಗೆ ಸಂತುಷ್ಟನಾಗಿ ಫೋನ್ ಹಿಂತಿರುಗಿದ. ಅತಿಥಿಗಳನ್ನು ಸತ್ಕರಿಸಿ ದಣಿದ ಯಜಮಾನಿಯಂತೆ ಮಿನಿ ತನ್ನ ಹಾಸಿಗೆಗೆ ಹಿಂತಿರುಗಿತು.

ಪ್ರಾಣಿ ಸಂಗ್ರಹಾಲಯವೇ ನಮ್ಮ ಸಾಮಾನು

ಬಾಫುಟದಿಂದ ಕರಾವಳಿಗೆ ಬಂದು ಹಡಗವನ್ನು ಹಿಡಿಯಬೇಕಾದರೆ ಮುನ್ನೂರು ಮೈಲು ದೀರ್ಘವಾದ ಪ್ರವಾಸ ಮಾಡಬೇಕು. ಇಷ್ಟೆಲ್ಲ ಜೊಂಜಾಟವನ್ನು ಕಟ್ಟಿಕೊಂಡು ಹೊರಡಬೇಕಾ

ದರೆ ಒಂದು ತಿಂಗಳು ಮುಂಚಿತವಾಗಿಯೆ ಸಿದ್ಧತೆಗಳನ್ನು ಪ್ರಾರಂಭಿಸಬೇಕು. ನೀವು ಹೊರಡುವ ಸುದಿ ತಿಳಿದ ಕೂಡಲೆ ಅಲ್ಲಿಯ ಜನರು ಇಮ್ಮಡಿ ಹುರುಪಿನಿಂದ ಬೇಟೆ ಆಡಿ ಪ್ರಾಣಿಗಳನ್ನು ತಂದೊಟ್ಟುತ್ತಾರೆ. ಅವುಗಳಿಗಾಗಿ ಹೊಸ ವಸತಿ ಏರ್ಪಾಡು ಆಗಬೇಕು.

ನಮ್ಮ ಗೋರಿಲ್ಲಾ ಮರಿ ಚಮ್‌ನಿಂದ ನಮ್ಮ ಪ್ರಯಾಣಕ್ಕೆ ತಡವಾಯಿತು. ಒಂದಿನ ಚಮ್‌ನನ್ನು ಬೆಳಿಗ್ಗೆ ತಿರುಗಾಡಲಿಕ್ಕೆ ಬಿಟ್ಟಿದ್ದಾಗ ನಮಗರಿಯದಂತೆ ಅದು ಹೋಗಿ ಇಲಿಗಳ ಪಂಜರದ ಬಾಗಿಲನ್ನು ತೆಗೆದು ಅದರಲ್ಲಿದ್ದ ಎಲ್ಲ ಇಲಿಗಳನ್ನು ನೆಲಕ್ಕೆ ಸುರಿವಿಬಿಟ್ಟಿತು. ಆ ಹದಿನಾಲ್ಕು ಸಾದಾ ಇಲಿಗಳಲ್ಲಿ ಒಂದಕ್ಕೆ ಬೆನ್ನಿನ ಮೇಲೆ ಬಿಳಿ ಚುಕ್ಕೆ ಇದ್ದು ಅದರ ಬಾಲಕ್ಕೆ ತುಂಬ ಕೂದಲುಗಳಿದ್ದವು. ನೆಲಕ್ಕೆ ಬಿದ್ದ ಕೂಡಲೆ ಅವೆಲ್ಲ ಗಾಬರಿಯಾಗಿ ಅತ್ತಿತ್ತ ಓಡಾಡಹತ್ತಿದವು. ಚಮ್‌ನಿಗೆ ಚಲ್ಲಾಟವಾದರೆ ನಮಗೆ ಪ್ರಾಣ ಸಂಕಟವಾಯಿತು. ಅವನ್ನು ಹಿಡಿಯುವಲ್ಲಿ ನಮಗೆ ಸಾಕು ಬೇಕಾಯಿತು. ಬಾಲ ಹಿಡಿದು ಎಳೆಯ ಬೇಡವೆಂದು ನಾನು ಎಚ್ಚರಿಸಿದರೂ ಆ ಬಿಳಿ ಚುಕ್ಕಿಯ ಇಲಿಯು ಇನ್ನೊಂದು ಪಂಜರದ ಹಿಂದೆ ಅಡಗಿಕೊಂಡಿದ್ದನ್ನು ಕಂಡ ಬಾಬ್ ಅದನ್ನು ಬಾಲ ಹಿಡಿದೆಳೆದ. ಆಗ-ಬಾರದ್ದು ಆಗಿ ಹೋಯ್ತು. ಅದರ ಬಾಲದ ಚರ್ಮ ಕಿತ್ತು ಬಂದುಬಿಟ್ಟಿತು. ಹಲ್ಲಿಗಳಂತೆ ಇಲಿಗಳ ಬಾಲ ಪುನಃ ಬೆಳೆಯುವುದಿಲ್ಲ. ಆ ಇಲಿಯನ್ನು ಅಂಗೈಯಲ್ಲಿ ಎತ್ತಿಕೊಂಡಾಗ ತನಗೇನೂ ಆಗದಿದ್ದವರಂತೆ ಇದ್ದಿತು. ಕೆಂಪು ಕಡ್ಡಿಯಂತಾಗಿದ್ದ ಅದರ ಬಾಲವು ಕ್ರಮೇಣ ಒಣಗಿ ಉದುರಿ ಹೋಗುವುದು. ಆದ್ದರಿಂದ ಇಂಥ ಅಂಗಹೀನ ಮಾದರಿ ನಮಗೇನೂ ಉಪಯೋಗದ್ದಲ್ಲ. ಅದನ್ನಿನ್ನು ಬಿಟ್ಟುಕೊಡಬೇಕು ಎಂದು ನಾನು ಅದನ್ನು ಐದು ಸಲ ಒಯ್ದು ಹೊರಗಿಳಿಸಿದರೂ ಅದು ಪುನಃ ಒಳಗೇ ಬಂದು ಸೇರಿಕೊಳ್ಳುತ್ತಿತ್ತು, ಹಾಗೇ ಒಂದೆರಡು ದಿನ ಅದನ್ನು ಹೊರಗೆ ಬಿಟ್ಟಿ



ದ್ದರೂ ಅದು ಓಡಿ ಹೋಗಲಿಲ್ಲ. ಇತರ ಇಲಿಗಳು ಆಹಾರ ಸೇವಿಸುವಾಗ ಇದೂ ಬಂದು ಅವುಗಳ ಪಂಜರದ ಹೊರಗೆ ತಂತಿಗೆ ಜೋತು ಬಿದ್ದು ಅವುಗಳನ್ನೇ ನೋಡುತ್ತ ಕುಳಿತುಕೊಳ್ಳುತ್ತಿತ್ತು. ಕೊನೆಗೂ ನಾವೇ ಸೋತು ಇಲಿಗಳ ಪಂಜರದಲ್ಲಿಯೆ ಅದನ್ನಿಟ್ಟೆವು.

ಕ್ರಮೇಣ ಪ್ರಯಾಣದ ಸಿದ್ಧತೆಗಳನ್ನೆಲ್ಲ ಪೂರೈಸಿಕೊಂಡೆವು. ವಿಷದ ಹಾವುಗಳಿಗಾಗಿ ಇಮ್ಮಡಿ ತಂತಿ ಜಾಳಿಗೆಯ ಗೂಡುಗಳನ್ನು ಮಾಡಿಸಿದ್ದಾಯಿತು. ಇಲಿಗಳಿಂದ ಹಾವುಗಳ ವರೆಗೆ, ಇಣಚಿಗಳಿಂದ ಗೋರಿಲ್ಲಾಗಳ ವರೆಗೆ ಪ್ರಾಣಿಗಳನ್ನು ಸುವ್ಯವಸ್ಥಿತವಾಗಿ ವಿಂಗಡಿಸಿ ಬಂಧಿಸಿಟ್ಟು, ನಮ್ಮ ಇತರ ಸಾಧನ ಸಾಮಗ್ರಿಗಳನ್ನೆಲ್ಲ ಪೆಟ್ಟಿಗೆಗಳಲ್ಲಿ ತುಂಬಿ ನಮ್ಮನ್ನು ಕರಾವಳಿಗೆ ಕರೆದೊಯ್ಯುವ ಲಾರಿಗಳಿಗಾಗಿ ದಾರಿಕಾಯುತ್ತ ಕುಳಿತೆವು.

ಪ್ರಯಾಣದಲ್ಲಿ ಪ್ರತಿ ನಾಲ್ಕಾರು ಗಂಟೆಗಳಿಗೊಮ್ಮೆ ಲಾರಿಗಳನ್ನು ನಿಲ್ಲಿಸಿ ಹಕ್ಕಿಪಕ್ಕಿಗಳ ಯೋಗಕ್ಷೇಮ ವಿಚಾರಿಸಿಕೊಳ್ಳಬೇಕಾಗುತ್ತಿತ್ತು. ಮೈನುಗ್ಗಾಗುವ ಆ ದಾರಿಯಲ್ಲ ಮುನ್ನೂರು ಮೈಲು ಪ್ರಯಾಣ ಮಾಡುವ ದಿವ್ಯ ಪೂರೈಸಿ ಬಂದರಕ್ಕೆ ಬಂದಾಗ ಸಮಾಧಾನದ ನಿಟ್ಟುಸಿರೆಳೆದೆವು. ಅಲ್ಲಿ ನಮ್ಮ ಪ್ರಾಣಿ ಸಂಗ್ರಹಾಲಯವನ್ನು ಹಡಗಿನಲ್ಲಿ ಸುರಕ್ಷಿತವಾಗಿ ಇಳಿಸಿದೆವು.

ಬೋರ್ನ್‌ಮೌತ್

ನಾನು ನನ್ನ ಪ್ರಾಣಿ ಸಂಗ್ರಹದೊಡನೆ ಬೋರ್ನ್‌ಮೌತ್‌ಗೆ ಬಂದಿಳಿದು ನನ್ನ ಸೋದರಿಯ ಮನೆಯ ವಿಶಾಲವಾದ ಹಿತ್ತಲದಲ್ಲಿ ಈ ಪ್ರಾಣಿಗಳಿಗೆ ವಸತಿಸೌಕರ್ಯ ಏರ್ಪಡಿಸಿದೆ. ಆ ಊರಲ್ಲಿಯ ಹೆಂಗಳೆಯರು ತಮ್ಮ ಹಿತ್ತಲಲ್ಲಿ ಬೆಳೆಯುವ ಕಾಯಿಪಲ್ಲೆಗಳ ಕುರಿತು ಚರ್ಚಿಸುತ್ತಿದ್ದವರು, ನನ್ನ ಸೋದರಿಯ ಹಿತ್ತಲಲ್ಲಿ ಹಠಾತ್ತಾಗಿ ಗೂಗೆಗಳು, ಮಂಗಗಳು, ಗೋರಿಲ್ಲಾಗಳು, ಹಾವುಗಳು ಕಾಣಿಸಿಕೊಂಡಿದ್ದನ್ನು ಕಂಡು ಕಂಗೆಟ್ಟು ಹೋದರು. ಅಲ್ಲಿಯ ಹಾಳು ತೋಟವೇ ನಮ್ಮ ಮಂಗಗಳಿಗೆ ಆಡುಂಬೊಲವಾಯಿತು. ಒಂದೆರಡು ಪ್ರಾಣಿಗಳು ಎದ್ದಲಗಾಟವನ್ನೇನಾದರೂ ನಡೆಸಿದ್ದರೆ ನೆರೆಹೊರೆಯವರು ತಕರಾರು ಮಾಡಬಹುದಾಗಿತ್ತು. ಇಷ್ಟೊಂದು ಪ್ರಾಣಿಗಳ ವಿರುದ್ಧ ಕೂಗೆಬ್ಬಿಸಲು ಅವರಿಗೆ ಬಾಯಿ ಬರಲೇ ಇಲ್ಲ.

ನಾವೂ ನಮ್ಮ ಈ ಪ್ರಾಣಿಗಳನ್ನು ಶಾಶ್ವತವಾಗಿ ಒತ್ತಟ್ಟಿಗೆ ಎಲ್ಲಿಯಾದರೂ ಇಡಬೇಕೆಂದು ಸ್ಥಳದ ಶೋಧದಲ್ಲಿಯೆ ಇದ್ದೆವು. ಉಚಿತವಾಗಿ ಸ್ಥಳವನ್ನು ಒದಗಿಸಬೇಕೆಂದು ನಗರಸಭೆಯವರನ್ನೂ ಬೇಡಿಕೊಂಡದ್ದಾಯಿತು. ಯಾವ ಪ್ರಯತ್ನವೂ ಫಲಿಸಲಿಲ್ಲ. ನಮ್ಮ ಪ್ರಾಣಿಗಳು ನಮ್ಮ ಸೋದರಿಯ ಹಿತ್ತಲಲ್ಲಿಯೆ ಉಳಿಯುವ ಲಕ್ಷಣಗಳು ಸ್ಪಷ್ಟವಾಗಹತ್ತಿದವು. ನನಗೂ ತಲೆ ಕೆಡುವಂತಾಯಿತು.

" ಊರಲ್ಲಿಯ ದೊಡ್ಡ ಅಂಗಡಿಕಾರನನ್ನು ವಿಚಾರಿಸಿ ಈ ಪ್ರಾಣಿಗಳ ಪ್ರದರ್ಶನವನ್ನೇಕೆ ಏರ್ಪಡಿಸಬಾರದು ? ಇವುಗಳ ಹೊಟ್ಟೆಬಟ್ಟೆಯ ವೆಚ್ಚವಾದರೂ ತೇಲೀತು " ಎಂದು ಜೇಕಿ ಒಂದು ದಿನ ಸೂಚಿಸಿದಳು.

ಆ ಪ್ರಯತ್ನ ಪ್ರಾರಂಭವಾಯಿತು. ಎಲ್ಲರೂ ಉತ್ತೇಜನದ ಮಾತುಗಳನ್ನಾಡಿದರೂ ಪ್ರತ್ಯಕ್ಷವಾಗಿ ಯಾರೂ ಸಹಾಯಕ್ಕೆ ಬರಲಿಲ್ಲ. ಕೊನೆಗೆ ಜೆ. ಜಿ. ಅಲೆನ್ ಎಂಬವರು ಮಾತ್ರ ನನ್ನನ್ನು ಕರೆಸಿಕೊಂಡು ನನ್ನ ಯೋಜನೆಯನ್ನು ಚರ್ಚಿಸಿ

ತಮ್ಮ ಅಂಗಡಿಯ ಮಾಳಿಗೆಯಲ್ಲಿ ನನ್ನ ಪ್ರಾಣಿಗಳ ಪ್ರದರ್ಶನಕ್ಕೆ ಅನುಮತಿಯಿತ್ತರಲ್ಲದೆ ಆವಶ್ಯಕ ಏರ್ಪಾಡುಗಳನ್ನೂ ಮಾಡಿಕೊಟ್ಟರು. ನಮ್ಮ ಪ್ರಾಣಿಗಳು ಆ ಕಟ್ಟಡದಲ್ಲಿ ವಿದ್ಯುದ್ದೀಪದ ಬೆಳಕಿನಲ್ಲಿ ಬೆಚ್ಚಗೆ ವಾಸವಾಗಿರುವಂತಾಗಿ ಜನರಿಗೆ ಮನೋರಂಜನೆಯನ್ನು ಒದಗಿಸುತ್ತ ತಮ್ಮ ವೆಚ್ಚವನ್ನು ತೂಗಿಸಿಕೊಳ್ಳಹತ್ತಿದವು.


ಮುಂದೆ ಒಂದು ರವಿವಾರ ಜಾರ್ಜಿನಾ ಎಂಬ ಮಂಗವು ಆ ಕಟ್ಟಡದಲ್ಲಿಯ ತನ್ನ ಪಂಜರದಿಂದ ಹೊರಬಿದ್ದಿತು. ಮನೆಯಲ್ಲಿ ನಾನು ಚಹಾ ಕುಡಿಯುತ್ತ ಕುಳಿತಾಗ ಫೋನ್ ಬಂದಿತು.

"ಡುರೆಲ್ ಏನು? ನಾವು ಪೋಲೀಸರು, ಸ್ವಾಮಿ. ನಿಮ್ಮ ಮಂಗವೊಂದು ತಪ್ಪಿಸಿಕೊಂಡಿದೆ. ಅಲೆನ್ನರ ಅಂಗಡಿಗೆ ಧಾವಿಸಿರಿ."

"ಈಗ ಎಲ್ಲಿದೆ ಅದು? ಅದರ ಹತ್ತಿರ ನೀವು ಹೋಗಬೇಡಿರಿ."

"ಅಂಗಡಿಯ ಪ್ರದರ್ಶನದ ಕಪಾಟಿನಲ್ಲಿದೆ ಸದ್ಯ. ಬೇಗ ಬನ್ನಿ."

ನಾನು ಟ್ಯಾಕ್ಸಿಯಲ್ಲಿ ಅಲ್ಲಿಗೆ ಧಾವಿಸಿ ನೋಡಿದೆ. ಆ ಕಪಾಟಿನಲ್ಲಿ ಪ್ರದರ್ಶನಕ್ಕಾಗಿ ಇಟ್ಟಿದ್ದ ಮಂಚ, ಹಾಸಿಗೆ ಮೇಜು ಮುಂತಾದವುಗಳನ್ನೆಲ್ಲ ಜಾರ್ಜಿನಾ ಕಿತ್ತಾಡಿ ಹಾಸಿಗೆಯ ಮೇಲೆ ಕುಣಿದಾಡುತ್ತ ಹತ್ತಿರ ಹಾಯ್ದವರನ್ನು ಹಲ್ಲು ಕಿಸಿದು ಹೆದರಿಸುತ್ತಿದ್ದಿತು. ಅಷ್ಟರಲ್ಲಿಯೆ ನನ್ನ ತಂಗಿ ಮಾರ್ಗೊ ಮತ್ತು ಜೇಕಿ ಬೇರೊಂದು ಟ್ಯಾಕ್ಸಿಯಲ್ಲಿ ಬಂದರು. ನಾವೀಗ ಬಂದದ್ದನ್ನು ನೋಡಿ, ಅಲ್ಲಿಯೆ ಅಡಗಿಕೊಂಡಿದ್ದ ಪೋಲೀಸರು ಸಮಾಧಾನದ ನಿಟ್ಟುಸಿರೆಳೆದರು.



"ನೀವೇನೂ ಹೆದರಬೇಡಿ, ಅದರ ಸ್ವಭಾವವೇ ಹಾಗೆ, ಬರಿ ಹಲ್ಲು ಕಿರಿಚುತ್ತದೆ. ನಿರುಪದ್ರವಿ ಪ್ರಾಣಿ ಅದು" ಎಂದು ನಾನು ಸಾವಧಾನದಿಂದ ಆ ಕಪಾಟಿನ ಹತ್ತರ ಹೋಗಿ 'ಜಾರ್ಜಿನಾ' ಎಂದು ಕೂಗಿ, 'ಬಾ, ನಾನು ಬಂದಿದ್ದೇನೆ' ಎಂದು ಸಂಕೇತಿಸಿದೆ.

ಜಾರ್ಜಿನಾ ಓಡಿ ಹೋಗಿ ಪೋಲೀಸನ ಕಾಲಿಗೆ ಅಪ್ಪುಗೆ ಬಿಗಿದು ಹಿಂತಿರುಗಿ ನನ್ನನ್ನು ನೋಡುತ್ತ ಹಲ್ಲು ಕಿರಿಯಹತ್ತಿತು.

ನಾನು ಅದರ ಕಾಲು ಹಿಡಿದೆಳೆದು ಪುನಃ ಪಂಜರದಲ್ಲಿ ಭದ್ರಪಡಿಸಿದೆ.

"ಅಯ್ಯಬ್ಬಾ! ಪಾರಾದೆನಪ್ಪಾ" ಎಂದು ಆ ಪೋಲೀಸ ಉಸುರ್ಗರೆದ.

ಅಂದು ಮತ್ತೆ ಟೆಲಿಫೋನ್ ಗಂಟೆ ಬಾರಿಸಿದಾಗಲೆಲ್ಲ ನಾನು ಬೆಚ್ಚಿ ಬೀಳುತ್ತಿದ್ದೆ.

ಗೋರಿಲ್ಲಾ ಮರಿ ಚಮ್ ನಮ್ಮ ಮನೆಯಲ್ಲಿ ಉಳಿದು ನನ್ನ ತಾಯಿಯ ಸೋದರಿಯ ಸ್ನೇಹಗಳಿಸಿತು. ಅದಕ್ಕೊಮ್ಮೆ ಚಳಿಹಿಡಿದು ಪುಪ್ಪುಸ ರೋಗದಿಂದ ನರಳಿದರೂ ಗುಣಹೊಂದಿತು. ಅದಕ್ಕೆ ಕನಿಷ್ಠ ಚಳಿಗಾಲದಲ್ಲಿ ಬಟ್ಟೆ ತೊಡಿಸಬೇಕೆಂದು ನಾನು ಸೂಚಿಸಿದ ಕೂಡಲೆ ನನ್ನ ತಾಯಿ ಅದಕ್ಕೆ ಬಟ್ಟೆ ಹೊಲಿಯಹತ್ತಿದಳು.

ಚಮ್ ತನ್ನ ಚತುರ ಚೇಷ್ಟೆಗಳಿಂದ ಎಲ್ಲರನ್ನೂ ಮೆಚ್ಚಿಸುತ್ತಿದ್ದಿತು. ನಿಮ್ಮ ಚಮ್ ಮಾತಾಡುತ್ತಿದೆಯೆ ಎಂದು ಎಷ್ಟೋ ಹಿರಿಯರು ಕೇಳಿದ್ದುಂಟು. ಅವಕ್ಕೆ ಅವುಗಳ ಭಾಷೆಯಿದೆ. ಎಂದರೆ ಇವರಿಗೆ ಸಮಾಧಾನವಿಲ್ಲ. ನಮ್ಮಂತೆ ಮಾತಾಡುತ್ತಿದೆಯೆ ಎಂದು ಅವರ ಮರುಪ್ರಶ್ನೆ. ನಾನೇನು ಉತ್ತರ ಹೇಳಬೇಕು?

ಒಮ್ಮೆ ಟೆಲಿವಿಜನ್ ಕಾರ್ಯಕ್ರಮಕ್ಕಾಗಿ ಚಮ್‌ನನ್ನು ಲಂಡನ್ನಿಗೆ ಒಯ್ದಿದ್ದೆ. ನನ್ನ ಸೋದರಿ ತನ್ನ ಕಾರಿನಲ್ಲಿ ನನ್ನನ್ನು ಕರೆದುಕೊಂಡು ಹೋಗಿದ್ದಳು. ದಾರಿಯಲ್ಲಿ ಪಾನೀಯಕ್ಕೆಂದು ಒಂದು

ಸಾದಾ ಉಪಹಾರ ಗೃಹಕ್ಕೆ ಹೋದಾಗ ಅದರ ಒಡತಿಯು ಚಮ್‌ನನ್ನು ಮೋಹಿಸಿ ನಮ್ಮನ್ನು ವಿಶೇಷವಾಗಿ ಸತ್ಕರಿಸಿದಳಲ್ಲದೆ ಚಮ್‌ನ ಸ್ನೇಹವನ್ನೂ ಸಂಪಾದಿಸಿಬಿಟ್ಟಳು. ಅದು ಕೂಡ ಚಿನ್ನಾಟವಾಡಿ ತನ್ನ ಗೌರವವನ್ನು ಹೆಚ್ಚಿಸಿಕೊಂಡಿತು.

ಮೂರು ತಿಂಗಳ ನಂತರ ಮತ್ತೊಮ್ಮೆ ನಾನು ಚಮ್‌ನನ್ನು ಕರೆದುಕೊಂಡು ಅದೇ ಮಾರ್ಗದಿಂದ ಉಪನ್ಯಾಸ ಕಾರ್ಯಕ್ರಮಕ್ಕೆ ಹೊರಟಿದ್ದೆ. ಅಷ್ಟರೊಳಗಾಗಿ ಚಮ್‌ನಿಗೆ ಅನೇಕ ಸ್ಥಳಗಳಲ್ಲಿ ಸಾರ್ವಜನಿಕವಾಗಿ ಆತಿಥ್ಯ ಸತ್ಕಾರಗಳು ನಡೆದಿದ್ದವು. ಆದರೆ ಮೂರು ತಿಂಗಳ ಹಿಂದೆ ತನಗೆ ಆತಿಥ್ಯ ನೀಡಿದ ಆ ಮಹಿಳೆಯ ಉಪಹಾರ ಗೃಹವನ್ನು ಕಂಡೊಡನೆ ಚಮ್ ಕಾರಿನಲ್ಲಿ ಅರಚುತ್ತ ನೆಗೆದಾಡಹತ್ತಿತು. ಅದರ ಗುಟ್ಟು ನಮಗೆ ತಿಳಿಯಲು ತುಸು ತಡವೇ ಆಯಿತು.

ಹಳೆಯ ಪರಿಚಯವನ್ನು ನೆನೆಸಿಕೊಂಡ ಆ ಮಂಗಬುದ್ಧಿಯನ್ನು ಮೆಚ್ಚಿಕೊಂಡು ನಾವು ಆ ಉಪಹಾರಗೃಹಕ್ಕೆ ಭೆಟ್ಟಿ ಕೊಟ್ಟು ಚಮ್‌ನಿಗೆ ಆ ಹಳೆಯ ಸ್ನೇಹಿತೆಯ ಭೆಟ್ಟಿ ಮಾಡಿಸಿದೆವು.

ನಮ್ಮ ಪ್ರಾಣಿಸಂಗ್ರಹಾಲಯ ಸ್ಥಾಪಿಸಲು ನಾನು ಇನ್ನೂ ಸ್ಥಳವನ್ನು ಹುಡುಕುತ್ತಿದ್ದಾಗಲೇ ಅಲೆನ್ನರ ಮಳಿಗೆಯಿಂದ ನನ್ನ ಪ್ರಾಣಿಗಳನ್ನು ಬೇರೆ ಕಡೆಗೆ ಸಾಗಿಸಬೇಕಾದ ಸಂದರ್ಭ ಬಂದಿತು. ಪೇಂಟನ್ ಪ್ರಾಣಿಸಂಗ್ರಹಾಲಯದವರು ನನ್ನ ಈ ಎಲ್ಲ ಪ್ರಾಣಿಗಳನ್ನು ತಮ್ಮಲ್ಲಿ ಕೆಲದಿನ ಇಡಬಹುದೆಂದು ಸಮ್ಮತಿಸಿ ನನ್ನ ಮೇಲಿನ ವಿಪತ್ತನ್ನು ನಿವಾರಿಸಿದರು.

"ನಮ್ಮ ಯೋಜನೆಯನ್ನು ಮೆಚ್ಚುವ ನಗರಸಭೆ ಬ್ರಿಟನ್ನಿನಲ್ಲಿ ಒಂದಾದರೂ ಇರಬೇಕು" ಎಂದಳು ಜೇಕಿ ಒಂದಿನ.

"ಪುನಃ ಅವರ ಬೆನ್ನು ಹತ್ತಿ ಅಂಡಲೆಯುವುದು ನನಗಂತೂ ಸಾಧ್ಯವಿಲ್ಲ, ನಾನೇ ಸ್ವಂತ ಸ್ಥಳ ಸಂಪಾದಿಸಿ ಇದಕ್ಕೊಂದು ನೆಲೆ ಒದಗಿಸಬೇಕು."

"ಹಾಗಾದರೂ ನಗರಸಭೆಗಳ ಅನುಮತಿ ಬೇಕೇ ಬೇಕಲ್ಲ."

"ಎಲ್ಲಿಯಾದರೂ ದೂರ, ವೆಸ್ಟ್ ಇಂಡೀಜ್‌ದಂಥ ಸ್ಥಳಕ್ಕೆ ಹೋಗಿಬಿಡೋಣ ಅಲ್ಲಿ ಇಷ್ಟು ತೊಂದರೆ ಇರಲಿಕ್ಕಿಲ್ಲ" ಎಂದೆ.

ಕೆಲ ವಾರಗಳ ನಂತರ ನಾನು ಲಂಡನ್ನಿಗೆ ಹೋಗಿದ್ದಾಗ ರೂಪರ್ಟ್-ಹಾರ್ಟ್ ಡೇವಿಸ್ ಎಂಬವರೊಡನೆ ನನ್ನ ಪ್ರಾಣಿ ಸಂಗ್ರಹಾಲಯದ ಯೋಜನೆಯನ್ನು ಚರ್ಚಿಸುತ್ತಿದ್ದಾಗ, ಬೆಳಕು ತೋರಿದಂತಾಯಿತು. ಚಾನಲ್ ದ್ವೀಪಗಳಲ್ಲಿ ನಿನ್ನ ಪರಿಚಯದವರಾರಾದರೂ ಇದ್ದರೆ ಹೇಳಬಾರದೆ ಎಂದು ಕೇಳಿಕೊಂಡೆ. ರೂಪರ್ಟ್ ಕ್ಷಣಕಾಲ ಧೇನಿಸಿದಂತೆ ಮಾಡಿ 'ಆಗಬಹುದು' ಎಂದು ಮೇಜರ್ ಫ್ರೇಜರರನ್ನು ಕಂಡು ಪ್ರಯತ್ನಿಸು ಎಂದು ಉಪದೇಶಿಸಿದ.

ಸಂಜೆಗೆ ನಾನು ಮೇ. ಫ್ರೇಜರರಿಗೆ ಫೋನ್ ಮಾಡಿದಾಗ ಅಪರಿಚಿತರು ಹೀಗೆ ಪ್ರಾಣಿಸಂಗ್ರಹಾಲಯದ ವಿಚಾರದಲ್ಲಿ ಸಲಿಗೆಯಿಂದ ಮಾತಾಡುತ್ತಿರುವುದನ್ನು ಕಂಡು ಅವರಿಗೇನೂ ಅಚ್ಚರಿಯಾದಂತೆ ನನಗೆ ತೋರಲಿಲ್ಲ. ನಾನೂ ಜೇಕಿ



ತಾಯಿಯ ಪ್ರೇಮಪೂರ್ಣ ಕೈಗಳ ಸ್ಪರ್ಶ ಮಾತ್ರದಿಂದ ಎಲ್ಲವೂ ಉತ್ತಮವಾಗುತ್ತವೆ, ಮನೆಯಲ್ಲಿ ಪ್ರಸನ್ನತೆ ತುಂಬುತ್ತದೆ. ಸದಾ ಜಾಗರೂಕಳಾಗಿದ್ದು ಉತ್ತಮ ವಸ್ತುಗಳನ್ನೆ ಮನೆಗೆ ತರುವ ತಾಯಿಯ ಅಪಾರ ಪ್ರೇಮಕ್ಕೆ ಸಿಗುವ ಬಹುಮಾನವದು! ಪ್ರೇಮಪೂರ್ವಕವಾಗಿ ಆಕೆ ಮಾಡುವ ಸಿಹಿ ತಿಂಡಿಗಳೇ ಆಗಲಿ, ಮೇಲೋಗರಗಳೇ ಆಗಲಿ, ಬಹಳ ರುಚಿಕರವಾಗುತ್ತವೆ. ಏಕೆಂದರೆ ಅಡಿಗೆಗೆ ಆಕೆ 'ಡಾಲ್ಡ'ವನ್ನೇ ಉಪಯೋಗಿಸುತ್ತಾಳೆ. ಡಾಲ್ಡ ವನಸ್ಪತಿ ಉತ್ತಮ ಹಾಗೂ ಶುದ್ಧವಾದ ವನಸ್ಪತಿ ಎಣ್ಣೆಗಳಿಂದ ತಯಾರಿಸಲ್ಪಡುತ್ತದೆ. ಮಕ್ಕಳ ಬೆಳವಣಿಗೆಗೆ ಬೇಕಾಗುವ ವಿಟಮಿನ್‌ಗಳು ಅದಕ್ಕೆ ಸೇರಿಸಲ್ಪಡುತ್ತವೆ. ನಿಮ್ಮ ಮನೆಯಲ್ಲಿಯೂ 'ಡಾಲ್ಡ' ಅದರ ನ್ಯಾಯವಾದ ಸ್ಥಾನವನ್ನು ಪಡೆಯಲಿ!



ಡಾಲ್ಡ ವನಸ್ಪತಿ—ರುಚಿಕರ ಅಡಿಗೆಗೆ ಸೊಗಸಾದ ಸಾಧನ

DL. 70-X29 KN

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

ಬಂದು ತಮ್ಮನ್ನು ಕಂಡು ವಿವರಗಳನ್ನು ಚರ್ಚಿಸಬಹುದೆಂದು ತಿಳಿಸಿದರು.

ನಾನು ಹೋಗಿ ಜರ್ಸಿಯಲ್ಲಿಳಿದಾಗ ಅಲ್ಲಿಯ ಹವಾಮಾನ ಸುಖೋಷ್ಣವಾಗಿ ಹಿತಕರವಾಗಿತ್ತು. ನಮ್ಮನ್ನು ಸ್ವಾಗತಿಸಲು ಬಂದಿದ್ದ ಮೇ. ಫ್ರೇಜರ್ ನಮ್ಮನ್ನು ಕಾರಿನಲ್ಲಿ ತನ್ನ ಮನೆಗೆ ಕರೆದೊಯ್ದರು.

"ನಿಮ್ಮ ಈ ಬಂಗಲೆ, ಲೆ ಆಗರ್ಸ್ ಮ್ಯಾನೋರ್, ಅದ್ಭುತವಾಗಿದೆ" ಎಂದೆ.

"ಹೌದು" ಎಂದನಾತ.

"ನಮ್ಮ ಪ್ರಾಣಿಸಂಗ್ರಹಾಲಯಕ್ಕೆ ಇದು ಉತ್ತಮ ಸ್ಥಳವಲ್ಲವೆ ಜೇಕಿ ?"

"ನಿಮ್ಮ ವಿಚಾರ ಹಾಗಿದೆಯೆ ?" ಎಂದು ಆತ ಗಂಭೀರನಾಗಿ ಕೇಳಿದ.

"ನನ್ನದು ನಗೆಮಾತೆಂದೇ ಭಾವಿಸಿರಿ. ಆದರೂ ಈ ಸ್ಥಳ ಪ್ರಾಣಿ ಸಂಗ್ರಹಾಲಯಕ್ಕೆ ಅತ್ಯುತ್ತಮವಾಗಿದೆ."

"ನನಗೂ ಇಲ್ಲಿಯ ವೆಚ್ಚ ತೂಗಿಸುವುದು ಕಠಿಣವಾಗಿದೆ. ಲಂಡನ್ನಿಗೆ ಹೋಗಿ ಬಿಡಬೇಕೆಂದಿದ್ದೇನೆ. ನಿಮಗೆ ಈ ಸ್ಥಳ ಬೇಕೆ?" ಎಂದು ವಿಚಾರಿಸಿದ.

"ನೀವು ಕೊಡುವ ಹಾಗಿದ್ದರೆ ನೋಡಿರಿ' ಎಂದೆ.

"ಒಳಗೆ ಬನ್ನಿರಿ ಮಾತಾಡೋಣ" ಎಂದು ಆತ ನಮ್ಮನ್ನು ಒಳಗೆ ಕರೆದೊಯ್ದ.

ಒಂದು ವರ್ಷ ಕಾಲ ಎಲ್ಲ ನಗರ ಸಭೆಗಳ, ಇತರ ಅಧಿಕಾರಿಗಳ ಕೈಕಾಲು ಬಿದ್ದು ಪ್ರಯತ್ನಿಸಿ ನಿರಾಶನಾಗಿದ್ದ ನನಗೆ ಇಲ್ಲಿ ಬಂದಿಳಿದ ಒಂದು ಗಂಟೆಯಲ್ಲಿಯೆ ನನ್ನ ಪ್ರಾಣಿಸಂಗ್ರಹಾಲಯಕ್ಕೆ ಅತ್ಯುತ್ತಮ ಸ್ಥಳವು ಅನಾಯಾಸದಿಂದ ದೊರೆಯಿತು.

ಕೊನೆಯ ಮಾತು

ಜರ್ಸಿಯಲ್ಲಿಯ ನನ್ನ ಪ್ರಾಣಿಸಂಗ್ರಹಾಲಯ ಸಾರ್ವಜನಿಕರಿಗೆ ಮುಕ್ತದ್ವಾರವಾಗಿ ಒಂದು ವರ್ಷದ ಮೇಲಾಯಿತು. ಯುರೋಪಿನಲ್ಲಿಯೆ ನಮ್ಮದು ಹೊಸ ಪ್ರಾಣಿಸಂಗ್ರಹಾಲಯವಾದರೂ ಸುಂದರವಾಗಿದೆ. ನಮ್ಮ ಈ ಚಿಕ್ಕ ಸಂಗ್ರಹಾಲಯದಲ್ಲಿ ೬೫೦ ಪ್ರಾಣಿಗಳಿದ್ದು ಇದನ್ನಿನ್ನೂ ವಿಸ್ತರಿಸಬೇಕೆಂದಿದ್ದೇವೆ. ಬೇರೆ ಎಲ್ಲಿಯೂ ಕಾಣಸಿಗದ ಅಪೂರ್ವವಾದ ಕೆಲವು ಪ್ರಾಣಿಗಳು ನಮ್ಮಲ್ಲಿವೆ. ಆರ್ಥಿಕ ಸ್ಥಿತಿ ಸುಧಾರಿಸಿದರೆ, ಸದ್ಯ ನಷ್ಟವಾಗುತ್ತಿರುವ ಪ್ರಾಣಿ ವಿಶೇಷಗಳನ್ನು ಸಂಗ್ರಹಿಸುವ ವಿಚಾರವಿಟ್ಟುಕೊಂಡಿದ್ದೇನೆ.

ನನ್ನ ಸಂಗ್ರಹಾಲಯದಲ್ಲಿಯ ಪ್ರಾಣಿಗಳಲ್ಲಿ ಅನೇಕ ಪ್ರಾಣಿಗಳನ್ನು ನಾನೇ ಸಂಗ್ರಹಿಸಿದ್ದೇನೆ. ಅವುಗಳ ಸ್ವಭಾವ ವಿಶೇಷಗಳನ್ನು ಅರಿತುಕೊಳ್ಳಲು ಬೇಕಾದಾಗ ಹೋಗಿ ಅವನ್ನು ಸಂದರ್ಶಿಸಲು ನಮಗೆ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ ಎಂಬುದೆ ಈ ಸ್ವಂತ ಪ್ರಾಣಿಸಂಗ್ರಹಾಲಯದ ವೈಶಿಷ್ಟ್ಯ. ಪ್ರಾಣಿಜೀವನದಲ್ಲಿ, ಅವುಗಳ ರಕ್ಷಣಾ ಕಾರ್ಯದಲ್ಲಿ ನಾನು ಜನರಿಗೆ ತಿಳುವಳಿಕೆ ನೀಡುತ್ತಿದ್ದೇನೆ ಎಂದೂ ನಾನು ನಂಬಿಕೊಂಡಿದ್ದೇನೆ. ನನ್ನ ಈ ಕಾರ್ಯ ಸಫಲವಾದರೆ ನನ್ನೀ ಶ್ರಮ ಸಾರ್ಥಕವಾದಂತೆ. ಅಳಿದು ಹೋಗಲಿರುವ ಪ್ರಾಣಿಗಳ ಕುಲರಕ್ಷಣೆಗಾಗಿ ಕ್ರಮಗಳನು ಕೈಕೊಳ್ಳುವಂತಾದರೆ ನಾನು ಕೃತಕೃತ್ಯನಾದಂತೆ. *

This Magazine owned by The Loka Shikshana Trust, Hubli is printed and published by Shri H. R. Purohit at the Samyukta Karnatak Press, Koppikar Road, Hubli